# ನಾ ಹುಟ್ಟಿದ್ದು ವಡ್ರಳ್ಳಿ

ನಾ ಹುಟ್ಟಿದ್ ವಡ್ರಳ್ಳಿ... ಬೆಳೆದದ್ದು ಬ್ಯಾಡರಳ್ಳಿ... ಮದುವೆ ಆಗಿದ್ ಹಾರ್ನಳ್ಳಿ... ಎಂಬ ಟಿ.ಪಿ. ಕೈಲಾಸಂರವರ ಟಿಪಿಕಲ್ ಹಾಡಿನಂತೆ ನಾನು ಬೆಂಗಳೂರು, ಮಂಗಳೂರು ಹಾಗೂ ಕಲ್ಬುರ್ಗಿಯ ನಡುವಿನ ಪಥಿಕ. ಈಗ ಹೈದ್ರಾಬಾದ್‌ನ ರಾಮೋಜಿ ಫಿಲಂ ಸಿಟಿ ಎಂಬ ಮಾಯಾನಗರಿಯಲ್ಲಿ ವಾಸ. ಈಟಿವಿ ಕನ್ನಡ ಚಾನಲ್‌ನ ಸುದ್ದಿ ವಿಭಾಗದ ಮುಖ್ಯಸ್ಥ.


ಎಂ.ಬಿ. ಸಿಂಗ್, ಜಿ.ಎಸ್. ಸದಾಶಿವರೆಂಬ ಮಾಂತ್ರಿಕರ ಅಖಾಡಾದಲ್ಲಿ ತಾಲೀಮು. ಪ್ರಜಾವಾಣಿಯಲ್ಲಿ **12** ವರ್ಷಗಳ ಕಾಲ ಪ್ರಯೋಗ. ಈ ಕಾರಣದಿಂದಾಗಿಯೇ ಕಡಲ ಕಿನಾರೆಯ ನಗರಿ ಮಂಗಳೂರಿಗೆ, ಇವ ನಮ್ಮವ ಇವ ನಮ್ಮವ ಎನ್ನುವ ಕಲ್ಬುರ್ಗಿಗೆ ಪಯಣ. ಕೊಟ್ಟಿದ್ದಕ್ಕಿಂತ ಪಡೆದ ಅನುಭವವೇ ಸಾಕಷ್ಟು.

ಮಂಗಳೂರು ಎಂಬ ನಗರಿ ಮನಸಲ್ಲಿ ಕೂರಿಸಿದ್ದ ಚಿತ್ರಸಂತೆಯಿಂದಾಗಿ ಎಲೆಕ್ಟ್ರಾನಿಕ್ ಮಾಧ್ಯಮಕ್ಕೆ ಜಿಗಿತ. ಪೆನ್ ಬದಲು ಕ್ಯಾಮರಾ ಮೂಲಕ ಮಾತಾಡುವ ಅವಕಾಶ. ಈಟಿವಿಯಲ್ಲಿ ಹಿರಿಯ ವರದಿಗಾರನಾಗಿ, ಪ್ರಿನ್ಸಿಪಲ್ ಕರೆಸ್ಪಾಂಡೆಂಟ್ ಆಗಿ ನಂತರ ಈಗ ಮುಖ್ಯಸ್ಥ.

ಚಲನಚಿತ್ರ, ಟಿವಿ, ಜಾನಪದ ಹೀಗೆ ಸಿಕ್ಕಿದ್ದೆಲ್ಲಾ ಬರೆಯುತ್ತಾ ಕೊನೆಗೆ ಇವೆಲ್ಲಾ ಬೇಡ ಎಂದು ತೀರ್ಮಾನಿಸಿ ಮಾಧ್ಯಮ ವಿಶ್ಲೇಷಣೆ ಎಂಬ ಬಸ್‌ಸ್ಟಾಂಡ್‌ನಲ್ಲಿ ವಾಸ. ಈ ಕಾರಣಕ್ಕಾಗಿಯೇ ಜಗತ್ತು ಅರಿಯುವ ಅವಕಾಶ. ಕ್ಯೂಬಾದಲ್ಲಿ ಜರುಗಿದ ಅಂತಾರಾಷ್ಟ್ರೀಯ ಯುವ ಪತ್ರಕರ್ತರ ಸಮಾವೇಶದಲ್ಲಿ ಭಾರತದ ಪ್ರತಿನಿಧಿ. ಈ ಪುಸ್ತಕಕ್ಕೆ ಆಧಾರ. ನಂತರ ಈಟಿವಿಯ ವತಿಯಿಂದ ಸಿಎನ್‌ಎನ್ ಚಾನಲ್ ಜೊತೆಗೆ ಕೈ ಕುಲುಕಲು ಅಮೆರಿಕಾಗೆ ಪಯಣ.

ಬರೆದದ್ದು ಹಲವಷ್ಟು. ಆದರೆ ಇಷ್ಟವಾಗಿದ್ದು ಈ ಪ್ರವಾಸ ಕಥನ. ಎಕ್ಕುಂಡಿಯ ಬೆನ್ನು ಹತ್ತಿದ 'ಎಕ್ಕುಂಡಿ ನಮನ'. ಮಾಧ್ಯಮದ ಬಗ್ಗೆ ಬರೆದದ್ದು ಈಗ ನ್ಯೂಸ್ ಪೇಪರ್ ಭಾಷೆಯಂತೆ ನಿನ್ನೆಯ ಇತಿಹಾಸ ಅಥವಾ ಇಂದಿಗೆ ರದ್ದಿ. ಜಾನಪದದ ಬಗ್ಗೆ ಎಡಿಟ್ ಮಾಡಿದ ಪುಸ್ತಕಕ್ಕಿಂತ ಬರೆದ ಮುನ್ನುಡಿ 'ಮಡಿಲಕ್ಕಿ'ಯೇ ಇಷ್ಟ. 'ಸೋನೆ ಮಳೆಯ ಸಂಜೆ' ಕವನ ಸಂಕಲನ ಪ್ರೀತಿಯ ಹೂಗುಚ್ಛವೇ ಎಂಬ ಅನುಮಾನ. ಪ್ರೀತಿ ಸೋನೆಯಲ್ಲಿ ತೊಯ್ದಿದ್ದು ಮಾತ್ರ ದಿಟ.


ಯಾಕೋ ಗೊತ್ತಿಲ್ಲ ಗಾಳಿಪಟ ಅಂದ್ರೆ ತುಂಬಾ ಇಷ್ಟ. ಗೂಡು ಕಟ್ಟಿಕೊಂಡು ಯಾರ ಕೈಗೂ ಸಿಗದೆ ಒಳಗೇ ಉಳಿಯುತ್ತಲ್ಲಾ ಹುಳ ಅದನ್ನ ಕಂಡ್ರೆ ನಂಗೂ ಹಾಗಾಗ್ಬೇಕು ಅನ್ನೋ... ಚಿನ್ನ ಚಿನ್ನ ಆಸೈ.



ನನ್ನೊಳಗಿನ ಹಾಡು

# ಕ್ಯೂಬಾ

ಪ್ರವಾಸ ಕಥನ



ಜಿ.ಎನ್. ಮೋಹನ್

**ಲೋಹಿಯಾ ಪ್ರಕಾಶನ**
‘ಕ್ಷಿತಿಜ’
ಕಪ್ಪಗಲ್ಲು ರಸ್ತೆ
ಬಳ್ಳಾರಿ – ೫೮೩ ೧೦೩

NANNOLAGINA HADU - CUBA- A travelogue on Cuba by G.N. Mohan
142, 69th cross, 5th block, Rajaji Nagar,  Bangalore 560010 Tel. : 080 3409712
Published by LOHIYA PRAKASHANA  ‘Kshithija’  Kappagallu Road
Gandhinagar, Bellary - 583 103 Tel. : 08392 257412

©  Sathya S.


ISBN 81-87731-06-0

ಮೊದಲ ಮುದ್ರಣ: 2000
ಎರಡನೆ ಮುದ್ರಣ: 2007

ಮುಖಪುಟ ಚಿತ್ರ : ಸೃಜನ್
ವಿನ್ಯಾಸ: ಅಪಾರ
ಒಳ ಚಿತ್ರಗಳು: ಪ. ಸ. ಕುಮಾರ್, ಸುದೇಶ್ ಮಹಾನ್

ಅಕ್ಷರ ಜೋಡಣೆ:
ಆಕೃತಿ ಕಂಪ್ಯೂಟರ್ಸ್, ಮಂಗಳೂರು
ಕೆ ಎಸ್ ರಾವ್ ರಸ್ತೆ, ಮಂಗಳೂರು 575 001
ದೂ: 0824 - 2443002

ಪುಟ: 140
ಬೆಲೆ: 50 ರೂ.



ಈ ಹಾಡು ನಿನಗಾಗಿ
ಸಾಥಿ



## ಎರಡನೆ ಮುದ್ರಣಕ್ಕೆ ಎರಡು ಮಾತು

ಪ್ರಚಲಿತ ವಿದ್ಯಮಾನಗಳ ಬಗೆಗೆ ಓದುಗರನ್ನು ಚಿಂತನೆಗೆ ಹಚ್ಚುವಂತೆ ಬರೆದು, ಗಮನ ಸೆಳೆದವರು, ಗೆಳೆಯ ಜಿ.ಎನ್. ಮೋಹನ್. ಈಗ ಈಟಿವಿ ಚಾನಲ್‌ನ ಸುದ್ದಿ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಮೋಹನ್ ಮೂಲತಃ ಕವಿ. ಕ್ಯೂಬಾದಲ್ಲಿ ನಡೆದ ಅಂತರರಾಷ್ಟ್ರೀಯ ಯುವಜನ ಉತ್ಸವದಲ್ಲಿ, ಮೊಟ್ಟ ಮೊದಲ ಬಾರಿಗೆ ನಡೆದ ಯುವ ಪತ್ರಕರ್ತರ ಸಮಾವೇಶದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಕ್ಯೂಬಾಕ್ಕೆ ಹೋಗಿ ಬಂದದ್ದನ್ನು ಕಾವ್ಯಮಯವಾಗಿ ಈ ಪ್ರವಾಸ ಕಥನದಲ್ಲಿ ಚಿತ್ರಿಸಿದ್ದಾರೆ. ಹಾಗಾಗಿ ಇದು ಅಲ್ಲಿನ ಸಾಮಾನ್ಯ ವಿವರಗಳನ್ನು ಮಾತ್ರ ಒಳಗೊಳ್ಳದೆ, ಆ ಜನರ ಸ್ವಾಭಿಮಾನದ, ಹೋರಾಟದ ಮಗ್ಗಲುಗಳನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ತೆರೆದಿಡುತ್ತದೆ.

ಅವರ ಪುಸ್ತಕಕ್ಕೆ ಸಿಕ್ಕ ಉತ್ಸಾಹದ ಪ್ರತಿಕ್ರಿಯೆ ನನಗೆ ವಿಸ್ಮಯವನ್ನು ಉಂಟು ಮಾಡಿದೆ. ಈಗ ಈ ಪುಸ್ತಕ ಎರಡನೇ ಮುದ್ರಣ ಕಾಣುತ್ತಿದೆ. ಹಲವು ವರ್ಷಗಳ ಹಿಂದೆಯೇ ಈ ಪುಸ್ತಕ ಮಾರಾಟವಾಗಿಹೋಗಿತ್ತು. ಈ ಮಧ್ಯೆ ಮಂಗಳೂರು ಹಾಗೂ ಕುವೆಂಪು ವಿಶ್ವವಿದ್ಯಾಲಯ ಕ್ಯೂಬಾವನ್ನು ಪಠ್ಯವಾಗಿ ಸಿತು. ಪುನರ್‌ಮುದ್ರಣದ ಬದಲು ಹೊಸಬರ ಪುಸ್ತಕ ಬರುವ ಬಗ್ಗೆಯೇ ಮೋಹನ್ ಒಲವು ತೋರಿಸಿದರು. ಹೀಗಾಗಿ ಬಿ ಎಂ ಬಶೀರ್, ಸಬಿಹಾ ಭೂಮಿಗೌಡ ಅವರ ಪುಸ್ತಕಗಳು ಹೊರಬಂದವು.

ಅಮೆರಿಕ ಈಗ ಮತ್ತೆ ತನ್ನ ಚಾಣಾಕ್ಷತನ ತೋರಿಸುತ್ತಿದೆ. ಇಂಥ ಸಂದರ್ಭ ದಲ್ಲಿ ಈ ಪುಸ್ತಕದ ಪ್ರಕಟಣೆ ನಮ್ಮ ಸಾಮಾಜಿಕ ಜವಾಬ್ದಾರಿ ಎಂದು ಭಾವಿಸಿದ್ದೇನೆ. ಈ ಪುಸ್ತಕ ಹೋರಾಟದ ಹುಮ್ಮಸ್ಸನ್ನು ಮೂಡಿಸುವಂತಾಗಲಿ.

**ಸಿ. ಚನ್ನಬಸವಣ್ಣ**

ಪ್ರಕಾಶನದ ಪರವಾಗಿ



## ಬೆಲ್ಲ ಕಡೆದ ಕಲ್ಲು

ಅಮ್ಮ ಬೆಲ್ಲ ಕಡೆದ ಕಲ್ಲಿನಂತೆ ಕುಳಿತಿದ್ದಳು -

ಸುನಂದಾ ಬೆಳಗಾಂವಕರರ 'ಕಜ್ಜಾಯ' ಪ್ರಬಂಧಗಳ ಸಂಕಲನದಲ್ಲಿ ಈ ಸಾಲು ಓದಿದೆ. ಏಕೋ ಏನೋ ಅದು ನನ್ನೊಡನೆಯೇ ಸಾಗಿ ಬಂದಿದೆ. ನನ್ನ ಅಮ್ಮನೂ ಅಷ್ಟೆ ಬೆಲ್ಲ ಕಡೆದ ಕಲ್ಲು. ನನ್ನ ಅಮ್ಮ ಮಾತ್ರವೇನು? ಎಲ್ಲ ಅಮ್ಮಂದಿರೂ ಬೆಲ್ಲ ಕಡೆದವರೇ. ಹೊಟ್ಟೆಯಲ್ಲಿ ಅದೆಷ್ಟು ನೋವು. ಆದರೆ ಮಾತು? ಅಮ್ಮ ಎಂಬುದು ನಡೆದಾಡುವ ಯುಗಾದಿ. ಬೇವು ಬೆಲ್ಲದ ಮಿಲನ. ದುಗುಡಗೊಂಡಾಗ, ಬಿಕ್ಕುವಾಗ, ಕಣ್ಣಂಚು ಒದ್ದೆಯಾದಾಗ ಅಮ್ಮನ ಮಡಿಲೇ ಬೇಕು. ಅದು ಭರವಸೆಯ ತಾಣ.

ಕ್ಯೂಬಾ ಸಹಾ ನನಗೆ ಬೆಲ್ಲ ಕಡೆದ ಕಲ್ಲೇ.
ಅಥವಾ ಅಮ್ಮನೇ
ಬಿಕ್ಕುವಾಗ ಇರುವ ಭರವಸೆಯ ತಾಣ.

**ಹೊಲಕ್ಕೆ ಹೋಗುವ ದಾರಿ**

ಕ್ರಿಸ್ತನು ಕಡಲ ಮೀನುಗಳನ್ನು ದ್ವಿಗುಣಗೊಳಿಸಿದ ಎನ್ನುತ್ತಾರೆ. ನಾನು ಬೈಬಲ್ ಓದಿಲ್ಲ. ಆದರೆ ಕಡಲ ಮೀನುಗಳು ದುಪ್ಪಟ್ಟಾಗುವುದು ಎಂದರೆ ಏನು ಎಂಬುದು ನನಗೆ ಅರ್ಥವಾಗಿದೆ.

ಜನರ ಎದೆಹೊಲಗಳಿಗೆ ನಡೆದುಕೊಂಡು ಹೋಗಿಬಿಡಲು ಕ್ಯೂಬಾ ನನಗೆ ದಾರಿಯಾಗಿದೆ. ಬ್ರೆಡ್ ಚೂರುಗಳನ್ನು, ಮೀನುಗಳನ್ನು ದ್ವಿಗುಣಗೊಳಿಸಿದ ಆ ಕ್ರಿಸ್ತನಂತೆಯೇ ಕ್ಯೂಬಾ ನನ್ನ ಗೆಳೆಯರ ದಂಡನ್ನು ದುಪ್ಪಟ್ಟಾಗಿಸಿದೆ. ಕೇವಲ ದುಪ್ಪಟ್ಟಲ್ಲ, ಹಲವು ಪಟ್ಟು ಹೆಚ್ಚಿಸಿದೆ.

ಪ್ರೀತಿಗೆ ಗಡಿಗೋಡೆಗಳಿಲ್ಲ, ಅಕ್ಷಾಂಶ ರೇಖಾಂಶಗಳಿಲ್ಲ. ಕ್ಯೂಬಾ ನನ್ನನ್ನು ಜನರ ಹತ್ತಿರ ಕೊಂಡೊಯ್ದಿದೆ. ಬದುಕಿನ ಸುಂದರ ಕ್ಷಣಗಳನ್ನು ನನ್ನ ಅಂಗೈಯಲ್ಲಿಟ್ಟಿದೆ. ಒಂದು ಮಗುವಿನ ಮುಗುಳ್ನಗುವನ್ನು ನನ್ನ ಎದೆಯೊಳಗೆ ಸೇರಿಸುವಂತೆ ನಾನು ಈ ಎಲ್ಲವನ್ನೂ ಜತನವಾಗಿರಿಸಿಕೊಂಡಿದ್ದೇನೆ.

**ಕೈಗೆ ಕಲೆ ಮೆತ್ತಿದೆಯೇ?**

ಮತ್ತೆ ಮತ್ತೆ ನೋಡಿಕೊಂಡಿದ್ದೇನೆ. ಈ ಏಳು ವರ್ಷಗಳ ಹಾದಿಯಲ್ಲಿ ನನ್ನ ಕೈಗಳಿಗೇನಾದರೂ ಕಲೆ ಮೆತ್ತಿದೆಯೇ ಎಂದು. ಕ್ಯೂಬಾದ ಒಡಲು ಕಂಡವನಿಗೆ ಕೈಗಳಲ್ಲಿನ ಕಲೆ ಕಾಣಿಸಲಾರದೆ? ಕಲೆ ತೊಳೆಯಲು ಅರೇಬಿಯಾದ ಸುಗಂಧ ದ್ರವ್ಯವೇನೂ ಬೇಡ. ಸ್ವರ್ಣ ಮಂದಿರದಲ್ಲಿ ಕಸ ಬಳಿಯುವ, ಶೂ ತಿಕ್ಕುವ ಕೈಗಳಿಗೆ ಸಿಗುವ ಬಿಡುಗಡೆಯಂತೆಯೇ ನಾನೂ ಕಸ ಬಳಿಯುತ್ತೇನೆ. ನನ್ನೊಳಗಿನ ಕಸ. ಕ್ಯೂಬಾ ನನಗೆ ಕೈಯ ಕಲೆಗಳನ್ನು ಕಾಣಿಸುವ ಕನ್ನಡಿ.

**ನನ್ನಲ್ಲಿ ಎರಡು ಹಾಡು**

ನಾನು ಹೆರಿಗೆ ಕೋಣೆ ಹೊಕ್ಕಾಗ ನನ್ನಲ್ಲಿ ಎರಡು ಹಾಡಿತ್ತು. ಹೊಟ್ಟೆಯಲ್ಲೊಂದು, ಕೈಯಲ್ಲೊಂದು. ಎಂದದ್ದು ಯಾರು? ನನ್ನೊಳಗಿನ ಹಾಡು ಕ್ಯೂಬಾವನ್ನು ಕಣ್ಣು ಮೂಡುತ್ತಿದ್ದ ಕೂಸಿಗೆ ಹೋಲಿಸಿದ ಆ ತಾಯಿಗೆ ನನ್ನ ನಮನ.

**ಚೆಗೆವಾರ ಎಂಬ ಗುಂಗೀಹುಳ**

ಚೆಗೆವಾರ ಎಂಬ ಗುಂಗೀಹುಳ ಎಷ್ಟು ಗುಂಯ್‌ಗುಡುತ್ತಿದೆ. ಪಶ್ಚಿಮ ಘಟ್ಟಗಳ ಆ ಹಸಿರನ್ನು ಮತ್ತೆ ನೆನಪಿಸುವಂತೆ. ಚೆ ಎಂಬುದೊಂದು ಹುಚ್ಚು. ಬೆಳಕಿಗೆ ಮತ್ತೆ ಮತ್ತೆ ಢಿಕ್ಕಿ ಹೊಡೆಯುವ, ಬೆಳಕಿನಲ್ಲಿಯೇ ಕರಗಿ ಹೋಗುವ ಹಾತೆಯಂತೆ ನಾವೆಲ್ಲಾ ಹೇಗೆ ಹಾರುತ್ತಿದ್ದೇವೆ ಅವನ ಕಡೆ? ಚೆ ಎಂಬುದು ಹುಚ್ಚೇ ಆದಲ್ಲಿ ಜಗತ್ತು ಒಂದು ಹುಚ್ಚರ ಸಂತೆಯಾಗಲಿ. ಆಸ್ಪತ್ರೆ ಇಲ್ಲದಿರಲಿ.

**ಮಾವಿನ ವಾಟೆ**

ಫಿಡೆಲ್ ಹಣ್ಣಾಗಿದ್ದಾರೆ.

ಹಾಡಿಗೂ ಮುಪ್ಪುಂಟೇ? ಜಗತ್ತಿಗೆ ಒಂದು ದೀಪ ಕೊಟ್ಟು, ಪ್ರತಿಯೊಬ್ಬರಿಗೂ ತಮಗೆ ಬೇಕಾಗಿದ್ದು ಗುನುಗಿಕೊಳ್ಳುವ ತಾಖತ್ತು ಕೊಟ್ಟ ಫಿಡೆಲ್ ಮತ್ತೆ ಚಿಗುರೊಡೆದು ಬರಲೆಂದೇ ಇರುವ ಮಾವಿನ ವಾಟೆ. ಸೂರ್ಯನ ಕಿರಣ ಎಲ್ಲಿದ್ದು ಏನು ಮಾಡಿತು ಎಂಬುದು ವಿಜ್ಞಾನದ ತೆಕ್ಕೆಗೂ ಹೇಗೆ ಸಿಗುವುದಿಲ್ಲವೋ ಹಾಗೆ – ಫಿಡೆಲ್.

**ಎಷ್ಟೊಂದ್ ಜನ..**

ಈ ಭೂಮಂಡಲದಲ್ಲಿ 'ಎಷ್ಟೊಂದ್ ಜನ ಇಲ್ಲಿ ಯಾರು ನಮ್ಮೋರು. ಎಷ್ಟೊಂದ್ ಮನೆ ಇಲ್ಲಿ ಎಲ್ಲಿ ನಮ್ಮನೆ ಎಲ್ಲಿ ಎಲ್ಲಿ ಎಲ್ಲಿ?

ಗುರುತಿಸಿಕೊಳ್ಳುವ ತುರ್ತು ಇದೆ. ಮಾಯೆಯ ಜಾಲ ಬೀಸುತ್ತಿರುವ ಈ ಕಾಲದಲ್ಲಿ ಫಿಡೆಲ್‌ನ ಬಂಧುಗಳು ಯಾರೆಂದು?

**ಕಾಲ್ಚೆಂಡು**

ಅಮೇರಿಕಾದವನು
ಭೂಮಂಡಲದ ಚೆಂಡನ್ನು
ಎತ್ತ ಒದ್ದರೂ ಗೋಲ್ ಅವನದೆ -
ಇರಲಿ, ಮರಡೋನಾ ತೊಡೆಗಳು ನಮಗೂ ಇರಲಿ.

ಹವಾನಾದ ಕ್ರಾಂತಿ ಚೌಕದಿಂದ ಜಾವೆಲಿನ್ ಎಸೆದರೆ ನೇರ ಅದು ಅಮೇರಿಕಾದ ಶ್ವೇತಭವನಕ್ಕೇ ತಾಕುತ್ತದೆ ಎಂದಿದ್ದರು ಫಿಡೆಲ್.

ಅಮೇರಿಕಾದ ಶ್ವೇತಭವನಕ್ಕೆ ಜಾವೆಲಿನ್ ಎಸೆಯಲು ಹವಾನಾದ ಕ್ರಾಂತಿ ಚೌಕವೇ ಆಗಬೇಕೇನು?

ಯುಗಾದಿ' 07 ಜಿ.ಎನ್. ಮೋಹನ್



**ದಣಿವಿಲ್ಲದ ಕನಸುಗಾರ**
**ರಾಮೋಜಿ ರಾವ್ ಅವರಿಗೆ**
**ವಂದನೆ**

## ಕಡಲ ಮೀನುಗಳು

ಸಾಥಿ ಕಿFOX
ಇಬ್ಬರು ಅಮ್ಮಂದಿರು
ಅಣ್ಣಯ್ಯ
ಮನ್ನಿ
ಡಾ ವಿನಯಾ ವಕ್ಕುಂದ
ಪಿ ಆರ್
ಶಿವರಾಂ ಪೈಲೂರು, ಎಂ.ಜಿ. ಕಜೆ
ಸಬಿಹಾ, ಭೂಮಿ
ವಿಮ್ಮಿ, ಜಯ್
ಎಸ್.ವೈ. ಗುರುಶಾಂತ್, ಕೆ. ಪ್ರಕಾಶ್, ಜಿತೇಂದ್ರ ಚೌಧರಿ
ಪ್ರೊ. ಬಿ.ಎ. ವಿವೇಕ ರೈ, ಪ್ರೊ. ಸಿ. ಎನ್. ರಾಮಚಂದ್ರನ್
ಎಚ್ ಎಸ್ ರಾಘವೇಂದ್ರ ರಾವ್, ನಟರಾಜ ಹುಳಿಯಾರ್
ಪ್ರೊ. ಶ್ರೀಕಂಠ ಕೂಡಿಗೆ
ಡಾ. ಸತ್ಯನಾರಾಯಣ ಮಲ್ಲಿಪಟ್ಟಣ, ನಾದಾ
ಡಾ. ಕೆ. ಕೇಶವ ಶರ್ಮ, ಎ.ಆರ್. ಮಣಿಕಾಂತ್, ಸಬಿತಾ ಬನ್ನಾಡಿ
ಶಂಕ್ರಯ್ಯ ಘಂಟಿ, ಮುದೇನೂರು ಸಂಗಣ್ಣ, ಚಿದಾನಂದ ಸಾಲಿ
ಬೃಹಸ್ಪತಿ, ಡಾ. ಕಾಶೀನಾಥ ಅಂಬಲಗೆ
ವಿಕ್ರಮ ವಿಸಾಜಿ, ವೆಂಕಟ್ರಮಣ ಗೌಡ
ರಮೇಶ್ ಸೋಗೆಮನೆ, ಸಂತೋಷ್ ನಡುಬೆಟ್ಟ
ರಾಜಶೇಖರ್ ಹಳೇಮನೆ, ಚಂದ್ರಮೌಳಿ

ಜಿ. ರಾಮಕೃಷ್ಣ, ಆರ್.ಎಸ್. ರಾಜಾರಾಂ
ಚಿತ್ರಶೇಖರ ಕಂಠಿ, ಕುಂ. ವೀರಭದ್ರಪ್ಪ
ಪ್ರಭಾಕರ ಜೋಷಿ, ಮಹಿಪಾಲ ರೆಡ್ಡಿ ಮುನ್ನೂರು
ಸಿದ್ಧನಗೌಡ ಪಾಟೀಲ್, ಬಾಲಕೃಷ್ಣ ಶೆಟ್ಟಿ


ಮಂಗಳೂರು ಹಾಗೂ ಕುವೆಂಪು ವಿಶ್ವವಿದ್ಯಾಲಯ
ಎಲ್ಲಾ ಪತ್ರಿಕೆಗಳು, ಆಕಾಶವಾಣಿ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಈಟಿವಿ ಚಾನೆಲ್

ಕ್ಯೂಬಾದ ಮನೆಬಾಗಿಲು ತೆರೆದ
ಗುಸ್ತೋ, ಓಲಿವಾ, ರೊಬೋರ್ಟಿಕೋ, ಕ್ಸೇವಿಯರ್

ಕಲ್ಲೂರು ನಾಗೇಶ್, ಭಾರತಿ
ಸೃಜನ್, ಪ.ಸ. ಕುಮಾರ್, ಸುದೇಶ್‌ಮಹಾನ್,
ಪುಸ್ತಕದ ಕಿಕ್ ಹತ್ತಿಸಿದ ಅಪಾರ
ಪ್ರೀತಿ ಮುಕ್ಕಾಗಲು ಎಂದೂ ಬಿಡದ
ಸಿ. ಚನ್ನಬಸವಣ್ಣ
ಮತ್ತು
ನೀವು

## ಈ ಹಾಡಿನೊಳಗೆ

ಒಂದು ರೂಪಾಯಿಯ ದೇಶ/೧ ಶಾರದಾ ಅಟ್ಲಾಸ್‌ನ ೧೪ನೇ ಪುಟಕ್ಕೆ/೪ ಉನ್ ಫೆಸ್ಟಿವಲ್/೯ ಅಮ್ಮ ನಿಮ್ಮ ಮನೆಗಳಲ್ಲಿ ಕಂಡಿರೇನೆ ಕಂದನಾ.../೧೬ ಕಾಫಿ ವಿತ್ ಮಿಲ್ಕ್ ಪ್ಲೀಸ್.../೨೦ ಹಾರುವ ಹಕ್ಕಿಗೆ ಇಲ್ಲಿ ನೆಲೆ/೨೫ ಗ್ವಜಿರ ಗ್ವಂತನಮೇರ/೩೨ ಮೂಕವಾಗಿದೆ ಮಾತು/೩೭ ಪ್ರತಿಯೊಬ್ಬರಿಗೂ ಒಂದು ಸೂರ್ಯ/೪೩ ಹೋರಾಟದ ಸಾಗರಕ್ಕೆ.../೫೦ ನೀವು ಕಳಿಸಿದ ಗೋಧಿ.../೫೫ ಅಲ್ಲಿ ಅಕ್ಷರದ ಬೆಳಕು/೬೦ ಅಂಗೈಯಲ್ಲಿ ಆರೋಗ್ಯ/೬೪ ಮೂತಿಗೆ ಗುದ್ದಬೇಕು/೬೯ ಮೌನ ಕ್ರಾಂತಿ/೭೩ ಆಕಾಶದ ಅಗಲಕ್ಕೂ ನಿಂತ ಆಲವೇ.../೭೭ ನಿಮ್ಮೊಡನೆ ನಿಮ್ಮಂತೆ/೮೨ ಡಾಲರ್ ಕಣ್ಣಿನ ಗಿಡುಗನ ಕೊಂದು.../೮೭ ಮಗ್ಗುಲ ಮುಳ್ಳು - ಮಿಯಾಮಿ/೯೧ ಉಳಿದು ಹೋದ ಮಾತು/೯೫ ಸೂರ್ಯನ್ನ ಮರೆಮಾಡಿ ಬೆಳಕನ್ನು ಕದ್ದವರು.../೯೮ ಹೆಮ್ಮಿಂಗ್ವೇ ಎಂಬ ಕಡಲ ಹಕ್ಕಿ/೧೦೪ 'ಚೆ' ಎಂಬ ಹುಚ್ಚು/೧೦೮ ಹಸ್ತ ಲಾ ವಿಕ್ಟೋರಿಯಾ ಸಿಯಂಪ್ರೆ/೧೧೩ ಪ್ರೀತಿ ಇಲ್ಲದ ಮೇಲೆ.../೧೧೬



## ಒಂದು ರೂಪಾಯಿಯ ದೇಶ

ಕೇವಲ ಒಂದು ರೂಪಾಯಿ -

ಈ ಪುಟ್ಟ ದೇಶ ನನ್ನ ಎದೆಯಾಳಕ್ಕಿಳಿಯಲು ನಾನು ಕೊಟ್ಟದ್ದು ಕೇವಲ ಒಂದು ರೂಪಾಯಿ ಮಾತ್ರ.

ನಿಗಿ ನಿಗಿ ಸುಡುವ ಸೂರ್ಯನ ಎಲ್ಲಾ ತಾಪವನ್ನೂ ಹೀರಿ ಚಿಮ್ಮುವುದೇ ಮೇ ಫ್ಲವರ್. ಇಂತಹ ಹೂವುಗಳು ಸಾವಿರ ಸಾವಿರವಾಗಿ ಅರಳುವ ಹೊತ್ತಲ್ಲಿ ನಡೆದ ಮೇ ಉತ್ಸವವೇ ನನಗೂ ಕ್ಯೂಬಾಗೂ ನಂಟನ್ನು ಬೆಸೆಯಿತು. ಜಗದುದ್ದ ಜಗದಗಲ ಹರಡಿಹೋದ ನೊಂದವರು ತಮ್ಮ ನೋವುಗಳನ್ನೆಲ್ಲಾ ಮರೆತು ಹಾಡಿ ಕುಣಿಯುವ ಹೊತ್ತು - ಮೇ ದಿನ. ಯೌವ್ವನಕ್ಕೆ ನಾನು ಕಾಲಿಡುತ್ತಿದ್ದ ದಿನಗಳಲ್ಲಿ 'ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು - ಕಪ್ಪು ಮುಖ, ಬೆಳ್ಳಿ ಗಡ್ಡ, ಉರಿಯುತಿರುವ ಕಣ್ಣುಗಳು' ಎಂಬಂತೆ ನೂರಾರು ಸಂಖ್ಯೆಯಲ್ಲಿ ಈ ದಿನಕ್ಕಾಗಿ ತೇಲಿಬರುವ ಜನರನ್ನು ಕಂಡು ಬೆರಗಾಗುತ್ತಿದ್ದೆ.

‘ಎಲ್ಲ ನೆಲದ ಕಾರ್ಮಿಕರೇ ಒಂದಾಗಿ, ನೀವು ಕಳಕೊಳ್ಳುವುದೇನಿಲ್ಲ ಸಂಕೋಲೆಗಳನ್ನು ಹೊರತು’ - ಎಂದು ಕರೆ ನೀಡಿದಾತನ ಮೇಲೆ ಅಚಲ ನಂಬಿಕೆಯಿಟ್ಟು ಬಂದವರು ಅವರು. ತಮ್ಮ ನೋವುಗಳನ್ನು ಮರೆತು ತಮ್ಮಂತೆಯೇ ನೋವುಂಡವರ ಜೊತೆ ಬೆರೆತು, ಹಾಡು ಕುಣಿತಗಳ ಮಧ್ಯೆ ಮತ್ತೆ ಒಂದು ವರ್ಷ ಹೋರಾಟದ ಸಾಗರದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ ಛಲ ಹೊತ್ತು ತೆರಳುವವರು.

ಇಂತಹ ಮೇ ದಿನವನ್ನು ಅಚ್ಚರಿಯ ಕಣ್ಣುಗಳಿಂದ ನೋಡುತ್ತಾ ಅದರಲ್ಲಿ ನಡೆಯುವ ಹಾಡು ಕುಣಿತದಲ್ಲಿ ಒಂದಾಗಿ ಮನೆಗೆ ಮರಳುವಾಗ ಸಂಗಾತಿಯೊಬ್ಬರು ನನಗೆ ನೀಡಿದ್ದು - ಆ ಒಂದು ರೂಪಾಯಿಯ ಕೂಪನ್. ಕ್ಯೂಬಾ ದೇಶದ ಬೆಂಬಲಾರ್ಥವಾಗಿ ಒಂದು ರೂ. ಮೇ ದಿನ ಹಾಡು ಕುಣಿತಗಳ ಜೊತೆಗೆ ಇಂತಹ ಹಲವು ನಂಟು ಬೆಸೆಯುವ ದಿನವೂ ಹೌದು. ಹೋರಾಟದ ಕಿಚ್ಚು ಹೊತ್ತಿಸುವ ಪುಸ್ತಕಗಳು, ತಮಗೆ ಆದರ್ಶವಾದವರ ಚಿತ್ರಗಳು, ಕಲಾಕೃತಿಗಳು, ಎಲ್ಲೆಲ್ಲೂ ಕರಪತ್ರಗಳು. ನೊಂದ ಸಂಘಟನೆಗಳಿಗಾಗಿ, ಮುಷ್ಕರ ಕುಳಿತವರ ನೆರವಿಗಾಗಿ ಹಣ ಸಂಗ್ರಹಿಸಲು ಕೂಪನ್‌ಗಳು.

ಆದರೆ ಈಗ ಇವರು ಕೇಳುತ್ತಿರುವುದು ಒಂದು ದೇಶಕ್ಕಾಗಿ. ಇದು ನನ್ನನ್ನು ಬೆರಗುಗೊಳಿಸಿದ ಸಂಗತಿ. ಎಲ್ಲಿಯ ಕ್ಯೂಬಾ, ಎಲ್ಲಿಯ ಭಾರತ, ಎಲ್ಲಿಯ ಬೆಂಗಳೂರು. ಆ ದೇಶಕ್ಕೇಕೆ ಒಂದು ರೂಪಾಯಿಯ ನೆರವು. ಈ ಪ್ರಶ್ನೆ ನನ್ನ ತಲೆಯಲ್ಲಿ ಮೊಳೆತಿದ್ದೇ ತಡ ಕ್ಯೂಬಾ ಹಾಗೂ ನನ್ನ ನಡುವಿನ ಗೋಡೆಗಳು ಇಲ್ಲವಾಗುತ್ತಾ ಹೋದವು. ಗೆಳೆಯನ ಮನೆಯ ದಾರಿ ದೂರವಲ್ಲ ಎಂಬಂತೆ ಹಾದಿ ಹತ್ತಿರವಾಗತೊಡಗಿತು. ಕ್ಯೂಬಾ ನನ್ನ ನೆರೆಮನೆಯಾಯಿತು. ನನ್ನೊಳಗಿಳಿಯಿತು. ನನ್ನೊಳಗಿನ ಹಾಡಾಯಿತು.

ಹೀಗೆ ಯೋಚಿಸುವಾಗಲೆಲ್ಲಾ ನನಗೆ ಸು.ರಂ. ಎಕ್ಕುಂಡಿ ನೆನಪಾಗುತ್ತಾರೆ. ಶೇಕ್ಸ್‌ಪಿಯರ್‌ನ ‘ಹ್ಯಾಮ್ಲೆಟ್’ ನಾಟಕವನ್ನು ನೋಡುತ್ತಾ ಒಬ್ಬ ಹಳ್ಳಿಯಾತ ಬಿಕ್ಕಿ ಬಿಕ್ಕಿ ಅಳುತ್ತಾನೆ. ಆಗ ಶೇಕ್ಸ್‌ಪಿಯರ್ ವಿಸ್ಮಿತರಾಗಿ ಕೇಳುತ್ತಾರೆ - **Who is he to Hekuka and Hekuba to him.**

ರೊಮೇನಿಯಾದ ಒಡಲಲ್ಲಿ ಅರಳಿ ಜಗತ್ತನ್ನೇ ಬೆರಗಾಗಿಸಿದ ಜಿಮ್ನಾಸ್ಟ್ ನದಿಯಾ ಕಮಾನ್ಸೆಯ ಬಗ್ಗೆ ನಾನು ಕವನ ಬರೆದಾಗ ಎಕ್ಕುಂಡಿ ಈ ಮಾತು ಹೇಳಿದ್ದರು. ಕಾಣದ ಇಂಥ ಸಂಬಂಧದ ತಂತುಗಳು ಈ ಜಗತ್ತಿನ ಮೂಲೆ ಮೂಲೆಯಲ್ಲಿ ಹರಡಿರುತ್ತದೆ ಎಂದಿದ್ದರು. ಈಗ ಕ್ಯೂಬಾ ಮತ್ತು ನಾನು.

ಒಂದು ರೂಪಾಯಿ ಕೊಟ್ಟಾಗಲೇ ಮೊದಲ ಬಾರಿಗೆ ಕ್ಯೂಬಾ ಹೆಸರು ಕೇಳಿದ ನಾನು ಮತ್ತೆ ಯಾರಾದರೂ ಕ್ಯೂಬಾ ಹೆಸರು ಎತ್ತಿದಾಗ, ಪತ್ರಿಕೆಗಳಲ್ಲಿ ಕ್ಯೂಬಾ ಹೆಸರು ಕಂಡರೆ ಅರೆ! ಇದು ನಾನು ಒಂದು ರೂಪಾಯಿ ಕೊಟ್ಟ ದೇಶ ಎನಿಸುತ್ತಿತ್ತು. ಆ ಒಂದು ರೂಪಾಯಿಯ ದೇಶ ಸುದ್ದಿಯಾಗಿ ಪತ್ರಿಕೆಯಲ್ಲಿ ಮುಖ ತೋರಿಸುತ್ತಿರುವುದಾದರೂ ಯಾತಕ್ಕೆ? ಎಂದು ಕುತೂಹಲಗೊಂಡು ಓದುತ್ತಾ, ಓದುತ್ತಾ ಹೋದಂತೆ, ಆ ಒಂದು ರೂಪಾಯಿಯ ದೇಶ ನನ್ನೊಳಗೆ ಒಂದು ಜಾಗವನ್ನು ಹುಡುಕಿಕೊಂಡಿತು.



ಈಗ ಅದು ನನ್ನೊಳಗಿನ ಹಾಡು.

ಆ ಒಂದು ರೂಪಾಯಿ ಕೇವಲ ಕ್ಯೂಬಾವನ್ನು ಮಾತ್ರವಲ್ಲ ಅದಮ್ಯ ಕನಸುಗಾರ ಚೆಗೆವಾರನನ್ನು, ಹಸಿರು ಬಟ್ಟೆಯ ಹರಕು ಗಡ್ಡದ ಫಿಡೆಲ್‌ನನ್ನು, ಗ್ರಾನ್ಮಾ ನೌಕೆಯನ್ನೂ, ನೆರೂದಾನ ಕಾವ್ಯವನ್ನು, ಸದಾ ಜೊತೆಗಾರನಾಗಿ ನಿಂತ ಮೆಕ್ಸಿಕೋವನ್ನು, ‘ಚೆ’ಯ ಅರ್ಜೆಂಟೀನಾವನ್ನು, ಆತ ಇಲ್ಲವಾದ ಬೊಲಿವಿಯಾವನ್ನು, ಲ್ಯಾಟಿನ್ ಅಮೇರಿಕಾದ ಒಳಬೇಗುದಿಯನ್ನು, ಅಷ್ಟೇ ಅಲ್ಲ - ಅಮೇರಿಕಾ ಎಂಬ ದೊಡ್ಡಣ್ಣನನ್ನೂ ಪರಿಚಯ ಮಾಡಿಕೊಟ್ಟಿತು.

‘ಬೆಟ್ಟಗುಡ್ಡಗಳಲ್ಲಿ, ಕಾಡು ಕಣಿವೆಗಳಲ್ಲಿ, ಚೆಗೆವಾರನ ಕೈಯಲ್ಲಿ ಇದ್ದದ್ದು ಕೋವಿ ಮತ್ತು ಕಾವ್ಯ’ ಎಂದು ಬಣ್ಣಿಸಿದ್ದರು ಎಕ್ಕುಂಡಿ. ಆಗ ತಾನೇ ‘ಈ ರಾತ್ರಿ ಬರೆಯುತ್ತೇನೆ. ಅತ್ಯಂತ ನೋವಿನ ಸಾಲುಗಳನ್ನು...’ ಎಂಬ ನೆರೂದಾನ ಕವನದಲ್ಲಿ ಇಳಿಯುತ್ತಿದ್ದ ನಾನು ‘ಚೆ’ ಎಂಬ ಕನಸುಗಾರನೊಂದಿಗೆ ಕಳೆದುಹೋದೆ. ಪಡ್ಡೆ ‘ಚೆ’ ಜೊತೆಗೆ ತುಡುಗರ ದಂಡು. ಕನಸುಗಾರನ ಹಿಂದೆ ‘ಇರುವೆಯಂತೆ ಹರಿವ ಸಾಲು...’

ಕ್ಯೂಬಾ ಅಂದಿನಿಂದಲೂ ನನ್ನೊಂದಿಗಿದೆ. ಕನಸಾಗಿ, ಹಾಡಾಗಿ, ಬಂಡೇಳುವ ಹುಮ್ಮಸ್ಸಾಗಿ, ಕವಿತೆಯ ಸಾಲುಗಳಾಗಿ. ನನಗೆ ಫಿಡೆಲ್, ಚೆ, ಮಂಡೇಲ ಎಲ್ಲರೂ ಸೋನೆ ಹನಿಗಳಾಗಿ ಕಂಡಿದ್ದಾರೆ. ಈ ನೆಲಕ್ಕೆ ಹಸಿರು ಮುಕ್ಕಳಿಸುವ ತಾಕತ್ತು ಕೊಟ್ಟಿದ್ದರೆ ಅದು ಇಂತಹ ಅನೇಕಾನೇಕ ಸೋನೆ ಹನಿಗಳು ಎಂಬ ನಂಬಿಕೆ. ಸೋನೆ ಹನಿಗಳು ಉದುರಿ ಎದೆಗೂಡು ಸೇರಿ ಬೆಚ್ಚನೆಯ ಹಾಡಲ್ಲಿ ಹಾಡಾಯಿತು... ನನ್ನ ಸಂಕಲನದ ಸಾಲು ಇದು.ಇವರೆಲ್ಲರೂ ಎದೆಯಲ್ಲಿ ಕಾವ್ಯ, ಕೈಯಲ್ಲಿ ಖಡ್ಗ ಹಿಡಿದ ಪಂಪನ ಬಂಧುಗಳು. ಈ ಜಗತ್ತಿನಲ್ಲಿ ಪಂಪನದ್ದೇ ಒಂದು ಸೈನ್ಯವಿದೆ. ಎದೆಯಲ್ಲಿ ಕಾವ್ಯದ ಎಸಳುಗಳನ್ನಿಟ್ಟುಕೊಂಡು ಕೈಯಲ್ಲಿ ಖಡ್ಗ ಹಿಡಿದ ಎಷ್ಟೊಂದು ಜನ ಆ ಸೇನೆಯಲ್ಲಿದ್ದಾರೆ. ಆ ‘ಚೆ’ಯಿಂದ ಹಿಡಿದು ಬೆಂಜಮಿನ್ ಮೊಲಾಯಿಸ್‌ನವರೆಗೆ. ಜಗತ್ತಿನ ಕನಸುಗಾರರ ನಡುವೆ ಗೆರೆಗಳಿಲ್ಲ ಎಂಬುದು ಮತ್ತೆ ಮತ್ತೆ ಸಾಬೀತಾಗಿದೆ. ಜಗತ್ತಿನ ತುಂಬಾ ಹಲವಾರು ಲೆಬನಾನ್‌ಗಳು ಸೃಷ್ಟಿಯಾದಾಗ, ನೀನು ಕಪ್ಪು ಎನ್ನುವ ಮನಸ್ಸುಗಳು, ಸರ್ಕಾರಗಳು ಸೃಷ್ಟಿಯಾದಾಗ ‘ಒಂದೊಂದು ಮನೆಯಲ್ಲಿ ಒಬ್ಬೊಬ್ಬ ಚೆ...’ ಮೂಡುವ ಕನಸುಗಳೂ ಬೆಳೆದಿವೆ.

‘ಮಣಿ’ ಎನ್ನುವ ಅಮೇರಿಕಾ ‘ಮಣಿಯಲಾರೆ’ ಎನ್ನುವ ಕ್ಯೂಬಾ ಇಂದು ಜಗತ್ತಿನ ಆ ತುದಿಯ ಕಥೆಯಾಗಿ ಉಳಿದಿಲ್ಲ. ತನ್ನ ಕಾಲ ಮೇಲೆ ತಾನು ನಿಲ್ಲುವ ಬಯಕೆಗಳು ಮೂಡಿದ ಕಡೆಯೆಲ್ಲಾ ಈ ಕ್ಯೂಬಾ - ಅಮೇರಿಕಾ ಸೃಷ್ಟಿಯಾಗಿವೆ. ದೇಶಗಳ ನಡುವೆ, ದೇಶಗಳ ಒಳಗೆ, ಮನೆಯೊಳಗೆ, ಹಾಗೇ ಮನಸ್ಸಿನ ಒಳಗೂ...

ಆ ಒಂದು ರೂಪಾಯಿ ಏನೆಲ್ಲಾ ಮಾಡಿತು. ಕನಸುಗಳನ್ನು ಕೊಟ್ಟಿತು. ಅಂತೆಯೇ ಅದರತ್ತ ಹಾರುವ ರೆಕ್ಕೆಗಳನ್ನೂ ಕೊಟ್ಟಿತು. ಆ ರೆಕ್ಕೆಗಳೇ ನನ್ನನ್ನು ಕ್ಯೂಬಾದ ಒಳಗೆ ಇಳಿಸಿತು.



## ಶಾರದಾ ಅಟ್ಲಾಸ್‌ನ 14ನೇ ಪುಟಕ್ಕೆ

‘ಚಿಕ್ಕಪ್ಪ ಸಿಕ್ತು’

ದೂರದಿಂದ ಎಸ್‌ಟಿಡಿ ಕರೆ.

ಏನು, ಎಲ್ಲಿ?-

‘ಶಾರದಾ ಅಟ್ಲಾಸ್‌ನ ೧೪ನೇ ಪುಟದಲ್ಲಿ, ಎಡಗಡೆ, ಪುಟಾಣಿಯಾಗಿದೆ’. ಒಂದು ರೂಪಾಯಿಗೆ ನನಗೆ ಪರಿಚಯವಾದ ಕ್ಯೂಬಾ ಎಷ್ಟೋ ಜನಕ್ಕೆ ಗೊತ್ತಾಗಿದ್ದು ಹೀಗೆ. ಶಾರದಾ ಅಟ್ಲಾಸ್‌ನಲ್ಲಿ ಒಂದು ತುಂಡಾಗಿ.

ನಾನು ಕ್ಯೂಬಾಕ್ಕೆ ಹೋಗುತ್ತಿದ್ದೇನೆ ಎಂಬ ಸುದ್ದಿ ನಿಧಾನ ಬಾಯಿಂದ ಬಾಯಿಗೆ ಹರಡುತ್ತಾ ಹೋದಂತೆ, ‘ಕ್ಯೂಬಾ - ಎಲ್ಲಿದೆ?’ ಎಂಬ ಪ್ರಶ್ನೆಯೂ ಎದ್ದು ನಿಂತಿತು. ಕೇಳಿದವರಿಗೆ ‘ಅಮೇರಿಕಾದ ಕೆಳಗೆ’ ಎಂದು ಹೇಳಲು ಕ್ಯೂಬಾದ ಚರಿತ್ರೆ ಅವಕಾಶ ಮಾಡಿಕೊಡಲಿಲ್ಲ. ಸದಾ ಅಮೇರಿಕಾದ ವಿರುದ್ಧ ಸೆಡ್ಡು ಹೊಡೆದು ಅದಕ್ಕಾಗಿ ಅನ್ನ ಬಟ್ಟೆಯನ್ನು ಕಳೆದುಕೊಂಡ ದೇಶವನ್ನು ‘ಅದೇ ಅಮೇರಿಕಾದ ಕೆಳಗೆ’ ಎಂದು ಸಲೀಸಾಗಿ ಹೇಳಿಬಿಡಲು ಹೇಗೆ ಸಾಧ್ಯ?

‘ಫಾರಿನ್‌ಗೆ ಹೋಗುತ್ತಿದ್ದಾನೆ’ ಎಂದು ಎಷ್ಟೋ ಮಂದಿ ನನ್ನ ಕ್ಯೂಬಾ ಪ್ರವಾಸವನ್ನು ಸರಳವಾಗಿ ಮುಗಿಸಿಬಿಡಲು ನಿರ್ಧರಿಸಿದ್ದರು. ಆದರೆ ಜನ ಬಿಡಬೇಕಲ್ಲಾ ಎರಡನೇ ಪ್ರಶ್ನೆ ಎಸೆಯುತ್ತಿದ್ದರು - ಇಂಗ್ಲೆಂಡ್‌ಗಾ? ಅಮೇರಿಕಾಗಾ? - ಅಲ್ಲ ಕ್ಯೂಬಾಗೆ. ಕ್ಯೂಬಾ ಎಲ್ಲಿದೆಯಪ್ಪ ಹಲವರ ಕೊಕ್ಕೆ.



ಕೆಲವರಿಗಂತೂ ನಾನು ಕ್ಯೂಬಾಗೆ ಇಂಗ್ಲೆಂಡ್‌ನ ಮಾರ್ಗವಾಗಿ ಹಾರುತ್ತಿದ್ದುದೂ, ಕ್ಯೂಬಾಗೆ ಹೋಗುವಾಗ ಬರುವಾಗ ಸಾಕಷ್ಟು ದಿನ ಇಂಗ್ಲೆಂಡಿನಲ್ಲಿ ಇರಬೇಕಾಗಿದ್ದದ್ದೂ ನೆರವಿಗೆ ಬಂತು. ಹೆಚ್ಚು ಎಡವಟ್ಟು ಮಾಡಿಕೊಳ್ಳದಂತೆ ‘ಇಂಗ್ಲೆಂಡ್‌ಗೆ. ಹಾಗೆ ನಂತರ ಕ್ಯೂಬಾಗೆ’ ಎಂದು ಹೇಳಿ ಸುಮ್ಮನಾದರು.

ಇನ್ನು ಕೆಲವರಿಗೆ ಅಮೇರಿಕಾ ಖಂಡದಲ್ಲಿ ಕ್ಯೂಬಾ ಇರುವುದೇ ವರದಾನವಾಯಿತು. ಅಮೇರಿಕಾಗೆ - ಎಂದು ಚುಟುಕಾಗಿ ಉತ್ತರಿಸಿ ಸುಮ್ಮನಾದರು.

‘ಕ್ಯೂಬಾ’ ಎನ್ನುವ ಒಂದೇ ಕಾರಣಕ್ಕೆ ಹಾಸಿಗೆ ಇದ್ದಷ್ಟೇ ಕಾಲು ಚಾಚು ಎಂದು ದೊಡ್ಡವರು ಹೇಳಿಕೊಟ್ಟಿದ್ದನ್ನೂ ಮರೆತು ಹಾಸಿಗೆಯಿಂದ ಆಚೆಗೂ ಕಾಲು ಚಾಚಲು ಸಿದ್ಧನಾಗಿ ‘ಜೀವಮಾನದ ಯಾತ್ರೆ’ಗೆ ಸಜ್ಜಾಗಿದ್ದ ನಾನು ಅಷ್ಟು ಸುಲಭವಾಗಿ ಕ್ಯೂಬಾವನ್ನು ಅಮೇರಿಕಾ, ಇಂಗ್ಲೆಂಡ್ ಎಂದುಕೊಳ್ಳಲು ಸಿದ್ಧನಿರಲಿಲ್ಲ.

ಆದರೆ ಸಾಕಷ್ಟು ಪುಟಾಣಿಗಳು ಇದ್ದರು. ಅಮೇರಿಕಾದ ಆಕರ್ಷಣೆ, ಇಂಗ್ಲೆಂಡ್‌ನ ರುಚಿ ಇನ್ನೂ ಸಿಕ್ಕಿಲ್ಲದವರು. ಅವರು ನನಗಾಗಿ ಶಾರದಾ ಅಟ್ಲಾಸನ್ನೂ, ಆಕ್ಸ್‌ಫರ್ಡ್ ಅಟ್ಲಾಸನ್ನೂ, ಹೊಸದಾಗಿ ಮಾರುಕಟ್ಟೆಗೆ ಬಂದಿದ್ದ ಇಂಪೋರ್ಟೆಡ್ ಮೃದು ಗ್ಲೋಬನ್ನೂ ತಿರುಗಿಸಿ ಕೊಲಂಬಸ್‌ನಷ್ಟೇ ಸಂತಸದಿಂದ ದೂರವಾಣಿಯಲ್ಲಿ ಕೂಗಿ ಹೇಳಿದ್ದರು - ಚಿಕ್ಕಪ್ಪಾ, ಕ್ಯೂಬಾ ಸಿಕ್ತು.

ಭೂಪಾಲ ಅನಿಲ ದುರಂತವನ್ನು ಎವರೆಡಿ ಬ್ಯಾಟರಿಗಳ ಮೂಲಕ ಸರಳವಾಗಿ ತಿಳಿಸುತ್ತಿದ್ದಾಗ, ನಮ್ಮ ಸರ್ಕಾರ ಎವರೆಡಿಯ ಯೂನಿಯನ್ ಕಾರ್ಬೈಡ್ ಮಾಲೀಕರಿಗೆ ಸರಿಯಾಗಿ ಪಾಠ ಕಲಿಸದಿದ್ದರೇನಂತೆ ನಾವು ಎಲ್ಲರೂ ಮನಸ್ಸು ಮಾಡಿ ಎವರೆಡಿ ಬ್ಯಾಟರಿ ಕೊಳ್ಳುವುದನ್ನು ಬಿಟ್ಟರೆ ಅದೇ ಸರಿಯಾದ ಪಾಠ ಕಲಿಸುತ್ತದೆ ಎಂದು ಹೇಳುತ್ತಿದ್ದಾಗ, ಮೈಯೆಲ್ಲಾ ಕಣ್ಣಾಗಿ ಕೇಳುತ್ತಿದ್ದ ಹುಡುಗರು ಇವರು. ಕರ್ನಾಟಕ ಲೇಖಕಿಯರ ಸಂಘ ತನ್ನ ಸಮ್ಮೇಳನದ ನೆನಪಿಗೆ ಕೊಟ್ಟ ಪುಟಾಣಿ ಟಾರ್ಚ್‌ನಲ್ಲಿ ಅಡಗಿದ್ದ ಎವರೆಡಿ ಬ್ಯಾಟರಿಗಳನ್ನು ಏನು ಮಾಡಬೇಕು ಎಂದು ನಾವು ಇನ್ನೂ ತುಯ್ದಾಡುತ್ತಿರುವಾಗಲೇ ‘ಆ ಎವರೆಡಿ ಇಲ್ಲಿಗೆ ಹೇಗೆ ಬಂತು?’ ಎಂಬ ಪ್ರಶ್ನೆ ಮುಖಕ್ಕೆ ರಾಚಿದ್ದರು. ಅದೇ ಆ ಹುಡುಗರು ನನ್ನ ಕ್ಯೂಬಾ ಪ್ರವಾಸವನ್ನೂ ಮೈಯೆಲ್ಲಾ ಕಿವಿಯಾಗಿಸಿ ಕೇಳಿಸಿಕೊಂಡರು. ‘ಕದಳಿಯೊಳು ಮದದಾನೆ ಹೊಕ್ಕಂದದಲಿ …’ ಅದಕ್ಕೆ ಕ್ಯೂಬಾ ಎನ್ನುವ ಅಂಕುಶವೂ ಇರುತ್ತದೆ ಎಂಬುದು ಗೊತ್ತಾಯಿತು.

‘ಕ್ಯೂಬಾಗಾ? ಮೋಹನ್, ಫಿಡೆಲ್ ಕ್ಯಾಸ್ಟ್ರೋ ಮಗಳು ನಿನ್ನೆ ಪೇಪರ್‌ನಲ್ಲಿ ಕೊಟ್ಟ ಸ್ಟೇಟ್‌ಮೆಂಟ್ ನೋಡಿದ್ರಾ. ಅಪ್ಪ ಸರಿ ಇಲ್ಲ ಎಂದಿದ್ದಾಳೆ’. ಗೆಳತಿಯೊಬ್ಬರು ಕಕ್ಕುಲಾತಿಯಿಂದ ಕೇಳಿದ ಪ್ರಶ್ನೆ ಇದು.

ಪೇಪರ್‌ನಲ್ಲಿ ಸದಾ ಕ್ಯೂಬಾದ ಸುದ್ದಿಗಳನ್ನು ಹುಡುಕುವ ನನಗೆ ಈಗ ಈ ಸುದ್ದಿ ಯಾವ ಮೂಲದಿಂದ ಬಂದಿದೆ ಎಂಬುದನ್ನು ಹುಡುಕುವುದೂ ಅಭ್ಯಾಸವಾಗಿ ಹೋಗಿದೆ. ಹೀಗಾಗಿ ಈ ಸುದ್ದಿಯ ಮೂಲವನ್ನೂ ಹುಡುಕಿದೆ. ‘ಎಪಿ’ ಎಂದಿತ್ತು. ಬೇರೆಯವರಿಗೆ ಅದು ಮತ್ತೊಂದು ಸುದ್ದಿ



ಸಂಸ್ಥೆಯಾದರೂ ಸಹಾ ನನಗೆ ಅದು 'ಎಪಿ - ಅಸೋಸಿಯೇಟ್ ಪ್ರೆಸ್ - ಅಮೇರಿಕಾ' ಹೀಗಾಗಿ ಅಂತಹ ಆತಂಕವೇನಾಗಿರಲಿಲ್ಲ. ಕ್ಯಾಸ್ಟ್ರೋ 'ಮಗಳಿಂದ' ನನ್ನ ಅಪ್ಪ ಮಹಾನ್ ಶಕ್ತಿ, ಸಾಮ್ರಾಜ್ಯ ಶಾಹಿಯ ವಿರುದ್ಧ ಹೋರಾಡುತ್ತಿರುವ ಆಶಾಕಿರಣ ಎಂದು ಹೇಳಿಸುವಷ್ಟು ದಡ್ಡ ಈ 'ಎಪಿ'ಯಲ್ಲ. ಮತ್ತು ಇಂತಹ ಲಕ್ಷಾಂತರ ಸುಳ್ಳು ಸುದ್ದಿಗಳನ್ನು ಜಗತ್ತಿನ ತುಂಬಾ ಹರಡುತ್ತಾ ನೂರು ವರ್ಷ ಕಳೆದಿದೆ. ಬೇರೆಯವರಿಗೆ 'ನೂರು ವರ್ಷಗಳ ಇತಿಹಾಸವಿರುವ, ಅತ್ಯಂತ ಹೈಟೆಕ್ ಆದ, ಕ್ಷಣಮಾತ್ರದಲ್ಲಿ ಜಗತ್ತಿನ ಮೂಲೆ ಮೂಲೆಗೆ ಸುದ್ದಿ ಮುಟ್ಟಿಸುವ ಸಾಮರ್ಥ್ಯ ಇರುವ' ಈ 'ಎ.ಪಿ.' ಏಕೋ ನನ್ನಂತಹವರಿಗೆ 'ಜಗತ್ತಿಗೆ ಕಾಮಾಲೆ ಕಣ್ಣು ತೊಡಿಸುವ' ಸುದ್ದಿ ಸಂಸ್ಥೆಯೂ ಹೌದು.

ಕ್ಯೂಬಾಗೆ ಹೋಗುತ್ತಿದ್ದೇನೆ ಎಂದು ಸಂಭ್ರಮದಿಂದ ಹೇಳಿಕೊಳ್ಳಲು ನನಗೆ ನಾಲಿಗೆ ಇರದಿರಲು ಒಂದು ಕಾರಣವಂತೂ ಇತ್ತು. 'ಇಲ್ಲೇ ಮೆಜೆಸ್ಟಿಕ್‌ಗೆ ಹೋಗಿ ಬರೋಣ ಬಾ ಗುರು' ಎಂದಷ್ಟೇ ಸಲೀಸಾಗಿ ಗುರುಶಾಂತ ಕ್ಯೂಬಾಗೆ ಹೋಗಿ ಬರೋಣ ಬಾ ಎಂದು ಹೇಳಿದ್ದ. ಕ್ಯೂಬಾ ಮೆಜೆಸ್ಟಿಕ್ ಅಲ್ಲವಲ್ಲ. ಕ್ಯೂಬಾಗೆ ಅದರಲ್ಲೂ ಇಂಗ್ಲೆಂಡ್ ಮಾರ್ಗವಾಗಿ ಹಾರಲು ಪಡಬೇಕಾದ ಪಡಿಪಾಟಲು ಸಾಕಷ್ಟಿತ್ತು. ಇನ್ನು ನಾಲ್ಕು ದಿನದಲ್ಲಿ ಕ್ಯೂಬಾ ಪಯಣ ಆರಂಭವಾಗಬೇಕು ಎನ್ನುವಾಗಲೂ ನನ್ನ ಕೈಯಲ್ಲಿ ಯಾವ ದೇಶದ 'ವೀಸಾ'ವೂ ಇರಲಿಲ್ಲ. ಅಸಲಿಗೆ ಪಾಸ್‌ಪೋರ್ಟೇ ಇರಲಿಲ್ಲ. ಕ್ಯೂಬಾಗೆ ಹೋಗುತ್ತಿದ್ದೇನೆ ಎಂದು ಹೇಳಿ ವೀಸಾ, ಪಾಸ್‌ಪೋರ್ಟ್ ಸಿಗದೆ ನಾಲ್ಕು ದಿನಕ್ಕೇ ಮತ್ತೆ ಊರಿಗೆ ವಾಪಸ್ಸು ಬರುವಂತಾದರೆ ಎಂಬ ಆತಂಕ ಒಂದು ಕಡೆ, ಹೇಳದಿದ್ದರೆ - ಹೇಳದೇ ಹಾರಿದನಲ್ಲಾ ಎಂಬ ಮಾತು ಯಾಕಪ್ಪಾ ಎನ್ನುವ ದುಗುಡ ಮತ್ತೊಂದು ಕಡೆ. ಅಂತೂ ಧೈರ್ಯ ಮಾಡಿ, ಬೆರಳೆಣಿಕೆಯ ಗೆಳೆಯರಿಗಾದರೂ ಹೇಳಿ ಬಿಡುವಾ ಎಂದು ಫೋನು ತಿರುಗಿಸಿದಾಗ ಅತ್ತ ಕಡೆಯ ದನಿ - ಕ್ಯೂಬಾ, ಅದೇ 'ಶುಗರ್ ಬೌಲ್ ಆಫ್ ದಿ ವರ್ಲ್ಡ್' ಅಲ್ವಾ ಸಾರ್ ಎಂದಾಗ ಒಂದು ನಿಟ್ಟುಸಿರು. ಹೌದು ಕ್ಯೂಬಾ - ಜಗತ್ತಿನ ಸಕ್ಕರೆಯ ಬಟ್ಟಲು.



ಕಲ್ಬುರ್ಗಿ ರೈಲ್ವೆ ನಿಲ್ದಾಣದಲ್ಲಿ ಬರೋಬರಿ ಏಳು ಗಂಟೆ ತಡವಾಗಿ ಬಂದ ರೈಲು ಹತ್ತಿ, ಬೆಂಗಳೂರಿನಲ್ಲಿ ಪಾಸುಪೋರ್ಟ್ ಕೊಡಿಸುವ ಉದ್ದ ಕೈ ಇರುವ ಗೆಳೆಯರಿಗೆಲ್ಲಾ ರಿಂಗಾಯಿಸಿ, 'ಎಜುಕೇಟೆಡ್ ಆದವರು ಒಂದು ಪಾಸ್‌ಪೋರ್ಟ್ ಇಟ್ಟುಕೊಂಡಿರಲೇಬೇಕು. ಆಚೆ ಹಾರೋಕೆ ಯಾವಾಗ ಅವಕಾಶ ಬರುತ್ತೆ ಅಂತ ಹ್ಯಾಗೇಳ್ತೀರಿ' ಎಂಬ ಬೈಗುಳದೊಂದಿಗೆ ಪಾಸ್‌ಪೋರ್ಟ್ ಕೈಯಿಗೆ ಬಂದು ಬಿತ್ತು. ದೆಹಲಿಯಲ್ಲಿ ಲಂಡನ್ ನಾಲಿಗೆಯ ಇಂಗ್ಲಿಷ್, ಶಾಲೆಯ ಥರ್ಡ್ ಲಾಂಗ್ವೇಜ್ ಎಂದು ತಿರಸ್ಕರಿಸಿದ್ದ ಹಿಂದಿ ಎರಡೂ ಅರ್ಥವಾಗದೇ, 'ಕಮ್ಯುನಿಕೇಷನ್'ನಲ್ಲಿ ಪಡೆದ ಶಿಕ್ಷಣ ಯಾವ ಉಪಯೋಗಕ್ಕೂ ಬಾರದೆ ಕಕ್ಕಾಬಿಕ್ಕಿಯಾದಾಗ ಜಗತ್ತಿನಲ್ಲಿ ಜಾದೂ ಸಂಭವಿಸುತ್ತದೆ ಎಂದು ನಂಬಿಸುವುದಕ್ಕೋ ಎಂಬಂತೆ ಇಂಗ್ಲೆಂಡ್‌ನ ವೀಸಾ ಜೇಬು ಸೇರಿತ್ತು. 'ಶಾರದಾ ಅಟ್ಲಾಸ್‌ನ ೧೪ನೆಯ ಪುಟದ ಎಡಕ್ಕಿರುವ, ಮಗಳಿಂದ ಬೈಸಿಕೊಂಡ ಅಪ್ಪನ, ಜಗತ್ತಿನ ಸಕ್ಕರೆಯ ಬಟ್ಟಲಾದ ಕ್ಯೂಬಾಗೆ' ನನ್ನ ಪಯಣ ಆರಂಭವಾಯಿತು.

ಹಾಗೆ 'ಜೀವಮಾನದ ಯಾತ್ರೆ' ಹೊರಟವನು ನಾನೊಬ್ಬನೇ ಅಲ್ಲ. ಗ್ಲೋಬಿನ ತುಂಬಾ ಸಾವಿರಾರು ಜನ ಆ ಪುಟ್ಟ ತುಣುಕಿನತ್ತ ಹಾರುತ್ತಿದ್ದರು. ಅಷ್ಟುದ್ದ, ಅಷ್ಟಗಲ ಹರಡಿಕೊಂಡ ಆ ಅಮೇರಿಕಾ ಎಲ್ಲಿ? ಅದರ ಬುಡದಲ್ಲಿ ಎರಡಂಗುಲ ಇರುವ ಕ್ಯೂಬಾ ಎಲ್ಲಿ? ಆದರೆ ಜನರ ದಡ್ಡತನಕ್ಕೇನನ್ನಬೇಕು. ಅಷ್ಟುದ್ದ, ಅಷ್ಟಗಲದ ದೇಶ ಕಣ್ಣಿಗೆ ರಾಚುವಂತೆ ಇದ್ದರೂ ಹಾರುತ್ತಿರುವುದು ಎರಡಂಗುಲದ ದೇಶಕ್ಕೆ. ಅದೂ ಹುಚ್ಚರಂತೆ - ಇದ್ದ ಬದ್ದ ದುಡ್ಡು ಜೋಡಿಸಿಕೊಂಡು, ಅಲ್ಲಿ ಇಲ್ಲಿ ಕಾಡಿ ಬೇಡಿ, ನೂರಾರು ಊರು ತಿರುಗಿ ಆ ದೇಶದ ಬಗ್ಗೆ ಭಾಷಣ ಬಿಗಿದು, ಕ್ಯೂಬಾದಿಂದ ಸಿಗಾರ್ ತಾ, ಹೇಗಾದರೂ ಮಾಡಿ 'ಹಿಸ್ಟರಿ ವಿಲ್ ಅಬ್ಸಾಲ್ವ್ ಮಿ' ಪುಸ್ತಕ ನನಗಾಗಿ, ಸಾಧ್ಯವಾದರೆ ಕ್ಯಾಸ್ಟ್ರೋ ಸಹಿ ಹಾಕಿಸು, ಕನಿಷ್ಠ ಚೆ ಫೋಟೋ ತಗೊಂಬಾ ಮಾರಾಯ? ಒಂದೆರಡು ಗ್ರೀಟಿಂಗ್ ಕಾರ್ಡ್, ಕ್ಯಾಸೆಟ್ ಸಿಗುತ್ತಾ, ಕಾಸಿಲ್ಲದೇ ಹೋದ್ರೆ ನಮ್ಮನ್ನು ಮರೆತುಬಿಡು, ಬುಸುಬುಸು ಸಿಗಾರ್ ಸೇದು, ಹಾಡು ಕುಣಿ ಒಂದು ನಿಮಿಷಾನೂ ವೇಸ್ಟ್ ಮಾಡಬೇಡ - ನಮ್ಮಂತೆ ಪ್ರತೀ ದೇಶದಲ್ಲೂ ಹೀಗೆ ಬೆನ್ನು ಚಪ್ಪರಿಸಿಕೊಂಡೇ ಹೊರಟವರು ಎಲ್ಲರೂ.

ಇಂಗ್ಲೆಂಡ್‌ನ ಹೀಥ್ರೂನಲ್ಲಿ ಎಲ್ಲರದ್ದೂ ಒಂದು ಗುಂಪಾದರೆ ನಮ್ಮದೇ ಒಂದು ಬಳಗ. ಒಂದು ಬಣ್ಣದ ಗರಿಯ ಹಕ್ಕಿಗಳೇ ಒಂದು ಕಡೆ. ಇಂಗ್ಲೆಂಡೋ, ಆಸ್ಟ್ರೇಲಿಯಾನೋ, ನ್ಯೂಜಿಲೆಂಡೋ, ಘಾನಾ, ಕೊರಿಯಾ, ಚೀನಾ, ಜರ್ಮನಿಯೋ ಏನೋ, ಭಾಷೆ ನಾಲಿಗೆಯಿಂದ ಹೊರ ಬೀಳದಿದ್ದರೂ ವಲಸೆ ಹೋಗುವ ಹಕ್ಕಿಗಳೆಲ್ಲಾ ಒಂದೆಡೆ ಗುಂಪುಗೂಡಿ ಗಿಜಗಿಜ ಎನ್ನತೊಡಗಿದವು.

ಅಮೇರಿಕಾದ ಹೊಟ್ಟೆಯಲ್ಲಿ ಮೆಣಸಿನಕಾಯಿ ಕಲಸಿದಂತಾಯಿತು. 'ಢಂ'! ಕ್ಯೂಬಾದ ಎರಡು ವಿಮಾನಗಳನ್ನು ಹೊಡೆದು ಸಾಗರದ ತಳ ಸೇರಿಸಲಾಯಿತು. ಕ್ಯೂಬಾದಲ್ಲಿ ಜಗತ್ತಿನ ಜಾತ್ರೆ ಸೇರಬೇಕಾದ ಕೇವಲ ಎರಡು ದಿನಗಳ ಮುಂಚೆ. ಅದಕ್ಕೂ ಎರಡು ದಿನ ಮುನ್ನ ಕ್ಯೂಬಾದ ಕಡಲ ತೀರದಲ್ಲಿದ್ದ ಪ್ರವಾಸಿಗರ ಹೋಟೇಲುಗಳ ಮೇಲೆ ಬಾಂಬ್ ದಾಳಿಯಾಯಿತು. ಎರಡು ಹೋಟೆಲ್‌ಗಳು

ಜಖಂಗೊಂಡವು. ದಿಢೀರನೆ ಹಾರಿದ ವಿಮಾನಗಳು ಕಬ್ಬಿನ ಗದ್ದೆಗಳ ಮೇಲೆ ರಾಸಾಯನಿಕ ದಾಳಿ ನಡೆಸಿದವು.

ಈ ಎಲ್ಲವೂ ಮುಸುಕಿನಲ್ಲೇನೂ ನಡೆಯಲಿಲ್ಲ. ಎಪಿ, ರಾಯಿಟರ್, ಯುಪಿಐ, ಡಿಪಿಎ ಸುದ್ದಿ ಸಂಸ್ಥೆಗಳ ಮೂಲಕ ಜಗತ್ತಿನ ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಯಿತು. ಕ್ಯೂಬಾದತ್ತ ಹಾರಹೊರಟವರಿಗೆ ಅಮೇರಿಕಾ ಸ್ವಾಗತ ಗೀತೆ ಹಾಡಿದ್ದು ಹೀಗೆ. ಕ್ಯೂಬಾ ಎಂದರೆ ಸಾಕು ದಡದಡನೆ ಹೊರಟು ಬಿಡುವವರ ನಾಡಿಮಿಡಿತ ಅಮೇರಿಕಾಗೆ ಗೊತ್ತು. ಹಾಗಾಗಿಯೇ ಮೊದಲ ಎಚ್ಚರಿಕೆ - ಕ್ಯೂಬಾಗೆ ಬಂದರೆ ಎಚ್ಚರ!

ಅಮೇರಿಕಾ ಇಷ್ಟು ಗಟ್ಟಿಯಾಗೇನೂ ಆ ಮಾತನ್ನು ಹೇಳಲಿಲ್ಲ. ಅಮೇರಿಕಾ ಎಂದರೆ ಅಮೇರಿಕಾವೇ. ಬೇರೆಯವರಿಗೆ ಯುದ್ಧ ಎಂಬ ಮಾತು ಅಮೇರಿಕಾದ ಬಾಯಲ್ಲಿ 'ಶಾಂತಿ ಕಾರ್ಯಾಚರಣೆ', ಮಾನವೀಯ ಸಂಬಂಧ ಬೆಳೆಸುವ ಪ್ರಯತ್ನ. ಅಂತೆಯೇ ಈಗ ಹೇಳಿದ್ದೂ ಅದನ್ನೇ. ಹೆಲ್ಮ್ಸ್-ಬರ್ಟನ್ ಕಾಯಿದೆ ಪ್ರಕಾರ ಅಮೇರಿಕಾದೊಂದಿಗೆ ವ್ಯವಹರಿಸುವ ದೇಶಗಳು ಕ್ಯೂಬಾದೊಡನೆ ಸಂಬಂಧ ಬೆಳೆಸುವುದನ್ನು ಇಚ್ಛಿಸುವುದಿಲ್ಲ. ಕಾಯಿದೆ ಮೀರಿದರೆ ಸುಮ್ಮನೆ ಇರುವುದೂ ಇಲ್ಲ. ಅಮೇರಿಕಾ ಶ್ವೇತಭವನದ ಮಾತನಾಡುವ ಗಿಳಿಗಳಾದ ಎಪಿ-ರಾಯಿಟರ್‌ಗಳು ಅದನ್ನೇ ಉಚ್ಚರಿಸಿದವು. ಅದು ಪತ್ರಿಕೆಯಲ್ಲಿ ಸುದ್ದಿಯಾಗಿ, ರೇಡಿಯೋದಲ್ಲಿ ಸಂದೇಶವಾಗಿ, ಟಿವಿಯಲ್ಲಿ ಡಾಕ್ಯುಮೆಂಟರಿಯಾಗಿ ಅನುರಣನಗೊಂಡವು.

ಮಾತಿಗೆ ಬಗ್ಗದಿದ್ದಾಗ ಅಮೇರಿಕಾ 'ಶಾಂತಿ ಕಾರ್ಯಾಚರಣೆ'ಗಿಳಿಯಿತು. ಬೇಕೆಂದೆಡೆ ಹಾರುವುದು ಮಾತ್ರ ಗೊತ್ತಿರುವ ವಲಸೆ ಹಕ್ಕಿಗಳಿಗೆ ಎಲ್ಲಿಯ ಗಡಿ? ಅಮೇರಿಕಾಗೆ ಬೇಡವಾದರೂ ಗ್ಲೋಬು ತಿರುಗುವುದನ್ನು ನಿಲ್ಲಿಸುವುದಿಲ್ಲವಲ್ಲ. ಬೇರೆ ದೇಶಗಳ ಮಾತು ಹಾಗಿರಲಿ, ಅಮೇರಿಕಾದ ಒಳಗೇ ನದಿಯೊಂದು ಭೋರ್ಗರೆಯುತ್ತಾ ಕ್ಯೂಬಾದತ್ತ ಹರಿಯಲು ಆರಂಭಿಸಿತು.

ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಕ್ಯೂಬಾಗೆ ತೆರಳುವ ಮುನ್ನ ೧೦ ವರ್ಷದ ಪುಟಾಣಿ ಸೇಡ್ ಬೋನಿಲ್ಲಾ ನೆರೆದ ಸಭೆಗೆ ಕವನ ಓದಿದಳು -

ಕ್ಯೂಬಾ, ನಾನು ನಿನ್ನ ಹೆಸರನ್ನು
ಹಲವಾರು ಬಾರಿ ಕೇಳಿದ್ದೇನೆ
ನನ್ನ ಮನದೊಳಗೆ ತಮಟೆಗಳು ಸದ್ದು ಮಾಡುತ್ತಿವೆ
ಕ್ಯೂಬಾಗೆ ಬೇಕಾಗಿದೆ
ನನ್ನಂಥವರು, ನಿಮ್ಮಂಥವರು
ಅದಕ್ಕಾಗಿ ನಾನು ಕ್ಯೂಬಾಗೆ ಹೋಗುತ್ತಿದ್ದೇನೆ
ನೀವು ಏನು ಮಾಡುತ್ತೀರಿ?

ಬುಸ ಬುಸ ಸಿಗಾರ್ ಹೊಗೆ ಹೊರಹಾಕುತ್ತಿದ್ದವರ ಮಧ್ಯೆ ನಾನು ಕುಳಿತಿದ್ದೆ. ಕೂಬಾನಾ ಏರ್‌ಲೈನ್ಸ್ ಕ್ಯೂಬಾದತ್ತ ದೀರ್ಘ ಪಯಣಕ್ಕೆ ಸಜ್ಜಾಯಿತು.



## ಉನ್ ಫೆಸ್ಟಿವಲ್



'ಹಿಂಜಿದ ಅರಳೆಯು ಗಾಳಿಗೆ ಹಾರಿ ಮೋಡಗಳಾಗಿ ಹವೆ?' ಕವಿತೆಯಲ್ಲಿ ಪುಟಾಣಿ ಯೊಂದು ಅಮ್ಮನಿಗೆ ಪ್ರಶ್ನೆ ಎಸೆದಿತ್ತು. ಮೋಡಗಳನ್ನೆಲ್ಲಾ ಕೆಳಗೆ ತಳ್ಳಿ ಹಾರುತ್ತಿದ್ದ ವಿಮಾನದಲ್ಲಿ ಕುಳಿತ ನಾನು ಅದನ್ನೇ ಯೋಚಿಸುತ್ತಿದ್ದೆ. ಸುದೀರ್ಘ ಹತ್ತು ತಾಸು ಒಂದೇ ಸಮನೆ ಹಾರುತ್ತಲೇ ಇದ್ದ ನನಗೆ ಮಲ್ಲಿಗೆಯ ಕವಿ ಕೆಎಸ್‌ನ ಅವರಿಗೆ ಅನಿಸಿದಂತೆಯೇ ಅನಿಸಿತ್ತು - ಬಾನಂಗಳದಿ ವಿಮಾನ ಅದೆಷ್ಟು ನಿಧಾನ.

ಆಗ ದಿಢೀರನೆ ಕೂಬಾನಾ ಕುಸಿಯತೊಡಗಿತು. ವಿಮಾನ ಏರುವ ಇಳಿಯುವ ರೀತಿಯೆಲ್ಲಾ ಆ ವೇಳೆಗಾಗಲೇ ಸಾಕಷ್ಟು ಅನುಭವಕ್ಕೆ ಬಂದಿದ್ದರೂ ಸಹಾ ಪೇಪರ್ ಓದುವವರೆಲ್ಲಾ ಕಿವಿಯಲ್ಲಿ ಪುಟ್ಟ ಎಚ್ಚರಿಕೆ ಕೊಟ್ಟಿದ್ದರು - ಹುಷಾರು ಮಾರಾಯಾ, ಅಮೇರಿಕಾದ ಕಣ್ಣಿಗೆ ನೀನು ಕೂತ ವಿಮಾನವೇ ಬೀಳುವುದಿಲ್ಲ ಅಂತೇನು?- ವಿಮಾನ ಬಾನಲ್ಲಿ ಒಂದಿಷ್ಟು ಜೋಕಾಲಿ ಯಾಡಿದರೂ ಸಹಾ ಕಿಟಕಿಯ ಹೊರಗೆ ಇಣುಕಿ ನೋಡುವುದು ಯಾಕೋ ಏನೋ ಅಭ್ಯಾಸವಾಗಿಬಿಟ್ಟಿತ್ತು. ಹಾಗೆ ಇಣುಕು ತ್ತಿರುವಾಗಲೇ ಓಹ್!

*ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರಾ*

*ಮಿಂಚು ಬಳಗ ತೆರೆತೆರೆಗಳಾಗಿ ಅಲೆಯುವುದು ಪುಟ್ಟ, ಪೂರಾ*

*ಅದು ನಮ್ಮ ಊರು, ಇದು ನಿಮ್ಮ ಊರು, ತಂತಮ್ಮ ಊರೊ ಧೀರಾ*

*ಅದರೊಳಗೆ ನಾವು, ನಮ್ಮೊಳಗೆ ತಾವು ಅದು ಇಲ್ಲವಣ್ಣ ದೂರಾ...*

ಕಡಲಿನ ನಡುವೆ ಹಸಿರು ಕಾಣಿಸತೊಡಗಿದಂತೆ ಕ್ಯೂಬಾ ಕಣ್ಣಿಗೆ ಬಿದ್ದಿತು. ಕ್ಯೂಬಾ! - ಹೇಳಲು ಸಾಧ್ಯವಾಗಿದ್ದು ಅಷ್ಟು ಮಾತ್ರ. ಜೋಸ್‌ಮಾರ್ಟಿ ವಿಮಾನ ನಿಲ್ದಾಣ ಒಂದು ಪುಟ್ಟ ಜಗತ್ತಾಗಿ ಬದಲಾಗಿತ್ತು. ಜಗತ್ತಿನ ಮೂಲೆ  ಮೂಲೆಗಳಿಂದ ಬಂದಿಳಿಯುತ್ತಿದ್ದ ವಿಮಾನಗಳು ತಮ್ಮ ಹೊಟ್ಟೆಯೊಳಗೆ ಬೆಚ್ಚನೆಯ ಮಡಿಲ ಕಾವು ಅನುಭವಿಸುತ್ತಿದ್ದ ಸಾವಿರಾರು ಜನರನ್ನು ಕೈಹಿಡಿದು ಕೆಳಗೆ ಇಳಿಸಿದವು. ವಿಮಾನದ ಚಕ್ರ ಬಿಚ್ಚಿಕೊಂಡು ಕ್ಯೂಬಾದ ನೆಲ ಸ್ಪರ್ಶಿಸುತ್ತಿದ್ದಂತೆ ಕಣ್ಣಲ್ಲಿ ಮಿಂಚು. ಪಕ್ಕದಲ್ಲಿದ್ದ ಗುರುಶಾಂತ್‌ನನ್ನು ನೋಡಿದೆ. ಅವನ ಕಣ್ಣಂಚೂ ಒದ್ದೆಯಾಗಿತ್ತು. ಕೂಬಾನಾ ವಿಮಾನದಲ್ಲಿ ಪುಟ್ಟ ಚೀಟಿ ಬಿಟ್ಟಿವು - ಲಾಂಗ್ ಲಿವ್ ಕ್ಯೂಬಾ, ಲಾಂಗ್ ಲಿವ್ ಫಿಡೆಲ್.

ಕ್ಯೂಬಾ ನಿರಾಭರಣ ಸುಂದರಿ. ಇಲ್ಲಿ ಉತ್ಸಾಹ ನೋಡಿಯೇ ಉತ್ಸವ ನಿರ್ಧರಿಸಬೇಕು. ಎಲ್ಲೆಂದರಲ್ಲಿ ತೋರಣ, ಕಮಾನು, ಗೋಡೆಬರಹ, ಭಿತ್ತಿಪತ್ರ, ಬ್ಯಾನರ್... ಉಹುಂ. ಬರುವವರೆಲ್ಲರೂ ನೆಂಟರೇ ಆಗಿರುವಾಗ ಬ್ಯಾನರ್ ಏಕೆ ಬೇಕು. ಕ್ಯೂಬಾದಲ್ಲಿ ನಡೆಯುತ್ತಿರುವ ಐತಿಹಾಸಿಕ ಸಮ್ಮೇಳನ– ಉನ್ ಫೆಸ್ಟಿವಲ್‌ಗಾಗಿ ನಾವು ಬಂದು ಇಳಿದಿದ್ದೆವು. ೫೦ ವರ್ಷಗಳ ಹಿಂದೆ ಸಾಮ್ರಾಜ್ಯಶಾಹಿಯ ಯುದ್ಧ ಪಿಪಾಸುತನ, ಜಗತ್ತನ್ನು ಕೊಳ್ಳೆ ಹೊಡೆಯುವ ಆಸೆಬುರುಕುತನ, ತನ್ನ ಮಾತನ್ನೇ ಎಲ್ಲರೂ ಕೇಳಬೇಕೆಂಬ ಅಹಂಕಾರದ ವಿರುದ್ಧ ಸೆಡ್ಡು ಹೊಡೆದಿದ್ದ ವಿದ್ಯಾರ್ಥಿ ಯುವಜನರು ಆರಂಭಿಸಿದ, ಜಗತ್ತಿನ ಜನರ ಮಿಲನ ಇದು. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ, ಸೌಹಾರ್ದತೆ, ಶಾಂತಿ ಮತ್ತು ಸ್ನೇಹಕ್ಕಾಗಿ ನಡೆಯುತ್ತಿರುವ ಜಗತ್ತಿನ ಜಾತ್ರೆ. ಪ್ರತೀ ಬಾರಿಯ ಸಮ್ಮೇಳನ  ಅಮೇರಿಕಾ ಹಾಗೂ ಅದರ ಮಿತ್ರಕೂಟದಿಂದ ನೂರಾರು ಕಿರುಕುಳಗಳನ್ನು ಎದುರಿಸುತ್ತಲೇ 'ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ' ಎಂಬ  ಹುಮ್ಮಸ್ಸು ಉಳಿಸಿಕೊಂಡಿದೆ.

ಜಗತ್ತು ಎರಡು ಬಣಗಳಾಗಿತ್ತು. ಸಾಮ್ರಾಜ್ಯಶಾಹಿ ಒಂದೆಡೆಯಾದರೆ ಅದರ ವಿರುದ್ಧ ಅಣಿನೆರೆದ ಸಮಾಜವಾದಿ ದೇಶಗಳದ್ದೇ ಮತ್ತೊಂದು ಗುಂಪು. ಗೋರ್ಬಚೇವ್ ಒಂದು,  ಎರಡು, ಮೂರು ಹೆಜ್ಜೆಗಳನ್ನು ಮುಂದೆ ಇಟ್ಟು ನಡೆದಂತೆಲ್ಲಾ ಅದು ಪ್ರಪಾತದತ್ತ ಹಾಕುತ್ತಿರುವ ಒಂದೊಂದೇ ಹೆಜ್ಜೆ ಎಂದು ಯಾರಿಗೆ ಗೊತ್ತಿತ್ತು. ದಿಢೀರ್ ಸೋವಿಯತ್ ದೇಶದ ಪತನವಾಯಿತು. ಬೆನ್ನಲ್ಲಿ ಹಲವಾರು ದೇಶಗಳು. ಜಗತ್ತಿನ ಮಿಣುಕು ಹುಳಗಳನ್ನೆಲ್ಲಾ ಒಟ್ಟುಮಾಡಿ ಸಾಮ್ರಾಜ್ಯಶಾಹಿಯ ಕರಾಳ ಮುಖದ ಮೇಲೆ ಬೆಳಕು ಚೆಲ್ಲುತ್ತಿದ್ದ ವಿದ್ಯಾರ್ಥಿ ಯುವಜನರ ಸಮ್ಮೇಳನ 'ಷಾಕ್' ಅನುಭವಿಸಿತು. ಚರ್ಚೆಗಳು ಎದ್ದವು. ಸಿದ್ಧಾಂತಗಳು ಮೊಳೆತವು. ಸಾಮ್ರಾಜ್ಯಶಾಹಿಯ ಒಂದೇ ಬಣ ಉಳಿದಾಗ ಸಮ್ಮೇಳನದ ಮೇಲೆ ಹೂಂಕಾರ ಆರಂಭವಾಯಿತು. 'ಸಾಮ್ರಾಜ್ಯಶಾಹಿ ವಿರೋಧಿ' ಎಂದು ಸಮ್ಮೇಳನ



ಘಂಟಾಘೋಷವಾಗಿ ಸಾರಿಕೊಂಡಿರುವಾಗ ಕುಂಬಳಕಾಯಿ ಕದ್ದವರು ಸುಮ್ಮನಿರಲು ಹೇಗೆ ಸಾಧ್ಯ? ೧೫ನೆಯ ವಿದ್ಯಾರ್ಥಿ ಯುವಜನರ ಸಮ್ಮೇಳನದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಎಂಬ ಹಣೆಪಟ್ಟಿ ತೆಗೆದುಹಾಕಿಬಿಡಿ ಎಂದು ತರಲೆ ತರದೂದು ಆರಂಭವಾಯಿತು. ಹೇಳಿಕೇಳಿ ಎಲ್ಲರೂ ಚೆಗೆವಾರನ ಬಂಧುಗಳು. ಪ್ರತೀ ದೌರ್ಜನ್ಯದ ವಿರುದ್ಧ ಸಿಡಿದವರು. ಸಾಮ್ರಾಜ್ಯಶಾಹಿ ವಿರೋಧಿ, ಶಾಂತಿ, ಸೌಹಾರ್ದತೆ, ಸ್ನೇಹ ಇವುಗಳನ್ನು ಬಿಲ್‌ಕುಲ್ ಬಿಟ್ಟುಕೊಡಲು ಸಿದ್ಧರಿಲ್ಲದವರು.

ನಾಲ್ಕು ವರ್ಷಕ್ಕೊಮ್ಮೆ ನಡೆಯಬೇಕಾಗಿದ್ದ ಸಮ್ಮೇಳನಕ್ಕೆ ವೀಳ್ಯ ತೆಗೆದುಕೊಂಡವರು ಅಮೇರಿಕಾಗೆ ಹೆದರಿ ಸುಮ್ಮನಾದರು. ಗ್ಲೋಬು ಅಮೇರಿಕಾದ ದಿಕ್ಕಿನಲ್ಲಿಯೇ ತಿರುಗುತ್ತಿದೆ, ಅಮೇರಿಕಾದ ಕೋಳಿ ಕೂಗಿದರೇ ಬೆಳಕಾಗುತ್ತದೆ ಎಂದು ಜಾಗತೀಕರಣದ ಮಂತ್ರ ನಂಬಿಸುತ್ತಿದ್ದಾಗ ಕ್ಯೂಬಾ ಸಾರಿ ಹೇಳಿತು 'ಬನ್ನಿ ನನ್ನೆಡೆಗೆ'. ಸತತವಾಗಿ ೪೦ ವರ್ಷ ಅಮೇರಿಕಾದ ವಿರುದ್ಧ ಮಿಸುಕದೆ ಅಚಲವಾಗಿ ನಿಂತ ಕ್ಯೂಬಾ ಮತ್ತೆ ಅಮೇರಿಕಾದ ವಿರುದ್ಧ ನಿಲ್ಲಲು ತನಗಿರುವ ತಾಖತ್ತು ಸಾಬೀತುಪಡಿಸಿತು.

ಕುಸ್ತಿ ಅಂಕಣದಲ್ಲಿ ಕ್ಯೂಬಾ ತಾನು ಸ್ಪರ್ಧಿ ಎಂದು ಘೋಷಿಸಿದಾಗ ಅಮೇರಿಕಾದ ಸಿಟ್ಟು ನೆತ್ತಿಗೇರಿತು. ತನ್ನ ಸಾವಿರ ನಾಲಿಗೆ ಹೊರಳಿಸಿತು - ಕ್ಯೂಬಾ ಏಡ್ಸ್‌ನ, ವೇಶ್ಯೆಯರ ದೇಶವಾಯಿತು, ಕ್ಯೂಬಾದಲ್ಲಿ ಪ್ರಜಾಪ್ರಭುತ್ವ ಇಲ್ಲವಾಯಿತು. ಫಿಡೆಲ್ ಕ್ಯಾಸ್ಟ್ರೋಗೆ ಮಕ್ಕಳು ಹುಟ್ಟಿಕೊಂಡರು, ಅಪ್ಪನ ವಿರುದ್ಧ ಸಿಕ್ಕಿದ್ದು ಕಾರಿದರು - ಸಾಕಾಗಲಿಲ್ಲ. ಪ್ರತೀ ದೇಶಕ್ಕೆ ಸಂದೇಶ ಹೋಯಿತು. - ಸಮ್ಮೇಳನಕ್ಕೆ ವಿದ್ಯಾರ್ಥಿ ಯುವಜನರು ಹೋಗದಂತೆ ನೋಡಿಕೊಳ್ಳಿ - ಯುವಜನರ ಉತ್ಸಾಹಕ್ಕೆ ಮೂಗುದಾರ?

ದಕ್ಷಿಣ ಕೊರಿಯಾ, ಸಹಾರಾ, ಇರಾನ್ ದೇಶಗಳಲ್ಲಿ ಸಮ್ಮೇಳನ ಎಂಬುದು ದುಸ್ವಪ್ನವಾಯಿತು. ಆದರೆ ಐದು ಖಂಡಗಳಿಂದಲೂ ೧೩೨ ದೇಶಗಳ ೨ ಸಾವಿರ ಸಂಘಟನೆಗಳಿಂದ ಸಾವಿರಾರು ಜನರು ಕ್ಯೂಬಾದತ್ತ ಸಾಗಿದರು. ಅಸಲಿಗೆ ಅಮೇರಿಕಾದಿಂದಲೇ ಜನ ಹೊರಟರು. ಆಗ ಶುರುವಾಗಿದ್ದು 'ಶಾಂತಿ ಕಾರ್ಯಾಚರಣೆ'!– ವಿಮಾನ, ಹೊಟೇಲ್ ಮೇಲೆ ದಾಳಿ.  ಆದರೆ ಸಮ್ಮೇಳನಕ್ಕೆ ಅತ್ಯಂತ ಹೆಚ್ಚು ಪ್ರತಿನಿಧಿಗಳು ಬಂದಿದ್ದು ಅಮೆರಿಕದಿಂದ. ಕೆಂಪು ಕಣ್ಣು, ಕೈಯ ಚಾಟಿ, ದೊಡ್ಡಬಾಯಿ ಎದುರಿಸಿಯೇ ಸೈ ಎಂದು ಅಮೇರಿಕನ್ನರೇ ಜೀವವನ್ನು ಪಣಕ್ಕಿಟ್ಟು ಬಂದರು.

ಕ್ಯೂಬಾದ ಪ್ರತೀ ಮನೆಗಳ ಬಾಗಿಲು ತೆರೆದವು, ಬನ್ನಿ ನಮ್ಮೆಡೆಗೆ ಎಂದು ಸಾರಿದ್ದು ಕ್ಯಾಸ್ಟ್ರೋ ಮಾತ್ರವಲ್ಲ, ಪ್ರತೀ ಕ್ಯೂಬನ್ನರು. 'ವಾಕ್ ಸ್ವಾತಂತ್ರ್ಯವಿಲ್ಲದ, ಕಬ್ಬಿಣದ ಪರದೆಯ, ನಾಯಕರ ವಿರುದ್ಧ ಉಸಿರೆತ್ತಲಾಗದ, ಪ್ರಜಾಪ್ರಭುತ್ವ ಇಲ್ಲದ' ದೇಶದಲ್ಲಿ ಪ್ರತೀ ಮನೆಯ ಕದ ತೆರೆಯಿತು, ನೋಡು ಬಾ ನಮ್ಮೂರ ಎಂದು ಹೇಳಿತು ಕ್ಯೂಬಾ.

## ಗುಸ್ತೋ, ಓಲಿವಾ - ಮೋಹನ್

ಕ್ಯೂಬಾದ ಪ್ಲಾಯಾದ ೧೯ನೇ ತಿರುವಿನ ೨೧ನೆ ನಂಬರ್‌ನ ಮನೆಯ ಬಾಗಿಲ ಮೇಲೆ ಇದ್ದ ನೇಮ್‌ಪ್ಲೇಟ್. ಅದು ನಮ್ಮ ಊರು. ಮನೆ ಹೊಕ್ಕವನು ಒಂದು ಕ್ಷಣ ಹಾಸಿಗೆಯ ಮೇಲೆ ಮೈಚೆಲ್ಲಲು

ಹೋದೆ. ಅಲ್ಲಿ ಕಪ್ಪುಗೊಂಬೆ. ಪಕ್ಕದಲ್ಲಿ ಚೀಟಿ 'ವೆಲ್‌ಕಮ್ ಮೋಹನ್'. ಕ್ಯೂಬಾದಲ್ಲಿ ಪ್ರೀತಿಯ ಬಣ್ಣ ಯಾವುದು, ಕಪ್ಪು ಹೆಂಡತಿ ಕೆಂಪು ಗಂಡ ಕರಿಗೆಂಪು ಮಕ್ಕಳು. ಕೆಂಪು ಹೆಂಡತಿ ಕಪ್ಪು ಗಂಡ ಕರಿಗೆಂಪು ಮಕ್ಕಳ ನಾಡಲ್ಲಿ ಪ್ರೀತಿಯ ಬಣ್ಣ ಪ್ರೀತಿಯೇ.

**'ಉನ್ ಫೆಸ್ಟಿವಲ್'**

ಕ್ಯೂಬಾದಲ್ಲಿ ನಾಲ್ಕಾರು ತಿಂಗಳಿಂದ ಹರಡಿಹೋಗಿದ್ದ ಹಾಡು ಇದು. ಉನ್ ಫೆಸ್ಟಿವಲ್ - 'ನನ್ನ ಉತ್ಸವ'. ಪ್ರತಿಯೊಬ್ಬರನ್ನೂ ಮನೆಯಂಗಳಕ್ಕೆ ಬರಮಾಡಿಕೊಂಡ ಕ್ಯೂಬನ್ನರು ಈ ಉತ್ಸವವನ್ನು 'ನಿಮ್ಮ ಉತ್ಸವ' ಎಂದು ಹೇಳಲು ಹೇಗೆ ಸಾಧ್ಯ? ಬಡತನದ ಗುಣವೇ ಅದು - ಇದ್ದದ್ದನ್ನು ಹಂಚಿ ತಿನ್ನುವುದು. ಹಾಗಾಗಿಯೇ ೮೦೦ ಶಾಲಾ ಬಸ್‌ಗಳು ಅತಿಥಿಗಳ ಮುಂದೆ ನಿಂತವು. ಕ್ಯೂಬಾದ ಹೆಮ್ಮೆಯನ್ನು ಎತ್ತರಿಸಿದ್ದ ಶಾಲೆಗಳು ತಾತ್ಕಾಲಿಕ ತಂಗುದಾಣಗಳಾದವು. ಕಡಲ ದಂಡೆಯ ಉದ್ದಕ್ಕೂ ಇದ್ದ ವಿಹಾರ ಕೇಂದ್ರಗಳು ಪ್ರತೀ ಖಂಡಗಳ ಹೆಸರು ಹೊತ್ತು ಆ ಖಂಡಗಳ ಸಂಸ್ಕೃತಿಯ ಪ್ರದರ್ಶನ, ಭೇಟಿಯ ತಾಣಗಳಾದವು.

ಉತ್ಸವದ ರೀತಿಯೇ ವಿಭಿನ್ನವಾಗಿತ್ತು. ಉತ್ಸವಕ್ಕಾಗಿ ಬಂದವರು, ಉತ್ಸವದ ಸಮಯದಲ್ಲಿ ಕ್ಯೂಬಾ ನೋಡಲು ಬಂದವರು, ಉತ್ಸವದ ಆರಂಭ ಹಾಗೂ ಅಂತ್ಯದ ಸೌಹಾರ್ದತಾ ಪ್ರದರ್ಶನಕ್ಕೆ ಬಂದವರು - ಹೀಗೆ. ಈ ಎಲ್ಲರಿಗೂ ವಿವಿಧ ರೀತಿಯ ಕಾರ್ಯಕ್ರಮಗಳು. ಕ್ಯೂಬಾ ನಿರೀಕ್ಷಿಸಿದ್ದು ೫ ಸಾವಿರ ಪ್ರತಿನಿಧಿಗಳನ್ನು ಮಾತ್ರ. ವಿಶ್ವ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಅಂದಾಜೇ ಅಷ್ಟಿತ್ತು. ಆದರೆ ಪ್ರತಿನಿಧಿಗಳ ಸಂಖ್ಯೆ ದುಪ್ಪಟ್ಟಾಯಿತು. ಕಲಾಪಗಳಲ್ಲಿ ಭಾಗವಹಿಸಲು ಬಂದವರೇ ೧೨,೩೩೫ ಮಂದಿ. ಜೊತೆಗೆ ಇನ್ನಷ್ಟು. ಅಂತೂ ಜನಸಾಗರ.

ಈ ವಿಶ್ವವಿದ್ಯಾರ್ಥಿ ಯುವಜನರ ಸಮ್ಮೇಳನ ೧೯೪೭ರಲ್ಲಿ ಜೆಕೋಸ್ಲೋವಾಕಿಯಾದಿಂದ ಆರಂಭಿಸಿ ಹಂಗೇರಿ, ಜರ್ಮನ್ ಒಕ್ಕೂಟ, ರೊಮೇನಿಯಾ, ಪೋಲೆಂಡ್, ಸೋವಿಯತ್ ದೇಶ, ಆಸ್ಟ್ರಿಯಾ, ಫಿನ್ಲೆಂಡ್, ಬಲ್ಗೇರಿಯಾ ಮತ್ತೆ ಜರ್ಮನಿ ಒಕ್ಕೂಟ, ಕ್ಯೂಬಾ ಮತ್ತೆ ಸೋವಿಯತ್ ದೇಶ, ಉತ್ತರ ಕೊರಿಯಾ ನಂತರ ನಾಲ್ಕು ವರ್ಷಗಳ ಮೌನದ ನಂತರ ಸವಾಲನ್ನು ಹೊರುವ ಕ್ಯಾಸ್ಟ್ರೋರ ಬಯಕೆಯಂತೆ ಕ್ಯೂಬಾದ ಮಡಿಲಿಗೇ ಮರಳಿ ಬಂದಿತ್ತು.

ಕ್ಯೂಬಾ ಯುವಜನರ ಮಿಂಚಿನ ಶಕ್ತಿ ಅರಿತಿದ್ದ ದೇಶ. ಯುವಜನರ ಈ ಶಕ್ತಿಯನ್ನು ಗೌರವದಿಂದ ಕಂಡಿದ್ದ ದೇಶ. ೧೯೭೮ರಲ್ಲಿ ನಡೆದ ವಿದ್ಯಾರ್ಥಿ, ಯುವಜನರ ಸಮ್ಮೇಳನದ ನೆನಪಿಗೆ ಪೈನೋ ದ್ವೀಪಕ್ಕೆ ಯುವಜನರ ದ್ವೀಪ ಎಂದು ಮರುನಾಮಕರಣ ಮಾಡಿ ಗೌರವಿಸಿದ ದೇಶ. ಎರಡು ದಶಕದ ನಂತರ ಮತ್ತೆ ಇಲ್ಲಿ ಸಮ್ಮೇಳನ.

ಕ್ಯೂಬಾಗೆ ಬಂದ ಪ್ರತಿನಿಧಿಗಳಿಗೆ ಪ್ರಧಾನವಾಗಿ ವಿಚಾರ ಮಂಥನದ ಸುಗ್ರಾಸ ಭೋಜನ. ಸ್ಥಳ ಮಿತಿಯಿಂದಾಗಿ ಹೊರಗುಳಿಯಬೇಕಾದವರಿಗಾಗಿ ನಾಡು ಸುತ್ತುವ ಅವಕಾಶ. ಮನರಂಜನೆ



ಬಯಸುವವರಿಗೆ ಖಂಡಗಳ ಹೆಸರು ಹೊತ್ತ ಪ್ರತ್ಯೇಕ ಕ್ಲಬ್‌ಗಳು. ಕ್ಯೂಬಾ ಎಂದರೆ ಏನು ಎಂದು ಅರಿಯುವ ಸಲುವಾಗಿ ವಿಶೇಷ ವಿನಿಯಮ ಪ್ರವಾಸ, ಸೌಹಾರ್ದ ಸುತ್ತಾಟ.

ಏಷ್ಯಾ ಖಂಡದ ಕ್ಲಬ್‌ನಲ್ಲಿ ಹೀಗೆ ಒಮ್ಮೆ 'ಭಾರತ ದಿನ'ದ ಆಚರಣೆ. ಭಾರತ ಹಲವು ಸಮರಶೀಲ ದೇಶಗಳಿಗೆ ಪ್ರೀತಿಯ ಹೆಸರು. ಅಲಿಪ್ತ ಒಕ್ಕೂಟದ ನಾಯಕನಾಗಿ, ಮೂರನೇ ಜಗತ್ತಿನ ಪ್ರಮುಖನಾಗಿ, ಹೋರಾಟದಲ್ಲಿದ್ದ ದೇಶಗಳಿಗೆಲ್ಲಾ ಭಾರತ ಸಹಾಯಹಸ್ತ ಚಾಚಿದ್ದನ್ನು ನೆನಪಿಸಿಕೊಂಡು ಹಲವು ದೇಶದ ಪ್ರತಿನಿಧಿಗಳು ಆತ್ಮೀಯ ಮಾತುಗಳನ್ನಾಡಿದರು. ವಿಯೆಟ್ನಾಂನ ಯುವಕ 'ಭಾರತವನ್ನು ವಿಯೆಟ್ನಾಂ ಮರೆಯಲು ಹೇಗೆ ಸಾಧ್ಯ?' ಕಲ್ಕತ್ತದಲ್ಲಿ ಹೋಚಿಮಿನ್ ಪ್ರತಿಮೆ ಸ್ಥಾಪಿಸಿ 'ಹಮಾರಾ ನಾಮ್, ತುಮಾರಾ ನಾಮ್ ವಿಯೆಟ್ನಾಂ, ವಿಯೆಟ್ನಾಂ' ಎಂಬ ಘೋಷಣೆ ನೀಡಿದ ದೇಶ ಅದು' ಎಂದು ಸ್ಮರಿಸಿದರು. ಕ್ಯೂಬಾದ ಬೆಂಗಾವಲಿಗೆ ಭಾರತ ಸದಾ ನಿಂತಿದ್ದನ್ನು ಹಂಚಿಕೊಂಡವರು ಹಲವರು.

**ಅಮೇರಿಕಾ -**

ಬೇಕೋ ಬೇಡವೋ ಅಂತೂ ಇಡೀ ಉತ್ಸವದಲ್ಲಿ ಅಮೇರಿಕಾ ಯಜಮಾನಿಕೆಯ ಸಂಕೇತವಾಗಿ ಹೋಗಿತ್ತು. 'ನಾನೇರುವ ಎತ್ತರಕ್ಕೆ ನೀನೇರಬಲ್ಲೆಯಾ' ಎಂಬ ಸೊಕ್ಕಿನ ಅಮೇರಿಕಾದ ಪ್ರಸ್ತಾಪ ಮೇಲಿಂದ ಮೇಲೆ. ಜಾಗತೀಕರಣದಲ್ಲಿ ನಲುಗಿ ಹೋಗಿದ್ದ, ಜಾಗತೀಕರಣದ ರುಚಿ ಈಗ ತಾನೇ ಗೊತ್ತಾಗುತ್ತಿದ್ದ, ಸಾಮ್ರಾಜ್ಯಶಾಹಿಯ ಕರಾಳ ಹೆಜ್ಜೆ ಎಷ್ಟು ಭಾರ ಎಂದು ಗೊತ್ತಾಗಿದ್ದ, ಬೇರೆಯವರ ಸ್ಥಿತಿ ನೋಡಿ ನಮ್ಮ ಭವಿಷ್ಯ ಏನಾಗಬಹುದು ಎಂದು ಆತಂಕಗೊಂಡಿದ್ದ ದೇಶಗಳಿಂದ ಬಂದ ವಿದ್ಯಾರ್ಥಿ ಯುವಜನರು ಮತ್ತೆ ಮತ್ತೆ ಮಾತಿನಲ್ಲಿ ಅಮೇರಿಕಾಗೆ ಮರಳಿದರು. ಮಕ್ಕಳನ್ನು ಕಳೆದುಕೊಂಡು ನಿರಂತರ ಹುಡುಕಾಟ ನಡೆಸಿರುವ ತಾಯಂದಿರು ಅಮೇರಿಕಾದತ್ತ ಬೊಟ್ಟು ಮಾಡಿದರು. ಮಹಿಳೆ, ಮಕ್ಕಳು, ಪತ್ರಕರ್ತರು, ಸಂಸದೀಯ ಪಟುಗಳು, ಧಾರ್ಮಿಕ ಪ್ರಮುಖರು, ಆರೋಗ್ಯ ಕಾರ್ಯಕರ್ತರು, ಪ್ರಜಾಸತ್ತೆಯಲ್ಲಿ ನಂಬಿಕೆ ಉಳ್ಳವರು, ಸಾಂಸ್ಕೃತಿಕ ತಂಡಗಳು, ಕಲಾವಿದರು, ಕ್ಯೂಬಾದಲ್ಲಿ ಕಲಿತು ಮತ್ತೆ ಮರಳಿ ಗೂಡಿಗೆ ಬಂದ ವಿದೇಶೀಯರು ಹೀಗೆ ತಂಡೋಪತಂಡವಾಗಿ ಸಂಕಿರಣಗಳು ಜರುಗಿದವು.

ಮಹಿಳೆಯರ ಹಕ್ಕುಗಳ ಹೋರಾಟದಲ್ಲಿ ಜೊತೆಯಾಗುವ, ಮಾಧ್ಯಮ ಸಾಮ್ರಾಜ್ಯಶಾಹಿಗಳ ಹಿಡಿತವನ್ನು ಸಡಿಲಗೊಳಿಸಲು ಹೋರಾಡುವ, ಮಾನವ ಹಕ್ಕುಗಳನ್ನು ಗೌರವಿಸುವ, ಪರಿಸರವನ್ನು ಕಾಪಾಡುವ, ಮೂರನೇ ಜಗತ್ತಿನ ಮೇಲೆ ಹೇರಿರುವ ವಿದೇಶಿ ಸಾಲವನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸುವ, ಸಾಮಾಜಿಕ ನ್ಯಾಯ, ಪ್ರಜಾಸತ್ತೆಯನ್ನು ಗೌರವಿಸುವ, ಕೆಲವರ ಕೈಯ ದಾಳವಾಗಿರುವ ವಿಶ್ವಸಂಸ್ಥೆಯನ್ನು ಎಲ್ಲ ದೇಶಗಳ ನಿಜವಾದ ಪ್ರತಿನಿಧಿಯನ್ನಾಗಿಸುವ ಹಲವು ನಿರ್ಣಯಗಳನ್ನು ವಿದ್ಯಾರ್ಥಿ ಯುವಜನರು ಸ್ವೀಕರಿಸಿದರು.

ಇದೇ ಮೊದಲ ಬಾರಿಗೆ ೫೦ ವರ್ಷಗಳ ಇತಿಹಾಸವಿರುವ ಉತ್ಸವದಲ್ಲಿ ಯುವ ಪತ್ರಕರ್ತರ ಸಮಾವೇಶ.

ಈ ಕಾರಣಕ್ಕಾಗಿಯೇ ಕ್ಯೂಬಾಗೆ ಹಾರಿದ್ದ ನಾನು ಅಲ್ಲೂ ಕೇಳಿದ್ದು ನೋವಿನ ದನಿಗಳನ್ನೇ. ‘ಗ್ರಾನ್ಮಾ’ ಪತ್ರಿಕೆಯ ಪುಟಗಳು ಕರಗಿ ಹೋಗಿದ್ದರಿಂದ ಹಿಡಿದು ಇಂಟರ್‌ನೆಟ್‌ವರೆಗೆ ಅಮೇರಿಕಾದ ಚಾಟಿ ಏಟಿನ ನೋವಿನಗಾಥೆ. ಯುವ ಪತ್ರಕರ್ತರ ಸಮಾವೇಶವೂ ಜಗತ್ತು ಹಳ್ಳಿಯಾಗುತ್ತಿದೆ ಎನ್ನುವ ಸಂಭ್ರಮದ ನಡುವೆ ಇರುವ ತಲ್ಲಣದ ಎಳೆಗಳನ್ನು ಗುರುತಿಸಿತು.

ಅಮೇರಿಕಾ ನೀನು ದೋಷಿ - ಎಂದು ಸಾರಿದ್ದು ಸಾಮ್ರಾಜ್ಯಶಾಹಿಯ ವಿರುದ್ಧ ನಡೆದ ನ್ಯಾಯಾಲಯದಲ್ಲಿ. ಏಳು ಜನ ನ್ಯಾಯಾಧೀಶರ ಸಮ್ಮುಖದಲ್ಲಿ ೩೦ ದೇಶಗಳು ತಮ್ಮ ಆರೋಪಕ್ಕೆ ಸಾಕ್ಷ್ಯ ಒದಗಿಸಿದವು. ಪ್ರತೀ ದೇಶಕ್ಕೆ ಸಾವುನೋವಿನ ಕಣ್ಣೀರಿನ ದಿನಗಳನ್ನು ತಂದದ್ದರ ಬಗ್ಗೆ ಇನ್ನಷ್ಟು ಮತ್ತಷ್ಟು ಪುರಾವೆ ಒದಗಿಸಿದರು. ಅಮೇರಿಕಾದ ಸಿಐಎ ಅಧಿಕಾರಿ ಫಿಲಿಪ್ ಆಗೀ ಸಹಾ ಈಗ ಕಟಕಟೆಯಲ್ಲಿ ನಿಂತಿದ್ದರು - ಅಮೇರಿಕಾದ ವಿರುದ್ಧ ಸಾಕ್ಷ್ಯ ನುಡಿಯುವುದಕ್ಕಾಗಿ, ಅಮೇರಿಕಾ ಪರವಾಗಿ ಸಿಐಎ ಮೂಲಕ ತಾವು ಲ್ಯಾಟಿನ್ ಅಮೇರಿಕಾದಲ್ಲಿ ನಡೆಸಿದ ಕರಾಳ ಕೃತ್ಯಗಳನ್ನು ಬಯಲಿಗಿಕ್ಕುವುದಕ್ಕಾಗಿ, ಕೈಯ ಕಲೆಗಳನ್ನು ತೊಳೆದುಕೊಳ್ಳಲು ಅರೇಬಿಯಾದ ಸುಗಂಧ ದ್ರವ್ಯ ಹುಡುಕುವುದಕ್ಕಾಗಿ.

ಸಾಕ್ಷಿಗಳಿಗೆ ಬರವಿರಲಿಲ್ಲ. ಆದರೆ ಸಮಯಕ್ಕೆ ಇತ್ತು. ‘ಕಟಕಟೆ ಹತ್ತಲು ಬಿಡಿ ನನ್ನ’ ಎಂದ ತೆಲುಗಿನ ವಿಪ್ಲವ ಕವಿ ಚೆರಬಂಡರಾಜು ನೆನಪಾದರು. ಎಷ್ಟು ದೇಶಗಳು ಕೇಳಿದವು - ಕಟಕಟೆ ಹತ್ತಲು ಬಿಡಿ ನಮ್ಮನ್ನು. ನ್ಯಾಯಾಲಯ ಅಂತಿಮವಾಗಿ ತೀರ್ಪು ನೀಡಿತು - ಅಮೇರಿಕಾ ನೀನು ದೋಷಿ. ಚಪ್ಪಾಳೆಗಳ ಬದಲಾಗಿ ಸಭಾಂಗಣದಲ್ಲಿ ಹರಡಿದ್ದು ಮೌನ.

ಈ ಉತ್ಸವಕ್ಕೆ ಮಕುಟವಿಟ್ಟಂತೆ ಹತ್ತು ಹಲವು ಸಂಗತಿಗಳು ಜೊತೆಯಾಗಿದ್ದವು. ಕೆಲವೇ ದಿನಗಳ ಹಿಂದೆ ಚೆಗೆವಾರನ ದೇಹದ ಪಳೆಯುಳಿಕೆಗಳು ಪತ್ತೆಯಾಗಿ ಕ್ಯೂಬಾದ ಕೈ ಸೇರಿತ್ತು. ಉತ್ಸವದ ೫೦ನೇ ವರ್ಷಾಚರಣೆಯಾಗಿತ್ತು. ಫಿಡೆಲ್ ತಂಡ ಮಾಂಕೆಡಾ ಕೋಟೆಯನ್ನು ಸ್ಫೋಟಿಸಿ ಕ್ಯೂಬಾ ಪರ ಹೋರಾಟದ ಕಹಳೆ ಊದಿದ ದಿನಾಚರಣೆ ಹತ್ತಿರದಲ್ಲಿತ್ತು. ಕ್ಯೂಬಾ ತನ್ನ ನಿಜ ಸ್ವಾತಂತ್ರ್ಯದ ೪೦ನೇ ವರ್ಷಕ್ಕೆ ಹೆಜ್ಜೆ ಹಾಕುತ್ತಿತ್ತು.

ಸಂಭ್ರಮ ಎಂಬುದಕ್ಕೆ ಮಾತು ನೀಡಲೋ ಎಂಬಂತೆ ಟರ್ಕಿಯ ಚಿತ್ರ ಕಲಾವಿದ ೩೫೦ ಚದರ ಮೀಟರ್‌ಗಳ ಬೃಹತ್ ಚೆಗೆವಾರ ಕಲಾಕೃತಿ ತಯಾರಿಸಿದರು. ‘ಹಬಾನಾ ಲಿಬ್ರೆ’ ಹೋಟೆಲ್‌ನ ೨೪ನೆಯ ಮಹಡಿಯಿಂದ ಈ ಕಲಾಕೃತಿ ನೆಲದವರೆಗೆ ತೂಗುತ್ತಿತ್ತು. ಹೆಮ್ಮಿಂಗ್ವೇ ಕೃತಿಗಳಿಗೆ ಆಹಾರ ಒದಗಿಸಿದ ಜೊತೆಗಾರ ಗ್ರೆಗೇರಿಯೋ ಫ್ಯೂಂಟೆಸ್ ತಮ್ಮ ನೂರನೇ ಹುಟ್ಟುಹಬ್ಬ ಆಚರಿಸಿದರು. ೩೫ ದೇಶಗಳ ನೂರಾರು ಕಲಾವಿದರು ಚೆಗೆವಾರನ ಕಲಾಕೃತಿಗಳನ್ನು, ಪೋಸ್ಟರ್‌ಗಳನ್ನು ತಂದು ಪ್ರದರ್ಶನ ನಡೆಸಿದರು. ಚೆಗೆವಾರನ ಅತ್ಯಂತ ಪ್ರಖ್ಯಾತವಾದ ಚಿತ್ರ ತೆಗೆದ ಆಲ್ಬರ್ಟೋ ಡಯಾಸ್ ಕೋರ್ಡಾ ಅವರು ತಾವು ಆ ಚಿತ್ರ ತೆಗೆದ ಬಗೆಯನ್ನು ವಿವರಿಸಿದರು. ಚೆಗೆವಾರನ ಮಗಳು ಆಲೀಡಾ, ಜೊತೆಗಾರರು ಚೆ ನೆನಪುಗಳನ್ನು ಹಂಚಿಕೊಂಡರು. ನಾಲ್ಕನೇ ಉತ್ಸವದಲ್ಲಿ ಪರಿಚಿತರಾಗಿ ಮದುವೆಯಾದ ಅರ್ನೆಸ್ಟೋ ಬ್ರೇವೋ ಮತ್ತು ಎಸ್ತಿಲಾ ೧೪ನೆಯ ಉತ್ಸವದಲ್ಲಿ ನೆನಪು ಹಂಚಿಕೊಂಡರು. ಈ ಅರ್ಜೆಂಟೀನಾ



ಹುಡುಗ ಅಮೇರಿಕಾದ ಹುಡುಗಿ ಈಗ ವೃದ್ಧರಾಗಿದ್ದರು. ಉತ್ಸವದಲ್ಲಿ ನೆನಪು ಹೆಕ್ಕಿದರು.

ಉತ್ಸವಕ್ಕಾಗಿ ರೈಲು ಹಳಿಗಳು ರಿಪೇರಿಯಾದವು. ಉತ್ಸವದ ಪ್ರತಿನಿಧಿಗಳನ್ನು ಹೊತ್ತ ಸೌಹಾರ್ದತಾ ರೈಲು ಊರೂರುಗಳಲ್ಲಿ ನಿಲ್ಲುತ್ತಾ ದೇಶ ತೋರಿಸಿತು. ಪ್ರತಿನಿಧಿಗಳನ್ನು ಹೊತ್ತ ವಿಮಾನಗಳು ದೇಶದ ಮೂಲೆಮೂಲೆಗಳನ್ನು ಕಾಣಿಸಿತು. ಜನ ಹಾಡಿದರು, ಕುಣಿದರು, ಊರೂರು ತಿರುಗಿದರು. ಕಬ್ಬಿನ ಗದ್ದೆಗೆ, ಹೊಗೆಸೊಪ್ಪು ತೋಟಕ್ಕೆ, ಸಿಗಾರ್ ಕಾರ್ಖಾನೆಗೆ, ಶಾಲೆಗೆ, ಆಸ್ಪತ್ರೆಗೆ, ಕ್ರೀಡಾಂಗಣಕ್ಕೆ, ಕಡಲ ದಂಡೆಗೆ, ಧುಮ್ಮಿಕ್ಕುವ ಜಲಪಾತಗಳಿಗೆ, ಹಿಮದ ನಾಡವರು ಬಿಸಿಲು ಹುಡುಕುತ್ತಾ, ಬಿಸಿಲ ನಾಡವರು ತಣ್ಣಗಿನ ಜಾಗ ಅರಸುತ್ತಾ ಅಡ್ಡಾಡಿದರು. ‘ಉನ್ ಫೆಸ್ಟಿವಲ್’ನ ಪ್ರತೀ ಕ್ಷಣ ಬಸಿದುಕೊಂಡರು.





## ಅಮ್ಮ ನಿಮ್ಮ ಮನೆಗಳಲ್ಲಿ ಕಂಡಿರೇನೆ ಕಂದನಾ...

ಮಧ್ಯಾಹ್ನ ಸರಿಯಾಗಿ ೩-೩೦ ಗಂಟೆ.

ಹವಾನಾದ ಹೃದಯ ಕೇಂದ್ರದಲ್ಲಿರುವ ಕ್ರಾಂತಿ ಚೌಕದಲ್ಲಿ ಮಹಿಳೆಯರು ಸಾಲುಗಟ್ಟಿ ಬಂದರು. ಕ್ರಾಂತಿಯ ಎಷ್ಟೋ ಘಟನೆಗಳನ್ನು ತನ್ನ ಹೃದಯದಲ್ಲಿರಿಸಿಕೊಂಡಿರುವ ಕ್ರಾಂತಿ ಚೌಕ ಈ ದಿನ ಕಣ್ಣಿನಲ್ಲಿ ನೀರು ತುಂಬಿಕೊಂಡ ನೂರಾರು ಅಮ್ಮಂದಿರನ್ನು ಕಂಡಿತು.

ತಲೆಗೆ ಒಂದು ಕರವಸ್ತ್ರ ಸುತ್ತಿಕೊಂಡ ಈ ಪ್ರತಿಯೊಬ್ಬ ಅಮ್ಮಂದಿರು ಒಂದು ಫಲಕ ಹಿಡಿದು ಹೆಜ್ಜೆ ಹಾಕುತ್ತಿದ್ದರು. ಮಾತಿಲ್ಲ ಕತೆಯಿಲ್ಲ ಕಣ್ಣಲ್ಲಿ ಹರಿವ ನೀರು ನಿಲ್ಲುವಂತೆಯೇ ಇಲ್ಲ. ಪ್ರತಿಯೊಬ್ಬರೂ ಹಿಡಿದ ಫಲಕದಲ್ಲಿ ಒಂದು ಚಿತ್ರವಿತ್ತು - ಗಂಡು, ಹೆಣ್ಣು, ಪುಟ್ಟ ಮಕ್ಕಳು. ಆ ಚಿತ್ರದ ಕೆಳಗೆ ಹೆಸರು, ಪಕ್ಕದಲ್ಲಿ ವರ್ಷ. ಆ ಅಮ್ಮಂದಿರು ಕೇಳುತ್ತಿದ್ದರು - ನಮ್ಮ ಮಕ್ಕಳನ್ನು ನಮಗೆ ಕೊಡಿ.



ಒಂದಲ್ಲಾ ಎರಡಲ್ಲಾ ಹತ್ತಲ್ಲಾ ಇಪ್ಪತ್ತು ವರ್ಷಗಳಿಂದ ಈ ಅಮ್ಮಂದಿರು ಹೀಗೆ ಬೀದಿ ಬೀದಿಗಳಲ್ಲಿ ತಮ್ಮ ಮಕ್ಕಳ ಚಿತ್ರ ಹೊತ್ತು ನಿತ್ಯಯಾತ್ರೆ ಹೊರಡುತ್ತಲೇ ಇದ್ದಾರೆ. ಕೇಳುತ್ತಿದ್ದಾರೆ: 'ಅಮ್ಮ ನಿಮ್ಮ ಮನೆಗಳಲ್ಲಿ ಕಂಡಿರೇನೆ ಕಂದನಾ...'

ಅರ್ಜೆಂಟೀನಾದಲ್ಲಿ ಬದಲಾವಣೆಯ ಹುಮ್ಮಸ್ಸು ಹೊತ್ತು ಬೀದಿಗಿಳಿದ ಮಕ್ಕಳು ದಿಢೀರನೆ ಕಾಣೆಯಾಗಿದ್ದಾರೆ. ಈಗ ಬರುತ್ತೇನೆಂದವರು, ಹೋಗಿ ಬರುತ್ತೇನೆಂದವರು, ಬದಲಾದ ನಂತರವೇ ಬರುತ್ತೇನೆಂದು ಹೋದವರು ಇನ್ನೂ ಮನೆಯ ಕದ ಬಡಿದಿಲ್ಲವಲ್ಲ ಎಂದು ಈ ಅಮ್ಮಂದಿರು ಬೆಳಗೂ ರಾತ್ರಿ ಮಕ್ಕಳ ಹಾದಿ ನೋಡುತ್ತಾ ಕಳೆದಿದ್ದಾರೆ. ಅರ್ಜೆಂಟೀನಾದಲ್ಲಿ ಈ ಕಾತರ ಒಬ್ಬ ತಾಯಿಯದಲ್ಲ. ೩೦ ಸಾವಿರ ಮಕ್ಕಳು ದಿಢೀರನೆ ಇಲ್ಲವಾಗಿದ್ದಾರೆ. ಸತ್ತಿದ್ದಾರೆ ಎಂದು ಹೇಳುವವರಿಲ್ಲ. ಅದು ಖಾತರಿಪಡಿಸಿಕೊಳ್ಳದೆ ಈ ತಾಯಂದಿರ ಕಾಯುವಿಕೆ ಮುಗಿಯುವುದೂ ಇಲ್ಲ. ಇಂದು ಬರುತ್ತಾನೆ, ಇಲ್ಲ ನಾಳೆ, ಹಬ್ಬಕ್ಕಾದರೂ ಬರುತ್ತಾನೆ, ಕೊನೆಗೆ ನನ್ನ ಹುಟ್ಟುಹಬ್ಬವನ್ನಾದರೂ ಮರೆಯಲಾರ ಎಂದು ಕಾದ ಅಮ್ಮಂದಿರ ಕಣ್ಣಾಲಿ ಸೋತು ಈಗ ಬೀದಿಗಿಳಿದಿದ್ದಾರೆ. ಸರ್ಕಾರದ ಕೊರಳಪಟ್ಟಿ ಹಿಡಿದು ಕೇಳುತ್ತಿದ್ದಾರೆ - ನಮ್ಮ ಮಕ್ಕಳನ್ನು ನಮಗೆ ಕೊಡಿ.

ಅರ್ಜೆಂಟೀನಾದ ರಾಜಧಾನಿ ಬ್ಯೂನಸ್ ಏರೀಸ್‌ನಲ್ಲಿ ಸರ್ಕಾರದ ಕೇಂದ್ರಸ್ಥಾನ - ಡೆ ಪ್ಲಾಜಾ ಡೆ ಮಾಯೋ. ಪ್ರತೀ ದಿನ ಮಧ್ಯಾಹ್ನ ೩-೩೦ಕ್ಕೆ ಸರಿಯಾಗಿ ತಮ್ಮ ಮಕ್ಕಳನ್ನು ಹುಡುಕುವ ಅಮ್ಮಂದಿರು ಇಲ್ಲಿ ಸೇರುತ್ತಾರೆ. ತಮ್ಮ ನೋವುಗಳನ್ನು ಹಂಚಿಕೊಳ್ಳುತ್ತಾರೆ. ತನ್ನ ಮಗನೇ ಮನೆಯಲ್ಲಿ ಇಲ್ಲದಿರುವ ಅಮ್ಮ ಮತ್ತೊಬ್ಬಳ ಮಗ ಖಂಡಿತಾ ಮನೆಗೆ ಬರುತ್ತಾನೆ ಎಂದು ಖಾತರಿ ನೀಡುತ್ತಾಳೆ. ಕಣ್ಣೀರು ಒರೆಸುತ್ತಾಳೆ. ಎಲ್ಲರೂ ಕೊನೆಗೆ ಕೂಗಿ ಹೇಳುತ್ತಾರೆ - ನಮ್ಮ ಮಕ್ಕಳನ್ನು ನಮಗೆ ಕೊಡಿ, ಇಲ್ಲಾ ಅವರ ಸಾವನ್ನು ಬಹಿರಂಗಪಡಿಸಿ ಅವರನ್ನು ಗೌರವಿಸಿ.

ಕಳೆದ ೨೦ ವರ್ಷಗಳಿಂದಲೂ ಹೀಗೆ ಅಮ್ಮಂದಿರು ಆ ಸ್ಥಳದಲ್ಲಿ ಸೇರುತ್ತಲೇ ಇದ್ದಾರೆ. ಈಗ ಅಮ್ಮಂದಿರ ಸಂಘವೇ ರಚನೆಯಾಗಿದೆ. ಎಲ್ಲಿ ಪ್ರತೀ ದಿನ ನಿಂತು ಸರ್ಕಾರವನ್ನು ಅಲುಗಾಡಿಸುವ ದನಿಯಲ್ಲಿ ಘೋಷಣೆ ಮೊಳಗಿಸುತ್ತಿದ್ದರೋ ಅದೇ ಹೆಸರು ಆ ಸಂಘಕ್ಕೂ - 'ಡೆ ಪ್ಲಾಜಾ ಡೆ ಮಾಯೋ ಅಮ್ಮಂದಿರ ಸಂಘ'. ಆದರೆ ಅಮ್ಮಂದಿರು ಎರಡು ದಶಕಗಳಿಂದ ಹೀಗೆ ಪ್ರತೀ ದಿನಾ ಕೇಳುತ್ತಿದ್ದರೂ ಸಹಾ ಮಕ್ಕಳನ್ನು ನೋಡಲಾಗಿಲ್ಲ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಅಮ್ಮಂದಿರ ಸಂಖ್ಯೆ ಮಾತ್ರ ಹೆಚ್ಚಾಗುತ್ತಿದೆ.

ಕ್ಯೂಬಾದಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಐದು ಖಂಡಗಳ ೧೯೦ ರಾಷ್ಟ್ರಗಳು ಅಣಿನೆರೆದದ್ದೇ ತಡ ಈ ಅಮ್ಮಂದಿರು ಅಲ್ಲಿಗೂ ಬಂದಿಳಿದರು. ಕ್ರಾಂತಿ ಚೌಕದಲ್ಲಿ ಅದೇ ಮಧ್ಯಾಹ್ನ ೩-೩೦ಕ್ಕೆ ಸರಿಯಾಗಿ ಸೇರಿ ಹೆಜ್ಜೆ ಹಾಕಿದರು. ಸಾಮ್ರಾಜ್ಯಶಾಹಿ ತಮ್ಮ ಮಡಿಲುಗಳಿಂದ ಮಕ್ಕಳನ್ನು ಕಸಿಯುತ್ತಿರುವುದರ ಬಗ್ಗೆ ಇಡೀ ವಿಶ್ವಕ್ಕೆ ಸಾರಿ ಹೇಳಿದರು.

ಹವಾನಾದಲ್ಲಿ ಅಮ್ಮಂದಿರು ಹೆಜ್ಜೆ ಹಾಕಿದಾಗ ಅರ್ಜೆಂಟೀನಾದ ಎಲ್ಲಾ ಪ್ರತಿನಿಧಿಗಳೂ ಅವರನ್ನು

ಕೂಡಿಕೊಂಡರು. ಸತತವಾಗಿ ಸ್ಪೇನ್‌ನ ಆಡಳಿತದಲ್ಲಿ, ಅಮೇರಿಕಾ ಸಾಮ್ರಾಜ್ಯಶಾಹಿಯ ಘೋರ ಕೃತ್ಯಗಳಲ್ಲಿ ತಮ್ಮ ಮಕ್ಕಳನ್ನು ಕಳೆದುಕೊಂಡ ಕ್ಯೂಬಾದ ತಾಯಂದಿರು ಅವರ ಜೊತೆಯಾದರು. ಮೂರನೇ ಜಗತ್ತಿನ, ಲ್ಯಾಟಿನ್ ಅಮೇರಿಕಾದ ಅಮ್ಮಂದಿರೂ ಅವರೊಡನೆ ಹೆಜ್ಜೆ ಹಾಕಿದರು.

ಕೇವಲ ಕೆಲವೇ ದಿನಗಳ ಹಿಂದೆ ಚೆಗೆವಾರನ ಆಸ್ತಿ ಕ್ಯೂಬಾದ ನೆಲಕ್ಕೆ ಬಂದಿತ್ತು. ಬೊಲಿವಿಯಾದ ತಜ್ಞರು ಗುರುತಿಸಿದ 'ಚೆ' ಪಳೆಯುಳಿಕೆ ವಿಮಾನ ನಿಲ್ದಾಣಕ್ಕೆ ಬಂದಾಗ ಅಪ್ಪ ಹೊಲದಲ್ಲಿ ಕಬ್ಬು ಕತ್ತರಿಸುತ್ತಿದ್ದುದನ್ನೂ, ಅಮ್ಮನ ತೋಳಲ್ಲಿದ್ದ ಹಸುಗೂಸನ್ನು ಸ್ಪರ್ಶಿಸುತ್ತಿದ್ದುದನ್ನೂ ನೆನಪಿನಾಳದಲ್ಲಿರಿಸಿಕೊಂಡಿದ್ದ 'ಚೆ' ಮಗಳು ಅಲಿಡಾ ಚೆಗೆವಾರ 'ಅಪ್ಪ ಇಂದು ಹಿಂದಿರುಗಿದ್ದಾರೆ ಅವರು ಕಾಣೆಯಾಗಲಿಲ್ಲ, ಆದರೆ ಅದೇ ಹೀರೋನಂತೆ ಮರಳಿ ಬಂದಿದ್ದಾರೆ' ಎಂದು ಕಣ್ಣೀರುಗೆರೆದಿದ್ದಳು. ಬೊಲಿವಿಯಾದ ಕಾಡುಗಳಲ್ಲಿ ಕ್ರಾಂತಿ ನಡೆಸುತ್ತಿದ್ದಾಗ ಸಿಐಎದಿಂದ ಕೊಲ್ಲಲ್ಪಟ್ಟ ಚೆಗೆವಾರನ ದೇಹ ೩೦ ವರ್ಷ ಕಳೆದ ನಂತರ ಮಗಳ ಮಡಿಲಲ್ಲಿತ್ತು.

ಹವಾನದ ಕ್ರಾಂತಿ ಚೌಕದಲ್ಲಿದ್ದ ಅಮ್ಮಂದಿರದ್ದು ಸಹ ಹೀಗೆ ಕೊನೆಯಾಗದ ಭರವಸೆ. ೨೦ ವರ್ಷಗಳು ಮಾತ್ರ ಕಳೆದಿವೆ. ಇನ್ನು ಕೆಲ ವರ್ಷಕ್ಕೆ ಅವರು ಮತ್ತೆ ಸಿಗುತ್ತಾರೆ ಎಂಬ ತುಂಬು ಭರವಸೆ. ಈ ಒಂದೇ ಹುಲ್ಲುಕಡ್ಡಿ ಹಿಡಿದು ತೇಲುತ್ತಾ ನಡೆದವರು.

ಚೆಗೆವಾರ ಸದಾ ತನ್ನದು ಬೆಕ್ಕಿನ ಜೀವ ಎಂದು ಹೇಳುತ್ತಿದ್ದ.'ಈಗ ಎರಡಾಯಿತು, ಇನ್ನು ಐದಿದೆ' ಎಂದು ಚೆ ದಿಢೀರನೆ ಮನೆಗೆ ಕಾಗದ ಬರೆದುದನ್ನು ನೆನಪಿಸಿಕೊಂಡ 'ಚೆ'ಯ ತಾಯಿ ಹೇಳಿದ್ದು. ಪತ್ರ ಬಂದಾಗ ನಮಗೆ ಗೊತ್ತಾಗಿದ್ದು ಎರಡು ಬಾರಿ ಆತ ಸಾವಿನ ಬಾಯಿಯಿಂದ ಎದ್ದು ಬಂದಿದ್ದಾನೆ. ಇನ್ನೂ ಐದು ಬಾರಿ ಅವನಿಗೆ ಜೀವವಿದೆ ಎಂದು. ಹೀಗೆ ಎಷ್ಟೋ ಅಮ್ಮಂದಿರಿಗೆ ತಮ್ಮ ಮಕ್ಕಳ ಬಗ್ಗೆ ಕುಟುಕು ಆಸೆ. ಅವರು ಎಲ್ಲಿಯೋ ಇದ್ದಾರೆ. ಬೆಕ್ಕಿನಂತೆ ಗೆಲ್ಲುತ್ತಲೇ ಇದ್ದಾರೆ. ಇಂದಲ್ಲಾ ನಾಳೆ ಬರುತ್ತಾರೆ ಎಂದು.

ಇನ್ನು ಒಂದು ತಿಂಗಳೊಳಗೆ ಮತ್ತೆ ಪತ್ರ ಬರೆಯದಿದ್ದರೆ ನಾನು ಬದುಕಿಲ್ಲ ಎಂದು ತಿಳಿಯಿರಿ ಎಂದು ವಿದಾಯ ಚೀಟಿ  ಇಟ್ಟು ಬದಲಾವಣೆಯ ಕನಸು ಹೊತ್ತು ಹೋದವರು, ಆತ ಇಲ್ಲವಾಗಿ ಹೋದ ಎನ್ನುವಾಗಲೇ ದಿಢೀರನೆ ಬಾರಿಸಿದ ಕರೆಗಂಟೆ ಶಬ್ದಕ್ಕೆ ಬಾಗಿಲು ತೆಗೆದಾಗ ಹೊಸ್ತಿಲಲ್ಲಿ ಇದ್ದ ಪತ್ರ, ಅದೇ ತುಂಟತನದ ಮಾತು. ಮಗಳು ಕಾಲೇಜಿನಲ್ಲಿ ನೆಮ್ಮದಿಯಾಗಿ ಓದುತ್ತಿದ್ದಾಳೆ ಎಂದೇ ಮನೆಯವರು ಭಾವಿಸಿದ್ದಾಗ ಹಿಂಬಾಲಿಸುವ ಕಣ್ಣುಗಳನ್ನು ತಪ್ಪಿಸಿ ಕ್ರಾಂತಿಕಾರಿಗಳ ಪತ್ರವನ್ನು ಇಟ್ಟು ಕರೆಗಂಟೆ ಒತ್ತಿ ಮಾಯವಾಗುತ್ತಿದ್ದವರು, ಕೋವಿ, ಪುಸ್ತಕ, ಸಿಗಾರ್ ಮಾತ್ರವಲ್ಲ ಅಸ್ತಮಾದ ಔಷಧಿಯನ್ನೂ ಕೊಂಡೊಯ್ಯಿ ಎಂದು ಹೆಂಡತಿ ನೆನಪಿಸಿದರೂ ಹೊರಡುವ ಧಾವಂತದಲ್ಲಿ ಔಷಧಿಯನ್ನೇ ಮರೆತು ಬಂದು ಸಾವು ಬದುಕಿನ ನಡುವೆ ಒದ್ದಾಡುತ್ತಿದ್ದವರು, ಆತ ಇಲ್ಲವಾದ ಎಂದು ಹೆಂಡತಿ ನಿರ್ಧರಿಸಿ ಕಣ್ಣೀರಲ್ಲಿ ಕೈ ತೊಳೆಯುತ್ತಿದ್ದಾಗ 'ಹೇಗಿದ್ದಾಳೆ ಮಗಳು ಅವಳು ಅಳುವವರೆಗೂ ಎದೆಗಪ್ಪಿ



ಕಾಡುವ ಬಯಕೆ' ಎಂದು ಪತ್ರ ಬರೆಯುವವರು, ಬೆಟ್ಟ ಗುಡ್ಡಗಳಲ್ಲಿ ಸೈನಿಕರ ಗುಂಡೇಟು ತಿಂದು 'ಸೈನಿಕರ ಮಧ್ಯೆ ಸಾಯುವ ಬದಲು ಕ್ರಾಂತಿಕಾರಿಗಳ ಮಧ್ಯೆಯೇ ಸಾವಿನ ಏಣಿ ಹತ್ತಿದ್ದರೆ' ಎಂದು ಹಲುಬಿದವರು, ಅಮ್ಮ ಪತ್ರ ಕಾಯುತ್ತಿದ್ದಾಗ ಆಕೆಯ ತಂಗಿಗೆ ಪತ್ರ ಬರೆದು ಕಾಡುವವರು, 'ಅಯ್ಯೋ, ನಿನ್ನ ಫೋಟೋ ಬಿಟ್ಟು ಬಂದೆ ಬೇಗ ಒಂದು ಕಳಿಸುತ್ತಿಯಾ' ಎಂದು ತಮ್ಮ ವಿಳಾಸವನ್ನೇ ಬರೆಯದವರು, ಮಗ ಈಗ ಕ್ರಾಂತಿ ಮಾಡಿ ಗೆದ್ದಿದ್ದಾನೆ. ಆತಂಕದ ದಿನ ಮುಗಿಯಿತು ಎಂದು ಅಮ್ಮ ನಿಟ್ಟುಸಿರಿಡುವಾಗಲೇ ಇದ್ದ ಜಾಗಕ್ಕೆ ವಿದಾಯ ಹೇಳಿ ವೇಷ ಬದಲಿಸಿ ಮತ್ತೊಂದು ದೇಶದ ಗಡಿ ಹೊಕ್ಕವರು...

... ಕಾಲ್ಚೆಂಡಾಟ ಗೊತ್ತಿದ್ದರೆ ಈ ಪೊಲೀಸರಿಗೆ ಕಲಿಸು - ಬಿಟ್ಟುಬಿಡುತ್ತೇವೆ ಎಂದಾಗ ಕಲಿಸಿ ಪಾರಾಗಿ ಇನ್ನೊಂದು ಗುಡ್ಡ ಸೇರಿದವರು, ಸೈನ್ಯ ಸೇರಿ ವೈದ್ಯನಾಗುವ ಬದಲು ಕಾಡು ಸೇರಿ ಕೋವಿ ಹಿಡಿಯುವುದು ಮೇಲು ಎಂದು ಸಿಕ್ಕ ಟ್ರಕ್ ಹತ್ತಿ ಕದ್ದು ಪರಾರಿಯಾದವರು, ಒಬ್ಬ ಕ್ರಾಂತಿಕಾರಿಗೆ ಮತ್ತೊಬ್ಬ ಕ್ರಾಂತಿಕಾರಿಯನ್ನು ಪರಿಚಯಿಸಿದವರು...

... ಅಂತೆಯೇ ಪೋರ್ಟರಿಕೋದಲ್ಲಿ ಅಮೇರಿಕಾದ ದಾಸ್ಯದಿಂದ ಬಿಡುಗಡೆ ಹೊಂದಲು ಹೋರಾಡುತ್ತಿರುವವರು. ಹೈಥಿಯಲ್ಲಿ ದಬ್ಬಾಳಿಕೆಯ ವಿರುದ್ಧ ಸೆಡ್ಡು ಹೊಡೆದವರು, ಪೇಟೆಂಟ್ ವಿರುದ್ಧ ದನಿ ಎತ್ತಿದವರು, ಬಹುರಾಷ್ಟ್ರೀಯ ಕಂಪೆನಿಗಳ ಒಳಗೆ ಬರಲು ಬಿಡುವುದಿಲ್ಲ ಎಂದು ಹಠ ಹಿಡಿದವರು, ವರ್ಣಬೇಧದ ವಿರುದ್ಧ ಕೆಂಡವಾದವರು. ಈ ಎಲ್ಲವನ್ನೂ ಜಗತ್ತಿಗೆ ತಿಳಿಸಲು ಮಾನವ ಸರಪಳಿ ರಚಿಸಿದವರು...

... ಹೀಗೆ ಆ ತಾಯಂದಿರು ಹುಡುಕುತ್ತಲೇ ಇದ್ದಾರೆ ತಮ್ಮ ಮಕ್ಕಳನ್ನು. ಇಂದಲ್ಲಾ ನಾಳೆಯಾದರೂ ಬರುತ್ತಾರೆ. ನಾಲಿಗೆ ಇಲ್ಲದ ಗಂಟೆ ನುಡಿಯುತ್ತದೆ ಎಂದು. ಆದರೆ ಧರಣಿ ಮಂಡಲ ಮಧ್ಯದೊಳಗೆ ಅರ್ಭುತ ಎಂಬ ಹುಲಿರಾಯ ಗಂಗೆ ಗೌರಿಯನ್ನು ಬಿಟ್ಟ, ಕರುವಿನ ಮೇಲೇ ಎರಗಿದ.

# ಕಾಫಿ ವಿತ್ ಮಿಲ್ಕ್ ಪ್ಲೀಸ್...

ಕಾಫಿ ವಿತ್ ಮಿಲ್ಕ್ ಪ್ಲೀಸ್ -


ಹವಾನಾದ ಪ್ಯಾಲೆಸಿಯೋ ಡೆ ಲಾ ಕನ್‌ವೆನ್ಸಿಯೋನೆಲ್‌ನಲ್ಲಿ ಜರುಗುತ್ತಿದ್ದ ವಿಚಾರ ಸಂಕಿರಣಗಳ ಮಧ್ಯೆ ಬಿಡುವು ಮಾಡಿಕೊಂಡು ಬಂದು ಜೋಬಿನಲ್ಲಿರುವ ಡಾಲರ್‌ಗಳನ್ನು ತಲೆಯಿಂದಲೇ ಮುಟ್ಟಿ ಮುಟ್ಟಿ ಭಾರತದಲ್ಲಿ ಎರಡು ರೂಪಾಯಿನಲ್ಲಿ ಮುಗಿಯುತ್ತಿದ್ದ ಕಾಫಿ ಕಥೆಗೆ ಇಲ್ಲಿ ಏನಿಲ್ಲವೆಂದರೂ ಡಾಲರ್ ಲೆಕ್ಕದಲ್ಲಿ ೭೦ ರೂ. ಕೊಡಬೇಕಲ್ಲಾ ಎಂದು ಅಳೆದೂ ತೂಗಿ, ಅಳೆದೂ ತೂಗಿ ಅಂತೂ ಕೊನೆಗೆ ಕಾಸಿಗಿಂತ ಕಾಫಿ ಹುಚ್ಚಿನ ಕೈಯೇ ಮೇಲಾಗಿ ಆರ್ಡರ್ ಮಾಡಿದಾಗ ತಟಕ್ಕನೆ ಪಕ್ಕದಲ್ಲಿ ನಿಂತಿದ್ದ ಯುವತಿ ಮುಖ ಕೆಕ್ಕರಿಸಿ ಕೇಳಿದಳು,

‘ಯು ಇಂಗ್ಲಿಸ್’

ಹೌದಮ್ಮಾ ಎಂದೆ.

‘ಬ್ಲಡಿ ಬ್ರಿಟಿಸ್’ ಎಂದಳು.

ಕೈಯಲ್ಲಿ ಕಪ್ಪನೆ ಕಾಫಿ ಹಿಡಿದ ಆಕೆ ಮತ್ತೆ ಸಂಕಿರಣಕ್ಕೆ ಶರಣಾದಳು. ತಲೆ ಒಂದು ಕ್ಷಣ ಗಿರಿಗಿರಿ ತಿರುಗಿತು. ಇದ್ದಬದ್ದ ‘ಇಂಗ್ಲಿಸ್’ ಎಲ್ಲಾ ಖರ್ಚು ಮಾಡಿ ಅವರು ಏನು ಹೇಳಿದ್ದು ಎಂದು ಕಾಫಿ ನೀಡುತ್ತಿದ್ದವನನ್ನು ವಿಚಾರಿಸಿದೆ. ಕಪ್ಪು ಕಾಫಿಗೆ ಹಾಲು ಹಾಕಿ ಕುಡಿಯುವವರು ಇಂಗ್ಲೆಂಡ್‌ನವರು. ಉಳಿದೆಲ್ಲಾ ಕಡೆ ಕಾಫಿ ಎಂದರೆ ಕಪ್ಪು ಕಾಫಿಯೇ ಎಂದ.





ಕಾಫಿಗೆ ನಾನು ಹಾಲು ಹಾಕಿಸಿಕೊಂಡದ್ದೇ ತಡ ಇಂಗ್ಲೆಂಡ್‌ನ ಮೇಲೆ ತನ್ನ ಹೊಟ್ಟೆಯಲ್ಲಿಟ್ಟು ಕೊಂಡಿದ್ದ ಸಿಟ್ಟನ್ನೆಲ್ಲಾ ಹೊರಗೆ ಚೆಲ್ಲಿದ್ದ ಆಕೆ ಹೊಸ ಇತಿಹಾಸದ ಪಾಠ ಮಾಡಿದ್ದಳು. ಬ್ರಿಟಿಷರು ಭಾರತದ ಮೇಲೆ ಮಾತ್ರವಲ್ಲ ಅಡಿಗೆ ಮನೆಗೆ ನುಗ್ಗಿ ಕಾಫಿ ಮೇಲೂ ಧಾಳಿ ಮಾಡಿದ್ದರು. ಇಂಗ್ಲೆಂಡ್ ಭಾರತವನ್ನು ಮಾತ್ರ ವಸಾಹತುವನ್ನಾಗಿ ಮಾಡಿಕೊಳ್ಳಲಿಲ್ಲ. ಅಡುಗೆ ಮನೆಯನ್ನೂ ವಸಾಹತು ಮಾಡಿಕೊಂಡಿತು ಎನಿಸಿತು. ಹಾಲು ಹಾಕಿದ ಕಾಫಿ ಹಿಡಿದಿದ್ದ ನಾನು ಭೂಗೋಳ, ಚರಿತ್ರೆ ಎಲ್ಲವನ್ನೂ ಅಂಗೈಯಲ್ಲಿ ಹಿಡಿದು ನಿಂತಿದ್ದೆ.

ಭೂಮಿ ಗುಂಡಗಿದೆ ಎಂದು ಬಲವಾಗಿ ನಂಬಿದ್ದ ಕೊಲಂಬಸ್ ಭಾರತಕ್ಕೆ ಹೋಗಬೇಕು ಎಂದು ಹೊರಟವನು ಆತುರ ಮಾಡಿಕೊಂಡ. ಭಾರತದ ಸಂಪತ್ತಿನ ಮೇಲೆ ಕಣ್ಣಿಟ್ಟಿದ್ದ ಕೊಲಂಬಿಯಾದವರು ಅಲ್ಲಿಗೆ ಹೋಗುವ ಮೊದಲೇ ತಾನು ಭಾರತಕ್ಕೆ ಹೋಗಿಬಿಡಬೇಕು ಎಂದು ಹೊರಟ ಕೊಲಂಬಸ್ ಕ್ಯೂಬಾವನ್ನು ‘ಕಂಡುಹಿಡಿದ’. ಕ್ಯೂಬಾ ಹಾಗೂ ಆ ಮೂಲಕ ಅಮೇರಿಕಾ ಖಂಡವನ್ನು ಕೊಲಂಬಸ್ ಕಂಡುಹಿಡಿದ ೫೦೦ನೇ ವರುಷವನ್ನು ಭರ್ಜರಿಯಾಗಿ ಆಚರಿಸಲು ಸ್ಪೇನ್ ಕೋಟಿಗಟ್ಟಲೆ ಹಣ ಸುರಿಯಲು ಸಜ್ಜಾಗುತ್ತಿದ್ದಾಗ ಫಿಡೆಲ್ ಕ್ಯಾಸ್ಟ್ರೋ ಅಪಸ್ವರ ಎತ್ತಿದರು. ಕೊಲಂಬಸ್ ಇಲ್ಲಿಗೆ ಕಾಲಿಡುವ ಮುಂಚೆಯೇ ಕ್ಯೂಬಾ ಇತ್ತು. ಇಲ್ಲಿ ಜನರು ಸಾಕಷ್ಟು ಸಂಪದ್ಭರಿತರಾಗಿಯೇ ಇದ್ದರು. ಕೊಲಂಬಸ್ ಅದನ್ನು ‘ಕಂಡು ಹಿಡಿಯುವುದು’ ಹೇಗೆ. ಕೊಲಂಬಸ್ ಇಲ್ಲಿಗೆ ಕಾಲಿಟ್ಟಿರಬಹುದು ಅಷ್ಟೆ ಅಥವಾ ಅಮೇರಿಕಾ ಮತ್ತು ಯುರೋಪ್ ಪರಸ್ಪರ ಕಂಡುಕೊಂಡವು ಎಂದು ಬೇಕಾದರೆ ಅನ್ನಬಹುದು’ ಎಂದಿದ್ದರು.

ಹವಾನಾದ ಈ ಕಾಫಿ ಇದನ್ನು ನೆನಪು ಮಾಡಿತು. ನಾನು ಕಾಫಿ ಬಟ್ಟಲಿನಲ್ಲಿ ಹೊಸ ಚರಿತ್ರೆ ಕಂಡುಕೊಂಡಿದ್ದೆ. ಇಂಗ್ಲೆಂಡ್‌ಗೆ ಯಾವುದು ಚರಿತ್ರೆ ಎನಿಸಿತ್ತೋ ಅದು ನಮಗೂ ಚರಿತ್ರೆಯಾಯಿತು. ಆರ್ಯರು ದ್ರಾವಿಡರನ್ನು ‘ಕಂಡುಹಿಡಿದರು’, ಎಲ್ಲಕ್ಕಿಂತ ಹೆಚ್ಚಾಗಿ ವಾಸ್ಕೋಡಗಾಮ ಭಾರತವನ್ನು ‘ಕಂಡುಹಿಡಿದ’. ವಾಸ್ಕೋಡಗಾಮ ಕಾಲಿಟ್ಟ ಕೇರಳದಲ್ಲಿಯೂ ಈ ‘ಕಂಡುಹಿಡಿದ’ ಘಟನೆಯ ೫೦೦ನೇ ವರ್ಷವನ್ನು ಆಚರಿಸುವ ಬಗ್ಗೆ ಎದ್ದ ವಿವಾದಗಳು ಸರಿಯಾಗಿ ಅರ್ಥವಾಗಿದ್ದು ಈ ಕಾಫಿ ಬಟ್ಟಲು ಹಿಡಿದಾಗ. ವಾಸ್ಕೋಡಗಾಮ ಭಾರತವನ್ನು ‘ಕಂಡುಹಿಡಿದ’ - ಚರಿತ್ರೆಯ ಪುಸ್ತಕಗಳು ಬರೆದವು ‘ಭಾರತ ಕಂಡು ಹಿಡಿಸಿಕೊಂಡಿತು’.

ತಕ್ಷಣ ನನಗೆ ನೆನಪಿಗೆ ಬಂದಿದ್ದು ಕೇರಳದ ಮನೆ ಮನೆಗಳಲ್ಲಿ ವಿಜ್ಞಾನದ ಅರಿವನ್ನು ಬಿತ್ತಲು ಯತ್ನಿಸುತ್ತಿರುವ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ ಅಭಿನಯಿಸಿದ ನಾಟಕ.‘ಸುಂದರವಾದ ತಾಜ್‌ಮಹಲ್ ಕಟ್ಟಿದವರಾರು, ಕಟ್ಟಿದವರಾರು’, ‘ಷಹಜಹಾನ್’, ‘ಅಲ್ಲ’, ‘ಷಹಜಹಾನ್’ ‘ಅಲ್ಲ’. ‘ದುಡಿದುಡಿದು ಶ್ರಮಪಡುವ ಶ್ರಮಜೀವಿ, ಶ್ರಮಜೀವಿ, ಉತ್ತರ ಅದು ಒಂದೇ ಉತ್ತರಾ’ ಎಂದು ಗೀತರೂಪಕದಲ್ಲಿ ಹೇಳಿದ್ದರು. ಚರಿತ್ರೆ ಎಂಬುದು ಒಂದೇ ಅಲ್ಲ. ಅರಸನಿಗೆ ಒಂದು ಚರಿತ್ರೆ ಇದ್ದಂತೆ ಆಳಿಗೂ ಒಂದು ಇದೆ. ಸ್ಪೇನ್‌ಗೊಂದು ಚರಿತ್ರೆ ಇದ್ದರೆ ಕ್ಯೂಬಾಗೂ ಒಂದು ಇದೆ. ಅಂಕಿ ಸಂಖ್ಯೆಗಳ

ಗೂಡಾಗಿರುವ ಭಾರತದ ಚರಿತ್ರೆಯ ಪುಸ್ತಕಗಳಲ್ಲಿ ಈ ಎಲ್ಲವೂ ಆರಾಮವಾಗಿ ಮಲಗಿದೆ. ಚರಿತ್ರೆ ಪುಸ್ತಕ ಬರೆದವರೂ ಹಾಲು ಹಾಕಿದ ಕಾಫಿ ಕುಡಿದವರೇ ತಾನೇ?

ಕ್ಯೂಬಾ ಕೊಲಂಬಸ್‌ನ ಈ 'ಕಂಡುಹಿಡಿದ' ಲೆಕ್ಕಾಚಾರ ಒಪ್ಪಿಕೊಳ್ಳಲು ಸಿದ್ಧವೇ ಇಲ್ಲ. ಅಷ್ಟೇ ಅಲ್ಲ ಕೆಲವರು ಈ ಕೊಲಂಬಸ್ ಯಾತ್ರೆಯನ್ನು 'ಎರಡು ಸಂಸ್ಕೃತಿಗಳ ಭೇಟಿ' ಎಂದು ಕರೆದು ಕೈ ತೊಳೆದುಕೊಂಡಿದ್ದಾರೆ. ಕ್ಯೂಬಾ ಅದಕ್ಕೂ ನಕಾರ ಸೂಚಿಸಿದೆ. 'ಇದು ಸಂಸ್ಕೃತಿಯ ಮುಖಾಮುಖಿ ಆಗಲು ಹೇಗೆ ಸಾಧ್ಯ? ಇದು ಒಂದು ಸಂಸ್ಕೃತಿಯ ಮೇಲೆ ನಡೆದ ಮತ್ತೊಂದು ಸಂಸ್ಕೃತಿಯ ಹೇರಿಕೆ. ಕೈಯಲ್ಲಿ ಮಿಲಿಟರಿ ಆಯುಧ ಹಿಡಿದಿದ್ದವರು ಮತ್ತೊಂದು ಜನಾಂಗವನ್ನು ಹೊಸಕಿ ಹಾಕಿದ ಕಥೆ. ಇದು ಯುರೋಪ್ ಅಮೇರಿಕಾದ ಮೇಲೆ ನಡೆಸಿದ ಹಿಂಸಾತ್ಮಕ ಅತಿಕ್ರಮಣ. ಬೇಕಾದರೆ ಈ ೫೦೦ನೇ ವಾರ್ಷಿಕೋತ್ಸವವನ್ನು ಎರಡು ಸಂಸ್ಕೃತಿಗಳ ಘರ್ಷಣೆ ಎಂದು ಕರೆಯಬಹುದು' ಎನ್ನುತ್ತಾರೆ ಫಿಡೆಲ್.

ಕ್ಯೂಬಾದಲ್ಲಿ ನಡೆದದ್ದೂ ಅದೇ, ಸಂಸ್ಕೃತಿಯ ತಿಕ್ಕಾಟ. ೧೪೯೨ರ ಅಕ್ಟೋಬರ್ ೧೨ರಂದು ಕ್ಯೂಬಾಗೆ ಕಾಲಿಟ್ಟ ಕೊಲಂಬಸ್ ಈ ದ್ವೀಪದ ಸೌಂದರ್ಯವನ್ನು ನೋಡಿ ದಂಗಾಗಿ ಹೋದ. 'ಮನುಷ್ಯನ ಕಣ್ಣುಗಳೆಂದೂ ಕಂಡಿರದಿದ್ದ ಸೌಂದರ್ಯದ ದ್ವೀಪ' ಎಂದು ಕರೆದ. ಕೊಲಂಬಸ್ ಆಗಲೂ ಅಂದುಕೊಂಡಿದ್ದದ್ದು ತಾನು ಇಂಡಿಯಾಗೆ ಕಾಲಿಟ್ಟಿದ್ದೇನೆ ಎಂದೇ. ಅದಕ್ಕಾಗಿ 'ಇಂಡೀಸ್' ಎಂದು ಕರೆದ. ಇದು ಇಂಡಿಯಾ ಅಲ್ಲ ಎಂದು ಗೊತ್ತಾದಾಗ 'ವೆಸ್ಟ್ ಇಂಡೀಸ್' ಆಯಿತು.

ಸ್ಪೇನ್‌ನ ಮಹಾರಾಣಿ ಇಸಾಬೆಲ್ ಕೊಲಂಬಸ್‌ನ ಈ 'ಕಂಡುಹಿಡಿದ' ಸಾಹಸಕ್ಕೆ ಬೆರಗಾದಳು. ಕ್ಯೂಬಾ 'ಕಸ್ಟಮ್ ಹೌಸ್' ಆಯಿತು. ರಾಜಕುಮಾರಿ ಜುವಾನಾಳ ಹೆಸರನ್ನು ಒಂದಷ್ಟು ದಿನ ಇದಕ್ಕೆ ಇಟ್ಟರು. ನಂತರ ಪಾದ್ರಿಗಳು 'ಶಾಂಟಿಯಾಗೋ' ಎಂದರು. 'ಫರ್ಡಿನಾಂಡ್' ಎಂಬ ಹೆಸರು ತೇಲಿ ಬಂತು. 'ಏವ್ ಮರಿಯಾ' ಎಂದರು. ನಂತರ ನಡೆದದ್ದು ಸಂಸ್ಕೃತಿಯ ತಿಕ್ಕಾಟ.

ದ್ವೀಪದಲ್ಲಿ ತಮಗೆ ಬೇಕಾದ್ದು ಬೆಳೆದುಕೊಂಡು ಆರಾಮವಾಗಿ ಇದ್ದ, ಮೂಲನಿವಾಸಿಗಳಾದ ಟೈನೊಸಿ, ಸಿಬೋನಿಸ್, ಗಾನಾಟೆಬೆಸ್ ಎಲ್ಲರನ್ನೂ ಸ್ಪೇನ್ ಕತ್ತೆ ಕೆಲಸಕ್ಕೆ ಹಚ್ಚಿತು. ಎಷ್ಟೋ ಜನರು ದ್ವೀಪದಿಂದ ಕಾಲ್ತೆಗೆಯುವಂತೆ ಮಾಡಿದರು. ಘರ್ಷಣೆಯಲ್ಲಿ ಹಲವರು ಸಾವನ್ನಪ್ಪಿದರು, ಯುರೋಪಿನಿಂದ ಜನರ ಜೊತೆಗೆ ಬಂದ ರೋಗಗಳೂ ಹಲವರನ್ನು ಬಲಿ ತೆಗೆದುಕೊಂಡಿತು. ಸಾಕಷ್ಟು ಜನರನ್ನು ಸ್ಪೇನ್ ಕೊಂದುಹಾಕಿತು.

ಕ್ಯೂಬಾದಲ್ಲಿ ಇದ್ದ ಮೂಲನಿವಾಸಿಗಳನ್ನು ಬಹುತೇಕ ಇಲ್ಲವಾಗಿಸಲಾಯಿತು. ಹಾಗಾದರೆ ಕೆಲಸಕ್ಕೆ ಯಾರು? ಇದ್ದವರೆಲ್ಲಾ ಸ್ಪೇನ್‌ನ ಬಿಳಿಯರೇ ಹಾಗಾದರೆ ಚಾಕರಿಗೆ ಯಾರು. ಸ್ಪೇನ್ ಆಫ್ರಿಕಾದತ್ತ ಮುಖಮಾಡಿತು. ಸುಮಾರು ೩೦೦ ವರ್ಷಗಳ ಕಾಲ ತಮ್ಮ ನಾಡಿನಲ್ಲಿ ಬೇರು ಬಿಟ್ಟಿದ್ದ ಕಪ್ಪು ಜನರನ್ನು ಸ್ಪೇನ್ ಕ್ಯೂಬಾದತ್ತ ಎಳೆದು ತಂದಿತು. ನೀಗ್ರೋ ಗುಲಾಮರನ್ನು ಕಬ್ಬಿನ ಗದ್ದೆಗಳಲ್ಲಿ, ಗಣಿಗಳಲ್ಲಿ ಕೆಲಸಕ್ಕೆ ಹಚ್ಚಿತು.



ಕ್ಯೂಬಾ ಸ್ಪೇನ್‌ಗೆ ವಲಸೆ ದೇಶವಾಯಿತು. ಪಕ್ಕದಲ್ಲಿದ್ದ ಒಂದೊಂದೇ ದ್ವೀಪಕ್ಕೆ ಕಾಲು ಹಾಕಿದರು. ಕ್ಯೂಬಾದ ಸುತ್ತ ಕೋಟೆ ಕಟ್ಟಿದರು. ಕಡಲ್ಗಳ್ಳರು ಕ್ಯೂಬಾದತ್ತ ನುಗ್ಗಿ ಇದ್ದ ಸಂಪತ್ತನ್ನು ಎಲ್ಲಿ ಸೂರೆ ಹೊಡೆಯುತ್ತಾರೋ ಎಂಬ ಭಯ ಸುಂದರ ದ್ವೀಪಗಳಲ್ಲಿ ಗೋಡೆಗಳು ಎದ್ದು ನಿಲ್ಲುವಂತೆ ಮಾಡಿದವು. ಬಾಡಿಗೆ ಸೇನೆ ಸ್ಪೇನ್ ಪರವಾಗಿ ಕ್ಯೂಬಾದಲ್ಲಿ ಸದಾ ಕಾವಲು ನಿಂತಿತ್ತು. ಇಡೀ ದ್ವೀಪದ ಸದ್ದು ಅಡಗಿಹೋಗುವಂತೆ ಈ ಸೇನೆ ನೋಡಿಕೊಂಡಿತು. ಇದೇ ಸಮಯದಲ್ಲಿ ಬ್ರಿಟೀಷರು ಕ್ಯೂಬಾದ ಮೇಲೆ ದಾಳಿ ಮಾಡಿ ಅವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಒಂದೇ ವರ್ಷ ಇದ್ದು ಅಲ್ಲಿಂದ ಕಾಲ್ತೆಗೆದರು. ೧೭೬೩ರಲ್ಲಿ ಕ್ಯೂಬಾವನ್ನು ಮತ್ತೆ ಸ್ಪೇನ್‌ನ ಕೈಗೇ ಬ್ರಿಟೀಷರು ಒಪ್ಪಿಸಿದರು.

ಕ್ಯೂಬಾ ನೋಡು ನೋಡುತ್ತಿರುವಂತೆಯೇ ಸಕ್ಕರೆ, ತಂಬಾಕು, ಹಣ್ಣುಹಂಪಲು ಸ್ಪೇನ್‌ನ ದಿಕ್ಕು ಹಿಡಿದವು. ಕ್ಯೂಬಾದ ಒಡಲಲ್ಲಿದ್ದ ಸಂಪತ್ತೆಲ್ಲಾ ಸ್ಪೇನ್ ಪಾಲಾಗುತ್ತಿದ್ದಂತೆಯೇ ಕ್ಯೂಬಾದಲ್ಲಿ ನೆಲೆನಿಂತಿದ್ದ ಸ್ಪೇನ್ ಜನರಿಗೆ ಇನ್ನು ತಮ್ಮ 'ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯೇ ಗತಿ' ಎಂದು ಗೊತ್ತಾಯಿತು. ಕ್ಯೂಬಾದಲ್ಲಿ ನೆಲೆ ನಿಂತವರು ಸ್ಪೇನ್‌ನ ವಿರುದ್ಧ ತಿರುಗಿಬಿದ್ದರು. ಕ್ಯೂಬಾದಲ್ಲಿ ಹೋರಾಟದ ಅಧ್ಯಾಯ ಆರಂಭವಾಯಿತು. ೧೯೧೯ರಲ್ಲಿ ತಿರುಗಿಬಿದ್ದವರನ್ನೆಲ್ಲಾ ಸ್ಪೇನ್ ಬಲಿತೆಗೆದುಕೊಂಡಿತು. ಮೇಲಿಂದ ಮೇಲೆ ಹೋರಾಟ ನಡೆಯಿತು. ೧೮೨೬, ೧೮೨೮, ೧೮೩೦, ೧೮೪೮, ೧೮೫೧, ೧೮೫೫...

ಕ್ಯೂಬನ್ನರು ಸರ್ಕಾರದ ಹುದ್ದೆಗಳಲ್ಲಿ ಇರಬಾರದು, ಕ್ಯೂಬನ್ನರು ದುಡಿಮೆ ಮಾಡಬಾರದು, ವ್ಯಾಪಾರ ಮಾಡಬಾರದು, ಕಪ್ಪು ಜನ ಬಿಳಿಯ ಜನರ ನಡುವೆ ಮದುವೆ ನಡೆಯಬಾರದು. ಸ್ಪೇನ್‌ನವರಿಗೆ ಕಾನೂನು ವಿಚಾರಣೆ ಇಲ್ಲ. ಕ್ಯೂಬನ್ನರು ತಮ್ಮ ಮನೆಯಲ್ಲಿ ಅತಿಥಿಗಳನ್ನು ಉಳಿಸಿಕೊಳ್ಳಬಾರದು. ಸೈನ್ಯದ ಅನುಮತಿಯಿಲ್ಲದೆ ಎಲ್ಲೂ ಪ್ರಯಾಣಿಸಬಾರದು - ಹೊಸ ನಿಯಮಗಳು ಜಾರಿಗೆ ಬಂದವು.

ಈ ಮಧ್ಯೆಯೇ ೧೮೬೮ರಲ್ಲಿ ಸಕ್ಕರೆ ಕಾರ್ಖಾನೆಯೊಂದರ ಮಾಲೀಕ ಮಾಸಿಯಾ ತನ್ನಲ್ಲಿದ್ದ ಎಲ್ಲಾ ಗುಲಾಮರನ್ನು ಬಿಡುಗಡೆ ಮಾಡಿದ. ಯಾರಾ ಪ್ರಾಂತ್ಯದಲ್ಲಿ ಸ್ಪೇನ್‌ನವರ ಮೇಲೆ ನಡೆದ ದಾಳಿಗೆ ಮುಂದಾಳತ್ವ ಕೊಟ್ಟ. ಓರಿಯೆಂಟ್ ಪ್ರಾಂತ್ಯದಲ್ಲಿ ಅತಿದೊಡ್ಡ ಹೋರಾಟ ಆರಂಭ ವಾಯಿತು. ಕ್ಯೂಬಾದ ಸ್ವಾತಂತ್ರ್ಯ ಹೋರಾಟದಲ್ಲಿ ಅತಿದೊಡ್ಡ ಬಲಿದಾನ ಕಂಡ ಪ್ರತಿಭಟನೆ ಇದು. ಈ ಯುದ್ಧದಲ್ಲಿ ೪ ಲಕ್ಷ ಕ್ಯೂಬನ್ನರು ೮೦ ಸಾವಿರ ಸ್ಪೇನ್ ಸೈನಿಕರು ಸತ್ತರು ಎಂಬ ಅಂದಾಜಿದೆ.

ಈ ಮಧ್ಯೆಯೇ ಕ್ಯೂಬಾದ 'ಕ್ರಾಂತಿಯ ಕನಸುಗಳ ಹರಿಕಾರ' ಜೋಸ್ ಮಾರ್ಟಿ ಹೋರಾಟಕ್ಕೆ ಧುಮುಕಿದರು. ಮಾರ್ಟಿಯ ಚಿಂತನೆ, ಸ್ಪಷ್ಟ ಯೋಜನೆಗಳು ಸ್ಪೇನ್‌ಗೆ ಆತಂಕ ತಂದಿತು. ಮಾರ್ಟಿಯನ್ನು ಕ್ಯೂಬಾದಿಂದ ಉಚ್ಚಾಟಿಸಿದರು. ಮಾರ್ಟಿ ಅರ್ಧ ಪ್ರಪಂಚವನ್ನೇ ಸುತ್ತಿ ಇನ್ನಷ್ಟು ಜ್ಞಾನ, ಅನುಭವ, ಹೋರಾಟದ ತಂತ್ರ ಕಲಿತು ಬಂದರು. ೧೮೯೫ರಲ್ಲಿ ಮತ್ತೆ ಬೃಹತ್ ಹೋರಾಟ. ಈ ಬಾರಿ ನಾಯಕತ್ವ ಮಾರ್ಟಿಯ ಕೈಯಲ್ಲಿ. ೧೮೯೫ರ ಮೇ ೧೮ರಂದು ಮಾರ್ಟಿ ಗೆಳೆಯನೊಬ್ಬನಿಗೆ ಪತ್ರ ಬರೆದರು.

ಅಮೇರಿಕನ್ ಸಾಮ್ರಾಜ್ಯಶಾಹಿಯ ಅಪಾಯದ ಎಚ್ಚರಿಕೆ ನೀಡಿದ ಪತ್ರ ಇದು. ಮಾರನೆಯ ದಿನವೇ ಗುಂಡೇಟಿನಿಂದ ಮಾರ್ಟಿ ಮೃತಪಟ್ಟರು.

ಆ ವೇಳೆಗಾಗಲೇ ಸಕ್ಕರೆ ಅಮೇರಿಕಾದವರನ್ನು ಕೈಬೀಸಿ ಕರೆದಿತ್ತು. ಕ್ಯೂಬಾದಲ್ಲಿ ಅಮೇರಿಕನ್ನರು ನಿಧಾನವಾಗಿ ಹರಡಿಕೊಳ್ಳತೊಡಗಿದರು.

ಸ್ವಾತಂತ್ರ್ಯ ಹೋರಾಟ ಬಿರುಸಾಗುತ್ತಿದ್ದಂತೆ ಸ್ಪೇನ್ ಸಹಾ ಅದನ್ನು ನಿಗ್ರಹಿಸಲು ಹಿಂಸೆಯನ್ನು ಕೈಗೆತ್ತಿಕೊಂಡಿತು. ಸ್ಪೇನ್‌ನ ಜನರಲ್ ಯಾತನಾ ಶಿಬಿರಗಳನ್ನು ತೆರೆದರು. ಸಾವಿರಾರು ಜನ ಈ ಶಿಬಿರಗಳಲ್ಲಿ ಆಹಾರ ಇಲ್ಲದೆ, ಕಾಯಿಲೆಗಳಿಂದ ನರಳಿ ಸತ್ತರು. ಆಗ ಮಾಕ್ಸಿಮೋ ಗೋಮೆಜ್ ಸ್ಪೇನ್‌ನ ಆರ್ಥಿಕ ಆದಾಯದ ಮೂಲಕ್ಕೇ ಪೆಟ್ಟುಕೊಟ್ಟರು. ಸ್ಪೇನ್‌ನ ಒಡೆತನದಲ್ಲಿದ್ದ ಸಕ್ಕರೆ ಕಾರ್ಖಾನೆಗಳು ಮುಷ್ಕರ ನಡೆಸುವಂತೆ ಕರೆ ನೀಡಿದರು. ಇಡೀ ಕ್ಯೂಬಾದಲ್ಲಿ ಉತ್ಪಾದನಾ ಚಟುವಟಿಕೆ ಸ್ತಬ್ಧವಾಯಿತು.

ಅದುವರೆಗೂ ಅಮೇರಿಕಾ ಕೇವಲ ೯೦ ಕಿ.ಮೀ. ದೂರದಲ್ಲಿ ನಡೆಯುತ್ತಿದ್ದ ಈ ಯುದ್ಧವನ್ನು ಸುಮ್ಮನೆ ನೋಡುತ್ತಾ ಕುಳಿತಿತ್ತು. ಯಾವಾಗ ಸಕ್ಕರೆ ಕಾರ್ಖಾನೆಗಳು ಬಂದ್ ಆದವೋ ಅಮೇರಿಕಾದ ಇಡಿ ವ್ಯಾಪಾರಿಗಳಿಗೂ ಹೊಡೆತ ಬಿತ್ತು. ಸರಿ ಕ್ಯೂಬಾದಲ್ಲಿರುವ ಅಮೇರಿಕನ್ನರ ಆಸ್ತಿಪಾಸ್ತಿಗಳನ್ನು ರಕ್ಷಿಸಲು ಅಧ್ಯಕ್ಷ ವಿಲಿಯಂ ಮ್ಯಾಕಿನ್ಲೆ ಕ್ಯೂಬಾಗೆ 'ಮೈನೆ' ಯೌದ್ಧನೌಕೆ ಕಳಿಸಿಕೊಟ್ಟರು. ಏನಾಯಿತೋ ಎಂತಾಯಿತೋ ಯುದ್ಧನೌಕೆ ಹವಾನಾದ ಬಂದರಿನಲ್ಲಿ ಸ್ಫೋಟಗೊಂಡಿತು.

ಅಮೇರಿಕಾ ಕೆಂಗಣ್ಣು ಬಿಟ್ಟು ಸ್ಪೇನ್‌ನ ಮೇಲೆ ಯುದ್ಧ ಸಾರಿತು. ಕೇವಲ ಮೂರು ತಿಂಗಳಲ್ಲಿ ಸ್ಪೇನ್ ಅಮೇರಿಕಾಗೆ ಶರಣಾಗಿ ಹೋಯಿತು. ೧೮೯೮ ಡಿಸೆಂಬರ್ ೧೦ರಂದು ಪ್ಯಾರಿಸ್ ಒಪ್ಪಂದ ನಡೆಯಿತು.

೪೦೦ ವರ್ಷಗಳ ಕಾಲ ಆಳಿದ ಸ್ಪೇನ್ ವಿರುದ್ಧ ಸತತವಾಗಿ ಒಂದು ಶತಮಾನ ರಕ್ತಸಿಕ್ತ ಹೋರಾಟ ನಡೆಸಿದ ಕ್ಯೂಬನ್ನರು ಇನ್ನೇನು ಕ್ಯೂಬಾದ ಧ್ವಜ ಮೇಲೇರಿಸಿದೆವು ಎನ್ನುವಾಗ ಕ್ಯೂಬಾ ಅಮೇರಿಕಾದ ಪಾಲಾಯಿತು. ಕ್ಯೂಬಾವನ್ನೇ ಮೂಲೆಗಿಟ್ಟು ಪ್ಯಾರಿಸ್‌ನಲ್ಲಿ ಅಮೇರಿಕಾ - ಸ್ಪೇನ್ ಒಪ್ಪಂದ ಮಾಡಿಕೊಂಡವು. ಸ್ಪೇನ್ ಕ್ಯೂಬಾದ ಮೇಲಿದ್ದ ಎಲ್ಲಾ ಅಧಿಕಾರವನ್ನು ಅಮೇರಿಕಾಗೆ ಬಿಟ್ಟುಕೊಟ್ಟಿತು. ಸ್ಪೇನ್‌ನ ಜಾಗದಲ್ಲಿ ಈಗ ಅಮೇರಿಕಾ ಕುಳಿತುಕೊಂಡಿತು.



## ಹಾರುವ ಹಕ್ಕಿಗೆ ಇಲ್ಲಿ ನೆಲೆ



'ಉತ್ತರದಿಂದ ದಕ್ಷಿಣಕ್ಕೆ ಹಾರುವ ಪಕ್ಷಿಗಳ ನಿಲುತಾಣ ಕ್ಯೂಬಾ' ಎಂದು ಕ್ಯೂಬಾವನ್ನು ಪರಿಚಯಿಸುವ ಯಾವುದೇ ಪುಸ್ತಕ ಬಣ್ಣಿಸುತ್ತದೆ.

ಇದೇ ಅಮೇರಿಕಾವನ್ನೂ ಕ್ಯೂಬಾದತ್ತ ಎಳೆದುತಂದದ್ದು. ಉತ್ತರ ಹಾಗೂ ದಕ್ಷಿಣ ಅಮೇರಿಕಾವನ್ನು ಬೆಸೆಯುವ ಕ್ಯೂಬಾ ಅತ್ಯಂತ ಆಯಕಟ್ಟಿನ ಜಾಗದಲ್ಲಿದೆ. ಅಮೇರಿಕಾ ಖಂಡದ ಕೀಲಿಕೈ ಎಂಬ ಪ್ರಶಂಸೆ ಕ್ಯೂಬಾಗೆ ದಕ್ಕಿದೆ. ಈ ಕ್ಯೂಬಾದ ಕೀಲಿಕೈ ಕೈಗೆತ್ತಿಕೊಂಡರೆ ಇಡೀ ಖಂಡದ ಯಾವುದೇ ಬಾಗಿಲು ತೆಗೆಯಬಹುದು ಎಂಬ ಅರ್ಥ.

ಅಮೇರಿಕಾ ಕ್ಯೂಬಾದತ್ತ ಕಣ್ಣು ಹಾಯಿಸಲು ಕಾರಣವಾಗಿದ್ದು ಕ್ಯೂಬಾದ ಈ ಸ್ಥಾನದಿಂದಾಗಿ. ಸ್ಪೇನ್‌ನ ವಸಾಹತುವಾಗಿದ್ದಾಗಲೇ ನಿಧಾನವಾಗಿ ಅಮೇರಿಕನ್ನರು ಕ್ಯೂಬಾದೊಳಗೆ ಪ್ರವೇಶಿಸಿದ್ದರು. ಕ್ಯೂಬಾ ತನ್ನ ಒಡಲಿನಿಂದ ಮೊಗೆದು ಕೊಡುತ್ತಿದ್ದ ಸಕ್ಕರೆಯ ಮೇಲೆ ಅಮೇರಿಕಾದ ಕಣ್ಣು ಬಿತ್ತು. ಸ್ಪೇನ್ ಕಾಲ್ತೆಗೆಯುವ ವೇಳೆಗಾಗಲೇ ಅಮೇರಿಕಾ ಶೇ. ೭೦ರಷ್ಟು ಸಕ್ಕರೆಗೆ ಕ್ಯೂಬಾವನ್ನೇ ಅವಲಂಬಿಸಿತ್ತು. ಇದರೊಂದಿಗೆ ಅಮೇರಿಕಾಗೆ ಆತಂಕವಾಗಿದ್ದು ಅಮೇರಿಕಾಗೆ ಆಗದ ಯಾವುದಾದರೂ ದೇಶ ಕ್ಯೂಬಾವನ್ನು ಆಕ್ರಮಿಸಿ ಕುಳಿತುಕೊಂಡುಬಿಟ್ಟರೆ ಎಂಬ ಭಯ. ಕ್ಯೂಬಾ ಇತರೆ ದೇಶಗಳಿಗೆ ಯುದ್ಧದ ನೆಲೆಯಾಗಿಬಿಟ್ಟರೆ ತನ್ನ ಹಣೆಬರಹವೂ ಬದಲಾಗಬೇಕಾಗಿ ಬರುತ್ತದೆ ಎಂಬ ಭಯ ಅಮೇರಿಕಾವನ್ನು ಕಾಡಿತು.

ಆ ವೇಳೆಗಾಗಲೇ 'ಅಮೇರಿಕಾ ಅಮೇರಿಕನ್ನರಿಗೆ' ಎಂಬ ಸೂತ್ರ ಸಿದ್ಧವಾಗಿತ್ತು. ಕ್ಯೂಬಾ ಮಾತ್ರವಲ್ಲ ಲ್ಯಾಟಿನ್ ಅಮೇರಿಕಾ ಸೇರಿದಂತೆ ಇಡೀ ಅಮೇರಿಕಾ ಖಂಡ ತನ್ನ ಕೈಯೊಳಗಿರಬೇಕು ಎಂಬ ಸಾಮ್ರಾಜ್ಯಶಾಹಿಯ ಕನಸು ಆರಂಭವಾಯಿತು.

ಈ ಕಾರಣಕ್ಕಾಗಿಯೇ ಕ್ಯೂಬಾದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಮೂಗು ತೂರಿಸಿದ ಅಮೇರಿಕಾ ಕ್ಯೂಬಾವನ್ನು ಹಾಡೇಹಗಲು ವಂಚಿಸಿ ತನ್ನ ತೆಕ್ಕೆಗೆ ತೆಗೆದುಕೊಂಡಿತು. ಪ್ಯಾರಿಸ್‌ನಲ್ಲಿ ಸ್ಪೇನ್ ಮತ್ತು ಅಮೇರಿಕಾ ಮಾಡಿಕೊಂಡ ಒಪ್ಪಂದದ ಪ್ರಕಾರ 'ಕ್ಯೂಬಾದ ಸ್ವಾತಂತ್ರ್ಯವನ್ನು ರಕ್ಷಿಸಲು' ಕ್ಯೂಬಾದ ಉಸ್ತುವಾರಿ ವಹಿಸುವ ಹಕ್ಕು ಪಡೆದುಕೊಂಡಿತು. ಅಷ್ಟೇ ಅಲ್ಲದೆ ಕ್ಯೂಬಾದ ಸ್ವಾತಂತ್ರ್ಯವನ್ನು ರಕ್ಷಿಸಲು ಅಲ್ಲಿನ ಜನರನ್ನು ರಕ್ಷಿಸಲು ದೇಶದ ಭದ್ರತೆಗಾಗಿ ಕ್ಯೂಬಾ ಸರ್ಕಾರ ಅಮೇರಿಕಾಗೆ ತನ್ನ ನೆಲದಲ್ಲಿ ಜಾಗ ನೀಡಬೇಕು ಎಂದು ಒಪ್ಪಂದಕ್ಕೆ ಬಂದು ಕ್ಯೂಬಾದ ಒಂದು ತುದಿ ಗ್ವಂತನಮೋದಲ್ಲಿ ನುಗ್ಗಿಯೇ ಬಿಟ್ಟಿತು.

೧೮೯೮ರಲ್ಲಿ ಸ್ಪೇನ್‌ನ್ನು ಒದ್ದೋಡಿಸಿ ಆ ಜಾಗದಲ್ಲಿ ಬಂದದ್ದು ಅಮೇರಿಕಾ. 'ಅದೇ ಬೆಕ್ಕು, ಅದೇ ಕಣ್ಣು'.ಸತತವಾಗಿ ನಾಲ್ಕು ವರ್ಷ ಅಮೇರಿಕಾ ಕ್ಯೂಬಾದಲ್ಲಿ ತನ್ನ ಜಾಲವನ್ನು ಹರಡಿತು. ಕ್ಯೂಬಾ ಎನ್ನುವುದು ಈ ಆಡಳಿತದಲ್ಲಿ ಒಂದು ದೇಶವಾಗಿರಲಿಲ್ಲ ಬದಲಿಗೆ 'ಹಣ ಇದ್ದವರದ್ದೇ ಒಂದು ದೇಶ', 'ಹಣ ಇಲ್ಲದವರದ್ದೇ ಒಂದು ದೇಶ' ಎನ್ನುವಂತಾಯಿತು. ಸರ್ಕಾರಿ ಅಧಿಕಾರಿಗಳು, ಸೇನೆ ಪ್ರಮುಖರು, ಕಬ್ಬು ಹಾಗೂ ತೈಲದ ಮಾಲೀಕರು ಇವರದ್ದೇ ಒಂದು ಜಗತ್ತಾದರೆ ಇದು ಇಲ್ಲದವರದ್ದು ಇನ್ನೊಂದು ಜಗತ್ತಾಯಿತು. ಇದರೊಂದಿಗೆ ಹವಾನದವರು ಹಾಗೂ ಹೊರಗಿನವರು ಎಂಬ ಬೇಧವೂ ಆರಂಭವಾಯಿತು. ಕ್ಯೂಬಾದ ಬಡವರು ಹವಾನವನ್ನೇ ನೋಡಿರಲಿಲ್ಲ. ಹವಾನಾದಲ್ಲಿದ್ದ ಉಳ್ಳವರು ಕ್ಯೂಬಾವನ್ನೇ ನೋಡಿರಲಿಲ್ಲ. ವಿದ್ಯುತ್ ಸೌಕರ್ಯ ಇಲ್ಲದ, ಕುದುರೆಗಳು ಮುಕ್ಕಾಲು ಭಾಗ ಮುಳುಗಿ ಹೋಗಬಹುದಾದ ರಸ್ತೆಗಳನ್ನು ಉಳ್ಳ, ನೀರು ಹರಿಯುವ ಜೋಪಡಿಗಳನ್ನು ಹೊಂದಿದ್ದ ಕ್ಯೂಬನ್ನರಿಗೂ ಹವಾನಾದಲ್ಲಿದ್ದ ಸಿರಿವಂತರಿಗೂ ಅರ್ಥಾತ್ ಸಂಬಂಧವಿರಲಿಲ್ಲ.

ಅಮೇರಿಕನ್ನರು ಕ್ಯೂಬಾದ ಆಸ್ತಿಗಳನ್ನು ಕೊಳ್ಳುತ್ತಾ ಹೋದರು. ಒಂದು ಎಕರೆಗೆ ಒಂದು ಡಾಲರ್ 'ಮಹಾನ್' ಬೆಲೆ ಕೊಟ್ಟು ಗ್ವಂತನಮೋದಲ್ಲಿ ಅಮೇರಿಕಾ ಸರ್ಕಾರ ನೆಲೆ ನಿಂತಂತೆ ಕ್ಯೂಬಾದ



ಒಳಗೆ ಅಮೇರಿಕಾ ವ್ಯಾಪಾರಿಗಳು ಹರಡತೊಡಗಿದರು. ಅಮೇರಿಕನ್ನರ ಕೈಯಲ್ಲಿದ್ದ ಸಕ್ಕರೆ ಕಂಪನಿಗಳು ಕ್ಯೂಬಾದ ಅರ್ಧದಷ್ಟು ಫಲವತ್ತಾದ ಭೂಮಿಯನ್ನು ಆಕ್ರಮಿಸಿಕೊಂಡಿದ್ದವು. ಇದಲ್ಲದೆ ೨೦ ಲಕ್ಷ ಎಕರೆಯನ್ನು ಬಾಡಿಗೆಗೆ ಪಡೆದಿದ್ದರು. ಒಟ್ಟು ಕ್ಯೂಬಾದ ಮುಕ್ಕಾಲು ಫಲವತ್ತಾದ ಭೂಮಿ ಇವರ ಕೈಯಲ್ಲಿತ್ತು. ಇಡೀ ದೇಶದ ಒಟ್ಟು ಸಕ್ಕರೆ ಉತ್ಪಾದನೆಯನ್ನು ಕೇವಲ ಮೂರೇ ಮೂರು ಕಂಪನಿಗಳು ನಿಯಂತ್ರಿಸುತ್ತಿದ್ದವು.

ಹವಾನಾದಲ್ಲಿದ್ದ ಮೂರೂ ಮುಕ್ಕಾಲು ಸಿರಿವಂತರಿಗೆ ಸಾಕಾಗುವಷ್ಟು ಹಣ ಸಕ್ಕರೆಯಿಂದಲೇ ಬರುತ್ತಿದ್ದರಿಂದ ಇತರೆ ಬೆಳೆ ತೆಗೆಯುವ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳಲಿಲ್ಲ. ಸಕ್ಕರೆಯನ್ನು ಸಹಾ ಒಂದಿಷ್ಟು ಪ್ರದೇಶದಲ್ಲಿ ಬೆಳೆದರೆ ಸಾಕಾಗಿದ್ದರಿಂದ ಕ್ಯೂಬಾದ ಬಹುತೇಕ ಫಲವತ್ತಾದ ಭೂಮಿ ಪಾಳು ಬಿತ್ತು. ಇಡೀ ದೇಶ ಒಂದೇ ಬೆಳೆಯ ಮೇಲೆ ನಿಂತಿತು. ಹವಾನಾದ ಮಂದಿ ತಮಗೆ ಬೇಕಾದ ಅಕ್ಕಿ, ತರಕಾರಿ, ಎಣ್ಣೆ, ಹತ್ತಿ, ಜೋಳವನ್ನೂ ಕೊಟ್ಟು ಸಕ್ಕರೆಗೆ ಪ್ರತಿಯಾಗಿ ಆಮದು ಮಾಡಿಕೊಳ್ಳತೊಡಗಿದರು. ಇದರಿಂದಾಗಿ ಹಸಿವಿಗೆ ಬಿದ್ದದ್ದು ಕ್ಯೂಬಾದ ಜನತೆ. ಉಳಲು ಭೂಮಿಯಿಲ್ಲ, ತಿನ್ನಬೇಕೆಂದರೆ ಆಹಾರವಿಲ್ಲ ಎನ್ನುವ ಪರಿಸ್ಥಿತಿ ಉದ್ಭವವಾಯಿತು.

ಸಕ್ಕರೆ ಸಾಗಾಟಕ್ಕೆ ಬೇಕಾದ ರೈಲು ಮಾರ್ಗ, ಬಂದರುಗಳು, ದೂರವಾಣಿ ಸಂಪರ್ಕ ಎಲ್ಲವೂ ಹವಾನಾದ ಕೆಲವೇ ಮಂದಿಯ ಕೈಯಲ್ಲಿ ಉಳಿಯಿತು. ಸಕ್ಕರೆ ತರುತ್ತಿದ್ದ ಭಾರೀ ಹಣ ಅಮೇರಿಕಾದ ಬ್ಯಾಂಕುಗಳಲ್ಲಿ ಶೇಖರವಾಗತೊಡಗಿದವು. ಕ್ಯೂಬಾ ಅಮೇರಿಕಾದ ಫಲವತ್ತಾದ ತೋಟವಾಗಿ ಹೋಯಿತು.

ನಾಲ್ಕು ವರ್ಷಗಳ ಕಾಲ ಸತತವಾಗಿ ಮಿಲಿಟರಿ ಆಡಳಿತ ನಡೆಸಿದ ಅಮೇರಿಕಾ ತನ್ನವರೆಲ್ಲಾ ಕ್ಯೂಬಾದಲ್ಲಿ ಭದ್ರವಾಗಿ ಬೇರುಬಿಟ್ಟ ನಂತರ 'ನಿಯಮಗಳಿಗೆ ತಲೆಬಾಗುವ' ಸಜ್ಜನಿಕೆ ತೋರಿ ತನಗೆ ಬೇಕಾಗಿದ್ದ ಸರ್ಕಾರವನ್ನು ಸ್ಥಾಪಿಸಿ ಅಲ್ಲಿಂದ ಕಾಲ್ತೆಗೆಯಿತು.

ನಂತರ ಆರಂಭವಾದದ್ದು ಅಮೇರಿಕಾ ಬಣ್ಣಿಸುವ 'ಪ್ರಜಾಪ್ರಭುತ್ವ'.

೧೯೦೨ರಲ್ಲಿ ಮೊದಲ ಚುನಾವಣೆ ನಡೆಯಿತು. ಪ್ರಥಮ ಅಧ್ಯಕ್ಷರಾಗಿ ಡೋಮಾಸ್ ಎಸ್ಟ್ರಾಡಾ ಪಾಮಾ ಆಯ್ಕೆಯಾದರು. ಈ ಚುನಾವಣೆಯಲ್ಲಿ ೧.೫ ಲಕ್ಷ ಸುಳ್ಳು ಮತದಾರರಿದ್ದಾರೆ ಎಂದು ಲಿಬರಲ್ ಪಕ್ಷ ಹುಯಿಲಿಟ್ಟಿತು. ಅಮೇರಿಕಾದ ಕೈವಾಡ ಈ ಆಯ್ಕೆಯ ಹಿಂದಿದೆ ಎಂದರು. 'ಗಲಭೆ ಎಬ್ಬಿಸಿದರೆ ಅಮೇರಿಕಾದ ಸೈನ್ಯ ಬರುತ್ತದೆ' ಎಂದು ಬೆದರಿಸಿ ತಣ್ಣಗಾಗಿಸಲಾಯಿತು. ೧೯೦೬ರಲ್ಲಿ ಮತ್ತೆ ಆತನೇ ಆಯ್ಕೆಯಾದ. ಈ ಬಾರಿ ಗಲಭೆ ನಿಲ್ಲಲಿಲ್ಲ. ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ.' ಅಮೇರಿಕಾದ ಅಧ್ಯಕ್ಷ ಥಿಯೋಡರ್ ರೂಸ್‌ವೆಲ್ಟ್ ಕ್ಯೂಬಾಗೆ ತನ್ನ ಯುದ್ಧದ ಕಾರ್ಯದರ್ಶಿ ವಿಲಿಯಂ ಹೋವರ್ಡ್ ಟಾಫ್ಟ್ ಅವರನ್ನು ಕಳಿಸಿಕೊಟ್ಟರು. ಬಂಡಾಯ ತಣ್ಣಗಾಯಿತು. ಆದರೆ ಟಾಫ್ಟ್ ಗವರ್ನರ್ ಆಗಿ ಉಳಿದರು. ೬ ಸಾವಿರ ಸೈನ್ಯದ ಪಡೆಗಳು ಕ್ಯೂಬಾಗೆ ಬಂದವು. ಈ ಹಿಂದೆಯೇ ಮತ್ತೆ ೧೮ ಸಾವಿರ ಪಡೆ. ಟಾಫ್ಟ್ ಮತ್ತು ಅನಂತರ ಚಾರ್ಲ್ಸ್ ಮೆಗೂನ್ ದರ್ಬಾರಿನಲ್ಲಿ ಆಡಳಿತ ಭ್ರಷ್ಟಾಚಾರದ ದಾರಿಗಳನ್ನು ತೋರಿಸಿಕೊಟ್ಟಿತು.

೧೯೦೮ರಲ್ಲಿ ಜೋಸ್ ಗೋಮೆಜ್ ಅಧ್ಯಕ್ಷರಾಗಿ ಆಯ್ಕೆಯಾದರು. ಮತ್ತೆ ಬಂಡಾಯ ಆರಂಭವಾಯಿತು. ನೀಗ್ರೋ ಪೊಲಿಟಿಕಲ್ ಪಾರ್ಟಿ ಸ್ಥಾಪನೆಯಾಯಿತು. ಇದನ್ನೇ ನೆಪ ಮಾಡಿಕೊಂಡು ಅಮೇರಿಕಾ ಗ್ವಂತನಮೋದಲ್ಲಿ 'ಅಗತ್ಯ ಬಿದ್ದರೆ ನಿಮ್ಮ ರಕ್ಷಣೆಗೆ - ನಿಮ್ಮ ಕಣ್ಣೆದುರಲ್ಲೇ ಇರಲಿ' ಎಂದು ನೆಪ ಹೇಳಿ ೫೦೦ ಯುದ್ಧನೌಕೆಗಳನ್ನು ಸ್ಥಾಪಿಸಿಬಿಟ್ಟಿತು.

೧೯೧೨ ಹಾಗೂ ೧೯೧೬ರಲ್ಲಿ ಮಾರಿಯೋ ಗ್ರೇಸಿಯಾ ಮೆನೋಕಲ್ ಅಧ್ಯಕ್ಷರಾದರು. ಚುನಾವಣೆ ಅಕ್ರಮ ಎಂಬ ಹುಯಿಲೆದ್ದಿತು. ಮತ ಪೆಟ್ಟಿಗೆಗಳೇ ಕಾಣೆಯಾದವು. ಏಳು ತಿಂಗಳ ಕಾದಾಟ ನಡೆಯಿತು. ಈ ರೀತಿ ಗಲಭೆ ನಡೆಯುತ್ತಲೇ ಹೋದರೆ ಅಮೇರಿಕಾಗೆ ಬೇಕಾದ ಸಕ್ಕರೆಗೆ ಧಕ್ಕೆಯಾಗುತ್ತದೆ ಇದನ್ನು ಸಹಿಸುವುದಿಲ್ಲ ಎಂದು ಅಮೇರಿಕಾ ಎಚ್ಚರಿಸಿತು. ಗ್ರೇಸಿಯಾ ಮೆನೋಕಲ್ ಅವರೇ ಪುನರಾಯ್ಕೆಯಾಗಿದ್ದಾರೆ ಎಂದು ಸಾರಿ ಹೇಳಿತು. ಪ್ರಥಮ ಮಹಾಯುದ್ಧ ಆರಂಭವಾಯಿತು. ಕ್ಯೂಬಾದ ಸಕ್ಕರೆಗೆ ಇನ್ನಿಲ್ಲದ ಬೇಡಿಕೆ ಬಂತು. ಹಾಗೆಯೇ ದಿಢೀರ್ ಪಾತಾಳ ಕಚ್ಚಿತು. ಅಮೇರಿಕಾ ಕ್ಯೂಬಾ ಸರ್ಕಾರಕ್ಕೆ ತನ್ನ ಜೆ.ಪಿ. ಮೋರ್ಗನ್ ಆಂಡ್ ಕಂಪನಿಯಿಂದ ೫೦ ಲಕ್ಷ ಡಾಲರ್ ಸಾಲ ಕೊಡಿಸಿತು. ಹಾಕಿದ್ದು ಒಂದೇ ಕರಾರು - ನಿಮ್ಮ ಸರ್ಕಾರದ ಬಜೆಟ್ ಪ್ರತೀ ಬಾರಿ ನನ್ನ ಮುಂದೆ ಬರಬೇಕು. ಸರಿ ಎಂದ ಕ್ಯೂಬಾ ಸರ್ಕಾರದ ಪ್ರತೀ ವಿಭಾಗವನ್ನೂ ಪರಿಶೀಲಿಸಲು ಅಮೇರಿಕಾಗೆ ಮುಕ್ತ ಅವಕಾಶ ಇರಬೇಕು'. ಆಗಲಿ ಎಂದಿತು ಸರ್ಕಾರ. ಕ್ಯೂಬಾ ಕುತ್ತಿಗೆಗೆ ಎರಡನೆಯ ಕುಣಿಕೆ ಬಿತ್ತು.

ಕ್ರೌಡರ್ ಅವರ ಅಪಾರ ಚಾಣಾಕ್ಷತನ ಅಮೇರಿಕಾಗೆ ಹೆಮ್ಮೆ ತಂದಿತು. ೧೯೨೩ರಲ್ಲಿ ಅವರನ್ನು ಕ್ಯೂಬಾದಲ್ಲಿ ಅಮೇರಿಕಾದ ಪ್ರಥಮ ರಾಯಭಾರಿಯನ್ನಾಗಿ ನೇಮಿಸಿದರು. ಈ ಮಧ್ಯೆ ಅಧ್ಯಕ್ಷ ಜಯಾಸ್ ನಡೆಸಿದ ವ್ಯಾಪಕ ಭ್ರಷ್ಟಾಚಾರ ಶಸ್ತ್ರಾಸ್ತ್ರ ಹೋರಾಟಕ್ಕೆ ದಾರಿ ಮಾಡಿಕೊಟ್ಟಿತು. ಇದನ್ನೇ ನೆಪವಾಗಿರಿಸಿಕೊಂಡು ಅಮೇರಿಕಾ ಕ್ಯೂಬಾ ಸರ್ಕಾರಕ್ಕೆ ಶಸ್ತ್ರಾಸ್ತ್ರಗಳನ್ನು ಕೊಟ್ಟಿತು.

ನಂತರ ನಡೆದದ್ದು ಕ್ಯೂಬಾವನ್ನು ಅಲುಗಾಡಿಸಿದ ಮಚಾಡೋ ಹಾಗೂ ಬ್ಯಾಟಿಸ್ಟಾ ಆಡಳಿತ. ಕ್ಯೂಬಾ ಭಯದಿಂದ ತತ್ತರಿಸಿದ್ದು ಈಗ. ಅಮೇರಿಕಾದ ಕುಮ್ಮಕ್ಕು ಜನರನ್ನು ಹೆಣವಾಗಿಸುವ ಶಕ್ತಿ ನೀಡಿತು. ಸೊಲ್ಲೆತ್ತಿದವರನ್ನು ಕತ್ತರಿಸಿ ಹಾಕುವ ಆಡಳಿತ ಆರಂಭವಾಯಿತು.

೧೯೨೪ರಲ್ಲಿ ಗೆರಾರ್ಡೋ ಮಚಾಡೋ ಅಧ್ಯಕ್ಷನಾಗಿ ಆಯ್ಕೆಯಾದ. ಕ್ಯೂಬಾದಲ್ಲಿ ಭಯದ ಪರದೆ ಎಳೆಯಲಾಯಿತು. ಆನೆ ನಡೆದದ್ದೇ ಹಾದಿ. ಹಗರಣ ಬಯಲಿಗೆಳೆದ ಪತ್ರಿಕಾ ಸಂಪಾದಕರು ಕೊಲೆಯಾದರು. ಮತ್ತೊಬ್ಬರು ಚುನಾವಣೆಯಲ್ಲಿ ಸ್ಪರ್ಧಿಸದಂತೆ ನೋಡಿಕೊಳ್ಳಲಾಯಿತು. ಬಂಡಾಯ ಎದ್ದವರು ಬಂದೀಖಾನೆ ಪಾಲಾದರು. ಅಭಿವ್ಯಕ್ತಿ ಸ್ವಾತಂತ್ರ್ಯ - ಹಾಗೆಂದರೇನು ಎಂದು ಮಚಾಡೋ ಪ್ರಶ್ನಿಸಿದರು. ಆದರೆ ಅಮೇರಿಕಾ ಹೇಳಿತು - ಕ್ಯೂಬಾ ಈಗ ಸಂಪದ್ಭರಿತವಾಗಿದೆ, ಸ್ಥಿರವಾಗಿದೆ.

ಕ್ಯೂಬಾದ ಚಳವಳಿಗೂ ಅನುಭವ ಬಂದಿತ್ತು. ಕೈಗೊಂಬೆ ಅಧ್ಯಕ್ಷರ ವಿರುದ್ಧ ಪ್ರತಿಭಟನೆ ನಡೆಸಿದರೆ ಮಾತ್ರ ಸಾಲದು. ಕುಣಿಸುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗೂ ಬಿಸಿ ಮುಟ್ಟಿಸಬೇಕು. ಅಮೇರಿಕ



ಹೇರುತ್ತಿರುವ ಆರ್ಥಿಕ ಸಾಮ್ರಾಜ್ಯಶಾಹಿಯನ್ನು ಕಿತ್ತೊಗೆಯಬೇಕು. ಆ ವೇಳೆಗೆ ೧,೫೦೦,೦೦೦,೦೦೦ ಡಾಲರ್ ಆಸ್ತಿ ಅಮೇರಿಕಾ ಕೈಯಲ್ಲಿತ್ತು.

ಈ ಹೋರಾಟ ಮಚಾಡೋನನ್ನು ಮನೆಗೆ ಕಳಿಸಿತು. ಆಗ ಕಾಣಿಸಿಕೊಂಡವನು ಬ್ಯಾಟಿಸ್ಟಾ. ಮೊದಲು ಹುಲ್ಲೆಗಳೊಂದಿಗೆ ನಂತರ ಹುಲಿಯೊಂದಿಗೆ. ಚಳವಳಿಕಾರರ ಜೊತೆ ಗುರುತಿಸಿಕೊಂಡು ಮುನ್ನೆಲೆಗೆ ಬಂದ ಕ್ಯೂಬಾ ಸೈನ್ಯದ ಸಾರ್ಜೆಂಟ್ ಆಗಿದ್ದ ಫುಲ್‌ಗೆಂಸಿಯೋ ಬ್ಯಾಟಿಸ್ಟಾ ನಂತರ ಹಾರಿದ್ದು ಅಮೇರಿಕಾ ಪಾಳಯಕ್ಕೆ.

ಆದರೆ ಈ ಇಬ್ಬರ ನಡುವೆ ಅಧಿಕಾರಕ್ಕೆ ಬಂದಿದ್ದ ರ‍್ಯಾಮನ್ ಗ್ರಾವುಸ್ಸಾನ್ ಮಾರ್ಟಿನ್ ಭ್ರಷ್ಟಾಚಾರ, ಸರ್ವಾಧಿಕಾರದ ಮಧ್ಯೆ ಕ್ಯೂಬಾಗೆ ಒಂದೆಳೆ ನೆಮ್ಮದಿಯನ್ನು ತಂದರು. ಆದರೆ ಜನಪರ ಕಾನೂನುಗಳು ಗ್ರಾವು ಅವರನ್ನು ಮನೆಗೆ ಕಳಿಸಿತು. ಈ ವೇಳೆಗೆ ಬ್ಯಾಟಿಸ್ಟಾ ಸೇನೆ ಮತ್ತು ದೇಶದ ಮೇಲೆ ಹತೋಟಿ ಸಾಧಿಸಿದ್ದರು. ತೋಳಕ್ಕೆ ಈಗ ಕುರಿಯ ಚರ್ಮ ಹೊದೆಯುವ ಅಗತ್ಯವೇನೂ ಇರಲಿಲ್ಲ.

ಈ ಮಧ್ಯೆ ಅಮೇರಿಕಾ ಮೂಗು ತೂರಿಸಿ ರಚಿಸಿದ್ದ ೧೯೦೨ರ ಕ್ಯೂಬಾ ಸಂವಿಧಾನವನ್ನು ಬದಲಾಯಿಸಬೇಕು ಎಂಬ ಚಳವಳಿ ಆರಂಭವಾಯಿತು.

ಕ್ಯೂಬಾದ ಹೋರಾಟಗಳ ದಿಕ್ಕನ್ನೇ ಬದಲಿಸಿದ್ದು ಹೊಸ ಸಂವಿಧಾನ. ಅಮೇರಿಕಾದ ಕೈಗೊಂಬೆ ಸಂವಿಧಾನ ಬೇಡ ಎಂಬ ಕೂಗು ಆ ಸಂವಿಧಾನದಿಂದ ಹಸಿವು, ಕತ್ತಲು, ರೋಗಗಳ ಸುಖ ಉಂಡಿದ್ದವರಿಂದ ಬಂತು. ಇವರ ಬೆನ್ನಿಗೆ ನಿಂತವರು ವಿದ್ಯಾರ್ಥಿಗಳು, ಜೊತೆಗೆ ಸಾಗರದಂತೆ ತೇಲಿಬಂದರು ಕಾರ್ಮಿಕರು, ರೈತರು.

೧೯೪೦ರಲ್ಲಿ ನ್ಯಾಯಾಧೀಶ ಜೋಶ್ ಮ್ಯಾನ್ಯುಯಲ್ ಕೊರ್ಟಿನಾ ಅವರ ನೇತೃತ್ವದಲ್ಲಿ ಸಂವಿಧಾನ ಸಮಾವೇಶ ನಡೆಯಿತು. ಅರೆ ಸಂಸತ್ತಿನ ವ್ಯವಸ್ಥೆಯನ್ನು ಈ ಸಮಾವೇಶ ರೂಪಿಸಿತು. ಈ ಪ್ರಕಾರ ಪ್ರಧಾನಿ, ಅಧ್ಯಕ್ಷ ಹಾಗೂ ಬಹುಪಕ್ಷಗಳ ಸಂಸತ್ತು ಜಾರಿಗೆ ಬರಬೇಕು. ಎಲ್ಲಾ ಪಕ್ಷಗಳಿಗೂ ಸಮಾನ ಪ್ರಾತಿನಿಧ್ಯ ಇರಬೇಕು. ಜೊತೆಯಲ್ಲಿಯೇ ಕ್ಯೂಬನ್ನರ ಆಶಯಕ್ಕೆ ತಕ್ಕಂತೆ ಹಲವು ಸುಧಾರಣೆಗಳನ್ನು ಸಂವಿದಾನ ಸಲಹೆ ಮಾಡಿತು. ಗಂಡು ಹೆಣ್ಣು ಭೇದವಿಲ್ಲದಂತೆ ಸಮಾನ ಕೆಲಸಕ್ಕೆ ಸಮಾನ ವೇತನ, ಕನಿಷ್ಠ ಕೂಲಿ ಭರವಸೆ, ಕೈಗಾರಿಕಾ ಅಪಘಾತಕ್ಕೆ ಪರಿಹಾರ, ಪ್ರತೀ ವರ್ಷ ಒಂದು ತಿಂಗಳು ವೇತನ ಸಹಿತ ರಜೆ, ಮಹಿಳೆ ಮತ್ತು ಮಕ್ಕಳಿಗೆ ವಿಶೇಷ ರಕ್ಷಣೆ, ಬಾಲ ಕಾರ್ಮಿಕ ಪದ್ಧತಿಯ ನಿಷೇಧ.

ಈ ಬದಲಾವಣೆ ಹರಿಕಾರ ಸಂವಿಧಾನವನ್ನು ಅಂಗೀಕರಿಸಿದ್ದೇ ಬ್ಯಾಟಿಸ್ಟಾ. ೧೯೪೦ರಲ್ಲಿ ಅಧ್ಯಕ್ಷನಾಗಿ ಆಯ್ಕೆಯಾದ ಬ್ಯಾಟಿಸ್ಟಾ ನಂತರ ಕ್ರಾಂತಿಯಲ್ಲಿ ಪದಚ್ಯುತನಾಗುವವರೆಗೆ ನಡೆಸಿದ್ದು ವಿಚಿತ್ರ ಆಡಳಿತ. ಯಾವ ಬ್ಯಾಟಿಸ್ಟಾ ನೂತನ ಸಂವಿಧಾನವನ್ನು ಅಂಗೀಕರಿಸಿ, ಯಾವ ಬ್ಯಾಟಿಸ್ಟಾ ಒಬ್ಬನೇ ಅಧ್ಯಕ್ಷ ಮರು ಆಯ್ಕೆಯಾಗಬಾರದು ಎಂದು ನಿರ್ಧರಿಸಿ ಕ್ಯೂಬಾದ ಚುನಾವಣಾ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಅಚ್ಚುಕಟ್ಟಾಗಿ ಚುನಾವಣೆ ನಡೆಸಿಕೊಟ್ಟು ಅಧಿಕಾರದಿಂದ ಕೆಳಗೆ ಇಳಿದನೋ ಅದೇ ಬ್ಯಾಟಿಸ್ಟಾ

ಕ್ಯೂಬನ್ನರನ್ನು ಹುರಿದು ಮುಕ್ಕಿದ ರಕ್ಕಸನಾಗಿ ಬದಲಾದ. ಯಾವ ಬ್ಯಾಟಿಸ್ಟಾ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸೂಕ್ತ ಅಡಿಗಲ್ಲು ಹಾಕಿದ್ದನೋ ಅದೇ ಬ್ಯಾಟಿಸ್ಟಾ ಜನರ ಅಭಿವ್ಯಕ್ತಿ ಸ್ವಾತಂತ್ರ್ಯ ಕಸಿದ. ಎದುರು ಮಾತನಾಡಿದವರನ್ನು ಗುಂಡಿಕ್ಕಿ ಕೊಂದ. ಪತ್ರಿಕೆಗಳಲ್ಲಿ ಟೀಕೆ ಮಾಡಿದವರನ್ನು ರಾತ್ರೋರಾತ್ರಿ ಇಲ್ಲವಾಗಿಸಿದ. ಪ್ರತಿಭಟನಕಾರರು ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದಾಗ ಸೈನ್ಯವನ್ನು ಛೂಬಿಟ್ಟು ಸಾಮೂಹಿಕ ಗೋರಿಗಳನ್ನು ಸೃಷ್ಟಿಸಿದ. ಸಂಸತ್ತನ್ನೇ ವಿಸರ್ಜಿಸಿದ. ಇಡೀ ದೇಶದ ಸೂತ್ರ ತನ್ನ ಕೈಯಲ್ಲಿರುವಂತೆ ಬದಲಾವಣೆ ಮಾಡಿದ. ಅಮೇರಿಕಾದ ಪರವಾಗಿ ಇನ್ನಿಲ್ಲದ ಆಸಕ್ತಿ ತೋರಿಸಿದ. ತಾನು ಅಸ್ತಿತ್ವಕ್ಕೆ ತಂದ ನೂತನ ಸಂವಿಧಾನವನ್ನು ಪೆಟ್ಟಿಗೆಯಲ್ಲಿಟ್ಟು ಕೊನೆ ಮೊಳೆ ಜಡಿದ.

ವಿದ್ಯಾರ್ಥಿಗಳು ಕೇಳಿದ್ದು ಅದನ್ನೇ. ಸಂವಿಧಾನವನ್ನು ಕೊಂದಿದ್ದು ಏಕೆ? ಎಂದು. ಯಾವ ಬ್ಯಾಟಿಸ್ಟಾ ಹೊಸ ಸಂವಿಧಾನವನ್ನು ಕೊಂದು ಹಾಕಿದ್ದನೋ ಅದನ್ನು ವಿದ್ಯಾರ್ಥಿಗಳು ಶವಪೆಟ್ಟಿಗೆಯಲ್ಲಿಟ್ಟು ಊರ ತುಂಬಾ ಅಣಕು ಮೆರವಣಿಗೆ ನಡೆಸಿದರು. ಬ್ಯಾಟಿಸ್ಟಾನ ಕರಾಳ ಆಡಳಿತವನ್ನು ಜನರಿಗೆ ವಿವರಿಸಿದರು. ಹವಾನಾ ವಿಶ್ವವಿದ್ಯಾಲಯದ ಮುಂದೆ ಆ ಶವಪೆಟ್ಟಿಗೆಯನ್ನು ಹೂಳಿ ವಿಶ್ವವಿದ್ಯಾಲಯದ ಮೆಟ್ಟಿಲ ಮೇಲೆ ಶೋಕಾಚರಣೆಗೆ ಕುಳಿತರು.

ಆಗ ಎರಗಿತು ಬ್ಯಾಟಿಸ್ಟಾ ಸೈನ್ಯ. ಕ್ಯೂಬಾದ ಕೆಥೋಲಿಕ್ ಚರ್ಚ್‌ನ ಧರ್ಮಗುರುಗಳು ತಾವು ಕಾಲಿಟ್ಟ ಕಡೆಯೆಲ್ಲಾ ಶವಗಳ ಸಾಗರ ಕಂಡದ್ದನ್ನು ಸಾರಿ ಹೇಳಿದರು. ವಿಶ್ವವಿದ್ಯಾಲಯದ ಮುಂದೆ ಶೋಕಾಚರಣೆ ಮಾಡುತ್ತಿದ್ದ ವಿದ್ಯಾರ್ಥಿಗಳದ್ದು ಮಾತ್ರವಲ್ಲ, ಮೂಲೆ ಮೂಲೆಗಳಲ್ಲಿ ಹೆಣದ ರಾಶಿ ಇದೆ ಎಂದರು. ಕ್ಯೂಬನ್ನರು ಹುಡುಕಾಟ ನಡೆಸಿದರು. ಕ್ಯೂಬಾದ ತುಂಬಾ ಹೆಣದ ಸಾಗರ ಪತ್ತೆಯಾಯಿತು. ಬ್ಯಾಟಿಸ್ಟಾ ಆಡಳಿತದಲ್ಲಿ ೨೦ ಸಾವಿರಕ್ಕೂ ಹೆಚ್ಚು ಕ್ಯೂಬನ್ನರು ಶವಗಳಾಗಿ ಹೋಗಿದ್ದರು.

ಆಗ ಸ್ಫೋಟಿಸಿತು ಮಾಂಕೆಡಾ ಕೋಟೆ. ಬೀದಿ ಬೀದಿಗಳಲ್ಲಿ ಕ್ಯೂಬನ್ನರನ್ನು ಕೊಂದ ಬ್ಯಾಟಿಸ್ಟಾಗೆ ಕೊನೆಯ ಎಚ್ಚರಿಕೆ. ಆಗ ಹೊರಟಿತು ಹೊಸ ಸಂದೇಶ. ಆಗ ಬೀಸಿತು ಬದಲಾವಣೆಯ ಗಾಳಿ. ಫಿಡೆಲ್ ಕ್ಯಾಸ್ಟ್ರೋ ತನ್ನ ಸಂಗಾತಿಗಳೊಂದಿಗೆ ಕ್ಯೂಬನ್ನರ ಹೋರಾಟದಲ್ಲಿ ತಮ್ಮ ಬರವನ್ನು ಸಾರಿದರು. ಮಾಂಕೆಡಾ ಕೋಟೆಯಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಲೂಟಿ ಮಾಡಲು ಬಂದ ತಮ್ಮನ್ನು ಬಂಧಿಸಿದ ಸರ್ಕಾರದ ಕ್ರಮವನ್ನು ನ್ಯಾಯಾಲಯದ ಕಟಕಟೆಯಲ್ಲಿ ಪ್ರಶ್ನಿಸಿದರು. ಹೇಳಿದರು - 'ಇತಿಹಾಸ ನನ್ನನ್ನು ನಿರ್ದೋಷಿಯನ್ನಾಗಿಸುತ್ತದೆ' - ಹಿಸ್ಟರಿ ವಿಲ್ ಅಬ್‌ಸಾಲ್ವ್ ಮಿ - ಹೋರಾಟಕ್ಕೆ ಇದು ಭಾಷ್ಯ ಬರೆಯಿತು.

ಎರಡು ವರ್ಷಗಳ ನಂತರ ಅಭಯದಾನದಿಂದ ಬಿಡುಗಡೆಗೊಂಡ ಫಿಡೆಲ್‌ಕ್ಯಾಸ್ಟ್ರೋ, ರೌಲ್ ಕ್ಯಾಸ್ಟ್ರೋ ಹಾಗೂ ಸಂಗಾತಿಗಳು ಮೆಕ್ಸಿಕೋಗೆ ತಲೆ ತಪ್ಪಿಸಿಕೊಂಡು ಹೋದರು. ಕ್ಯೂಬಾದ ಹೊಸ ಚರಿತ್ರೆ ಬರೆಯುವ ಕೆಲಸ ಆಗ ಆರಂಭವಾಯಿತು. ಬಂದೂಕು ಹಿಡಿದು ಪ್ರತಿನಿತ್ಯ ತರಬೇತಿ, ಬೆಟ್ಟ ಗುಡ್ಡ ಹತ್ತಿ ದಾಳಿ ಮಾಡುವುದರ ಬಗ್ಗೆ ಸತತ ಅಭ್ಯಾಸ, ಗಾಯಗೊಂಡವರಿಗೆ ಶುಶ್ರೂಷೆ ನೀಡುವ ಬಗ್ಗೆ ಪಾಠ, ಒಬ್ಬರು, ಇಬ್ಬರು, ಮತ್ತೊಬ್ಬರು. ಫಿಡೆಲ್ ಜೊತೆಗಾರರ ಸಂಖ್ಯೆ ದೊಡ್ಡದಾಗುತ್ತಾ ಹೋಯಿತು.



ಆಗ ಕೈಕುಲುಕಿದ್ದು ಆ ಚೆಗೆವಾರ. ಕೈಯಲ್ಲಿ ಬಂದೂಕು, ಎದೆಯಲ್ಲಿ ಕಾವ್ಯ ಹೊತ್ತ ಹೋರಾಟಗಾರ. ಗ್ವಾಟೆಮಾಲಾದಲ್ಲಿ ಗೆರಿಲ್ಲಾ ಹೋರಾಟ ನಡೆಸಿ ಅಸ್ತಮಾದಿಂದ ಚೇತರಿಸಿಕೊಳ್ಳಲು ಮೆಕ್ಸಿಕೋಗೆ ಬಂದಿದ್ದ ಚೆಗೆವಾರ ಫಿಡೆಲ್‌ನ ಕೈಕುಲುಕಿದರು. ತಂಡಕ್ಕೊಬ್ಬ ವೈದ್ಯ, ಗ್ವಾಟೆಮಾಲಾ ಹೋರಾಟದ ಅನುಭವ ಇರಲಿ ಎಂದು ಕ್ಯಾಸ್ಟ್ರೋ ಚೆಗೆವಾರನನ್ನು ತಂಡಕ್ಕೆ ಸೇರಿಸಿಕೊಂಡರು. ಹತ್ತು ಹಲವಾರು ಬಾರಿ ಯೋಚಿಸಿ ೮೨ ಸಂಗಾತಿಗಳು ಪುಟಾಣಿ ಹಡಗು 'ಗ್ರಾನ್ಮಾ' ಏರಿ ಕ್ಯೂಬಾದತ್ತ ಹೊರಟರು.

ಲೆಕ್ಕಾಚಾರ ತಪ್ಪಿತು. ಗುಂಡಿನ ಸುರಿಮಳೆ. ೮೨ ಸಂಗಾತಿಗಳ ಪೈಕಿ ಉಳಿದ ಬೆರಳೆಣಿಕೆಯ ಜನ ಎತ್ತರಕ್ಕೆ ನಿಂತಿದ್ದ ಸಿಯರಾ ಮಾಸ್ಟರಾ ಗುಡ್ಡಗಳಿಗೆ ಓಡಿ ಹೋದರು. ಅಲ್ಲಿಂದ ಆರಂಭವಾಯಿತು ಬ್ಯಾಟಿಸ್ಟಾನ ಬೃಹತ್ ಸೈನ್ಯವನ್ನು ಮಣಿಸುವ ಗೆರಿಲ್ಲಾ ಹೋರಾಟ. ಅಮೇರಿಕಾ ಎಚ್ಚರವಾಯಿತು. ಬೆರಳೆಣಿಕೆ ಜನ ಬ್ಯಾಟಿಸ್ಟಾ ಸರ್ಕಾರದ ಬುಡಕ್ಕೆ ಕೈ ಹಾಕಿದ್ದರು. ಅಮೇರಿಕಾದಿಂದ ಕ್ಯೂಬಾಗೆ ಮುಕ್ತವಾಗಿ ಹರಿದಾಡುತ್ತಿದ್ದ ಶಸ್ತ್ರಾಸ್ತ್ರಗಳಿಗೆ ನಿಷೇಧ ಹೇರಲಾಯಿತು. ಅಮೇರಿಕಾದಿಂದ ಒಂದು ಶಸ್ತ್ರವೂ ಕದಲಬಾರದು ಎಂದು ಫರ್ಮಾನು ಹೊರಡಿಸಲಾಯಿತು. ಅದೇ ಸಮಯದಲ್ಲಿ ತನ್ನ ನೆಚ್ಚಿನ ಭಂಟ ಬ್ಯಾಟಿಸ್ಟಾಗೆ ಶಸ್ತ್ರಾಸ್ತ್ರಗಳನ್ನು ಅಮೇರಿಕಾ ನೀಡಿತು.

ಸಿಯೆರಾದ ಗುಡ್ಡಗಳಲ್ಲಿದ್ದೇ ಬೆರಳೆಣಿಕೆಯ ಕ್ರಾಂತಿಕಾರಿಗಳು ಹೋರಾಟ ನಡೆಸಿದರು. ಸತತವಾಗಿ ಎರಡು ವರ್ಷ, ಕ್ಯೂಬಾದಲ್ಲಿ ಬೆಳಕು ಕಾಣದೆ ಉಳಿದಿದ್ದ ಹಳ್ಳಿಗರು ಫಿಡಲ್ ಸೈನ್ಯದ ವಿಶ್ವಾಸ ಕಂಡು ಬೆರಗಾದರು. ಈ ಜನರು ಸೈನ್ಯದತ್ತ ಹರಿದು ಬಂದರು.

ಕನಸುಗಾರರಲ್ಲದವರಿಂದ ಕ್ರಾಂತಿ ಸಾಧ್ಯವಿಲ್ಲ. ಕನಸುಗಾರರು ಕೋವಿ ಹಿಡಿದಿದ್ದರು.

**೧೯೫೯ ಜನವರಿ ಒಂದು**

**ಕ್ಯೂಬಾ ಸ್ವತಂತ್ರವಾಯಿತು.**



# ಗ್ವಜಿರ ಗ್ವಂತನಮೇರ

ಗ್ವಂತನಮೇರ

ಗ್ವಜಿರ ಗ್ವಂತನಮೇರ –

ಇಡೀ ಕ್ಯೂಬಾ ಹುಚ್ಚೆದ್ದು ಕುಣಿಯಲು ಈ ಎರಡೇ ಸಾಲು ಸಾಕು. ಕ್ಯೂಬಾದಲ್ಲಿ ಎಲ್ಲಿಂದ ಎಲ್ಲಿಗೇ ಹೋಗಲಿ ಗ್ವಂತನಮೇರ ನಿಮ್ಮನ್ನು ಒಳಗೆ ಎಳೆದುಕೊಳ್ಳುತ್ತಲೇ ಇರುತ್ತದೆ. ಹೇಳಿ ಕೇಳಿ ಹಾಡುಗಳನ್ನೇ ಹೊದ್ದು ಮಲಗಿರುವ ಕ್ಯೂಬಾದಲ್ಲಿ ಈ ಒಂದು ಸೊಲ್ಲು ಹೊರಬಂದರೆ ಸಾಕು ಮುಖ ಅರಳುತ್ತದೆ. ಕ್ಯೂಬಾದ ಒಡಲಲ್ಲಿ ಅರಳಿದ ಈ ಹಾಡು ಈಗ ಕ್ಯೂಬಾ ಮಾತ್ರವಲ್ಲ ದೇಶ ದೇಶಗಳ ಗಡಿಯನ್ನು ದಾಟಿ ಹೋಗಿದೆ. ಕ್ಯೂಬಾದಿಂದ ಯಾರೂ ಏನನ್ನೂ ತರಬಾರದು, ಕ್ಯೂಬಾಗೆ ಏನೂ ಕೊಂಡೊಯ್ಯಬಾರದು, ಕ್ಯೂಬಾಗೆ ಹೋಗಲೇಬಾರದು ಎಂದು ಹತ್ತು ಹಲವು ಕಾಯಿದೆಗಳ ಮೂಲಕ ಕಿವಿ ಹಿಂಡುತ್ತಿರುವ ಅಮೇರಿಕಾದಲ್ಲಿಯೂ ಟೊರೆಸೆಲ್ಲಿ, ಹೆಲ್ಮ್ಸ – ಬರ್ಟನ್ ಕಾಯಿದೆಗಳಿಗೆ ಕೇರೇ ಮಾಡದೇ 'ಗ್ವಂತನಮೇರ' ಹೆಜ್ಜೆ ಹಾಕಿಬಿಟ್ಟಿದೆ. ತನ್ನ ಸಾಲುಗಳ ಮೇಲೆ ಜನರನ್ನು ಕುಣಿಸುತ್ತಿದೆ.



ಗ್ವಂತನಮೇರ ಕ್ಯೂಬನ್ನರ ರಾಷ್ಟ್ರಗೀತೆ ಯೇನೋ ಎಂಬಷ್ಟರ ಮಟ್ಟಿಗೆ ಕ್ಯೂಬನ್ನರ ಬಾಯಲ್ಲಿ ನಲಿದಾಡಿದೆ. ಅಮೇರಿಕಾ ವಿರುದ್ಧದ ಗುದ್ದಾಟದಲ್ಲೂ, ಬಡತನದೊಂದಿಗೆ ಮುಷ್ಠಿಕಾಳಗದಲ್ಲೂ ಅಂತೆಯೇ ಎಡೆಬಿಡದೆ ನಿರ್ಬಿಡೆಯಿಂದ ಮುದ್ದಾಡುವುದರಲ್ಲಿಯೂ ಕ್ಯೂಬನ್ನರು ಎತ್ತಿದ ಕೈ. ಗ್ವಂತನಮೇರ ಎಂಬ ಪ್ರೇಮಗೀತೆ ಈ ಕಾರಣಕ್ಕಾಗಿಯೇ ಕ್ಯೂಬನ್ನರ ಹೃದಯದಲ್ಲಿ ಭದ್ರಸ್ಥಾನ ಗಿಟ್ಟಿಸಿದೆ.

'ನಾನು ಗ್ವಂತನಮೋದ ಒಳ್ಳೆಯ ಹುಡುಗ' ಎಂದು ಬಣ್ಣಿಸುವ ಈ ಪ್ರೇಮಗೀತೆ ಪ್ರೀತಿಯನ್ನು ಕೊನೆಯ ಹನಿಯವರೆಗೆ ಬಸಿದುಕೊಳ್ಳುವ ಕ್ಯೂಬನ್ನರಿಗೆ ರಾಷ್ಟ್ರಗೀತೆಯೇ. ಈ ಗ್ವಂತನಮೋ ಕ್ಯೂಬಾದ ಸಂತಸದ ಹಾಗೆಯೇ ನೋವಿನ ಬಿಂದುವೂ ಹೌದು. ಯಾವ ಕ್ಯೂಬಾ ಹುಚ್ಚೆದ್ದು ಈ ಗ್ವಂತನಮೋವನ್ನು ಪ್ರೀತಿಸುತ್ತದೋ ಅದೇ ಕ್ಯೂಬಾಗೆ ಮಗ್ಗುಲ ಮುಳ್ಳಾಗಿ ಈ ಗ್ವಂತಮೋದ ಕಡಲ ತೀರದಲ್ಲಿ ಅಮೇರಿಕಾದ ನೌಕಾನೆಲೆ ಇದೆ.

ಗ್ವಂತನಮೇರ ಈಗ ಕ್ಯೂಬಾದ ಕಷ್ಟದ ದಿನಗಳಲ್ಲಿ ಸೌಹಾರ್ದ ತೋರಿಸುತ್ತಿರುವ ಬೇರೆ ದೇಶಗಳ ಸಭೆಗಳಲ್ಲೂ ಕೇಳಿಬರುವ ಪ್ರೀತಿಯ ಹಾಡು. ಈ ಹಾಡು ಹುಟ್ಟಿದ್ದು ಎರಡೇ ಸಾಲುಗಳಾಗಿ. 'ನಾನು ತಾಳೆ ಬೆಳೆಯುವ ನಾಡಿನ ಒಳ್ಳೆಯ ಹುಡುಗ' ಎಂಬ ಎರಡೇ ಸಾಲುಗಳನ್ನು ಕ್ಯೂಬನ್ನರು ಹಲವಾರು ವರ್ಷ ಚಪ್ಪರಿಸಿದರು. ನಂತರ ಅದಕ್ಕೆ ಎರಡೆರಡೇ ಸಾಲುಗಳು ಸೇರುತ್ತಾ ಹೋಗಿ ಈಗಿನ ಗ್ವಂತನಮೇರ ಮೈದಾಳಿದೆ.

೧೯೨೮ರಲ್ಲಿ ಜೊಸೇಟೋ ಫರ್ನಾಂಡಿಸ್ ಈ ಸೊಲ್ಲು ಹುಟ್ಟುಹಾಕಿದ. ೧೯೪೮ರಿಂದ ಸತತವಾಗಿ ೧೨ ವರ್ಷಗಳ ಕಾಲ ಈ ಹಾಡು ರೇಡಿಯೋದಲ್ಲಿ ಪ್ರಸಾರವಾಯಿತು. ೧೯೫೦ರಲ್ಲಿ ಈ ಹಾಡಿಗೆ ರೆಕ್ಕೆ ಬಂತು. ಅಮೇರಿಕಾದಲ್ಲಿ ಜರಗಿದ ಗೋಷ್ಠಿಯೊಂದರಲ್ಲಿ ಹೆಕ್ಕರ್ ಆ್ಯಂಗುಲೋ ಈ ಹಾಡನ್ನು ಹಾಡಿದರು. ಅದೇ ಕೂಟದಲ್ಲಿ ಜಗತ್ತಿನ ಹೋರಾಟದ ಹಾಡುಗಳಿಗೆ ಮಿಂಚಿನ ಹೊಳಪು ನೀಡಿದ, 'ವಿ ಶಲ್ ಓವರ್‌ಕಮ್' ಹಾಡನ್ನು ಜಗತ್ತಿನ ಗೀತೆಯಾಗಿಸಿದ ಪೀಟ್ ಸೀಜರ್ ಇದ್ದರು. ಹಾಡುಗಾರನ ಎದೆಬಟ್ಟಲಿನಲ್ಲಿ ಗ್ವಂತನಮೇರಾ ಇಳಿಯಿತು. ನಂತರ ಅದಕ್ಕೆ ದಿಗ್ಬಂಧನ ಹಾಕುವವರೇ ಇಲ್ಲವಾದರು. ೧೯೬೩ರಲ್ಲಿ ಕ್ಯೂಬಾ ಕ್ರಾಂತಿಯ ಮಹತ್ವವನ್ನು ಸಾರಿ ಹೇಳಲು ಸೇರಿದ್ದ ಸಭೆಯಲ್ಲಿ ಪೀಟ್ ಸೀಜರ್‌ರವರ ಕಂಚಿನ ಕಂಠ ಗ್ವಂತನಮೋವನ್ನು ಹಾಡಿತು. ಹಾಡು ಎಲ್ಲೆಗಳನ್ನು ಮೀರಿತು.

ನಾನೊಬ್ಬ ತಾಳೆ ಬೆಳೆಯುವ ನಾಡಿನ
ಒಳ್ಳೆಯ ಹುಡುಗ
ನಾನು ಸಾವನ್ನಪ್ಪುವ ಮುನ್ನ
ಈ ಹಾಡನ್ನು ಈ ದೇಹದಿಂದ
ಹೊರ ಚೆಲ್ಲಬೇಕೆಂದಿದ್ದೇನೆ
ನಾನು ತಾಳೆ ಬೆಳೆಯುವ ನಾಡಿನ
ಒಳ್ಳೆಯ ಹುಡುಗ

ನನ್ನ ಹಾಡು ಹಸಿರಿನಂತೆ ಸ್ವಚ್ಛ
ನನ್ನ ಹಾಡು ಪರ್ವತಗಳಲ್ಲಿ
ಅಡಗಿಕೊಳ್ಳಲು ಬಯಸುವ
ಗಾಯಗೊಂಡ ಯೋಧ

ನಾನೊಬ್ಬ ತಾಳೆ ಬೆಳೆಯುವ ನಾಡಿನ
ಒಳ್ಳೆಯ ಹುಡುಗ
ಈ ಜಗತ್ತಿನ ಬಡವರೊಂದಿಗೆ
ನಡೆದಾಡಲು ಬಯಸುವವ
ನನಗೆ ಈ ಕಡಲಿಗಿಂತಲೂ
ಸಿಯಾರಾದ ಕಣಿವೆಗಳೇ ಇಷ್ಟ

ನಾನೊಬ್ಬ ತಾಳೆ ಬೆಳೆಯುವ ನಾಡಿನ
ಒಳ್ಳೆಯ ಹುಡುಗ

ತಾಳೆ ಕ್ಯೂಬನ್ನರ ಹೃದಯದಲ್ಲಿ ಆಳವಾಗಿ ಬೇರುಬಿಟ್ಟಿರುವ ಮರ.

ತಾಳೆ ಬೆಟ್ಟ, ಗುಡ್ಡ, ಕಾಡು, ಕಣಿವೆ ಎಲ್ಲೆಂದರಲ್ಲಿ ಬೆಳೆಯುವ ಮರ. ಯಾವ ಪರಿಸ್ಥಿತಿಯಲ್ಲಿಯೂ ಆಕಾಶ ಚುಂಬಿಸುವ ಆತ್ಮವಿಶ್ವಾಸದಿಂದ ಎದ್ದು ನಿಲ್ಲುವ ಮರ, ನೂರಾರು ರೀತಿಯ ಪಕ್ಷಿಗಳನ್ನು ಆಕರ್ಷಿಸುವ ಹಣ್ಣುಗಳನ್ನು ನೀಡುವ ಮರ. ಈ ಎಲ್ಲಾ ಕಾರಣಕ್ಕಾಗಿಯೇ ತಾಳೆ ಕ್ಯೂಬಾದ ರಾಷ್ಟ್ರೀಯ ಮರ ಎಂಬ ಗೌರವಕ್ಕೆ ಪಾತ್ರವಾಗಿದೆ. ಇಂತಹ ತಾಳೆಯ ಬೋಗುಣಿಯಿಂದ ಬಂದ ಈ ಹುಡುಗ ಕ್ಯೂಬನ್ನರ ಎದೆ ತಂತಿಗಳನ್ನು ಮೀಟದಿರಲು ಹೇಗೆ ಸಾಧ್ಯ.

ಇಂತಹ ತಾಳೆಯ ನಡುವೆಯೇ ಒಂದು ಮುಳ್ಳಾಗಿ ನಿಂತಿದೆ ಅಮೇರಿಕಾದ ನೌಕಾ ನೆಲೆ.

ಕ್ಯೂಬಾ ಅಮೇರಿಕಾದ ಮೂಗಿನ ಕೆಳಗೆ ಕೇವಲ ೯೦ ಮೈಲು ದೂರದಲ್ಲಿ ಸೆಡ್ಡು ಹೊಡೆದು ನಿಂತಿದೆ ಎಂದು ಜಗತ್ತು ಬಣ್ಣಿಸುತ್ತಿದ್ದಾಗ ಫಿಡೆಲ್ ಕ್ಯಾಸ್ಟ್ರೋ 'ಕೇವಲ ೯೦ ಮೈಲಿ ಮಾತ್ರವಲ್ಲ ಅಮೇರಿಕಾ ಕೆಲವೇ ಇಂಚುಗಳ ದೂರದಲ್ಲಿದೆ' ಎಂದು ಗ್ವಂತನಮೋದಲ್ಲಿ ಬೇರುಬಿಟ್ಟಿರುವ ನೌಕಾಪಡೆಯತ್ತ ಬೊಟ್ಟು ಮಾಡಿ ತೋರಿಸಿದರು. ಈ ಸಾಮ್ರಾಜ್ಯಶಾಹಿ, ಕ್ಯೂಬಾದ ಹತ್ತಿರ ಮಾತ್ರ ಅಲ್ಲ ಕ್ಯೂಬಾದ ಒಳಗೂ ಬೀಡುಬಿಟ್ಟಿದೆ. ಇದು ನಮಗೆ ಹತ್ತಿರ ಮಾತ್ರ ಅಲ್ಲ ದೇಶದೊಳಗೆ ಇರುವ ಬೆರಳೆಣಿಕೆಯ ಜನರಲ್ಲಿ ತನ್ನ ಆಲೋಚನೆ, ತನ್ನ ನೀತಿಯನ್ನು ಬಿತ್ತಿ ನಮ್ಮೊಳಗೇ ಇದೆ ಎಂದರು.

ನಾಲ್ಕು ಶತಮಾನಗಳ ಕಾಲ ಕ್ಯೂಬಾವನ್ನು ಕಿತ್ತು ತಿಂದ ಸ್ಪೇನ್‌ನ ವಿರುದ್ಧ ಸಾವಿರಾರು ಜನ ತಮ್ಮ ಪ್ರಾಣ ಕೊಟ್ಟು ಇನ್ನೇನು ಸ್ಪೇನ್‌ನಿಂದ ವಿಜಯದ ಬಾವುಟವನ್ನು ಕಿತ್ತುಕೊಂಡೆವು ಎನ್ನುವಾಗ ದಿಢೀರನೆ ಅಮೇರಿಕಾ ಸ್ಪೇನ್ ಮೇಲೆ ದಾಳಿ ಮಾಡಿತು. ಯುದ್ಧದಲ್ಲಿ ಸೆಣಸಿ ಸ್ಪೇನ್‌ನನ್ನು ಮಣಿಸಿದ ಅಮೇರಿಕಾ ಕ್ಯೂಬಾವನ್ನು ಕಾಪಾಡಲು ಪ್ಯಾರಿಸ್‌ನಲ್ಲಿ ಒಪ್ಪಂದ ಮಾಡಿಕೊಂಡಿತು. ಕ್ಯೂಬಾವನ್ನು ಕಾಪಾಡಲು ಮಾಡಿಕೊಂಡ ಒಪ್ಪಂದದಲ್ಲಿ ಕ್ಯೂಬಾಗೆ ಯಾವ ಹಕ್ಕೂ ಇರಲಿಲ್ಲ. ಕೆಲವೇ ಕ್ಷಣಗಳಲ್ಲಿ ಕ್ಯೂಬಾವನ್ನು



ವಸಾಹತುಶಾಹಿಗಳಿಂದ ಮುಕ್ತಗೊಳಿಸುವ ಕನಸು ಕಂಡಿದ್ದ ಕ್ಯೂಬನ್ನರ ಮೇಲೆ 'ಕ್ಯೂಬನ್ನರ ಹಿತಾಸಕ್ತಿಗಾಗಿ' ಸ್ಪೇನ್ - ಅಮೇರಿಕಾ ಮಾಡಿಕೊಂಡ ಈ ಒಪ್ಪಂದ ಎರಗಿ ಬಂತು.

ಈ ಒಪ್ಪಂದದ ಪ್ರಕಾರ ಸ್ಪೇನ್ ಕ್ಯೂಬಾದ ಮೇಲಿನ ಎಲ್ಲಾ ಹಕ್ಕುಗಳನ್ನೂ ಕಳೆದುಕೊಂಡಿತು. ಅಲ್ಲಿಂದ ಕಾಲ್ತೆಗೆಯಿತು. 'ತಾತ್ಕಾಲಿಕವಾಗಿ ಕ್ಯೂಬಾವನ್ನು ಸಹಜ ಸ್ಥಿತಿಗೆ ತರಲು' ಹೇಳದೆ ಕೇಳದೇ ಬಂದು ಕುಳಿತ ಅಮೇರಿಕಾ ಕ್ಯೂಬಾವನ್ನು ಹೊಸಕಲು ಆರಂಭಿಸಿತು. ಪ್ಯಾರಿಸ್‌ನಲ್ಲಿ ಮಾಡಿಕೊಂಡ ಪ್ಲಾಟ್ ಒಪ್ಪಂದವನ್ನು ಮತ್ತೆ ತಿದ್ದುಪಡಿ ಮಾಡಿ 'ಕ್ಯೂಬಾದ ಸ್ವಾತಂತ್ರ್ಯವನ್ನು ಕಾಪಾಡಲು ಹಾಗೂ ಅಲ್ಲಿನ ಜನರನ್ನು ರಕ್ಷಿಸಲು ಹಾಗೂ ತನ್ನ ರಕ್ಷಣೆಗೆ ಅಮೇರಿಕಾಗೆ ಅನುಕೂಲ ಮಾಡಿಕೊಡಲು ಕ್ಯೂಬಾ ಸರ್ಕಾರ ಅಮೇರಿಕಾದ ನೌಕಾನೆಲೆಗೆ ಬೇಕಾದ ಜಾಗವನ್ನು ಮಾರಾಟ ಇಲ್ಲವೇ ಲೀಸ್ ಕೊಡಬೇಕು' ಎಂದು ಒಪ್ಪಂದ ಎಂಬ 'ಹುಕುಂ' ಜಾರಿ ಮಾಡಿಕೊಟ್ಟಿತು. ಕ್ಯೂಬನ್ನರು ಪ್ರತಿಭಟಿಸಿದಾಗ 'ಈ ಒಪ್ಪಂದ ಕ್ಯೂಬಾದ ಸ್ವಾತಂತ್ರ್ಯವನ್ನು ಕಡಿಮೆ ಮಾಡುವುದಿಲ್ಲ. ಕ್ಯೂಬಾ ತನ್ನ ಧ್ವಜದಡಿ ತಾನು ಸ್ವತಂತ್ರವಾಗಿಯೇ ಇರುತ್ತದೆ. ಆದರೆ ತೀರಾ ಅನಿವಾರ್ಯವಾದ ಸಂದರ್ಭದಲ್ಲಿ ಮಾತ್ರ ಅಮೇರಿಕಾ ಕ್ಯೂಬಾದ ಸ್ವಾತಂತ್ರ್ಯವನ್ನು ರಕ್ಷಿಸಲು ಅಲ್ಲಿಗೆ ಬರುತ್ತದೆ. ದೇವರು ಅಂತಹ ಅನಿವಾರ್ಯ ಸ್ಥಿತಿಯನ್ನು ತರದಿರಲಿ' ಎಂದು ಉತ್ತರ ಬಂತು.

ಕೇವಲ ಐದು ವರ್ಷಗಳಲ್ಲಿ, ೧೯೦೮ರಲ್ಲಿ ಅಮೇರಿಕಾದ ಯುದ್ಧನೌಕೆಗಳೂ, ೫೦೦ ಜಲಾಂತರ್ಗಾಮಿ ನೌಕೆಗಳು ಗ್ವಂತನಮೋದತ್ತ ಹರಿದುಬಂದವು. 'ಅಗತ್ಯ ಬಿದ್ದಾಗ ಅಷ್ಟು ದೂರದಿಂದ ಬರುವ ಬದಲು ಕಣ್ಣಳತೆಯಲ್ಲೇ ಇದ್ದರೆ ಒಳ್ಳೆಯದು' ಎಂದು ಸಿಟ್ಟಾದ ಕ್ಯೂಬನ್ನರಿಗೆ ಅಮೇರಿಕಾ ಉತ್ತರಿಸಿತು. ಮೂತಿ ತೋರಿಸಿದ ಒಂಟೆ ನಂತರ ಗುಡಾರವನ್ನೇ ಆವರಿಸಿಕೊಂಡಿತು. ಮೊದಲು ನಿಮಗಾಗಿ ಇರಲಿ, ನಂತರ ಪಕ್ಕದಲ್ಲೇ ಇರಲಿ, ಸುಮ್ಮನೆ ಇರಲಿ ಎಂದು ಬಂದ ಅಮೇರಿಕಾದ ಪಡೆಗಳು ಕ್ಯೂಬಾದ ಒಳಗೆ ನಡೆಯುವ ಮುಷ್ಕರವನ್ನು ಮುರಿಯುವ, ಸರ್ಕಾರಗಳನ್ನು ಬೆದರಿಸುವ ಉರುಳಿಸುವ ಕೇಂದ್ರವಾಗಿ ಹೋಯಿತು. ಗ್ವಂತನಮೋ ಮಗ್ಗುಲಿನಿಂದ 'ಯುದ್ಧನೌಕೆ ರಾಜಕಾರಣ' ಆರಂಭವಾಯಿತು.

ಅಂದು ಕ್ಯೂಬಾದತ್ತ ಮುಖಮಾಡಿ ನಿಂತ ಈ ಯುದ್ಧನೌಕೆಗಳು ಈಗಲೂ ಹಾಗೆ ಇವೆ. ಗ್ವಂತನಮೋದ ಈ ನೌಕಾನೆಲೆ ಅಂದಿನಿಂದ ಇಂದಿನವರೆಗೆ ಕ್ಯೂಬಾದ ಫಿಡೆಲ್ ಕ್ಯಾಸ್ಟ್ರೋ ಸರ್ಕಾರದ ನಿದ್ದೆಗೆಡಿಸುತ್ತಲೇ ಬಂದಿದೆ.

ಒಂದು ಎಕರೆಗೆ ಒಂದು ಡಾಲರ್‌ನಂತೆ ನೀಡಿ ಕ್ಯೂಬಾದೊಳಗೆ ನುಗ್ಗಿದ ನೌಕಾನೆಲೆ ಈಗ ಕ್ಯೂಬಾದಲ್ಲಿ ದಂಗೆಕೋರರನ್ನು ಹುಡುಕುವ, ದೇಶದ ಮೇಲೆ ದಾಳಿ ಮಾಡುವವರನ್ನು ತರಬೇತಿಗೊಳಿಸುವ ಕೇಂದ್ರವಾಗಿದೆ. ಈಗ ಈ ಕೇಂದ್ರದಲ್ಲಿ ಏಳು ಸಾವಿರ ಅಮೇರಿಕನ್ನರಿದ್ದಾರೆ. ಇಡೀ ಕ್ಯೂಬಾ ಆಹಾರ ಇಲ್ಲದೆ ನರಳುತ್ತಿರುವಾಗ ಗ್ವಂತನಮೋದ ಈ ನೌಕಾನೆಲೆಗೆ ತಿಂಗಳಿಗೆ ಎರಡು ಬಾರಿ ಅಮೇರಿಕಾದ ಸೂಪರ್ ಮಾರ್ಕೆಟ್‌ಗಳಿಂದ ಬೇಕಾದ್ದೆಲ್ಲಾ ಹಾರಿ ಬರುತ್ತಿದೆ. ಕುಡಿಯುವ ನೀರಿಗಾಗಿ ಶುದ್ಧೀಕರಿಸುವ ಕೇಂದ್ರಗಳು ತಲೆ ಎತ್ತಿ ನಿಂತಿವೆ.

೧೯೭೬ರಲ್ಲಿ ಕ್ಯೂಬಾ ಸರ್ಕಾರ ಕ್ರಾಂತಿಗೂ ಮುನ್ನ ಸರ್ಕಾರಗಳು ಮಾಡಿಕೊಂಡ ಎಲ್ಲಾ ಒಪ್ಪಂದಗಳನ್ನೂ, ಕ್ಯೂಬಾದ ಸ್ವಾತಂತ್ರ್ಯವನ್ನು ಹತ್ತಿಕ್ಕುವ, ಅಸಮಾನವಾಗಿ ಮಾಡಿಕೊಂಡ ತೀರ್ಮಾನಗಳನ್ನು ತಿರಸ್ಕರಿಸುವ ಪ್ರಸ್ತಾಪವನ್ನು ಜನರ ಮುಂದಿಟ್ಟಿತು. ಈ ಸಾರ್ವಜನಿಕ ಅಭಿಪ್ರಾಯ ಸಂಗ್ರಹದಲ್ಲಿ ಭಾಗವಹಿಸಿದ ಶೇ. ೯೭.೭ ಮಂದಿ ಈ ಪ್ರಸ್ತಾಪವನ್ನು ಬೆಂಬಲಿಸಿದರು.

ಆದರೂ ಅಮೇರಿಕಾ ಗ್ವಾಂತನಮೋದಿಂದ ಕಾಲ್ತೆಗೆಯಲಿಲ್ಲ. ೧೯೦೩ರಲ್ಲಿ ಅನಿರ್ದಿಷ್ಟ ಕಾಲದವರೆಗೆ, ಒಂದು ಎಕರೆಗೆ ಒಂದು ಡಾಲರ್‌ನಂತೆ ಅಮೇರಿಕಾ ಸರ್ಕಾರ ಮಾಡಿಕೊಂಡ 'ಒಪ್ಪಂದ'ದಂತೆ ಉದಾರವಾಗಿ ಈಗಲೂ ೪,೦೮೫ ಡಾಲರ್ ವಾರ್ಷಿಕ ಬಾಡಿಗೆಯನ್ನು ಚೆಕ್ ಮೂಲಕ ನೀಡುತ್ತಿದೆ.

ಆದರೆ ಈ ಚೆಕ್‌ಗಳು ಕ್ಯೂಬಾ ಸರ್ಕಾರದ ಬಳಿ ಕೊಳೆಯುತ್ತಾ ಬಿದ್ದಿವೆ. ತಾಳೆ ಮರದ ನಾಡಿನ ಹುಡುಗನ ಎದೆಯಲ್ಲಿ ಮಾಯದ ಗಾಯವಾಗಿದೆ.





## ಮೂಕವಾಗಿದೆ ಮಾತು

ಫಿಫ್ತ್ ಅವಿನ್ಯೂ -

ಕ್ಯೂಬಾದ ನನ್ನ ಮನೆಯಿಂದ ಕೆರೆಬಿಯನ್ ಕಡಲ ತೀರಕ್ಕೆ ಹೆಜ್ಜೆ ಹಾಕುವಾಗ ಅಚಾನಕ್ಕಾಗಿ ಕಂಡ ರಸ್ತೆ. ದಶಕಗಳ ಕಾಲ ಕ್ಯೂಬಾದಲ್ಲಿ ಸಂತಸದ ಹೊನಲು ಹರಿಯಲು ಕಾರಣವಾದ ಈ ರಸ್ತೆ ಈಗ ಗತಕಾಲಕ್ಕೆ ಮೌನಸಾಕ್ಷಿ. ಫಿಫ್ತ್ ಅವಿನ್ಯೂನಲ್ಲಿ ಎತ್ತರಕ್ಕೆ ನಿಂತಿದ್ದ ಕಟ್ಟಡವನ್ನು ನೋಡಿದಾಗ ಡಾ. ಗುಸ್ತೋ ಹೇಳಿದ್ದು ತಲೆಯಲ್ಲಿ ಗುಂಯೆನ್ನತೊಡಗಿತು.

ಬೆಂಕಿಪೊಟ್ಟಣಕ್ಕೆ, ಅಡುಗೆ ಎಣ್ಣೆಗೆ, ಬನ್‌ಗೆ, ಮಕ್ಕಳ ಹಾಲಿಗಾಗಿ ದಿನಗಟ್ಟಲೆ ರೇಷನ್ ಅಂಗಡಿ ಸುತ್ತಬೇಕಾಗಿರುವ ಕ್ಯೂಬಾದ ಜನರ ನಿಟ್ಟುಸಿರಿಗೆ ಗುಸ್ತೋ ಮಾತಾಗಿದ್ದರು. 'ಜೀವನ ಈಗ ತುಂಬಾ ಕಷ್ಟ ವಾಗಿದೆ. ಈ ಹಿಂದೆ ಹೀಗಿರಲಿಲ್ಲ, ರಜೆ ಬಂದರೆ ಸಾಕು ಹೊರಗೆ ಹೋಗಿ ಊಟ ಮಾಡಿ ಮೋಜು ಮಾಡುತ್ತಿದ್ದೆವು. ಸೋವಿಯತ್ ದೇಶ ಪತನವಾದದ್ದೇ ಜೀವನ ಈಗ ತುಂಬಾ ಕಷ್ಟವಾಗಿದೆ.'

ಒಂದು ಕಾಲಕ್ಕೆ ಸೋವಿಯತ್ ರಾಯಭಾರಿ ಕಚೇರಿಯಾಗಿದ್ದ ಈ ಕಟ್ಟಡ ಈಗ ರಷ್ಯಾ ರಾಯಭಾರಿ ಕಚೇರಿಯಾಗಿ ಅದೇ ಫಿಫ್ತ್ ಅವಿನ್ಯೂನಲ್ಲಿ ಇದೆ. ಒಂದು ಕಾಲಕ್ಕೆ ಕ್ಯೂಬಾದಲ್ಲಿ ಹಾಡುಗಳು ಹೊಮ್ಮಲು ಕಾರಣವಾದ, ಕ್ಯೂಬನ್ನರು ಸಾಮ್ರಾಜ್ಯಶಾಹಿಯನ್ನು ಎದುರಿಸಲು ಸಾಕಷ್ಟು ನೈತಿಕ ಸ್ಥೈರ್ಯ ನೀಡಿದ್ದ ಸೋವಿಯತ್ ದೇಶ ಈಗ ಮೌನವನ್ನು ಹೊದ್ದು ನಿಂತಿದೆ.

ಕ್ಯೂಬಾದಲ್ಲಿ ಹೊಸ ಸೂರ್ಯ ತನ್ನ ಬರವನ್ನು ಘೋಷಿಸುವಾಗ ಕ್ಯೂಬಾದ ಜೊತೆ ನಿಂತ ಎಲ್ಲರಿಗೂ ಅದು ಬೆಳಕನ್ನು ಹಂಚುತ್ತದೆ ಎಂದಿದ್ದರು ಫಿಡೆಲ್ ಕ್ಯಾಸ್ಟ್ರೋ. ಸೋವಿಯತ್ ದೇಶ ಕ್ಯೂಬಾಗೆ ಹೀಗೆ ಆಪತ್ಕಾಲಕ್ಕಾದ ನೆಂಟ. ೧೯೬೦ರಲ್ಲಿ ಸೋವಿಯತ್ ಒಕ್ಕೂಟದ ಪ್ರಥಮ ಉಪಮಂತ್ರಿ ಅನಸ್ತಾಸ್ ಮಿಕೋಯನ್ ಕ್ಯೂಬಾಕ್ಕೆ ಕಾಲಿಟ್ಟರು. ಅಂದಿನಿಂದ ಸೋವಿಯತ್ ದೇಶದ ಪತನವಾಗುವವರೆಗೆ ಕ್ಯೂಬಾ - ಸೋವಿಯತ್ ಸಂಬಂಧ ಬಲವಾಗಿ ಬೆಳೆದುನಿಂತಿತು. ಜಗತ್ತಿನ ಮತ್ತೊಂದು ಭಾಗ ಕಮ್ಯುನಿಸಂನ್ನು ಅಪ್ಪಿಕೊಂಡಿತು.

ಕ್ರಾಂತಿಯ ನಂತರ ಕ್ಯೂಬಾ ಸರ್ಕಾರ, ಬದುಕು ಎಂದರೇನು ಎಂಬುದೇ ಅರಿಯದ ತನ್ನ ದೇಶದ ಜನರಿಗೆ ಬದುಕು ನೀಡುವ ದೃಢ ಸಂಕಲ್ಪ ಮಾಡಿತು. ಪ್ರತಿಯೊಬ್ಬರ ಹಕ್ಕನ್ನು ಗೌರವಿಸಿ ಅವರು ದೇಶದ ಅಮೂಲ್ಯ ಆಸ್ತಿಯಾಗುವ ಕನಸು ಕಂಡಿತು. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಕೃಷಿಭೂಮಿಯ ಹಂಚಿಕೆ. ಪ್ಲಾಟ್ ಒಪ್ಪಂದದ ಮೂಲಕ ಹಿಂಬಾಗಿಲಿನಿಂದ ಪ್ರವೇಶಿಸಿದ ಅಮೇರಿಕಾದ ಕಣ್ಣು ಕೆಂಪಗಾಯಿತು. ಕ್ಯೂಬಾದ ತುಂಬಾ ಹರಡಿಕೊಂಡಿದ್ದ ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿಗಳ ಎದುರಿಗೆ ಬದಲಾವಣೆಯ ಗಾಳಿ ಬೀಸಲು ಆರಂಭಿಸಿತು. ಕ್ಯೂಬಾವನ್ನು ತನ್ನ ಹಿತ್ತಲ ತೋಟ ಎಂದೇ ಭಾವಿಸಿದ್ದ ಅಮೇರಿಕಾದ ಸರ್ಕಾರಕ್ಕೆ ತನ್ನ ತೋಟದಲ್ಲಿ ಮತ್ತಾರೋ ನುಗ್ಗಿದ ಹಾಗಾಯಿತು. ಕೃಷಿ ಭೂಮಿ ಪಡೆದ ಪ್ರತಿಯೊಬ್ಬನೂ ತನಗೆ ಬೇಕಾದ್ದು ಬೆಳೆದರೆ, ಹವಾನಾದಲ್ಲಿರುವ ಅಮೇರಿಕಾ ಯಜಮಾನರ ಮುಂದೆ ತಲೆ ಎತ್ತುವಂತಾದರೆ ಎಂಬ ಭಯ ಆರಂಭವಾಯಿತು. ಕೃಷಿ ಭೂಮಿ ಹಂಚುವುದನ್ನು ನಿಲ್ಲಿಸಲು ಕ್ಯಾಸ್ಟ್ರೋಗೆ ತಾಕೀತು ಮಾಡಿತು. ಆದರೆ ಬದಲಾವಣೆಯ ಗಾಳಿ ಬೀಸುವುದು ನಿಲ್ಲಲಿಲ್ಲ. ಅಮೇರಿಕಾ ಸೆಣಸಾಟಕ್ಕೆ ಸಜ್ಜಾಯಿತು. ಸಕ್ಕರೆಯನ್ನು ಅಸ್ತ್ರವಾಗಿ ಬಳಸಿತು.

೧೯೫೯ರ ಅಕ್ಟೋಬರ್‌ನಲ್ಲಿ ಮೊತ್ತಮೊದಲ ಬಾರಿಗೆ ಕ್ಯೂಬಾ ಅಮೇರಿಕನ್ನರ ಒಡೆತನಕ್ಕೆ ಸೇರಿದ ಎರಡು ಆಕಳ ಜಮೀನನ್ನು ರಾಷ್ಟ್ರೀಕರಿಸಿತು. ಓರಿಯಂಟ್ ಪ್ರಾಂತ್ಯದತ್ತ ನಡೆದ ಕ್ಯಾಸ್ಟ್ರೋ ಅಮೇರಿಕಾದ ಬಹುರಾಷ್ಟ್ರೀಯ ಕಂಪನಿ ಪಿಂಗರೀ ರ್‍ಯಾಂಚ್‌ನ ೪೬ ಸಾವಿರ ಎಕರೆ ಹಾಗೂ ಕಮಾಗ್ವೆಯ ಎಲ್ ಇಂಡಿಯೋ ರ್‍ಯಾಂಚ್‌ನ ೨೧ ಸಾವಿರ ಎಕರೆ ಭೂಮಿಯನ್ನು ರಾಷ್ಟ್ರೀಕರಿಸಿದರು. ಹವಾನಾದಲ್ಲಿ ಹೆನೆಕ್ವೆನ್ ಫೈಬರ್ ಪ್ಲಾಂಟೇಶನ್‌ನ್ನು ಮುಟ್ಟುಗೋಲು ಹಾಕಿಕೊಂಡರು. ಜನರಿಗಾಗಿ ಭೂಮಿ ಹಂಚುವ, ಕ್ಯೂಬಾದ ಒಂದೊಂದೇ ಹೆಜ್ಜೆ ಅಮೇರಿಕಾದ ಎದೆಯಲ್ಲಿ ಭೀತಿ ಹುಟ್ಟುಹಾಕಿತು. ಕ್ಯೂಬಾದಿಂದ ಕೊಳ್ಳುತ್ತಿದ್ದ ಸಕ್ಕರೆಯ ಪ್ರಮಾಣವನ್ನು ಕಡಿಮೆ ಮಾಡಿ ಎಂದು ಆದೇಶಿಸಿತು.



'ಜಗತ್ತಿನ ಸಕ್ಕರೆಯ ಬಟ್ಟಲು' ಎಂದು ಹೆಸರಾದ, ತನ್ನ ಕಾಲ ಮೇಲೆ ನಿಲ್ಲಲು ಕಬ್ಬಿನ ಗದ್ದೆಗಳನ್ನು ಬಲವಾಗಿ ನಂಬಿದ್ದ ಕ್ಯೂಬಾ ಅಮೇರಿಕಾ ಬೀಸಿದ ದಂಡದಿಂದ ತತ್ತರಿಸಿತು. ಕ್ಯೂಬಾದಿಂದ ಸಕ್ಕರೆ ತರಿಸಿಕೊಳ್ಳುವುದನ್ನು ನಿಲ್ಲಿಸಿದ ಅಮೇರಿಕಾ ಲ್ಯಾಟಿನ್ ಅಮೇರಿಕಾದ ಇತರೆ ದೇಶಗಳಿಂದ ಸಕ್ಕರೆ ತನ್ನೆಡೆಗೆ ಬರುವಂತೆ ನೋಡಿಕೊಂಡಿತು. ಇದೇ ಸಮಯಕ್ಕೆ ಸರಿಯಾಗಿ ಕ್ಯೂಬಾದಲ್ಲಿ ಸಕ್ಕರೆ ಉತ್ಪಾದನೆಯೂ ಅನಿರೀಕ್ಷಿತವಾಗಿ ಹೆಚ್ಚಾಯಿತು. ದೇಶದ ತುಂಬಾ ಸಕ್ಕರೆಯ ಹೊಳೆ, ಆದರೆ ಕೊಳ್ಳುವವರಿಲ್ಲ. ಕ್ಯೂಬಾ ಕವಲು ದಾರಿಯಲ್ಲಿ ನಿಂತಿತು.

ಈ ಸಮಯಕ್ಕೆ ಸರಿಯಾಗಿ ಅಮೇರಿಕಾ ಮತ್ತು ಮೆಕ್ಸಿಕೋದಲ್ಲಿ ಸೋವಿಯತ್ ದೇಶದ ಕೈಗಾರಿಕಾ ಪ್ರದರ್ಶನ ಮುಗಿಸಿ ಮಿಕೋಯಾನ್ ಕ್ಯೂಬಾಗೆ ಕಾಲಿಟ್ಟರು. ಮಾರಾಟ ಪ್ರದರ್ಶನ ಅಚಾನಕ್ಕಾಗಿ ಕ್ಯೂಬಾಗೆ ಹೊಸ ದಾರಿಯನ್ನು ತೋರಿಸಿತು. ಕ್ಯೂಬಾದಲ್ಲಿ ಸಕ್ಕರೆಯ ಹೊಳೆ ಹರಿದ ಅದೇ ಕಾಲಕ್ಕೆ ಸೋವಿಯತ್ ಬರದಿಂದ ತತ್ತರಿಸಿತ್ತು. ಕ್ಯೂಬಾ ಹಾಗೂ ಸೋವಿಯತ್ ದೇಶದ ನಡುವೆ ಸಕ್ಕರೆಯ ಒಪ್ಪಂದವಾಯಿತು. ಸೋವಿಯತ್ ದೇಶ ತಾನು ಪಡೆದ ಸಕ್ಕರೆಗೆ ಪ್ರತಿಯಾಗಿ ಶೇ. ೮೦ ಭಾಗ ಸರಕಿನ ಮೂಲಕ ಶೇ. ೨೦ನ್ನು ಡಾಲರ್ ಮೂಲಕ ಹಣ ಪಾವತಿ ಮಾಡುವ ಒಪ್ಪಂದ ಮಾಡಿಕೊಂಡಿತು.

ಸೋವಿಯತ್ ಹಾಗೂ ಕ್ಯೂಬಾ ನಡುವೆ ಸಕ್ಕರೆ ಒಪ್ಪಂದ ಆಗಿದ್ದೇ ತಡ ಹವಾನಾದಲ್ಲಿ ಬಾಂಬ್‌ಗಳು ಸ್ಫೋಟಗೊಂಡವು. ಅಮೇರಿಕಾದಿಂದ ಶಸ್ತ್ರಾಸ್ತ್ರಗಳನ್ನು ಹೊತ್ತ ವಿಮಾನಗಳು ಹವಾನಾದ ಮೇಲೆ ಹಾರಿಬಂದವು. ಅಮೇರಿಕಾ ಹಾಗೂ ಕ್ಯೂಬಾದ ನಡುವಿನ ಸಂಬಂಧಗಳನ್ನು ಸುಧಾರಿಸಲು ಮಧ್ಯವರ್ತಿಯಾಗಿ ಬಂದ ಮೆಕ್ಸಿಕೋವನ್ನು ಅಮೇರಿಕಾ ತಳ್ಳಿಹಾಕಿತು.

ಕ್ಯಾಸ್ಟ್ರೋ ಕ್ರಾಂತಿಯ ನಂತರ ಜನರಿಗಾಗಿ ಕೈಗೊಳ್ಳುತ್ತಿದ್ದ ಒಂದೊಂದು ಕ್ರಮ ಅಮೇರಿಕಾದ ಮೂಗಿಗೆ, ತನ್ನ ಬುಡದಲ್ಲಿಯೇ ಒಮ್ಮೆ ಚಿವುಟಿದರೆ ಸಾಕು ಇಲ್ಲವಾಗಬಹುದಾದ ದೇಶವೊಂದು ಹೊಸ ಸಿದ್ಧಾಂತದತ್ತ ಹೊರಳುತ್ತಿದೆ ಎಂಬ ವಾಸನೆ ಬಡಿಯಿತು. ಈ ಸಮಯಕ್ಕೆ ಸರಿಯಾಗಿ ಸೋವಿಯತ್‌ನೊಡನೆ ಆದ ಒಪ್ಪಂದವನ್ನು ಅಮೇರಿಕಾ ತನ್ನ ಮೂಗಿನ ನೇರಕ್ಕೆ ಬಳಸಿಕೊಂಡಿತು. ಹೊಸ ಖಂಡದಲ್ಲಿ ಕಮ್ಯುನಿಸಂನ್ನು ಹರಡಲು ಪ್ರಯತ್ನಿಸಲಾಗುತ್ತಿದೆ ಎಂದು ಜಗತ್ತಿಗೆ ಚೀರಿ ಹೇಳಿತು. ಆದರೆ ಕ್ಯೂಬಾದ ಕ್ಯಾಸ್ಟ್ರೋ ಸರ್ಕಾರ ಸಕ್ಕರೆ ರಫ್ತಿನ ಒಪ್ಪಂದ ಮಾಡಿಕೊಳ್ಳುವುದಕ್ಕೆ ಮುನ್ನ ಅಮೇರಿಕಾದ ಕೈಗೊಂಬೆಯಾಗಿದ್ದ ಬ್ಯಾಟಿಸ್ಟಾ ಸರ್ಕಾರ ಸಹಾ ಸೋವಿಯತ್ ದೇಶಕ್ಕೆ ಸಕ್ಕರೆ ಕಳಿಸುತ್ತಿತ್ತು ಎಂಬ ಸಂಗತಿಯನ್ನು ಮುಚ್ಚಿಹಾಕಿತು.

ಜಗತ್ತಿನ ಪಶ್ಚಿಮದ ಭಾಗಕ್ಕೆ ಕಮ್ಯುನಿಸಂ ಹಾಗೂ ಅದರ ಜೊತೆಗಿನ ಎಲ್ಲಾ ಕರಾಳತೆಯನ್ನು ತರಲು ಕ್ಯೂಬಾ ಯತ್ನಿಸುತ್ತಿದೆ. ಕ್ಯೂಬಾದ ಮೂಲಕ ಈ ಭಾಗಕ್ಕೆ ನುಗ್ಗಲು ಕಮ್ಯುನಿಸ್ಟ್ ರಾಷ್ಟ್ರಗಳು ಪ್ರಯತ್ನಿಸುತ್ತಿವೆ ಎಂದೂ ಆರೋಪಿಸಲಾಯಿತು. ಅಮೇರಿಕಾದ ಅಧ್ಯಕ್ಷ ಐಸನ್ ಓವರ್ ಫಿಡಲ್‌ಕ್ಯಾಸ್ಟ್ರೋ ಸರ್ಕಾರದ ವಿರುದ್ಧ ಆರ್ಥಿಕ ಯುದ್ಧ ಆರಂಭಿಸಿದರು. ಕ್ಯೂಬಾದಿಂದ ಬರುತ್ತಿದ್ದ ೭ ಲಕ್ಷ ಟನ್‌ಗಳ

ಆಮದಿಗೆ ಕೊನೆ ಹಾಡಿದರು. ಸಕ್ಕರೆ ಎಂಬುದು ಕೇವಲ ಮಾರುವ ಹಾಗೂ ಕೊಳ್ಳುವ ಸರಕಲ್ಲ, ಅದು ಎರಡು ದೇಶಗಳ ನಡುವಿನ ರಾಯಭಾರಿ ಎಂದು ಪತ್ರಿಕೆಗಳು ಬರೆದವು.

ರಾಯಭಾರ ಕೊನೆಗೊಂಡಿತ್ತು. ಫಿಡೆಲ್ ಕ್ಯಾಸ್ಟ್ರೋ ಸಹಾ ಬಂದದ್ದನ್ನು ಎದುರಿಸಲು ಸಜ್ಜಾದರು. ಅಮೇರಿಕಾ ಸರ್ಕಾರ ನಿಲ್ಲಿಸಿದ ಒಂದು ಟನ್ ಸಕ್ಕರೆಗೆ ಪ್ರತಿಯಾಗಿ ಒಂದು ಸಕ್ಕರೆ ಕಾರ್ಖಾನೆಯನ್ನು ರಾಷ್ಟ್ರೀಕರಿಸುವುದಾಗಿ ಘೋಷಿಸಿದರು. ಸಕ್ಕರೆ ಕಾರ್ಖಾನೆಗಳು ಕ್ಯೂಬಾದ ತೆಕ್ಕೆಗೆ ಬಂದವು. ಅಮೇರಿಕಾ ನಿಲ್ಲಿಸಿದ ೭ ಲಕ್ಷ ಟನ್ ಸಕ್ಕರೆ ಆಮದಿಗೆ ಪ್ರತಿಯಾಗಿ ಸೋವಿಯತ್ ದೇಶ ಈ ಸಕ್ಕರೆ ಕೊಳ್ಳಲು ಮುಂದೆ ಬಂತು. ಇದರೊಂದಿಗೆ ಚೀನಾ ಸಹ ಮೊತ್ತಮೊದಲ ಬಾರಿಗೆ ಸಕ್ಕರೆ ಕೊಳ್ಳಲು ಮುಂದಾಯಿತು. ಸೋವಿಯತ್ ದೇಶ ಮತ್ತು ಚೀನಾದೊಡನೆ ಏರ್ಪಟ್ಟ ವ್ಯಾಪಾರ ಸಂಬಂಧದಿಂದಾಗಿ ಕ್ಯೂಬಾದ ನಾಯಕರು ಮೇಲಿಂದ ಮೇಲೆ ಆ ದೇಶಗಳಿಗೆ ಭೇಟಿ ನೀಡಿದಾಗ ಹೊಸ ಸತ್ಯಗಳು ಗೋಚರಿಸಲು ಆರಂಭಿಸಿದವು. ಇದುವರೆಗೂ ಅಮೇರಿಕಾ ಈ ದೇಶಗಳ ಬಗ್ಗೆ ನೀಡುವುದಕ್ಕಿಂತ ಭಿನ್ನವಾದ ಚಿತ್ರ ದೊರೆಯಿತು.

ಅಮೇರಿಕಾ ಸಿಐಎಯನ್ನು ಕ್ಯಾಸ್ಟ್ರೋ ಸರ್ಕಾರ ಉರುಳಿಸಲು 'ಛೂ' ಬಿಟ್ಟಿತು. ಇದು ಕ್ಯೂಬಾವನ್ನು ಸೋವಿಯತ್ ದೇಶಕ್ಕೆ ಇನ್ನಷ್ಟು ಹತ್ತಿರ ತಂದಿತು. ಕ್ಯೂಬಾದ ಮಗ್ಗುಲಲ್ಲಿಯೇ ಅಮೇರಿಕಾದ ನೌಕಾನೆಲೆ ಇದ್ದದ್ದರಿಂದ, ಅಮೇರಿಕಾದ ಕಂಪನಿಗಳನ್ನು ರಾಷ್ಟ್ರೀಕರಿಸಿದ್ದರಿಂದ ಸದಾ ಕ್ಯೂಬಾ ಅಮೇರಿಕಾದ ದಾಳಿಯನ್ನು ನಿರೀಕ್ಷಿಸುತ್ತಲೇ ಇತ್ತು. ಹವಾನಾದ ಕೈಗಾರಿಕೆಗಳು ಬಾಂಬ್ ದಾಳಿಗೆ ಗುರಿಯಾಗತೊಡಗಿದವು. ಮತ್ತೆ ಕ್ಯೂಬಾ ಸೋವಿಯತ್ ದೇಶದ ಕಡೆ ನೋಡಿತು. ಶಸ್ತ್ರಾಸ್ತ್ರಗಳು ಸೋವಿಯತ್‌ನಿಂದ ಕ್ಯೂಬಾಗೆ ಪ್ರಯಾಣ ನಡೆಸಿದವು.ಇದೇ ಸಮಯದಲ್ಲಿ ಅಮೇರಿಕಾದ ಅಧ್ಯಕ್ಷ ಪದವಿಗೆ ಚುನಾವಣೆ ಘೋಷಣೆಯಾಯಿತು. ಈ ಚುನಾವಣೆಯಲ್ಲಿ ಕ್ಯೂಬಾವೇ ಪಕ್ಷಗಳ ನಡುವಣ ದಾಳಿ ಪ್ರತಿದಾಳಿಯ ವಿಷಯವಾಯಿತು. ಅಮೇರಿಕಾಗೆ ಕೇವಲ ೯೦ ಕಿ.ಮೀ. ದೂರದಲ್ಲಿ ಕಮ್ಯುನಿಸ್ಟ್ ಹಾವಳಿ; ಲ್ಯಾಟಿನ್ ಅಮೇರಿಕಾದ ದೇಶಗಳಿಗೆ ಕ್ರಾಂತಿಯನ್ನು ರಫ್ತು ಮಾಡಲು ಸೋವಿಯತ್ ದೇಶ ಕ್ಯೂಬಾವನ್ನು ಅಂಗಡಿಯನ್ನಾಗಿ ಮಾಡಿಕೊಂಡಿದೆ ಎಂಬ ಟೀಕೆಗಳು ಎದುರಾದವು. ಯಾವುದೇ ಸರ್ಕಾರ ಬರಲಿ ಕ್ಯೂಬಾದ ಜನರನ್ನು ಈ ಕಮ್ಯುನಿಸಂನಿಂದ ಕಾಪಾಡಬೇಕು ಎಂಬ ನಿರ್ಧಾರಕ್ಕಂತೂ ಬಂದರು. ಕ್ಯೂಬಾ - ಸೋವಿಯತ್ ದೇಶ ಇನ್ನೂ ನಿಕಟವಾದವು.

ಅಮೇರಿಕಾ ಆಮದು - ರಫ್ತು ಎರಡಕ್ಕೂ ಕೊನೆ ಹಾಡಿದ್ದರಿಂದಾಗಿ ಕ್ಯೂಬಾ ಉಸಿರಾಡುವುದೇ ಕಷ್ಟವಾಯಿತು. ನಾಲ್ಕು ದಶಕಕ್ಕೂ ಹೆಚ್ಚು ಕಾಲ ಕ್ಯೂಬಾದಲ್ಲಿ ಮೆರೆದಿದ್ದ ಅಮೇರಿಕಾ ಕ್ಯೂಬಾದ ನೆಲದ ತುಂಬಾ ಹರಡಿದ್ದು ತನ್ನ ಕಂಪೆನಿಯ ಸರಕುಗಳನ್ನೇ. ಈಗ ಸಂಬಂಧ ಹದಗೆಟ್ಟ ನಂತರ ಕ್ಯೂಬಾಗೆ ದಿನನಿತ್ಯದ ಜೀವನಕ್ಕೆ ಬೇಕಾಗಿದ್ದ ತೈಲವೇ ಇಲ್ಲವಾಯಿತು, ಓಡುತ್ತಿದ್ದ ಬಸ್‌ಗಳು, ಗದ್ದೆಗಳಲ್ಲಿ ಟಿಲ್ಲರ್‌ಗಳು, ಕೃಷಿಗೆ ಬೇಕಾಗಿದ್ದ ಟ್ರಾಕ್ಟರ್‌ಗಳು, ಕಾರ್ಖಾನೆಗೆ ಬೇಕಾಗಿದ್ದ ಸ್ಪೇರ್‌ಪಾರ್ಟ್‌ಗಳು ಸಿಗದೆ ಕ್ಯೂಬಾ ಕುದಿಯುವ ಎಣ್ಣೆಯಲ್ಲಿ ಬಿದ್ದಂತಾಯಿತು.



ಮತ್ತೆ ಸೋವಿಯತ್ ದೇಶ ತನ್ನ ಕೈಚಾಚಿತು. ಸಕ್ಕರೆ ಕೊಳ್ಳುವುದರಿಂದ ಆರಂಭವಾದ ಸ್ನೇಹ ಕೊನೆಗೆ ದೇಶ ರಕ್ಷಿಸುವವರೆಗೆ ಬೆಳೆಯಿತು. ಅಮೇರಿಕಾದ ಆರ್ಥಿಕ ದಿಗ್ಬಂಧನದ ಕುಣಿಕೆ ಇನ್ನೂ ಬಲವಾಯಿತು. ಟೊರಿಸೆಲ್ಲಿ ಕಾನೂನು, ಹೆಲ್ಮ್ಸ್ - ಬರ್ಟನ್ ಕಾಯಿದೆಗಳು ಕ್ಯೂಬಾದ ಮೇಲೆ ಸವಾರಿ ಆರಂಭಿಸಿದವು.

ಸೋವಿಯತ್ ದೇಶದೊಂದಿಗಿನ ಸಂಬಂಧ ಬಿಟ್ಟುಬಿಡಿ, ಆರ್ಥಿಕ ದಿಗ್ಬಂಧನ ತೆಗೆದುಬಿಡುತ್ತೇವೆ ಎಂದಿತು ಅಮೇರಿಕಾ. 'ನಮ್ಮದು ಸಿದ್ಧಾಂತವನ್ನು ಮಾರುವ ಪಕ್ಷವಲ್ಲ' ಎಂದು ಫಿಡಲ್‌ಕ್ಯಾಸ್ಟ್ರೋ ಉತ್ತರಿಸಿದರು. ಕುಣಿಕೆ ಇನ್ನೂ ಬಿಗಿಯಾಯಿತು.

ದಿಢೀರ್ ಸೋವಿಯತ್ ಪತನ ಕ್ಯೂಬಾವನ್ನು ಇನ್ನಿಲ್ಲದಂತೆ ಅಲುಗಾಡಿಸಿದೆ. ರಾತ್ರಿ ಕಳೆದು ಬೆಳಗಾಗುವುದರೊಳಗೆ ಕ್ಯೂಬಾ ಬಡತನದತ್ತ ತಳ್ಳಲ್ಪಟ್ಟಿದೆ. ಕ್ಯೂಬಾದ ವಿರುದ್ಧ ಅಮೇರಿಕಾದ ಬಂದೂಕುಗಳು ಘರ್ಜಿಸುತ್ತಿವೆ.

ಸೋವಿಯತ್ ಹಾಗೂ ಅನೇಕ ಸಮಾಜವಾದಿ ರಾಷ್ಟ್ರಗಳು ಕುಸಿದರೂ ಸಹಾ ಚೀನಾ, ವಿಯೆಟ್ನಾಂನಂತಹ ರಾಷ್ಟ್ರಗಳು ಇವೆ. ಕ್ಯೂಬಾ ಒಂದೇ ಸಮಾಜವಾದಿ ರಾಷ್ಟ್ರವಲ್ಲ. ಆದರೆ ಸಾಮ್ರಾಜ್ಯಶಾಹಿ ನಮ್ಮನ್ನು ಮಾತ್ರ ಗುರಿಮಾಡಕೊಂಡಿವೆ ಎನ್ನುತ್ತಾರೆ ಕ್ಯಾಸ್ಟ್ರೋ.

'ಸೋವಿಯತ್ ದೇಶದ ಪತನ ಆ ದೇಶಕ್ಕೆ ಮಾತ್ರ ಆದ ನಷ್ಟವಲ್ಲ ಇಡೀ ಜಗತ್ತಿಗೆ ಅದರಲ್ಲಿಯೂ ಮೂರನೇ ಜಗತ್ತಿನ ದೇಶಗಳಿಗೆ ಆದ ದೊಡ್ಡ ನಷ್ಟ. ಗೊರ್ಬಚೇವ್ ಅವರು ಉದ್ದೇಶಪೂರ್ವಕವಾಗಿ ಸೋವಿಯತ್ ದೇಶವನ್ನು ನಾಶ ಮಾಡಲಿಲ್ಲ. ಸಮಾಜವಾದವನ್ನು ಇನ್ನೂ ಬಲಗೊಳಿಸುವ ನಿಟ್ಟಿನಲ್ಲಿಯೇ ಅವರು ನಡೆದಿದ್ದರು. ಆದರೆ ಅವರು ತುಂಬಾ ಆತುರದಲ್ಲಿ ಇದನ್ನು ಮಾಡುತ್ತಿದ್ದಾರೆ ಎನಿಸಿತ್ತು. ಗೋರ್ಬಚೇವ್ ಒಂದು ಏಟಿಗೆ ಹಲವು ಸಮಸ್ಯೆಗಳನ್ನು ಬಗೆಹರಿಸಲು ಹೊರಟರು. ಸೋವಿಯತ್‌ನಲ್ಲಿ ಸಮಾಜವಾದವನ್ನು ಇನ್ನೂ ಉತ್ತಮಗೊಳಿಸುವ ನಿಟ್ಟಿನಲ್ಲಿ ಆದ್ಯತೆಗಳನ್ನು ಗುರುತಿಸಿಕೊಳ್ಳಬೇಕಾಗಿತ್ತು'.

'ಸೋವಿಯತ್ ದೇಶದ ಪತನಕ್ಕೆ ಗೋರ್ಬಚೇವ್ ಮಾತ್ರವಲ್ಲ, ಇತರ ಸೋವಿಯತ್ ನಾಯಕರು, ಪಕ್ಷದ ನಾಯಕತ್ವ ಮತ್ತು ಸರ್ಕಾರ ಎಲ್ಲರೂ ಕಾರಣರು. ಇಲ್ಲಿ ನಾನು ಯಾರೊಬ್ಬರ ಹೊಣೆಯನ್ನು ಎತ್ತಿ ತೋರಿಸುತ್ತಿಲ್ಲ. ಒಟ್ಟಾರೆ ಇದು ಸಾಮೂಹಿಕ ಹೊಣೆಗಾರಿಕೆಯಿಂದ ಆದದ್ದು.'

'ಸೋವಿಯತ್ ದೇಶ ಮೊದಲು ತನ್ನನ್ನು ದುರ್ಬಲ ಮಾಡಿಕೊಂಡಿರದಿದ್ದರೆ ಸಾಮ್ರಾಜ್ಯಶಾಹಿಗೆ ಅದನ್ನು ನಾಶಮಾಡಲು ಸಾಧ್ಯವಿರುತ್ತಿರಲಿಲ್ಲ. ಅಲ್ಲಿ ಸಮಾಜವಾದ ಸಹಜ ಸಾವನ್ನಪ್ಪಲಿಲ್ಲ, ಬದಲಿಗೆ ಅದನ್ನು ಹತ್ಯೆ ಮಾಡಲಾಯಿತು' ಎನ್ನುತ್ತಾರೆ ಕ್ಯಾಸ್ಟ್ರೋ.


ಸೋವಿಯತ್ ದೇಶ ಇಲ್ಲದೆ ಕ್ಯೂಬಾ ಇನ್ನಷ್ಟು ಕಷ್ಟಗಳ ಮಧ್ಯೆ ಈಜುತ್ತಿದೆ. ತನ್ನ ಜನರಿಗೆ ಕಷ್ಟಗಳನ್ನು ವಿವರಿಸಿ ಅದನ್ನು ಎಲ್ಲರೂ ಸೇರಿ ಗೆಲ್ಲುವ ವಿಶ್ವಾಸ ತುಂಬಿದೆ. 'ಕ್ಯೂಬಾದಲ್ಲಿ ಕೊನೆಯ ಕ್ರಾಂತಿಕಾರಿ, ಕೊನೆಯ ಕಮ್ಯುನಿಸ್ಟ್ ಇರುವವರೆಗೂ ಅದು ಸಾಮ್ರಾಜ್ಯಶಾಹಿಯತ್ತ ಮರಳುವುದಿಲ್ಲ' ಎಂಬುದನ್ನು

ಗಟ್ಟಿದನಿಯಲ್ಲಿ ಜಗತ್ತಿಗೆ ತಿಳಿಸಿ ಹೇಳಿದೆ.

ಈ ಕಾರಣಕ್ಕಾಗಿಯೇ ಕ್ಯೂಬಾ ಸಂಕಷ್ಟಗಳ ಮಧ್ಯೆಯೂ ಜಗತ್ತಿನ ಹಲವು ದೇಶಗಳ ಸಹಾಯಹಸ್ತವನ್ನು ಹಿಡಿದು ಮುಂದೆ ಮುಂದೆ ಸಾಗುತ್ತಿದೆ.

'ಸೋವಿಯತ್ ಪತನವಾದ ನಂತರ ಅಮೇರಿಕಾದ ಪತ್ರಿಕೆಗಳು ಕ್ಯೂಬಾ ಕ್ರಾಂತಿಯ ಕೊನೆಯ ಗಂಟೆಗಳು, ಫಿಡೆಲ್ ಕ್ಯಾಸ್ಟ್ರೋನ ಕೊನೆಯ ನಿಮಿಷಗಳು, ಕ್ಯೂಬಾ ಸಮಾಜವಾದದ ಕೊನೆ ಎಂದು ಭವಿಷ್ಯ ನುಡಿದವು. ಆದರೆ ಇಷ್ಟು ವರ್ಷಗಳ ನಂತರ ಗಂಟೆ ನಿಮಿಷವನ್ನು ಲೆಕ್ಕ ಹಾಕುವವರು ಸಿಗುತ್ತಿಲ್ಲ' ಎನ್ನುತ್ತಾರೆ ಕ್ಯಾಸ್ಟ್ರೋ.





## ಪ್ರತಿಯೊಬ್ಬರಿಗೂ ಒಂದು ಸೂರ್ಯ

ನನ್ನ ಈ ಬಟ್ಟೆ ನಾಲ್ಕು ವರ್ಷ ಬಾಳಿಕೆ ಬರುತ್ತದೆಯೇ-

ಫಿಡೆಲ್ ಕ್ಯಾಸ್ಟ್ರೋ ತಮ್ಮ ಹಸಿರು ಮಿಲಿಟರಿ ಸಮವಸ್ತ್ರವನ್ನು ತೋರಿಸಿ ಕಿಕ್ಕಿರಿದು ಸೇರಿದ್ದ ಜನರನ್ನು ಕೇಳಿದರು. ನಮ್ಮಲ್ಲಿ ಈಗಿರುವ ಪ್ರತಿಯೊಂದು ಬಟ್ಟೆಯೂ ಎಷ್ಟು ವರ್ಷ ಬಾಳಿಕೆ ಬರುತ್ತದೆ ಎಂದು ಲೆಕ್ಕ ಹಾಕೋಣ, ಒಂದು ಎರಡು ನಾಲ್ಕು ವರ್ಷವಾದರೂ ಸರಿ ಈ ಬಟ್ಟೆಗಳನ್ನೇ ತೊಡೋಣ.

ಬಿಡಿಭಾಗಗಳು, ಯಂತ್ರ ಹಾಗೂ ಮುಂದುವರಿದ ತಂತ್ರಜ್ಞಾನ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಫಿಡೆಲ್ ಕ್ಯಾಸ್ಟ್ರೋ ಈ ಪ್ರಶ್ನೆ ಕೇಳಿದಾಗ ಜನ ಕೂಗಿ ಹೇಳಿದರು 'ನಾಲ್ಕೇನು ಐದು ವರ್ಷ ಬಾಳಿಕೆ ಬರುತ್ತದೆ'.

ನಾನು ಗುಸ್ಟೋನನ್ನು ನೋಡಿದೆ, ಓಲಿವಾರನ್ನು ನೋಡಿದೆ. ಇಬ್ಬರೂ ಕೆಲಸಕ್ಕೆ ಹೊರಟಿದ್ದರು. ಕೆಲಸಕ್ಕೆ ಹಾಜರಾಗಬೇಕಾದ ಒಂದು ಗಂಟೆಗೆ ಮುನ್ನವೇ ಬಾಗಿಲು ತೆರೆದು ಹೊರಗೆ ಕಾಲಿಟ್ಟಿದ್ದರು. ಕಚೇರಿ ತಲುಪಲು ಹತ್ತು ಕಿ.ಮೀ. ನಡೆಯಬೇಕು. ದಾರಿಯಲ್ಲಿ ಮಗನನ್ನು ಬಾಲವಾಡಿಗೆ ಮುಟ್ಟಿಸಬೇಕು. ಗುಸ್ಟೋನ 'ಕ್ಯೂಬನ್ ಅಂಗಿ' ಬದಿಯಲ್ಲಿ ತೇಪೆ ಹೊತ್ತಿತ್ತು. ಓಲಿವಾ ಮೊನ್ನೆ ನೆನ್ನೆ ಹಾಗೂ ಈಗ ಹೊರಡುವಾಗ ಅದೇ ಸ್ಕರ್ಟ್ ತೊಟ್ಟಿದ್ದರು. ಇಬ್ಬರೂ ವೈದ್ಯರು, ಫಿಡೆಲ್ ಕೇಳಿದ್ದು ನೆನಪಾಯಿತು.

ಬೆಳಿಗ್ಗೆ ಕಣ್ಣುಜ್ಜಿ ಈಚೆ ಬರುವ ವೇಳೆಗೆ ಸರಿಯಾಗಿ ಗುಸ್ತೋ ಸಿದ್ಧಮಾಡಿದ್ದ ತಿಂಡಿ ತೀರ್ಥಗಳು ಟೇಬಲ್ ಮೇಲೆ ಅಚ್ಚುಕಟ್ಟಾಗಿ ಕೂತಿರುತ್ತಿತ್ತು. ಹಲ್ಲು ಉಜ್ಜಿ ಟೇಬಲ್ ಮುಂದೆ ಕುಳಿತರೆ ಸಾಕು ಉಪಚಾರ ಆರಂಭ. 'ಅದು ತಿನ್ನಿ, ಇದು ತಿನ್ನಿ, ಬನ್ ತಿನ್ನಿ' ಬನ್? ಕಾಯಿಲೆಯವರ ಆಹಾರ ಎಂದು ಮೂಗು ಮುರಿದು ಪ್ರತೀ ದಿನ ಬದಿಗೆ ಸರಿಸುತ್ತಿದ್ದೆ. ಇದ್ದದ್ದರಲ್ಲೇ ಹೊಟ್ಟೆ ಭರ್ತಿ ಮಾಡಿಕೊಳ್ಳುತ್ತಿದ್ದೆ. ಅಕಸ್ಮಾತ್ ಹಸಿವಾದರೂ ವಿಚಾರ ಸಂಕಿರಣದ ಪ್ಯಾಲೇಸ್‌ನಲ್ಲಿ ಊಟ ತಡವಾಗುವುದಿಲ್ಲವಲ್ಲ?

ಆದರೆ ಮನೆಯವರ ವರಾತ ನಿಲ್ಲಲಿಲ್ಲ. ಬನ್ ತಿನ್ನಿ, ಬನ್ ತಿನ್ನಿ. ಪ್ರತೀ ಬೆಳಿಗ್ಗೆ ಸುಬ್ಬಲಕ್ಷ್ಮಿಯ ಸುಪ್ರಭಾತಕ್ಕೆ ರೂಢಿಯಾದವನಿಗೆ ಕ್ಯೂಬಾದಲ್ಲಿ ಬನ್ ತಿನ್ನಿ ಬನ್ ತಿನ್ನಿ ಸುಪ್ರಭಾತ. 'ನೀ ತಿನ್ನೆ, ನಾ ಬಿಡೆ' ಕಸರತ್ತು ಆರಂಭವಾಯಿತು. ಒಂದು ದಿನ ಮಧ್ಯಾಹ್ನ ಅರ್ಧ ಇಂಗ್ಲಿಸ್‌ನ ಅಧ್ಯಾಪಕರು ಏನೋ ಮಾತಾಡಲು ಗುಸ್ತೋ ಮನೆಗೆ ಬಂದರು. ನಾನು ಅವರಿಗೆ ಕೇಳಿದೆ 'ಯಾಕೆ ಹೀಗೆ ಬನ್ ತಿನ್ನು ಎಂದು ಬಲವಂತ ಮಾಡುತ್ತಾರೆ?' ಅಧ್ಯಾಪಕರು ಮನೆಯವರಿಗೆ ಕೇಳಿದರು. ಪಾಪ ಮನೆಯವರು ಆದದ್ದೆಲ್ಲಾ ಉಪನ್ಯಾಸಕರಿಗೆ ವಿವರಿಸಿದರು. ಇಂಗ್ಲಿಸ್ - ಸ್ಪಾನಿಯೋಲ್ - ಇಂಗ್ಲಿಸ್‌ಗೆ ಬಂದ ವಿವರಣೆ ಕೇಳಿ ನಾನು ದಂಗಾದೆ.

ಕ್ಯೂಬಾದಲ್ಲಿ ಒಂದು ಮನೆಗೆ ದಿನಕ್ಕೆ ಸಿಗುವುದು ನಾಲ್ಕು ಬನ್ ಮಾತ್ರ. ಇದರಲ್ಲಿಯೇ ದಿನ ಸುಧಾರಿಸಬೇಕು. ಆದರೆ ಉತ್ಸವಕ್ಕೆ ಹೊರ ದೇಶಗಳಿಂದ ಬಂದ ನಮಗಾಗಿ ಕ್ಯೂಬಾ ವಿಶೇಷ ಕಾಳಜಿ ವಹಿಸಿತ್ತು. ಅತಿಥಿ ಉಪವಾಸ ಬೀಳಬಾರದಲ್ಲ. ಕ್ಯೂಬಾದಲ್ಲಿ ಮಾಡುವ ಅಡುಗೆ ಹೇಗೋ ಏನೋ ತಾಪತ್ರಯವಾಗಬಾರದಲ್ಲ ಅದಕ್ಕಾಗಿ ಸಾಕಷ್ಟು ಬನ್‌ಗಳನ್ನು ಪ್ರತೀ ಮನೆಗೆ ನೀಡಿತ್ತು. ಇದು ಉತ್ಸವದ ವಿಶೇಷ ಬನ್. ಪ್ರತಿನಿಧಿಗಳಿಗೆ ಮಾತ್ರ. ನಾನು ಬನ್ ಎಂದರೆ ರೋಗಿಗಳಿಗೆ ಎಂದು ತಿನ್ನದೇ ದೂಡುತ್ತಿದ್ದರೆ ಮನೆಯವರಿಗೆ ಇಕ್ಕಟ್ಟು. ನಾನು ಬನ್ ತಿನ್ನುವಂತಿಲ್ಲ, ಅವರು ಮುಟ್ಟುವಂತಿಲ್ಲ. ನನಗೆ ಬನ್ ಇಷ್ಟವಿಲ್ಲ ಎಂದು ಹೇಳಲು ಭಾಷೆ ಬರುವುದಿಲ್ಲ. ಯಾಕೋ ಹೊಟ್ಟೆಯೊಳಗೆ ತೀವ್ರ ಸಂಕಟವಾಯಿತು. ಹಾಗಾದರೆ ನೀವು ತಿನ್ನುವ ಬನ್ ಯಾವುದು ಕೇಳಿದೆ. ಒಳಗೆ ಇದ್ದ ಬನ್ ತಂದು ತೋರಿಸಿದರು. ಬನ್‌ಗೆ ಯಾವ ಬಣ್ಣ ಇತ್ತೋ ಗೊತ್ತಾಗಲೇ ಇಲ್ಲ.

ಭಾರತ ಹಡಗಿನ ತುಂಬಾ ಗೋದಿ ತುಂಬಿ ಕಳಿಸಿದಾಗ ಫಿಡೆಲ್ ಕ್ಯಾಸ್ಟ್ರೋ ಹೇಳಿದ್ದು ನೆನಪಾಯಿತು. 'ನನ್ನ ದೇಶದ ಎಲ್ಲರಿಗೆ ಒಂದು ವಾರ ಕಾಲ ಅತ್ಯುತ್ತಮ ದರ್ಜೆಯ ಬ್ರೆಡ್ ನೀಡುತ್ತೇನೆ'.

ವಿಚಾರ ಸಂಕಿರಣದಲ್ಲಿ ದಿಗ್ಬಂಧನ ಕುರಿತು ಗೋಷ್ಠಿಯೊಂದು ನಡೆಯುತ್ತಿತ್ತು. ಕ್ಯೂಬಾದ ಯುವಕನೊಬ್ಬ ಆಕ್ರೋಶದಿಂದ ಹೇಳುತ್ತಿದ್ದ - 'ನನ್ನ ದೇಶದ ಮಕ್ಕಳಿಂದ ಸಾಮ್ರಾಜ್ಯಶಾಹಿ ಹಾಲನ್ನು ಕಿತ್ತುಕೊಂಡಿದೆ. ನಮ್ಮ ಮಕ್ಕಳ ಒಡಲನ್ನು ತಂಪು ಮಾಡಬೇಕಾಗಿದ್ದ ೫೫ ಲಕ್ಷ ಲೋಟಗಳಷ್ಟು ಹಾಲನ್ನು ಅಮೇರಿಕಾ ನುಂಗಿ ಹಾಕಿದೆ'. ಪ್ರತೀ ದಿನ ಏಳುವ ವೇಳೆಗೆ ಸರಿಯಾಗಿ ಟೇಬಲ್ ಮೇಲಿನ ಫ್ಲಾಸ್ಕ್‌ನಲ್ಲಿ ಇರುತ್ತಿದ್ದ ಹಾಲು ನೆನಪಾಯಿತು. ಕಪ್ಪು ಕಾಫಿ ಅತ್ಯಂತ ಕಡು ಎಂದು ಬೇಕಾದಷ್ಟು



ಹಾಲು ಹುಯ್ದುಕೊಂಡು ಕುಡಿಯುತ್ತಿದ್ದ, ಎಷ್ಟೋ ವೇಳೆ ಮಲಗುವಾಗ ಫ್ಲಾಸ್ಕ್‌ನಲ್ಲಿ ಇದ್ದ ಎಲ್ಲ ಹಾಲನ್ನೂ ಕುಡಿದು ಹಾಸಿಗೆ ಸೇರುತ್ತಿದ್ದ ನಾನು ಗಾಬರಿಯಾದೆ. ಮತ್ತೆ ಪ್ರಶ್ನೆ - ಮರುಪ್ರಶ್ನೆ - ಅನುವಾದ. ಗೊತ್ತಾಗಿದ್ದು ಕ್ಯೂಬಾದಲ್ಲಿ ಹಾಲು ಇಲ್ಲವೇ ಇಲ್ಲ. ಮನೆಗೆ ಬಂದಾಗ ಓಲಿವಾ ಮುಂದೆ ತುಂಡು ಪ್ರಶ್ನೆಗಳನ್ನು ಮುಂದಿಟ್ಟೆ. ನಿಮ್ಮ ಪುಟಾಣಿಗೆ ಏನು ಇಷ್ಟ? ಉತ್ತರ ಬಂತು - ಹಾಲು. ಕ್ಯೂಬಾದಲ್ಲಿ ಏಳು ವರ್ಷದ ಒಳಗಿನ ಮಕ್ಕಳಿಗೆ ಮಾತ್ರ ಒಂದು ಬಾಟಲಿ ಹಾಲು ಸಿಗುತ್ತದೆ. ಏಳು ವರ್ಷ ದಾಟಿದರೆ ಹಾಲು ಬಂದ್, ಮಕ್ಕಳಿಲ್ಲದ ಮನೆ ಹಾಲಿನ ಮುಖವನ್ನೇ ನೋಡುವುದಿಲ್ಲ.

ಕ್ಯೂಬಾಗೆ ಹಾರುವ ಮುನ್ನ ಕ್ಯೂಬಾದಲ್ಲಿ ಆರ್ಥಿಕ ದಿಗ್ಬಂಧನದಿಂದಾಗಿ ಕಷ್ಟ ಇದೆ ಎಂದು ಮಾತ್ರ ಗೊತ್ತಿತ್ತು. ಆದರೆ ಅಲ್ಲಿ ಇದ್ದದ್ದು 'ಕಡುಕಷ್ಟ'.

'ಕ್ಯೂಬಾದ ಪ್ರತಿಯೊಬ್ಬರೂ ಇಂದು ಇತಿಹಾಸ ನಿರ್ಮಿಸುತ್ತಿದ್ದಾರೆ. ಕಷ್ಟಗಳು ಹೆಚ್ಚಾದಷ್ಟೂ ಕ್ಯೂಬನ್ನರ ಒಳ್ಳೆಯ ಗುಣಗಳು ಹೆಚ್ಚುತ್ತಿವೆ' ಎಂದು ಕ್ಯಾಸ್ಟ್ರೋ ಹೇಳುವಾಗ ಅವರ ಹೊಟ್ಟೆಯಲ್ಲಿ ಎಷ್ಟು ಸಂಕಟ ಇದ್ದಿರಬಹುದು ಎಂದು ಅಂದಾಜಾಯಿತು. 'ಇದು ಆರ್ಥಿಕ ದಿಗ್ಬಂಧನವಲ್ಲ ಇದು ಯುದ್ಧ. ಇಡೀ ವಿಶ್ವದಲ್ಲಿ ನಮ್ಮೊಂದಿಗೆ ಮಾತ್ರ ನಡೆಯುತ್ತಿರುವ ಯುದ್ಧ. ಪ್ರತಿಯೊಬ್ಬರೂ ಈ ಯುದ್ಧದಲ್ಲಿ ಸೆಣಸುತ್ತಿದ್ದಾರೆ. ಪ್ರತೀ ಬಾರಿ ಮಕ್ಕಳನ್ನು ನೋಡಿದಾಗ ಅವರು ಮಹಾಯುದ್ಧದ ಮಧ್ಯದಲ್ಲಿ ನಿಂತಿದ್ದಾರೆ ಎನಿಸುತ್ತದೆ. ಹಾಲುಗಲ್ಲದ ಮಕ್ಕಳು ಯುದ್ಧದ ಮಧ್ಯೆ ಇರುವ ಯೋಧರಾಗಿ ಕಾಣುತ್ತಿದ್ದಾರೆ' ಎಂದರು.

'ಪ್ರತಿಯೊಂದು ಗ್ರಾಂ ಹಾಲಿಗಾಗಿ, ಪ್ರತಿಯೊಂದು ಔಷಧಿಯ ಬಾಟಲಿಗಾಗಿ, ಶಾಲೆಯಲ್ಲಿ ಮಕ್ಕಳ ಕೈಯಲ್ಲಿ ಇಲ್ಲವಾಗುತ್ತಿರುವ ಕಾಪಿ ಪುಸ್ತಕಕ್ಕಾಗಿ, ದಿಗ್ಬಂಧನದ ವಿರುದ್ಧ ಘೋಷಣೆ ಮೊಳಗಿಸಿದ ಪ್ರತೀ ದನಿಗಾಗಿ, ದೇಶದ ವಿರುದ್ಧ ನಡೆಯುತ್ತಿರುವ ಪ್ರತೀ ಅಪಪ್ರಚಾರಕ್ಕಾಗಿ, ನೀವು ಎತ್ತಿಹಿಡಿದಿರುವ ಈ ಕ್ಯೂಬಾ ಬಾವುಟಕ್ಕಾಗಿ ನಾವು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುತ್ತೇವೆ' ಎಂದರು ಕ್ಯಾಸ್ಟ್ರೋ.

ಇಡೀ ಕ್ಯೂಬಾ ಫಿಡೆಲ್ ಕ್ಯಾಸ್ಟ್ರೋ ಬೆನ್ನಿಗೆ ನಿಂತಿತು.

'ಮುಂದೆ ಸ್ಥಿತಿ ಇನ್ನೂ ಏನಾಗುತ್ತದೋ ಗೊತ್ತಿಲ್ಲ. ಆದರೆ ಇಷ್ಟು ಮಾತ್ರ ನಿಜ –ಅದು ಹಳೆಯ ದಿನಗಳಿಗಿಂತ ಸುಲಭವಾಗಿರುತ್ತದೆ. ಬಂಡವಾಳಶಾಹಿಗೆ ಮರಳುವುದಕ್ಕಿಂತ ಇಂತಹ ತ್ಯಾಗ ಮಾಡುವುದು ಸಾವಿರ ಸಾವಿರ ಪಾಲು ಮೇಲು. ದೇಶದ ಸ್ವಾತಂತ್ರ್ಯ, ಕ್ರಾಂತಿ, ಸಮಾಜವಾದ ಕೊಡುವ ಘನತೆಯನ್ನು ಉಳಿಸಿಕೊಳ್ಳುವುದು ಮುಖ್ಯ' ಎಂದರು ಕ್ಯಾಸ್ಟ್ರೋ. ಜನ ವರ್ಷಗಟ್ಟಲೆ ಹರಿದ ಬಟ್ಟೆಯಲ್ಲಿ ಓಡಾಡಲು ತಯಾರಾದವರು ಒಂದು ಜೊತೆ ಬೂಟಿನಲ್ಲಿ ದಶಕ ಕಳೆದರು. ಇಡೀ ಊರಲ್ಲಿ ನಡೆದಾಡಿಯೇ ದಿನ ಸುಧಾರಿಸಿದರು.

ಸಿಯರಾ ಮಾಸ್ಟೆರಾ ಗುಡ್ಡಗಳಿಂದಲೇ ಫಿಡೆಲ್ ಕ್ಯಾಸ್ಟ್ರೋ ಸಾರಿ ಹೇಳಿದ್ದರು. ನಿಮಗೆ ಮುಂದಿನ ದಿನಗಳಲ್ಲಿ ಹೊಸ ಬೆಳಕು ಬರುತ್ತದೆ. ೧೯೫೯ ಜನವರಿ ೧ರಂದು ಕ್ಯೂಬಾದಲ್ಲಿ ಸ್ವಾತಂತ್ರ್ಯದ ಬೆಳ್ಳಿ ಚುಕ್ಕೆಗಳು ಮೂಡಿದಾಗ ಕ್ಯಾಸ್ಟ್ರೋ ಮುಂದೆ ಇದ್ದ ಮೊದಲ ಕೆಲಸ ಜನರಿಗೆ ಬದುಕುವ ಹಕ್ಕು

ನೀಡುವುದು. ಆಗ ಕ್ಯೂಬಾ ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳ ಪಾಲಾಗಿತ್ತು. ಇಡೀ ದೇಶದಲ್ಲಿ ಫಲವತ್ತಾದ ಭೂಮಿಯ ಮುಕ್ಕಾಲು ಭಾಗ ಆ ಕಂಪನಿಗಳ ಕೈಯಲ್ಲಿತ್ತು. ಈ ಭೂಮಿಯಲ್ಲಿ ಬಹು ಭಾಗವನ್ನು ಉಳಲು ಬೇಸರವಾಗಿ ಪಾಳು ಬಿಡಲಾಗಿತ್ತು. ಸಕ್ಕರೆ ಹಂಚಿ ಬೇಕಾದ್ದು ತಿಂದ ಜನ ಉಳಿದವರನ್ನು ಉಪವಾಸ ಕೆಡವಿದ್ದರು. ಆಗ ಕ್ಯಾಸ್ಟ್ರೋ ನಿರ್ಧಾರ ಕೈಗೊಂಡರು, ನನ್ನ ಹೋರಾಟ ಜನರ ಪರವಾಗಿ.

ಕ್ಯೂಬಾದ ಅಧ್ಯಕ್ಷನಿಗಿಂತಲೂ ಅಮೇರಿಕಾದ ರಾಯಭಾರಿಯೇ ಅತಿಮುಖ್ಯವಾಗಿ ಹೋಗಿದ್ದ ಕ್ಯೂಬಾದಲ್ಲಿ ಪ್ರತೀ ದಿನ ಒಂದು ಹೊಸ ಬದಲಾವಣೆ ಬಂದಿತು. ಓರಿಯಂಟ್ ಪ್ರಾಂತ್ಯಕ್ಕೆ ತೆರಳಿದ ಕ್ಯಾಸ್ಟ್ರೋ ಬ್ಯಾಟಿಸ್ಟಾನನ್ನು ಬೆಂಬಲಿಸಿದ್ದ ಒಡೆಯರ ಭೂಮಿಯನ್ನು ಮುಟ್ಟುಗೋಲು ಹಾಕಿಕೊಂಡರು. ಭೂಮಿ ಇಲ್ಲದವರಿಗೆ ಭೂಮಿ, ಮನೆ ಇಲ್ಲದವರಿಗೆ ಮನೆ, ಉಳುತ್ತಿದ್ದವನೇ ಹೊಲದೊಡೆಯ. ಮೊದಲ ಹೆಜ್ಜೆಯಲ್ಲೇ ೨೨ ಸಾವಿರ ರೈತರು ೨ ಲಕ್ಷ ಜನರೂ ಭೂಮಿ, ಮನೆ ಕಂಡರು. ಕ್ಯಾಸ್ಟ್ರೋ ಮತ್ತೆ ಮತ್ತೆ ಹೆಜ್ಜೆ ಹಾಕಿದರು. ಅಮೇರಿಕಾದವರ ಮನರಂಜನೆಯ ತಾಣಗಳಾಗಿದ್ದ ಕ್ಯಾಸಿನೋಗಳಿಗೆ ಹೊಸ ನಿಯಮಗಳನ್ನು ತಂದರು. ಸರ್ಕಾರಕ್ಕೆ ಅರ್ಧಹಣ ಸಂದಾಯವಾಗಬೇಕು ಎಂದರು. ಹವಾನಾ ವಿಶ್ವವಿದ್ಯಾಲಯವನ್ನು ವಶ ಮಾಡಿಕೊಂಡು ಬ್ಯಾಟಿಸ್ಟಾನ ಜನರಿಂದ ತುಂಬಿ ಹೋಗಿದ್ದ ವಿಶ್ವವಿದ್ಯಾಲಯವನ್ನು ಶುದ್ಧೀಕರಿಸಿದರು. ಹವಾನಾದವರಿಗೆ ಒಂದು, ಹವಾನಾದವರಲ್ಲದವರಿಗೆ ಇನ್ನೊಂದು ರೀತಿ ಹಣ ವಸೂಲು ಮಾಡುತ್ತಿದ್ದ ವಿದ್ಯುಚ್ಛಕ್ತಿ ಮಂಡಳಿ ಕಿವಿ ಹಿಂಡಿ ಎಲ್ಲರಿಗೂ ಒಂದೇ ಶುಲ್ಕ ವಿಧಿಸಲು ಹೇಳಿದರು. ಭೂಮಿ ಬಾಡಿಗೆಗೆ ಪಡೆದವರಿಗೆ ಅರ್ಧದಷ್ಟು ಬೆಲೆ ಇಳಿಸಿದರು. ಹೆಚ್ಚುವರಿ ಭೂಮಿ ಇದ್ದರೆ ಮನೆ ಕಟ್ಟಿಕೊಳ್ಳಲು ತಿಳಿಸಿದರು. ಅಮೇರಿಕಾದ ಟೆಲಿಫೋನ್ ಕಂಪನಿಯ ಮೇಲೆ ಹಿಡಿತ ಸಾಧಿಸಿದರು. ಭೂ ಸುಧಾರಣಾ ಕಾಯಿದೆ ಜಾರಿಗೆ ಬಂದಿತು.

ಅಮೇರಿಕಾಗೆ ಇಷ್ಟು ಸಾಕಿತ್ತು. ಕ್ಯೂಬಾದಲ್ಲಿ ಕಮ್ಯುನಿಸ್ಟರು ಪ್ರವೇಶಿಸಿದ್ದಾರೆ. ಕ್ಯೂಬಾ ಸರ್ಕಾರ ಕಮ್ಯುನಿಸ್ಟರದ್ದು, ಅಮೇರಿಕಾ ಖಂಡದಲ್ಲಿ ಕೆಂಪು ಬಾವುಟ ಹಾರಲು ಸಾಧ್ಯವೇ ಇಲ್ಲ ಎಂದು ಘೋಷಿಸಿ ಕ್ರಾಂತಿ ನಡೆದ ಕೇವಲ ಆರು ತಿಂಗಳಲ್ಲಿ ಕ್ಯೂಬಾದೊಂದಿಗೆ ರಾಯಭಾರ ಸಂಬಂಧಗಳನ್ನು ಕಡಿದುಕೊಂಡಿತು. ರಾಯಭಾರಿ ಬೋನ್ಸಾಲ್‌ರನ್ನು ವಾಪಾಸ್ ಕರೆಸಿಕೊಂಡಿತು. ಕ್ಯೂಬಾದ ಮೂಲೆ ಮೂಲೆಯಲ್ಲಿ ಬಾಂಬ್‌ಗಳು ಸಿಡಿದವು. ಅಮೇರಿಕಾದಿಂದ ಹಾರಿ ಬಂದ ವಿಮಾನಗಳು ಜನರನ್ನು ಬಲಿ ತೆಗೆದುಕೊಂಡವು. ಕ್ಯಾಸ್ಟ್ರೋ ಅಮೇರಿಕಾದ ಕಂಪನಿಗಳ ಕೈಯಲ್ಲಿದ್ದ ಮತ್ತೂ ೭೫ ಸಾವಿರ ಎಕರೆ ಕೃಷಿಭೂಮಿಯನ್ನು, ಖನಿಜ ಭೂಮಿಯನ್ನೂ, ಗೋಮಾಳವನ್ನೂ ವಶಪಡಿಸಿಕೊಂಡರು. ಅಮೇರಿಕಾ ಕ್ಯೂಬಾದ ಉಸಿರಿಗೇ ಕೈ ಹಾಕಲು ನೋಡಿತು. ಸಕ್ಕರೆಯ ಮೇಲೆ ನಿಂತಿದ್ದ ಕ್ಯೂಬಾಗೆ ಹೇಳಿತು 'ನಿಮ್ಮ ಸಕ್ಕರೆ ನಮಗೆ ಬೇಕಾಗಿಲ್ಲ'.

ಆದರೆ ಜನ ಫಿಡಲ್ ಹಿಂದೆ ನಿಂತರು. ವಿದ್ಯುಚ್ಛಕ್ತಿ ಇಲ್ಲದೆ ಕತ್ತಲಲ್ಲಿ ಬದುಕು ನೂಕಿದ್ದ, ರಸ್ತೆ



ಇಲ್ಲದೆ ಹೊಂಡಗಳಲ್ಲಿ ಮುಳುಗಿ ಮುಂದೆ ಹೋಗಿದ್ದ, ಇರಲು ಮನೆಯಿಲ್ಲದೆ ಮಳೆ ಗಾಳಿಗೆ ಮೈ ಒಡ್ಡಿದ್ದ, ತಿನ್ನಲು ಏನೂ ಇಲ್ಲದೆ ಉಪವಾಸ ಕಳೆದಿದ್ದ, ನೋಡಲು ವೈದ್ಯರಿಲ್ಲದೇ ರೋಗದಿಂದ ನರಳಿದ್ದ ಜನ ಕ್ಯಾಸ್ಟ್ರೋನ ಹಿಂದೆ ನಿಂತರು. 'ವೆನ್ಸಿರಿಮೋಸ್'- ಗೆದ್ದೇ ಗೆಲ್ಲುವೆವು ಎಂಬ ಘೋಷಣೆ ಮೊಳಗಿತು. ಇಡೀ ಕ್ಯೂಬಾದ ಜನರನ್ನು ತಮ್ಮೊಂದಿಗಿಟ್ಟುಕೊಂಡು ಕ್ಯೂಬಾ ಸರ್ಕಾರ ಮುಂದೆ ಮುಂದೆ ಹೆಜ್ಜೆ ಇಟ್ಟಿತು.

ದಿಗ್ಬಂಧನ ಆರಂಭವಾಯಿತು. ಒಂದು, ಎರಡು, ಮೂರು ಹೊಸ ಹೊಸ ದಿಗ್ಬಂಧನದ ಕಾನೂನುಗಳು. ಸಕ್ಕರೆ ಬೇಡ, ಬೇರೆಯವರೂ ತೆಗೆದುಕೊಳ್ಳಬಾರದು, ನಾವು ನಿಮಗೆ ಏನನ್ನೂ ರಫ್ತು ಮಾಡುವುದಿಲ್ಲ, ಬೇರೆಯವರೂ ಏನನ್ನೂ ರಫ್ತು ಮಾಡಬಾರದು, ಕೊನೆಗೆ ಯಾರೆಂದರೆ ಯಾರೂ, ಏನೆಂದರೆ ಏನೂ ಕೊಡಬಾರದು ಎಂಬ ಕಾನೂನು ಬಂದಿತು.

ಆದರೆ ಸೋವಿಯತ್ ದೇಶ ಸಹಾಯಹಸ್ತ ಚಾಚಿತು. ಅಮೇರಿಕಾಗೆ ಹೋಗಬೇಕಾಗಿದ್ದ ಸಕ್ಕರೆ ಸೋವಿಯತ್ ದೇಶ, ಚೀನಾ ಹೀಗೆ ಹೊಸ ಖಂಡಗಳತ್ತ ಹರಿಯಿತು. ಕ್ಯೂಬಾಗೆ ಬೇಕಾದ ತೈಲ, ಯಂತ್ರಗಳು, ಯಂತ್ರಕ್ಕೆ ಬೇಕಾದ ಬಿಡಿ ಭಾಗಗಳು, ಟ್ರಾಕ್ಟರ್‌ಗಳು, ಶಾಲಾ ಬಸ್‌ಗಳು, ಶಸ್ತ್ರಾಸ್ತ್ರಗಳು ಒಂದರ ಹಿಂದೆ ಮತ್ತೊಂದು ಸಕ್ಕರೆಗೆ ಬದಲಿಯಾಗಿ ಬಂದವು.

ಅಮೇರಿಕಾದ ಐಸನ್ ಹೋವರ್, ಜಾನ್ ಎಫ್ ಕೆನಡಿ ಸುಮ್ಮನೆ ಇರಲಿಲ್ಲ. ಉಸಿರು ಕಟ್ಟಿ ಸಾಯಿಸಲು ಸಾಧ್ಯವಾಗದಿದ್ದರೆ ಬೆಂಕಿ ಉರಿಸಿ ದಾಳಿ ಎಂಬ ಸೂತ್ರ ರೂಪಿಸಿದರು. ಪ್ಲಾಯಾ ಗಿರಾನ್ ಮೇಲೆ ಅಮೇರಿಕಾದ ಕುಖ್ಯಾತ 'ಬೇ ಆಫ್ ಪಿಗ್ಸ್' ಯುದ್ಧ ಆರಂಭವಾಯಿತು. ಕೇವಲ ೭೨ ಗಂಟೆ. ಅಷ್ಟು ಗಾತ್ರದ ಅಮೇರಿಕಾ, ಅಷ್ಟು ಹಣಬಲದ ಅಮೇರಿಕಾ, ಅಷ್ಟು ಅಹಂಕಾರದ ಅಮೇರಿಕಾ ಕ್ಯೂಬಾದ ಮರುದಾಳಿಗೆ ತತ್ತರಿಸಿತು. ಕ್ಯೂಬಾದಿಂದ ಪಲಾಯನ ಮಾಡಿತು.

ಫಿಡಲ್ ಕ್ಯಾಸ್ಟ್ರೋ ಹೇಳಿದರು 'ನಾವು ಬೇ ಆಫ್ ಪಿಗ್ಸ್‌ನಲ್ಲಿ ಗೆದ್ದಿದ್ದೇವೆ ಅಂತೆಯೇ ಉತ್ಪಾದನೆಯಲ್ಲಿಯೂ' ಸೋವಿಯತ್ ದೇಶ ದಿಢೀರ್ ಕುಸಿಯಿತು. ಸಮಾಜವಾದಿ ರಾಷ್ಟ್ರಗಳು ಇಲ್ಲವಾದವು. ಕ್ಯೂಬಾದ ಉಸಿರುಗಟ್ಟಿತು. 'ದಿಗ್ಬಂಧನದ ನಡುವೆಯೇ ಇನ್ನೊಂದು ದಿಗ್ಬಂಧನ', 'ಶಾಂತಿ ಕಾಲದ ವಿಶೇಷ ಅವಧಿ' ಎದುರಾಯಿತು. ತನ್ನ ದೇಶದ ಶೇ. ೮೦ರಷ್ಟು ಸಾಮಗ್ರಿಗಳಿಗೆ ಸೋವಿಯತ್ ದೇಶವನ್ನು ನಂಬಿದ್ದ ಕ್ಯೂಬಾ ದಿಢೀರನೆ ಕಡು ಬಡವನಾಗಿ ಹೋಯಿತು.

ಗುಸ್ಟೋ ಮನೆಯಲ್ಲಿ ದಿಢೀರನೆ ಬನ್‌ಗಳು ಮಾಯವಾದವು, ಅಡುಗೆ ಮಾಡುವ ಎಣ್ಣೆ ಇಲ್ಲವಾಯಿತು, ಮೈತೊಳೆಯುವ ಸೋಪು, ಬಟ್ಟೆ ಉಜ್ಜುವ ಸೋಪು, ಟೂತ್‌ಪೇಸ್ಟ್, ಕೆಚಪ್, ಬಟ್ಟೆ, ಶೂ, ಕೊನೆಗೆ ಬೆಂಕಿಪೊಟ್ಟಣವೂ ಇಲ್ಲವಾಯಿತು. ಪ್ರತೀ ಕ್ಯೂಬನ್ನರ ಮನೆಗಳು ಬಡವಾದವು. ಪೆಟ್ರೋಲ್ ಇಲ್ಲದೆ ವಾಹನಗಳು ನಿಂತವು, ಔಷಧಿ ಇಲ್ಲದೆ ಆರೋಗ್ಯ ವ್ಯವಸ್ಥೆಯೇ ಅಲ್ಲಾಡಿತು. ಹಾಲಿಲ್ಲದೆ ಮಕ್ಕಳು ಬಡವಾದರು. ಬಸ್ ಇಲ್ಲದೆ ಶಾಲೆ ದೂರವಾಯಿತು.

ವಿಶ್ವ ಆಹಾರ ಸಮ್ಮೇಳನದಲ್ಲಿ ಕ್ಯಾಸ್ಟ್ರೋ ಹೇಳಿದರು - 'ನಮ್ಮ ದೇಶದ ಯಾವುದೇ ಮಾರುಕಟ್ಟೆಗೆ ಹೋಗಿ ನೋಡಿ ಅಲ್ಲಿ ಜನರ ಕ್ಯೂ ಇಲ್ಲವಾಗಿದೆ. ಏಕೆಂದರೆ ಅಲ್ಲಿ ಕೊಳ್ಳಲು ವಸ್ತುವೇ ಇಲ್ಲ. ಯಾವುದೇ ದೇಶದ ರಸ್ತೆಗಳಂತೆ ನಮ್ಮ ಬೀದಿಗಳು ಗಿಜಿಗುಡುವುದಿಲ್ಲ. ಏಕೆಂದರೆ ವಾಹನಕ್ಕಾಗಿ ನಮ್ಮ ಬಳಿ ತೈಲವೇ ಇಲ್ಲ'.

ಈ ಸಂಕಟಗಳ ಮಧ್ಯೆಯೂ ಜನರು ಫಿಡಲ್‌ನ ಹಿಂದೆ ನಿಂತರು. 'ನನ್ನ ದೇಶದ ಜನರೆ ನಮ್ಮ ಮಕ್ಕಳ ಬಸ್‌ಗಳಿಗಾಗಿ ನಿಮ್ಮ ವಾಹನಗಳ ತೈಲವನ್ನು ಮೀಸಲಿಡಿ' ಎಂದರು. ಎಂಜಿನಿಯರ್, ವೈದ್ಯ, ವಿಜ್ಞಾನಿ ಪ್ರತಿಯೊಬ್ಬರೂ ದಿನಕ್ಕೆ ಕನಿಷ್ಠ ೨೦ ಕಿ.ಮೀ. ನಡೆಯತೊಡಗಿದರು. ಸೈಕಲ್‌ನ್ನು ಬಳಸಿ ಎಂದರು ಕ್ಯಾಸ್ಟ್ರೋ. ೧೧ ದಶಲಕ್ಷ ಜನರ ದೇಶದಲ್ಲಿ ೩ ಲಕ್ಷ ಸೈಕಲುಗಳು ಕಾಣಿಸಿಕೊಂಡವು. ಕಬ್ಬಿನ ಗದ್ದೆಗಳಲ್ಲಿ ಟ್ರಾಕ್ಟರ್‌ಗಳಿದ್ದವು. ಉಳಲು ತೈಲವಿರಲಿಲ್ಲ. ಕಟಾವು ಮಾಡಲು ವಾಹನಗಳಿದ್ದವು. ಬೇಕಾದ ಬಿಡಿ ಭಾಗಗಳು ಸಿಗುತ್ತಿಲ್ಲ. ಕಬ್ಬು ಅರೆಯುವ ಕಾರ್ಖಾನೆಗಳು ಇದ್ದವು. ಆದರೆ ಯಂತ್ರಗಳಿಗೆ ಕೀಲೆಣ್ಣೆ ಇರಲಿಲ್ಲ. ಆಹಾರ ಬೆಳೆಯಲು ಎಲ್ಲರೂ ತಯಾರಿದ್ದರು. ಕ್ರಿಮಿನಾಶಕ ಗೊಬ್ಬರಗಳಿಲ್ಲ. ಆದರೆ ಕ್ಯೂಬಾ ಎದೆಗುಂದಲಿಲ್ಲ - ಗದ್ದೆಗಳನ್ನು ಎತ್ತುಗಳು ಉತ್ತವು, ಶಾಲೆಯ ಮಕ್ಕಳು ಹೊಲದ ಕಡೆ ನಡೆದರು. ಬೆಳೆ ಕಟಾವು ಮಾಡಿದರು, ವಿಜ್ಞಾನಿಗಳು ಒಂದೇ ಗಿಡ ಹಲವು ಫಸಲು ನೀಡುವ ಸಂಶೋಧನೆ ಕೈಗಿತ್ತರು.

'ಹಸಿದು ಸಾಯುವಂತೆ ಮಾಡಿದರು, ಹಂಚಿ ತಿನ್ನುವುದನ್ನು ಕಲಿತೆವು, ರೋಗಗಳಿಂದ ನರಳಿ ಸಾಯುವಂತೆ ಮಾಡಿದರು. ಹಸಿರು ಎಲೆಗಳಿಂದ ಜೀವ ಉಳಿಸಿಕೊಂಡೆವು. ನಮ್ಮ ದನಿಗಳನ್ನು ಕುಗ್ಗಿಸಲು ಯತ್ನಿಸಿದರು. ಅವು ಮರುಧ್ವನಿಗಳಾದವು ನಿಮ್ಮ ಎದೆಗಳಲ್ಲಿ' ಎಂದರು ಕ್ಯಾಸ್ಟ್ರೋ.

ಇಡೀ ಜಗತ್ತು ಕ್ಯೂಬಾದ ಪರ ನಿಂತಿತು. ಹೋರಾಟದಲ್ಲಿ ನೀವು ಒಬ್ಬಂಟಿಯಲ್ಲ ಎಂದು ಸಾರಿದರು. ಭಾರತದ ಗೋಧಿ, ಬ್ರೆಜಿಲ್‌ನ ಕಾಫಿ, ಮೆಕ್ಸಿಕೋದ ಧೈರ್ಯ, ಅಮೇರಿಕಾದ ಕಂಪ್ಯೂಟರ್‌ಗಳು, ಚೀನಾದ ಸೈಕಲ್‌ಗಳು, ಆಫ್ರಿಕಾದ ರಕ್ತ ಕ್ಯೂಬಾದೆಡೆಗೆ ಹರಿದುಬಂದವು. ಎಲ್ಲಕ್ಕಿಂತಲೂ ಹೆಚ್ಚಾಗಿ ಜಗತ್ತಿನ ಮೂಲೆ ಮೂಲೆಗಳಲ್ಲಿ ಕ್ಯೂಬಾ ಪರವಾಗಿ ಸಭೆಗಳಾದವು. ಸಮ್ಮೇಳನಗಳಾದವು. ಅಮೇರಿಕಾ ನಿನ್ನ ದಿಗ್ಬಂಧನ ತೆಗೆದುಹಾಕು ಎಂದು ಘೋಷಿಸಿದರು. ಒಂದು ಪುಟ್ಟ ಕ್ಯೂಬಾ ಪರವಾಗಿ ಗಡಿ, ಗೋಡೆಗಳನ್ನು ಮೀರಿ ಜನರು ಎದ್ದು ನಿಂತರು.

ಆಗ ಅಮೇರಿಕಾ ಹೇಳಿತು : 'ಹೆಲ್ಮ್ಸ್ - ಬರ್ಟನ್ ಕಾಯಿದೆ'. ಕ್ಯಾಸ್ಟ್ರೋನನ್ನು ಭೂತ ಎಂದು ಕರೆದ ಅಮೇರಿಕಾ ಇನ್ನಷ್ಟು ಉಸಿರುಗಟ್ಟಿಸಲು ಹೊರಟಿತು. ಯಾವುದೇ ದೇಶ ಕ್ಯೂಬಾದ ಬೆಂಬಲಕ್ಕೆ ನಿಂತರೆ ಆ ದೇಶದ ವಿರುದ್ಧವೂ ದಿಗ್ಬಂಧನ ಎಂದು ಸಾರಿತು.


ಅಮೇರಿಕಾದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಿ ಎಂದು ಮಿತ್ರರಾಷ್ಟ್ರಗಳೇ ಕ್ಯೂಬಾಗೆ ಕರೆ ನೀಡಿದವು. ಬೆರಳನ್ನು ಕೊಟ್ಟು ಕೈ ಕತ್ತರಿಸಿಕೊಂಡವರನ್ನು ನೋಡಿದ್ದೇವೆ ಎಂದಿತು ಕ್ಯೂಬಾ. ಸಿಕ್ಕ ಸಿಕ್ಕ ವೇದಿಕೆಗಳಿಂದ ಕ್ಯೂಬಾವನ್ನು ಅಮೇರಿಕಾ ಹೊರದೂಡಲು ಆರಂಭಿಸಿತು.

ಕ್ಯೂಬಾ ಹೇಳಿತು 'ನಾನು ಈ ಕೋಣೆಯಿಂದ ಹೊರಹೋಗುತ್ತಿದ್ದೇನೆ. ನನ್ನೊಂದಿಗೆ ಇಡೀ ಅಮೇರಿಕಾದ ಜನರಿದ್ದಾರೆ. ಹಾಗೆಯೇ ಮತ್ತೆ ನಾನು ಈ ಕೋಣೆಗೆ ಹಿಂದಿರುಗುತ್ತೇನೆ. ನನ್ನೊಂದಿಗೆ ಇಡೀ ಅಮೇರಿಕಾದ ಜನರು ಇರುತ್ತಾರೆ.'

ಕ್ಯೂಬಾ ಬಡತನವನ್ನು ಹಲ್ಲುಕಚ್ಚಿ ಸಹಿಸಲು ಸಜ್ಜಾಯಿತು. ಅಮೇರಿಕಾದ ಕಾನೂನುಗಳು ಬಿಗಿಯಾದಷ್ಟೂ ಕ್ಯೂಬಾದ ಪ್ರತಿರೋಧ ಹೆಚ್ಚಾಯಿತು. 'ಚಿಮಣಿ ಇಲ್ಲದ ಕೈಗಾರಿಕೆ' ಎಂದು ಕ್ಯೂಬಾ ಬಣ್ಣಿಸಿದ ಪ್ರವಾಸೋದ್ಯಮ ಆರಂಭವಾಯಿತು. ತನ್ನ ಸುತ್ತ ಸುಂದರ ಕಡಲನ್ನು ಹರಡಿಕೊಂಡಿರುವ ಕ್ಯೂಬಾ ಎಲ್ಲರನ್ನೂ ಆಕರ್ಷಿಸಿತು. ಲೂಟಿ ಮಾಡುವವರ ತಲೆ ಒಡೆಯುವವರ ಹಣ ಕಸಿಯುವವರ ದೇಶಗಳಿಗೆ ಹೋಗುವ ಬದಲು ಪ್ರವಾಸಿಗರು ನೆಮ್ಮದಿಯ ಕ್ಯೂಬಾದತ್ತ ಬಂದರು. ಹೊಡೆತಕ್ಕೊಂದು ಹೊಡೆತ ನೀಡಿದ ಕ್ಯೂಬಾದ ವಿರುದ್ಧ ಅಮೇರಿಕಾ ಸೆಟೆದು ನಿಂತಿತು. ಪ್ರವಾಸಿಗರನ್ನು ಹೊರುವ ವಿಮಾನಗಳನ್ನು ಹೊಡೆದುರುಳಿಸಿತು, ಪ್ರವಾಸಿಗರು ಇರುವ ಹೊಟೇಲ್‌ಗಳ ಮೇಲೆ ಬಾಂಬ್ ದಾಳಿ ನಡೆಸಲಾಯಿತು.

ಆದರೆ 'ಸಗಣಿಯಿಂದ ಅದ್ಭುತ ಹೂವುಗಳು ಅರಳುವಂತೆ ಹೊಸ ದಾರಿಗಳು ಅರಳಿದವು', 'ಮೋಡ ಇದೆ ಎಂದ ಮಾತ್ರಕ್ಕೆ ಆಕಾಶದಲ್ಲಿ ಸೂರ್ಯನಿಲ್ಲ ಎಂದು ಅರ್ಥವೇನು. ಮೋಡ ಹನಿಯೊಡೆದು ನೆಲಕ್ಕುದುರಿದರೆ ಅಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಸೂರ್ಯನಿದ್ದಾನೆ' ಎಂದರು ಕ್ಯಾಸ್ಟ್ರೋ.

## ಹೋರಾಟದ ಸಾಗರಕ್ಕೆ...



ಅಮೇರಿಕಾದ ನ್ಯೂಜೆರ್ಸಿಯ ಆ ಮನೆಯ ಮುಂದೆ ಕಿಕ್ಕಿರಿದ ಜನ. ಒಕ್ಕೊರಲಿನಲ್ಲಿ ಕೂಗುತ್ತಿದ್ದಾರೆ - 'ಟೊರಿಸೆಲ್ಲಿ ಹೊರಗೆ ಬಾ ನಿನ್ನ ನ್ಯೂಜೆರ್ಸಿ ಹೇಗಿದೆ ನೋಡು. ಬೀದಿಗಳಲ್ಲಿ ಮಕ್ಕಳು ಭಿಕ್ಷೆ ಬೇಡಿ ತಿನ್ನುತ್ತಿದ್ದಾರೆ. ಮನೆ ಇಲ್ಲದ ನೂರಾರು ಜನರು ಬೀದಿ ಬೀದಿ ಅಲೆಯುತ್ತಿದ್ದಾರೆ. ಹಾಲಿಲ್ಲದೆ ಕಂದಮ್ಮಗಳು ಸಾಯುತ್ತಿವೆ. ಟೊರಿಸೆಲ್ಲಿ ನಿನ್ನ ನ್ಯೂಜೆರ್ಸಿಯಲ್ಲಿ ಜನರಿಗೆ ಬಂದಿರುವ ಈ ಸ್ಥಿತಿ ಕ್ಯೂಬಾದಲ್ಲಿ ಬರಲು ಬಿಡುವುದಿಲ್ಲ'. ಅಮೇರಿಕಾದ ಮೂಲೆ ಮೂಲೆಗಳಿಂದ ಬಂದ ಸಾವಿರಾರು ಜನ ಟೊರಿಸೆಲ್ಲಿಯ ಮನೆ ಮುಂದೆ ಸೇರಿದರು. ಟೊರಿಸೆಲ್ಲಿಯ ಮನೆಯ ಬಾಗಿಲು ಭೀತಿಯಿಂದಾಗಿ ತೆರೆಯಲೇ ಇಲ್ಲ.

ಕ್ಯೂಬಾದ ವಿರುದ್ಧ ಅಮೇರಿಕಾ ಆರ್ಥಿಕ ದಿಗ್ಬಂಧನವನ್ನು ಹೇರಲು ಕಾರಣ ಈ ಟೊರಿಸೆಲ್ಲಿ. ಸೆನೆಟರ್ ಟೊರಿಸೆಲ್ಲಿ ರಚಿಸಿದ ಕಾನೂನಿನಿಂದಾಗಿ ಕ್ಯೂಬಾದಲ್ಲಿ ತಳಮಳದ ಅಲೆಗಳೆದ್ದವು. ಹೊಸ ಕ್ರಾಂತಿಯ ಸರ್ಕಾರ ತನ್ನ ಜನರಿಗೆ ಬೆಳಕಿನ ಕಿರಣಗಳನ್ನು ಕೈಯಲ್ಲಿಡುವ ಮುಂಚೆಯೆ ಟೊರಿಸೆಲ್ಲಿ ಅತ್ಯಂತ ಕ್ರೂರ ಕಾಯಿದೆಯನ್ನು ರಚಿಸಿದ್ದ. ಕೆಲವೇ ವಾರಗಳಲ್ಲಿ ಕ್ಯೂಬಾವನ್ನು ನಾಶ ಮಾಡುವುದಾಗಿ ಘೋಷಿಸಿದ್ದ.



ಈಗ ಅದೇ ಟೊರಿಸೆಲ್ಲಿಯ ಮನೆಯ ಮುಂದೆ ಜನ ಕಿಕ್ಕಿರಿದು ಸೇರಿದ್ದರು. ಅವರು ಕ್ಯೂಬನ್ನರಲ್ಲ. ಅಮೇರಿಕಾದ ಜನರೇ ಸೇರಿ ಕ್ಯೂಬಾವನ್ನು ತುಳಿಯುವ ಅಮೇರಿಕಾದ ಕಟುಕತನವನ್ನು ಖಂಡಿಸಿದರು. 'ಕ್ಯೂಬಾದಲ್ಲಿ ಜನರು ಬೀದಿಗಳಲ್ಲಿ ಭಿಕ್ಷೆ ಬೇಡುತ್ತಿಲ್ಲ, ಮಕ್ಕಳು ಹಾಲಿಲ್ಲದೆ ಕಣ್ಣೀರಿಡುತ್ತಿಲ್ಲ, ವೈದ್ಯರಿಲ್ಲದೆ ರೋಗದಿಂದ ನರಳುತ್ತಿಲ್ಲ. ಟೊರಿಸೆಲ್ಲಿ ನ್ಯೂಜೆರ್ಸಿಗೆ ಬಂದಿರುವ ಸ್ಥಿತಿ ಕ್ಯೂಬಾಗೆ ಬರಲು ನಾವು ಎಂದೆಂದೂ ಬಿಡುವುದಿಲ್ಲ' ಎಂದರು.

ಅಮೇರಿಕಾದ ಮೂಲೆ ಮೂಲೆಗಳಿಂದ ಜಾಥಾ ಹೊರಟವು. ಕ್ಯೂಬಾದ ನೆರವಿಗೆ ಜನ ಧಾವಿಸಿಬಂದರು. ತಮ್ಮ ಬಳಿಯಿದ್ದ ಸೈಕಲ್, ಮನೆಯಲ್ಲಿದ್ದ ಔಷಧ, ಮಕ್ಕಳಿಗಾಗಿ ತಂದಿದ್ದ ಆಟದ ಗೊಂಬೆ, ಇದ್ದ ಹಣ ಎಲ್ಲವನ್ನೂ ಜಾಥಾಗೆ ಕಾಣಿಕೆಯಾಗಿ ನೀಡಿದರು.

'ವಿಜಯ ಎನ್ನುವುದು ಕೇವಲ ಚಪ್ಪಾಳೆಯಿಂದ ಮಾತ್ರ ಬರುವುದಿಲ್ಲ' ಎಂದಿದ್ದರು ಫಿಡೆಲ್ ಕ್ಯಾಸ್ಟ್ರೋ. ಇದು ಅಮೇರಿಕಾದವರಿಗೆ ಅರ್ಥವಾಯಿತೇನೋ. ಅಮೇರಿಕಾದ ಎಲ್ಲ ಊರು ಕೇರಿಗಳನ್ನು ಹಾದು ಕ್ಯೂಬಾ ಪರ ಜಾಥಾ ಹೊರಟಿತು. ಅದುವರೆಗೆ ಹರಡಿದ್ದ ಸುಳ್ಳುಗಳ ಪರದೆಯನ್ನು ಹರಿದು ಸತ್ಯ ಸಂಗತಿಗಳನ್ನು ವಿವರಿಸಿತು. ಕ್ಯೂಬಾದ ಬಗ್ಗೆ ಏನೂ ಮಾತಾಡದೆ ಎಲ್ಲೆಲ್ಲಿ ಮೌನ ಪಿತೂರಿ ನಡೆಸಿತ್ತೋ ಅಲ್ಲೆಲ್ಲಾ ಕ್ಯೂಬಾ ಏನು ಎಂದು ವಿವರಿಸಿತು. ಮಾಧ್ಯಮಗಳು ಸತತವಾಗಿ ಊದಿದ ಅಮೇರಿಕಾದ ತುತ್ತೂರಿಯ ವಿರುದ್ಧ ಇದು ಹೀಗೆ ಎಂದು ಬಿಡಿಸಿಟ್ಟಿತು. ಅಷ್ಟು ಮಾತ್ರವಲ್ಲ ಕ್ಯೂಬನ್ನರಿಗೆ ಸಂಕಷ್ಟದ ದಿನಗಳಲ್ಲಿ ಬೇಕಾದ ಎಲ್ಲವನ್ನೂ ಸಂಗ್ರಹಿಸತೊಡಗಿತು. ಅಮೇರಿಕಾದ ಒಡಲಲ್ಲಿಯೇ ಬಿರುಗಾಳಿಯೊಂದು ಆರಂಭವಾಯಿತು.

ಅಮೇರಿಕಾದ ಕಣ್ಣು ಕೆಂಪಾಯಿತು. ೯೦ ಮೈಲು ದೂರದಲ್ಲಿ ತನ್ನ ವಿರುದ್ಧ ಎದ್ದ ಸೊಲ್ಲನ್ನೇ ಸಹಿಸದೆ ಆ ದನಿ ಅಡಗಿಸಲು ಹೊರಟ ಅಮೇರಿಕಾ ತನ್ನ ಒಡಲಲ್ಲಿಯೇ ಹುಟ್ಟುತ್ತಿರುವ ಕಾವನ್ನು ಕಂಡು ದಂಗಾಯಿತು. ಪರಿಣಾಮ - ಪ್ಯಾಸ್ಟರ್ಸ್ ಆಫ್ ಪೀಸ್ ಸಂಘಟನೆ ಕ್ಯೂಬಾದ ಮಕ್ಕಳಿಗಾಗಿ ಸಂಗ್ರಹಿಸಿದ್ದ ೪೫೦ ಕಂಪ್ಯೂಟರ್‌ಗಳನ್ನು ಅಮೇರಿಕಾ ಸರ್ಕಾರ ಕಿತ್ತುಕೊಂಡಿತು. ಮಕ್ಕಳಿಗ್ಯಾಕೆ ಕಂಪ್ಯೂಟರ್? ಇದು ಕ್ಯೂಬಾ ನಡೆಸುವ ಮಿಲಿಟರಿ ಕಾರ್ಯಾಚರಣೆಗೆ ಕೊಂಡೊಯ್ಯುತ್ತಿರುವ ಸಾಧನ ಎಂದು ಕಸ್ಟಮ್ಸ್ ಅಧಿಕಾರಿಗಳು ದಬಾಯಿಸಿದರು. ಕಂಪ್ಯೂಟರ್‌ಗಳನ್ನು ಕ್ಯೂಬಾದ ಮಕ್ಕಳ ಕೈಗಿಡುವವರೆಗೆ ವಿರಮಿಸುವುದಿಲ್ಲ ಎಂದು ಸಾರಿದ ಪ್ಯಾಸ್ಟರ್ಸ್ ಆಫ್ ಪೀಸ್ ಸದಸ್ಯರು ಆ ಅಧಿಕಾರಿಗಳ ಮುಂದೆಯೇ ಉಪವಾಸ ಆರಂಭಿಸಿದರು. ಒಂದಲ್ಲಾ, ಎರಡಲ್ಲಾ ೯೪ ದಿನ ಉಪವಾಸ ಮುಷ್ಕರ ನಡೆಯಿತು. ಅಮೇರಿಕಾದ ಎಲ್ಲೆಡೆಯಿಂದ ವಿವಿಧ ಸಂಘಟನೆಗಳು ಮುಷ್ಕರದ ಸ್ಥಳಕ್ಕೆ ಧಾವಿಸಿ ಬಂದವು. ಕ್ಯೂಬಾ ಪರ ದನಿ ಗಟ್ಟಿಯಾಗುತ್ತಾ ಹೋಯಿತು. ಗಾಬರಿಯಾದ ಅಮೇರಿಕಾ ಕಂಪ್ಯೂಟರ್‌ಗಳನ್ನು ಹಿಂದಿರುಗಿಸಿ ಸಮಸ್ಯೆಯಿಂದ ಪಾರಾಯಿತು.

ಯಾವ ದೇಶ ಧರ್ಮವನ್ನು ಧಿಕ್ಕರಿಸಿದೆ, ಧರ್ಮಗುರುಗಳನ್ನು ಗಡೀಪಾರು ಮಾಡುತ್ತಿದೆ, ದೇವರನ್ನು ನಂಬುವವರಿಗೆ ಚಿತ್ರಹಿಂಸೆ ನೀಡುತ್ತಿದೆ ಎಂದು ಅಮೇರಿಕಾ ಪ್ರಚಾರ ಮಾಡಿತ್ತೋ ಆ ಕ್ಯೂಬಾದ

ಪರವಾಗಿ ನಿಂತದ್ದು ಅಮೇರಿಕಾದ ಚರ್ಚ್‌ನ ಸಂಘಟನೆಗಳು. ಕ್ಯೂಬಾದ ಒಳಗೆ ಅಡ್ಡಾಡಿ ಮಾನವೀಯತೆ ಮೆರೆಯುತ್ತಿದ್ದ ದೇಶವನ್ನು ಕಂಡು ಬಂದ ಪ್ಯಾಸ್ಟರ್ಸ್ ಆಫ್ ಪೀಸ್‌ನ ರೆವರೆಂಡ್ ಲೂಯಿಸ್ ವಾಕರ್ ಅವರು ಕ್ಯೂಬಾ ಏನು ಎಂಬುದನ್ನು ಅಮೇರಿಕಾಗೆ ವಿವರಿಸಿದರು. ಅಮೇರಿಕಾದ ಎಲ್ಲೆಡೆ ಜಾಥಾ ಕುಡಿಯೊಡೆಯಿತು.

ಪ್ಯಾಸ್ಟರ್ಸ್ ಆಫ್ ಪೀಸ್ ಇಡೀ ಅಮೇರಿಕಾವನ್ನು ಸುತ್ತಲು ಸಾಧ್ಯವಾಗುವ ಹಾಗೆ ೧೩ ಜಾಥಾಗಳನ್ನು ಸಂಘಟಿಸಿತು. ಈ ಜಾಥಾಗಳು ಹೆಚ್ಚು ಜನಪ್ರಿಯವಾಗುತ್ತಿದ್ದ ಹಾಗೆ ಅಮೇರಿಕಾ ಸರ್ಕಾರ ಹಿಂಬಾಗಿಲಿನಿಂದ ಹಲವು ರೀತಿಯ ದಾಳಿ ನಡೆಸಿತು. ಪ್ಯಾಸ್ಟರ್ಸ್ ಆಫ್ ಪೀಸ್‌ನ ಪ್ರಮುಖ ರೆವರೆಂಡ್ ವಾಕರ್ ಅವರನ್ನು ಕೊಲೆ ಮಾಡಲು ಪ್ರಯತ್ನಿಸಿತು. ಏಳನೆಯ ಜಾಥಾ ಸ್ಯಾನ್‌ಡಿಯಾಗೋ ದಾಟುತ್ತಿದ್ದಾಗ 'ಆಲ್ಫಾ ೬೬ - ಕ್ಯೂಬಾದ ವಿರುದ್ಧ ಯುದ್ಧಕ್ಕಾಗಿ ಸಜ್ಜಾಗುತ್ತಿರುವ ಕಮ್ಯಾಂಡೋ ಮಿಲಿಟರಿ ಗುಂಪು' ಎಂದು ಗುರುತಿಸಿಕೊಂಡ ಉಗ್ರಗಾಮಿಗಳು - ವಾಕರ್ ಅವರ ವಾಹನದ ಮೇಲೆ ದಾಳಿ ನಡೆಸಿದರು. ಹೆದ್ದಾರಿಗಳಲ್ಲಿ ಜಾಥಾದ ವಾಹನಗಳನ್ನು ಅಡ್ಡಗಟ್ಟಿದರು. ಚರ್ಚ್‌ನ ಆವರಣದಲ್ಲಿದ್ದ ವಾಹನಗಳನ್ನು ಚಿಂದಿ ಮಾಡಿದರು. ಆದರೂ ಜಾಥಾದ ಹುಮ್ಮಸ್ಸು ಕುಗ್ಗಲಿಲ್ಲ.

'ಅಮೇರಿಕಾದ ಅನುಮತಿ ನಮಗೆ ಬೇಕಿಲ್ಲ' ಎಂದು ವಾಕರ್ ಗಂಟಾಘೋಷವಾಗಿ ಸಾರಿದರು. ಕ್ಯೂಬಾ ಪರ ಇರುವ ಅಮೇರಿಕಾದ ಎಲ್ಲಾ ಸಂಘಟನೆಗಳೂ ಒಟ್ಟಾಗಿ ಮುಂದೆ ನುಗ್ಗುವಂತೆ ಕರೆ ನೀಡಿದರು. ಅಮೇರಿಕಾ ಬೆಚ್ಚಿಬಿತ್ತು. ಕಂಪ್ಯೂಟರ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ಬಿಸಿ ಉಂಡಿದ್ದ ಅಮೇರಿಕಾ ನಂತರ ನೂರಾರು ವಾಹನಗಳು ಸೌಹಾರ್ದ ಕಾಣಿಕೆಗಳ ರಾಶಿಯನ್ನೇ ಹೊತ್ತು ಹೊರಟರೂ ಅದನ್ನು ತಡೆಯುವ ಸಾಹಸ ಮಾಡಲಿಲ್ಲ.

ಈ ೧೩ ಜಾಥಾಗಳ ಪೈಕಿ ಒಂದು ಕ್ಯೂಬಾದ ಮಕ್ಕಳಿಗೆಂದೇ ಮೀಸಲಾಗಿತ್ತು. 'ಕ್ಯೂಬಾದ ಮಕ್ಕಳಿಗೆ ಸಾವು ಹಾಗೂ ಹಸಿವನ್ನು ನೀಡಲು ಅಮೇರಿಕಾ ಬಯಸಿದೆ. ಹಾಲುಗಲ್ಲದ ಕಂದಮ್ಮಗಳು ನೀರಿಲ್ಲದೆ, ಔಷಧಿಯಿಲ್ಲದೆ ಸಾವನ್ನಪ್ಪಲು ನಾವು ಬಿಡುವುದಿಲ್ಲ' ಎಂದರು ಅಮೇರಿಕನ್ನರು.

ಮಕ್ಕಳಿಗಾಗಿ ಮೀಸಲಿದ್ದ ಒನೆಯ ಜಾಥಾ ಹೊರಡುತ್ತಿದ್ದಂತೆಯೇ ಅಮೇರಿಕನ್ನರ ಕಣ್ಣುಗಳಲ್ಲಿ ನೀರು ಜಿನುಗಿತು. ಮಕ್ಕಳ ಔಷಧಿಗಳನ್ನು ಹೊತ್ತ ಅಂಬುಲೆನ್ಸ್, ನಾಲ್ಕು ಶಾಲಾ ಬಸ್‌ಗಳು, ನೂರಾರು ವೀಲ್‌ಚೇರ್‌ಗಳು, ಕಂಪ್ಯೂಟರ್‌ನಿಂದ ಆಧುನೀಕರಿಸಲ್ಪಟ್ಟ ಸಂಚಾರಿ ಮಕ್ಕಳ ಗ್ರಂಥಾಲಯ, ಹಾಲಿನ ಪೌಡರ್, ಕಣ್ಣು ಕಾಣದ, ಕಿವಿ ಕೇಳದ ಮಕ್ಕಳಿಗಾಗಿ ಸಾಧನಗಳು, ೫೦ ಸಾವಿರ ಕನ್ನಡಕಗಳು ಹೀಗೆ ಜಾತಾದ ವಾಹನಗಳು ಬಿರಿಯುತ್ತಲೇ ಹೋದವು. ಬ್ರುಡರ್‌ಹಾಫ್ ಕಂಪನಿ ಒಂದು ಟ್ರಾಕ್ಟರ್ ತುಂಬಾ ಗೊಂಬೆಗಳನ್ನು ಹೇರಿಕೊಂಡು ಜಾತಾದತ್ತ ಬಂದಾಗ ಜಾಥಾ ಸಂಘಟಿಸಿದವರಿಗೆ ಮಾತುಗಳೇ ಉಳಿದಿರಲಿಲ್ಲ.

ಈ ಜಾಥಾ ಕ್ಯೂಬಾ ಮುಟ್ಟಿದಾಗ ಮಕ್ಕಳು ಈ ಜಾಥಾದಲ್ಲಿ ಬಂದಿದ್ದವರಿಗಾಗಿ ಹಾಡಿ ಕುಣಿದರು. ಶಾಲೆಗಳಿಗೆ ಕರೆದುಕೊಂಡು ಹೋದರು. ತನ್ನ ಬಡತನದ ಮಧ್ಯೆಯೂ ಆಪತ್ಕಾಲದಲ್ಲಿ ಒದಗಿಬಂದ ಸೋವಿಯತ್ ದೇಶ ಚೆರ್ನೋಬಿಲ್ ದುರಂತದಲ್ಲಿ ದುಃಖಕ್ಕೀಡಾದಾಗ ಕ್ಯೂಬಾ ಅಲ್ಲಿನ ನೂರಾರು ಮಕ್ಕಳಿಗೆ ಉಚಿತ ವೈದ್ಯಕೀಯ ಸೇವೆ ನೀಡಿತ್ತು. ಆ ಶಿಬಿರಗಳನ್ನು ತೋರಿಸಿದರು. ಆರ್ಥಿಕ ದಿಗ್ಬಂಧನ ಎಂದರೆ ಏನು? ಪಾಟಿ ಪುಸ್ತಕಗಳನ್ನು ಅದು ಹೇಗೆ ಕಸಿದುಕೊಂಡಿದೆ ಎಂದು ವಿವರಿಸಿದರು.

ಇಂದು ಕ್ಯೂಬಾದೊಂದಿಗೆ ಎದ್ದು ನಿಲ್ಲುವವರು ಎಲ್ಲಾ ಕಾಲಗಳ ಪರವಾಗಿ ಎದ್ದು ನಿಲ್ಲುವವರು ಎಂದಿದ್ದರು ಕ್ಯೂಬಾದಲ್ಲಿ ಕ್ರಾಂತಿಯ ಮೊದಲ ಬೀಜಗಳನ್ನು ಬಿತ್ತಿದ ಜೋಸ್‌ಮಾರ್ಟಿ. ಹೌದು ಎನ್ನುವಂತೆ ಅಮೇರಿಕಾದಲ್ಲಿ ಜನಸಾಗರ ಕ್ಯೂಬಾ ಪರವಾಗಿ ಎದ್ದುನಿಂತಿತು.

ವೆಟರನ್ಸ್ ಆಫ್ ಫಾರಿನ್ ವಾರ್, ಇಂಟರ್‌ನ್ಯಾಷನಲ್ ಪೀಸ್ ಫಾರ್ ಕ್ಯೂಬಾ ಅಪೀಲ್, ಯುಎಸ್-ಕ್ಯೂಬಾ ಫ್ರೆಂಡ್‌ಶಿಪ್ ಅಸೋಸಿಯೇಶನ್, ವೆನ್ಸಿರಿಮೋಸ್ ಬ್ರಿಗೇಡ್, ಪ್ಯಾಸ್ಟರ್ಸ್ ಆಫ್ ಪೀಸ್, ಕ್ವೀರ್ಸ್ ಫಾರ್ ಕ್ಯೂಬಾ, ನಯಾಗರಾ - ಕೆನಡಾ ಫ್ರೆಂಡ್‌ಶಿಪ್ ಅಸೋಸಿಯೇಶನ್, ನ್ಯೂಯಾರ್ಕ್ ಅಮೇರಿಕನ್ ಇಂಡಿಯನ್ ಮೂವ್‌ಮೆಂಟ್, ನ್ಯಾಷನಲ್ ನೆಟ್‌ವರ್ಕ್ ಫಾರ್ ಕ್ಯೂಬಾ... ಅಮೇರಿಕಾದಲ್ಲಿ ಜನರು ಕ್ಯೂಬಾ ಪರವಾಗಿ ಎದ್ದುಬಂದರು. ಸಂಘ ರಚಿಸಿಕೊಂಡರು. ಕ್ಯೂಬಾ ಗೆ ಪ್ರೀತಿ ಹಂಚಿದವರು ಸಾಮ್ರಾಜ್ಯಶಾಹಿ ಅಮೇರಿಕಾಗೆ ಹೇಳಿದರು - ಎಚ್ಚರ!

ಫಿಡೆಲ್ ಕ್ಯಾಸ್ಟ್ರೋ ಮತ್ತು ಕ್ಯೂಬಾ ಅಮೇರಿಕಾಗೆ ದುಃಸ್ವಪ್ನವಾಯಿತು. ವಿಶ್ವಸಂಸ್ಥೆಗೆ ೫೦ ತುಂಬಿದಾಗ ನಡೆದ ಸಭೆಯಲ್ಲಿ ಭಾಗವಹಿಸಲು ಫಿಡೆಲ್‌ಕ್ಯಾಸ್ಟ್ರೋ ಅಮೇರಿಕಾಗೆ ಬಂದಿಳಿದರು. ಯಾವುದೇ ದೇಶದ ಉನ್ನತ ವ್ಯಕ್ತಿಯನ್ನು ಸರ್ಕಾರಿ ಗೌರವದೊಂದಿಗೆ ಸ್ವಾಗತಿಸಬೇಕಾಗಿದ್ದ ಅಲ್ಲಿನ ಸರ್ಕಾರಿ ಪ್ರತಿನಿಧಿಗಳು ನಾಪತ್ತೆಯಾಗಿದ್ದರು. ಆದರೆ ಸಾವಿರಾರು ಜನರು ವಿಮಾನ ನಿಲ್ದಾಣವನ್ನು ಮುತ್ತಿದ್ದರು. ಎಲ್ಲರ ಕೂಗು ಒಂದೇ - ಕ್ಯಾಸ್ಟ್ರೋ, ಕ್ಯಾಸ್ಟ್ರೋ.

ಕ್ಯಾಸ್ಟ್ರೋ ಅಮೇರಿಕಾಗೆ ಬರಲು ವೀಸಾ ನೀಡಬಾರದು ಎಂದು ಸರ್ಕಾರದ ಪರ ಹೇಳಿಕೆಗಳು ಹೊರಟವು. ಆದರೆ ಕ್ಯಾಸ್ಟ್ರೋ ಪರ ಸಂಘಟನೆಗಳು ದನಿ ಎತ್ತಿದ್ದೇ ತಡ ವೀಸಾ ನಿರಾಕರಿಸಿ ಅವಮಾನ ಮಾಡುವ ಉಪಾಯ ಅಡಗಿ ಹೋಯಿತು. ಕ್ಯಾಸ್ಟ್ರೋ ವಿಶ್ವಸಂಸ್ಥೆಯಲ್ಲಿಯೂ ಅಮೇರಿಕಾವನ್ನು ಹೊಸಕಿ ಹಾಕಿದರು. ಕೇವಲ ಏಳು ನಿಮಿಷಗಳಲ್ಲಿ 'ಹೆಂಗಸರು, ಗಂಡಸರು, ಮಕ್ಕಳು, ಯುವಕರು, ವೃದ್ಧರು ಎಲ್ಲರನ್ನೂ ಸಾವಿನ ಅಂಚಿಗೆ ದೂಡುತ್ತಿರುವ ನಿಮ್ಮ ಆರ್ಥಿಕ ದಿಗ್ಬಂಧನ ಸದ್ದಿಲ್ಲದ ಆ್ಯಟಂಬಾಂಬ್‌ಗಳು' ಎಂದು ಗುಡುಗಿದ್ದೇ ತಡ ಇಡೀ ವಿಶ್ವಸಂಸ್ಥೆ ಎದ್ದು ನಿಂತು ದೀರ್ಘ ಕರತಾಡನ ಮಾಡಿತು.

ಅಮೇರಿಕಾದ 'ಇಂಟರ್‌ನ್ಯಾಷನಲ್ ಹೆರಾಲ್ಡ್ ಟ್ರಿಬ್ಯೂನ್' ಬರೆಯಿತು. 'ಅಧ್ಯಕ್ಷ ಬಿಲ್ ಕ್ಲಿಂಟನ್ ಅವರು ಸಭಾ ಮರ್ಯಾದೆಯನ್ನು ಮೀರಿ ೧೭ ನಿಮಿಷ ಮಾತನಾಡಿದರು. ಕ್ಯಾಸ್ಟ್ರೋಗಿಂತ ಕಡಿಮೆ ಚಪ್ಪಾಳೆ ಪಡೆದರು'.

ಅಮೇರಿಕಾಗೆ ಬಂದ ಎಲ್ಲಾ ಪ್ರತಿನಿಧಿಗಳಿಗೆ ಔತಣಕೂಟ ಏರ್ಪಡಿಸಿದ್ದ ಬಿಲ್ ಕ್ಲಿಂಟನ್ ಕ್ಯಾಸ್ಟ್ರೋವನ್ನು

ಹೊರಗಿಟ್ಟರು. ಅಮೇರಿಕಾ ಸೇಡು ತೀರಿಸಿಕೊಂಡಿದ್ದು ಹೀಗೆ. ನ್ಯೂಯಾರ್ಕ್‌ನ ಮೇಯರ್ ‘ಈ ದೇಶಕ್ಕೆ ಇಂದು ಭೂತ ಹೊಕ್ಕುಬಿಟ್ಟಿದೆ’ ಎಂದರು. ಆದರೆ ಜನ ಫಿಡೆಲ್ ಪರವಾಗಿ ಬಂದರು. ಅಮೇರಿಕಾದ ೮೦ ಸಂಘಟನೆಗಳು ಸೇರಿ ರಚಿಸಿಕೊಂಡ ‘ಕ್ಯೂಬಾಗಾಗಿ ರಾಷ್ಟ್ರೀಯ ಜಾಲ’ ಸತತವಾಗಿ ನಾಲ್ಕು ದಿನ ಅಮೇರಿಕಾದ ಮೂಲೆ ಮೂಲೆಗೆ ಕ್ಯಾಸ್ಟ್ರೋ ಅವರನ್ನು ಕರೆದುಕೊಂಡು ಹೋಯಿತು. ಜನ ಪ್ರೀತಿಯ ಔತಣ ನೀಡಿದರು. ಅಮೇರಿಕಾದ ಮೂತಿಗೆ ಗುದ್ದುವಂತೆ ಸರ್ಕಾರಿ ನೀತಿ ನಿಯಮಗಳನ್ನು ಗಾಳಿಗೆ ತೂರಿ ಅಮೇರಿಕಾದ ವಾಣಿಜ್ಯ ಸಂಸ್ಥೆಗಳು ಕ್ಯಾಸ್ಟ್ರೋರವರೊಡನೆ ಕೈಕುಲುಕಿದವು. ಮಾತ್ರವಲ್ಲ ಕ್ಯೂಬಾದ ಮೇಲೆ ವಿಧಿಸಿರುವ ಆರ್ಥಿಕ ದಿಗ್ಬಂಧನವನ್ನು ಈ ಕೂಡಲೇ ಹಿಂದಕ್ಕೆ ತೆಗೆದುಕೊಳ್ಳುವಂತೆ ಒತ್ತಾಯಿಸಿ ‘ವಾಲ್ ಸ್ಟ್ರೀಟ್ ಜರ್ನಲ್’ನಲ್ಲಿ ಅಮೇರಿಕಾದ ೨೫ ಕಂಪನಿಗಳು ಜಾಹೀರಾತು ನೀಡಿದವು.

ಜೋಸ್‌ಮಾರ್ಟಿ ಹೇಳಿದ್ದು ನಿಜವಾಯಿತು. ಅಮೇರಿಕಾದಲ್ಲಿ ಮಾತ್ರವಲ್ಲ ವಿಶ್ವದ ಎಲ್ಲೆಡೆ ಜನ ಕ್ಯೂಬಾದ ಪರವಾಗಿ ಎದ್ದುನಿಂತರು.

ಕ್ಯಾಸ್ಟ್ರೋ ಹೇಳಿದರು - ‘ಬಹುಮತವಿರುವ ಒಂದು ಅಭಿಪ್ರಾಯಕ್ಕೆ ರಾಜನ ಶಕ್ತಿಗಿಂತಲೂ ಹೆಚ್ಚಾದ ಬಲವಿದೆ. ಅನೇಕ ನೂಲುಗಳಿಂದ ಹೆಣೆಯಲಾಗದ ಹಗ್ಗವು ಒಂದು ಸಿಂಹವನ್ನು ಬೇಕಾದರೂ ಕಟ್ಟಿಹಾಕುತ್ತದೆ’. ಅಮೇರಿಕಾ ಎಂಬ ಸಿಂಹವನ್ನು ಮಣಿಸಲು ಜಗತ್ತಿನ ಮೂಲೆ ಮೂಲೆಗಳಲ್ಲಿ ನೂಲುಗಳು ತಯಾರಾದವು.



## ನೀವು ಕಳಿಸಿದ ಗೋಧಿ...

‘ನೀವು ಕಳಿಸಿದ ಗೋಧಿ ನಮ್ಮಲ್ಲಿ ಹೋರಾಟದ ಹುಮ್ಮಸ್ಸನ್ನು ಹೆಚ್ಚಿಸಿದೆ. ನೀವು ಕಳಿಸಿದ ಗೋಧಿ ಅಮೇರಿಕಾದ ವಿರುದ್ಧ ನಾವು ಇನ್ನಷ್ಟು ದೃಢವಾಗಿ ನಿಲ್ಲುವಂತೆ ಮಾಡಿದೆ. ನೀವು ಕಳಿಸಿದ ಗೋಧಿ ಹೋರಾಟದಲ್ಲಿ ನಾವು ಒಬ್ಬಂಟಿಯಲ್ಲ ಎಂದು ಸಾರಿದೆ. ಈ ಗೋಧಿಯಿಂದ ಕ್ಯೂಬಾದ ಪ್ರತಿಯೊಬ್ಬ ಪ್ರಜೆಗೂ ಒಂದು ವಾರ ಉತ್ತಮ ಬ್ರೆಡ್ ನೀಡುತ್ತೇನೆ’.

ಪಂಜಾಬಿನ ಅತ್ಯುತ್ತಮ ಗೋಧಿಯನ್ನು ಕಲ್ಕತ್ತಾದ ಹಲ್ದಿಯಾ ಬಂದರಿಗೆ ತಂದು ೩೭ ದಿನಗಳ ಕಾಲ ಹಿಂದೂ ಮಹಾಸಾಗರ, ಆಫ್ರಿಕಾ ಖಂಡದ ದಕ್ಷಿಣ ಭಾಗ, ಅಟ್ಲಾಂಟಿಕ್ ಸಾಗರದ ಮೂಲಕ ೨೦ ಸಾವಿರ ಕಿ.ಮೀ. ಪ್ರಯಾಣ ಮಾಡಿದ ಕೆರೆಬಿಯನ್ ಪ್ರಿನ್ಸೆಸ್ - ‘ಕೆರೆಬಿಯನ್ ಸಮುದ್ರದ ರಾಜಕುಮಾರಿ’ ಎಂಬ ಹಡಗು ಹವಾನಾದ ಹಡಗು ಕಟ್ಟೆಯನ್ನು ಸ್ಪರ್ಶಿಸಿದಾಗ ಫಿಡೆಲ್‌ಕ್ಯಾಸ್ಟ್ರೋ ಆಡಿದ ಮಾತಿದು.



ಸಾಮ್ರಾಜ್ಯಶಾಹಿಯ ವಿರುದ್ಧ ಕ್ಯೂಬಾ ನಡೆಸುತ್ತಿರುವ ಹೋರಾಟ ಕ್ಯೂಬಾದ ಹೋರಾಟ ಮಾತ್ರವಲ್ಲ ಅದು ಜಗತ್ತಿನ ಮೂಲೆ ಮೂಲೆಗಳಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಜನರು ನಡೆಸುತ್ತಿರುವ ಹೋರಾಟ ಎಂದು ಭಾವಿಸಿದ ಭಾರತ - ಕ್ಯೂಬಾ ಸೌಹಾರ್ದ ಸಮಿತಿ ಆಪತ್ಕಾಲದಲ್ಲಿರುವ ಕ್ಯೂಬಾಗೆ ಬೀದಿ ಬೀದಿಗಳಲ್ಲಿ ದಿನಗಟ್ಟಲೆ ಸಂಗ್ರಹಿಸಿದ ಹಣದಿಂದ ಖರೀದಿಸಿದ ೧೦,೧೦೫ ಟನ್ ಗೋಧಿಯನ್ನು ಕಳಿಸಿದಾಗ ಫಿಡೆಲ್ ಕ್ಯಾಸ್ಟ್ರೋ ಅದನ್ನು ಸ್ವೀಕರಿಸಲು ಹವಾನಾದ ಬಂದರಿಗೇ ಬಂದರು. 'ನೀವು ಕೇವಲ ೧೦,೧೦೫ ಟನ್ ಗೋಧಿಯನ್ನು ಮಾತ್ರ  ಕಳಿಸಿಲ್ಲ. ಬದಲಾಗಿ ೧೦,೧೦೫ ಟನ್ ಸೌಹಾರ್ದತೆಯನ್ನು ೧೦,೧೦೫ ಟನ್ ನೈತಿಕ ಬೆಂಬಲವನ್ನು ಕಳಿಸಿದ್ದೀರಿ' ಎಂದರು.

'೧೦,೧೦೫ ಟನ್ ಗೋಧಿ ಎಂದರೆ ಎಷ್ಟಾಗುತ್ತದೆ ಗೊತ್ತೇ? ಇನ್ನಷ್ಟು ಪಡೆಯಲು ನಾವು ೧೦,೫೦೦ ಎಕರೆ ಪ್ರದೇಶದಲ್ಲಿ ಕಬ್ಬು ಬೆಳೆದು ಸಕ್ಕರೆ ಉತ್ಪಾದಿಸಬೇಕು. ಭಾರತದಲ್ಲಿ ಇಷ್ಟು ಗೋಧಿ ಬೆಳೆಯಲು ಎಷ್ಟು ಶ್ರಮಬೇಕು ಎಂಬುದು ನಮಗೆ ಗೊತ್ತಿಲ್ಲ. ಆದರೆ ಈ ಉತ್ಪಾದನೆಯಲ್ಲಿ ಎಷ್ಟು ಜನ ಭಾಗವಹಿಸಿದ್ದರು ಎಂಬುದನ್ನು ನಾವು ಊಹಿಸಬಲ್ಲೆವು'.'ಈ ೧೦,೧೦೫ ಟನ್ ಗೋಧಿಯಿಂದ ನೂರು ಗ್ರಾಂನ ಎಂಟು ಕೋಟಿ ಉತ್ತಮ ಬ್ರೆಡ್ ಸುರಳಿಗಳನ್ನು ತಯಾರಿಸಬಹುದು. ಕ್ಯೂಬಾದ ಪ್ರತಿಯೊಬ್ಬರಿಗೆ ಒಂದು ವಾರ ಅತ್ಯುತ್ತಮ ಬ್ರೆಡ್ ನೀವು ನೀಡುತ್ತಿದ್ದೀರಿ' ಎಂದರು.

ಕ್ಯೂಬಾ ಎಂಬ ಪುಟ್ಟ ದೇಶ ಜಗತ್ತಿನ ಎಲ್ಲಾ ದೇಶಗಳ ಮೇಲೆ ಸವಾರಿ ಮಾಡಲು ಹೊರಟಿರುವ ಅಮೇರಿಕಾದ ವಿರುದ್ಧ ನಡೆಸುತ್ತಿರುವ ಹೋರಾಟ ಕೇವಲ ಭಾರತದಿಂದ ಮಾತ್ರವಲ್ಲ ಜಗತ್ತಿನ ಮೂಲೆ ಮೂಲೆಗಳಿಂದ ನೆರವು ಹರಿಯುವಂತೆ ಮಾಡಿದೆ.

ನಮ್ಮ ವಿರುದ್ಧದ ಪ್ರಚಾರವೇನೇ ಇರಲಿ ಜಗತ್ತಿನ ಜನ ನಮ್ಮ ಪರವಾಗಿದ್ದಾರೆ. ಕ್ಯೂಬಾದ ಪರವಾಗಿ ಹತ್ತು ಲಕ್ಷಕ್ಕೂ ಹೆಚ್ಚು ಭಾರತೀಯರು ಸೌಹಾರ್ದ ಜಾತಾಗಳಲ್ಲಿ ಭಾಗವಹಿಸಿದ್ದರು ಎಂಬುದು ನಮ್ಮಲ್ಲಿ ಹುಮ್ಮಸ್ಸು ತುಂಬಿದೆ. ಕ್ಯೂಬಾದೊಂದಿಗೆ ದಿನೇ ದಿನೇ ಜನರ ಸೌಹಾರ್ದ ಹೆಚ್ಚುತ್ತಿದೆ. ಏಕೆಂದರೆ ಜನರಲ್ಲಿ ಸತ್ಯ ತಿಳಿಯುವ ಸಹಜ ಸ್ವಭಾವವಿದೆ ಎಂದರು ಕ್ಯಾಸ್ಟ್ರೋ.

'ನಿಮ್ಮ ಸೂಟ್‌ಕೇಸ್‌ನ ಅರ್ಧಭಾಗ ಕ್ಯೂಬಾ ಆಗಿರಲಿ' - ಕ್ಯೂಬಾಗೆ ಹಾರುವ ಮುನ್ನ ಉತ್ಸವದ ಭಾರತ ಸಿದ್ಧತಾ ಸಮಿತಿ ನಮಗೆ ಸೂಚನೆ ನೀಡಿತ್ತು. ಕ್ಯೂಬಾದ ನೋವು ನಲಿವುಗಳನ್ನು ಸದಾ ಹಂಚಿಕೊಂಡು ಬಂದ ನಮಗೆ ಸೂಟ್‌ಕೇಸ್‌ನಲ್ಲಿ ಅರ್ಧಭಾಗ ಮೀಸಲಾಗಿರಿಸಬೇಕಾದ ಮಹತ್ವ ಗೊತ್ತಿತ್ತು. ಆದರೆ ಕ್ಯೂಬಾಗೆ ಕಾಣಿಕೆಯಾಗಿ ಏನು ಕೊಂಡೊಯ್ಯುವುದು ಎಂಬುದು ಮಾತ್ರ ಬಿಡಿಸಲಾಗದ ಒಗಟಾಗಿತ್ತು. ವಿದೇಶಕ್ಕೆ ಹಾರುವವರಿಗೆ ತಕ್ಷಣವೇ ನೆನಪಾಗುವ ಕರ್ನಾಟಕದ ಕಂಪು ಬೀರುವ ಶ್ರೀಗಂಧ ಶಿಲ್ಪ? ಇಲ್ಲಾ ದಂತದ ಕುಸುರಿ? ಸಂಗಾತಿಯೊಬ್ಬರು ಹೇಳಿದರು - ಸೋಪ್ ಸಾಕು. ದೂರದ ಆ ಕ್ಯೂಬಾಗೆ ಕೇವಲ ಸೋಪ್. ಹಿಂಜರಿದೂ ಹಿಂಜರಿದೂ ಸೂಟ್‌ಕೇಸ್‌ನಲ್ಲಿ ಕೆಲ ಭಾಗ ಸೋಪ್‌ನ್ನೂ ತುಂಬಿಸಿಕೊಂಡು ಕ್ಯೂಬಾಗೆ ಹಾರಿದ ನಮಗೆ 'ಕ್ಯೂಬಾ ಇನ್ನೂ ಅರ್ಥವಾಗಬೇಕು' ಎಂಬುದು ಗೊತ್ತಾಯಿತು.



ಕ್ಯೂಬಾದ ರೇಷನ್‌ಕಾರ್ಡ್ ತಿರುವಿಹಾಕಿದರೆ ಅಲ್ಲಿ ಸೋಪ್‌ನ ದಾಖಲೆಯೇ ಇಲ್ಲ. ಕ್ಯೂಬಾದ ಜನರಿಗೆ ಸಿಗುವುದು ತಿಂಗಳಿಗೆ ಒಂದು ಸೋಪ್ ಮಾತ್ರ. ಅದೂ ಮೈತೊಳೆಯಲು. ನಮ್ಮ ಸೂಟ್‌ಕೇಸ್‌ಗಳಿಂದ ಹೊರಬಿದ್ದ ಸೋಪ್‌ಗಳು ಕ್ಯೂಬಾದ ಹತ್ತು ಹಲವು ಕಥೆಗಳನ್ನು ಬಿಡಿಸಿಟ್ಟಿತು. ದುಬಾರಿಯಾದ ಪೆಟ್ರೋಲ್‌ನ ಮಧ್ಯೆಯೂ ಕ್ರಿಸ್ತನ ಕಾಸಾಬ್ಲಾಂಕಾಗೆ ಪ್ರೀತಿಯಿಂದ ಕರೆದೊಯ್ದು, ಪುಸ್ತಕದ ಹುಚ್ಚು ಎಂದು ಗೊತ್ತಾಗಿ ಹವಾನಾದ ಹಳೆಯ ಪುಸ್ತಕದಂಗಡಿಗಳ ಗಲ್ಲಿಯಲ್ಲಿ ಸುತ್ತಿಸಿದ, ಇಂಗ್ಲಿಷ್ ಇಲ್ಲದ ನಾಡಿನಲ್ಲಿ ತಮ್ಮ ಕೆಲಸವನ್ನೂ ಬಿಟ್ಟು ಅದಷ್ಟೂ ಕ್ಯೂಬಾವನ್ನು ಅರ್ಥ ಮಾಡಿಸಲು ಯತ್ನಿಸಿದ, ಪ್ರಾಥಮಿಕ ಶಾಲಾ ಟೀಚರ್‌ಗಳ ವಿವಾಹ ವಾರ್ಷಿಕೋತ್ಸವಕ್ಕೆ, ಕ್ಯೂಬಾದ ಸಪೋಟಾ ಗೊಜ್ಜನ್ನು ಪ್ರೀತಿಯಿಂದ ಉಣಿಸಿದ ಅಜ್ಜಂದಿರಿಗೆ, ಭಾರತದಿಂದ ಬಂದಿದ್ದಾರಂತೆ ಎಂದು ನೋಡಲು ಬರುತ್ತಲೇ ಇದ್ದ ಹತ್ತು ಹಲವರಿಗೆ ಭಾರತದ ಸಾಬೂನು ಬಿಲ್ಲೆಗಳು ಗೆಳೆತನದ  ಪದಕಗಳಾದವು.

ಕೇವಲ ನಮ್ಮ ಸೂಟ್‌ಕೇಸ್‌ನಿಂದ ಮಾತ್ರವಲ್ಲ ಭಾರತದ ಮೂಲೆ ಮೂಲೆಯಿಂದ ಸೋಪ್‌ಗಳ ಹೊಳೆಯೇ ಹರಿಯಿತು. ಭಾರತಕ್ಕೆ ಬಂದಿದ್ದ ಕ್ಯೂಬಾ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷ ಸರ್ಜಿಯೋ ಕೊರಿಯೇ ಕೇರಿ ಅವರಿಗೆ ಭಾರತದ ಜನತೆ ೩ ಕೋಟಿ ಸಾಬೂನು ಬಿಲ್ಲೆಗಳನ್ನು ಅರ್ಪಿಸಿದರು. ಕ್ಯೂಬಾದ ಕಣ್ಣಂಚು ಒದ್ದೆಯಾಯಿತೇನೋ. ಸರ್ಜಿಯೋ ಕೊರಿಯೇ ಕೇರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜಿತ್ ಅವರಿಗೆ ಪತ್ರ ಬರೆದರು - 'ಕ್ಯೂಬಾದ ಜನತೆಯ ಈ ನಿರ್ಣಾಯಕ ಕಾಲಘಟ್ಟದಲ್ಲಿ ಭಾರತ ನಮ್ಮ ಪರವಾಗಿ ನಡೆಸುತ್ತಿರುವ ಪ್ರಯತ್ನಗಳನ್ನು ನಾವು ನೆನಪಿಸಿಕೊಳ್ಳುತ್ತೇವೆ. ಈ ದಿನಗಳ ಇತಿಹಾಸ ಬರೆಯುವಾಗ ನಿಸ್ಸಂಶಯವಾಗಿಯೂ ಕ್ರಾಂತಿಕಾರಿ ಕ್ಯೂಬಾದ ಶ್ರಮಜೀವಿಗಳ ಗುರಿಸಾಧನೆಗೆ ವಿಶ್ವಾದ್ಯಂತ ಮೂಡಿಬಂದಿರುವ ಮಾನವ ಸೌಹಾರ್ದದ ಅಗಣಿತ ಕೊಡುಗೆಗಳು ಅಲ್ಲಿ ಪ್ರತಿಬಿಂಬಿತವಾಗುತ್ತದೆ'.

'ಭಾರತ' ಕ್ಯೂಬಾ ಜನರಿಗೆ ಉಲ್ಲಾಸ ತರುವ ಹೆಸರು. ಭಾರತದ ಹಡಗು, ಸಾಬೂನಿನ ಬಿಲ್ಲೆ, ಔಷಧಿ ಎಲ್ಲಕ್ಕಿಂತಲೂ ಹೆಚ್ಚಾಗಿ ಜನರಿಂದ ಹರಿದು ಬಂದ ಪ್ರೀತಿ ಪ್ರತೀ ಕ್ಯೂಬನ್ನರಿಗೆ ಗೊತ್ತು. ಭಾರತದಿಂದ ಹೋದ ನಾವು ಕ್ಯೂಬನ್ನರ ಮನೆಗಳಲ್ಲಿ ಇಳಿದುಕೊಂಡ ರಾತ್ರಿ 'ಭಾರತದ ಸಂಗಾತಿಗಳಿಗೆ ಸ್ವಾಗತ' ಎಂಬ ಹೃದಯಸ್ಪರ್ಶಿ ಕಾರ್ಯಕ್ರಮ ಜರುಗಿತು. ಕ್ಯೂಬಾ ನಾವಿದ್ದ ಮನೆಯ ಬೀದಿಯ ಪ್ರತಿಯೊಬ್ಬರೂ ಬಂದು ಭಾರತ ಹಾಗೂ ಕ್ಯೂಬಾದ ನಂಟನ್ನು ನೆನಪಿಸಿಕೊಂಡರು. ನಮಗೆ ಆಶ್ಚರ್ಯವಾಗಿದ್ದು ಅಲ್ಲಿಯ ಪ್ರಾಥಮಿಕ ಶಾಲೆಯ ಅಧ್ಯಾಪಕರು ವಾಲ್ಮೀಕಿ ರಾಮಾಯಣ, ರವೀಂದ್ರನಾಥ ಠಾಗೂರರ ಕವಿತೆಗಳ ಬಗ್ಗೆ ಮಾತನಾಡಿದಾಗ. ಅಕ್ಷರ ಹೊತ್ತು ತರುವ ಅರಿವಿನ ಸ್ಪರ್ಶವಾಯಿತು. ಕ್ಯೂಬಾದಲ್ಲಿ ಪ್ರತಿಯೊಬ್ಬರೂ ಸಾಕ್ಷರರು ಮಾತ್ರವಲ್ಲ ಅರಿವಿನ ಜೊತೆಗಾರರು. ಅಮೇರಿಕಾ ಕ್ಯೂಬಾದ ಸುತ್ತ ಕುಣಿಕೆ ಬಿಗಿಯಲು ಆರಂಭಿಸಿದಾಗ ಫಿಡೆಲ್ ಕ್ಯಾಸ್ಟ್ರೋ ಯುದ್ಧ ವಿಮಾನಗಳನ್ನು ಕೊಳ್ಳುವುದಕ್ಕೂ ಮುಂಚೆ ಸಾಕ್ಷರತೆಗೆ ಕೈಹಾಕಿದ್ದು ಏಕೆ ಎಂಬುದು ಗೊತ್ತಾಯಿತು. ಗೋಧಿ ಇಲ್ಲದ, ಸೋಪ್ ಇಲ್ಲದ, ಬ್ರೆಡ್ ಇಲ್ಲದ ಜನ ಏಕೆ ಫಿಡೆಲ್‌ಕ್ಯಾಸ್ಟ್ರೋ ಹಿಂದೆ ಇದ್ದಾರೆ ಎಂಬುದರ ಅರಿವಾಯಿತು.

ಉತ್ಸವಕ್ಕಾಗಿ ನಡೆಸಿದ ಸೌಹಾರ್ದ ಮೆರವಣಿಗೆಯೂ ಅಷ್ಟೇ. ಭಾರತದ ಧ್ವಜ ಕಂಡರೆ ಸಾಕು ಜನ ಉತ್ಸಾಹದಿಂದ ಇಂಡಿಯಾ, ಇಂಡಿಯಾ ಎಂದು ಕೂಗಿ ಕರೆಯುತ್ತಿದ್ದರು. ಅಲಿಪ್ತ ಆಂದೋಲನದ ನಾಯಕನಾಗಿದ್ದ ಫಿಡೆಲ್ ಕ್ಯಾಸ್ಟ್ರೋ ಭಾರತಕ್ಕೆ ಬಂದಾಗ ಇಲ್ಲಿ ಸಿಕ್ಕಿದ ಸ್ವಾಗತ ಕ್ಯೂಬನ್ನರ ನೆನಪಿನಲ್ಲಿ ಇನ್ನೂ ಹಚ್ಚ ಹಸಿರು.

'ಜಗತ್ತಿನ ಜನರ ಬಳಿ ಆ್ಯಂಟೆನಾಗಳಿವೆಯೆನೋ, ಆ ಆ್ಯಂಟೆನಾಗಳ ಮೂಲಕ ಮೂರು ದಶಕಗಳಿಂದಲೂ ನಾವು ಇತಿಹಾಸದ ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯದ ವಿರುದ್ಧ ನಡೆಸುತ್ತಿರುವ ಧೀರ ಹೋರಾಟದ ಬಗ್ಗೆ ಸತ್ಯ ಸಂಗತಿಗಳು ಅವರಿಗೆ ತಿಳಿಯುತ್ತಿದೆ' ಎಂದಿದ್ದರು ಕ್ಯಾಸ್ಟ್ರೋ. ಆ ಆ್ಯಂಟೆನಾಗಳೇ ೧೨ ದೇಶಗಳ ೧೦೨ ಸಂಘಟನೆಗಳನ್ನು ಕ್ಯೂಬಾದ ಪರ ದನಿ ಎತ್ತುವಂತೆ ಮಾಡಿತು. ಭಾರತ ಮತ್ತು ಕ್ಯೂಬಾ ಸೌಹಾರ್ದತಾ ಸಂಘಟನೆ ೧೯೯೫ರಲ್ಲಿ ಕ್ಯೂಬಾಗೆ ಬೆಂಬಲ ಸಾರಲು ಪ್ರಥಮ ಏಷ್ಯಾ ಪೆಸಿಫಿಕ್ ಪ್ರಾದೇಶಿಕ ಸಮ್ಮೇಳನವನ್ನು ನಡೆಸಿತು. ಮೂರು ದಿನಗಳ ಕಾಲ ನಡೆದ ಸಭೆಯಲ್ಲಿ ಕ್ಯೂಬಾದ ಪ್ರೀತಿಯನ್ನು ಹಂಚಿಕೊಳ್ಳಲಾಯಿತು. ಕ್ಯೂಬಾದ ನೆನಪು ಸದಾ ಹಸಿರಾಗಿ ಉಳಿಯಲು ಕ್ಯೂಬಾದ ಮಹಾನ್ ಹೋರಾಟಗಾರ ಜೋಸ್‌ಮಾರ್ಟಿ ಅವರ ಪ್ರತಿಮೆಯನ್ನು ಸ್ಥಾಪಿಸಲಾಯಿತು. ಕ್ಯೂಬಾ ಕುರಿತ ಪುಸ್ತಕಗಳ ಬಿಡುಗಡೆ, ಕ್ಯೂಬಾ ಚಲನಚಿತ್ರ ಉತ್ಸವ, ಕ್ಯೂಬಾ ವಸ್ತುಪ್ರದರ್ಶನ ನಡೆಯಿತು.

ಯಾವುದೇ ಸೌಹಾರ್ದ ಸಮ್ಮೇಳನಕ್ಕೆ ತನ್ನ ಪ್ರತಿನಿಧಿಯನ್ನು ಕಳಿಸದ ಚೀನಾ, ಕ್ಯೂಬಾದ ನೆರವಿಗಾಗಿ ನಡೆದ ಈ ಸಮ್ಮೇಳನಕ್ಕೆ ಪ್ರತಿನಿಧಿಯನ್ನು ಕಳಿಸಿ ಈ ಧೀರ ಹೋರಾಟದಲ್ಲಿ ನಾವೂ ಭಾಗಿಗಳು ಎಂದು ಸಾರಿ ಹೇಳಿತು. ಕ್ಯೂಬಾದ ವಿರುದ್ಧದ ಅಮೇರಿಕಾದ ಆರ್ಥಿಕ ದಿಗ್ಬಂಧನವನ್ನು ಒಕ್ಕೊರಲಿನಿಂದ ಎಲ್ಲಾ ದೇಶಗಳೂ ಖಂಡಿಸಿದವು. 'ಕ್ಯೂಬಾ ದಿನ'ವನ್ನು ಆಚರಿಸಲು ಕರೆ ನೀಡಿದವು.


'ಇಂದಲ್ಲ ನಾಳೆಯಾದರೂ' ಗೆಲ್ಲಲಿರುವ ಕ್ಯೂಬಾಕ್ಕೆ ಭಾರತ ಹೆಗಲು ಕೊಟ್ಟು ನಿಂತಿತು. ೧೯೯೫ರ ನವೆಂಬರ್ ೨೭ರಂದು ಭಾರತದ ಅಮೇರಿಕಾ ಮಾಹಿತಿ ಕೇಂದ್ರದ ಎದುರು, ೧೧ ಮಿಲಿಯ ಜನರ ಪುಟ್ಟ ದ್ವೀಪವೊಂದು ಅಮೇರಿಕಾದ ಭದ್ರತೆಗೆ ಆತಂಕ ಉಂಟುಮಾಡಿದೆ ಎಂದು ಹೆಲ್ಮ್ಸ್ - ಬರ್ಟನ್ ಕಾಯಿದೆಯನ್ನು ಜಾರಿ ಮಾಡಿರುವ ನೀತಿಯ ಕಟುಕತನವನ್ನು ಬಯಲು ಮಾಡಿತು. ಭಾರತದ ಮೂಲೆ ಮೂಲೆಯಲ್ಲಿ ಕ್ಯೂಬಾದ ಪರವಾಗಿ ಅಂದು ಘೋಷಣೆಗಳು ಮೊಳಗಿದವು.

ಕಾಶ್ಮೀರದ ವಿವಾದ ಭುಗಿಲೆದ್ದಾಗ, ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಲು ಅಮೇರಿಕಾ ಪ್ರೆಸ್ಲರ್ ನಿಯಮಗಳನ್ನು ಮುಂದು ಮಾಡಿದಾಗ ಕ್ಯೂಬಾ ಭಾರತದ ಬೆನ್ನಿಗೆ ನಿಂತಿತು.ಚೆಗೆವಾರನ ಮಗಳು ಅಲೀಡಾ ಗುವಾರ ಭಾರತಕ್ಕೆ ಬಂದಾಗ ಹೃದಯಸ್ಪರ್ಶಿಯಾದ ಸ್ವಾಗತವನ್ನು ನೀಡಲಾಯಿತು. ಕಿಕ್ಕಿರಿದ ಸಭೆಗಳಲ್ಲಿ ಕ್ಯೂಬಾ ಪರ, ಕ್ಯಾಸ್ಟ್ರೋ ಪರ, ಚೆ ಪರ ಘೋಷಣೆಗಳು ಮೊಳಗಿದವು. ಚೆ ಪ್ರೀತಿಯ ಹೊಳೆಯಲ್ಲಿ ಮುಚ್ಚಿಹೋಗಿದ್ದ ಅಲಿಡಾ ಕಣ್ಣು ತುಂಬಿ ಹೇಳಿದರು 'ನನ್ನ ತಂದೆಯ ಬಗ್ಗೆ



ಭಾರತದಲ್ಲಿ ಇರುವ ಅಭಿಮಾನ, ಅಕ್ಕರೆಗೆ ನನ್ನ ಮನ ಸೋತಿದೆ. ಈ ಅಭಿಮಾನಕ್ಕೆ ಬೆಲೆ ಕಟ್ಟುವಂತಿಲ್ಲ. ವಂದನೆ ಹೇಳಲು ನನ್ನಲ್ಲಿ ಪದಗಳೇ ಇಲ್ಲ'.

ಕ್ಯಾಸ್ಟ್ರೋ ಮಾತು ನಿಜವಾಯಿತು - ಸೌಹಾರ್ದತೆ ಎಂಬುದು ರಕ್ತದಾನದಂತೆ. ಕಪ್ಪು ಅಥವಾ ಬಿಳಿ, ಆಸ್ತಿಕ ಅಥವಾ ನಾಸ್ತಿಕ, ಪುರುಷ ಇಲ್ಲವೇ ಮಹಿಳೆ, ಬಡವ ಇಲ್ಲವೇ ಶ್ರೀಮಂತ ಎಂಬ ಬೇಧ ಇರುವುದಿಲ್ಲ. ಪ್ರಾಣ ಉಳಿಸಲು ನೀಡುವ ಎಲ್ಲಾ ರಕ್ತ ಕೆಂಪು. ಅಂತೆಯೇ ನಿಮ್ಮ ಈ ಪ್ರೀತಿ.



## ಆಲ್ಲಿ ಅಕ್ಷರದ ಬೆಳಕು

ಅಕ್ಷರ ಬಲ್ಲ ಯುವಕರೇ, ನಿಮ್ಮ ತಂದೆ ತಾಯಂದಿರನ್ನು ವಿದ್ಯಾವಂತರನ್ನಾಗಿ ಮಾಡಿ, ಬೆಟ್ಟ ಗುಡ್ಡಕ್ಕೆ ಹೋಗಿ, ಕಾಡು ಕಣಿವೆಗೆ ನುಗ್ಗಿ - ಎಂದು ಫಿಡೆಲ್ ಕ್ಯಾಸ್ಟ್ರೋ ಕರೆ ನೀಡಿದರು.

ಕೇವಲ ಒಂದು ವರ್ಷದಲ್ಲಿ ಕ್ಯೂಬಾದಲ್ಲಿ ಅಕ್ಷರದ ಬೆಳಗು ಮೂಡಿತು. ನಿಕೆಲ್ ತೆಗೆಯುತ್ತಿದ್ದ ಕಾರ್ಮಿಕರು ಎರಡಕ್ಷರ ಕಲಿಯಲು ಮುಂದಾದರು, ಪೈನ್‌ಆಪಲ್ ಕೀಳುತ್ತಿದ್ದ ರೈತ ಅಕ್ಷರಕ್ಕಾಗಿ ಪುರುಸೊತ್ತು ಪಡೆದ, ಎಣ್ಣೆ ತೆಗೆಯುವ ಜಾಗ ಹುಡುಕುತ್ತಿದ್ದ ಕಾರ್ಮಿಕರು, ಸಿಯೆರಾ ಮಾಸ್ಟಿರಾದ ಗುಡ್ಡಗಳ ಎತ್ತರದಲ್ಲಿ ಮನೆ ಮಾಡಿ ನಿಂತವರು, ಗ್ವಂತನಮೋದ ತಾಳೆ ಕಣಿವೆಗಳ ಮಧ್ಯೆ ಮುಚ್ಚಿ ಹೋದವರು, ಕ್ಯೂಬಾದ ಉದ್ದಕ್ಕೂ ಇರುವ ಕಡಲ ತೀರದಲ್ಲಿ ಮೀನು ಹೆಕ್ಕುತ್ತಿದ್ದವರು, ಸೂರ್ಯನಿಗೆ ಮೈ ಒಡ್ಡಿಕೊಂಡವರು, ಕಬ್ಬಿನ ಗದ್ದೆಗಳಲ್ಲಿ ದಿನವಿಡೀ ದುಡಿಯುತ್ತಿದ್ದವರು ಎಲ್ಲರೂ ಆ ಅಕ್ಷರದ ತೆಕ್ಕೆಗೆ ಬಂದರು. ಕೇವಲ ಒಂದೇ ಒಂದು ವರ್ಷದಲ್ಲಿ ಕ್ಯೂಬಾದಲ್ಲಿ ಅನಕ್ಷರತೆಯ ಅಂಧಕಾರದ ಮಧ್ಯೆ ಹೊಸ ಸೂರ್ಯ ಹುಟ್ಟುವಂತೆ ನೋಡಿಕೊಂಡರು. ಅಕ್ಷರಗಳಲ್ಲಿ ಹಾಡು ಅಕ್ಷರಗಳಲ್ಲಿ ಬೆಳಕು ಇರುವಂತೆ ಮಾಡಿದರು.

ಸಾಕ್ಷರತೆ - ಕ್ಯೂಬಾದ ಹೆಮ್ಮೆಯ ಆಸ್ತಿಗಳಲ್ಲೊಂದು. ಅದೂ ಕೇವಲ ಒಂದೇ ವರ್ಷದಲ್ಲಿ ಇಡೀ ಜಗತ್ತು ನಿಬ್ಬೆರಗಾಗುವಂತೆ ಅಕ್ಷರದತ್ತ ಧಾವಿಸಿದ ದೇಶ ಇದು.



ಕ್ಯೂಬಾದಲ್ಲಿ ಕ್ರಾಂತಿ ಜರುಗುವ ಮುನ್ನ 'ಅಕ್ಷರವೆಂದರೆ ಅಕ್ಷರವಲ್ಲ ಅರಿವಿನ ಗೂಡು' ಎಂಬುದು ಗೊತ್ತೇ ಇರಲಿಲ್ಲ. ಕ್ಯೂಬಾದ ಮೇಲೆ, ಕ್ಯೂಬನ್ನರ ಮನಸಿನ ಒಳಗೆ ಇದ್ದದ್ದು ಗಾಢಾಂಧಕಾರ. ಜನರಿಗಾಗಿ ಭೂಮಿ, ಜನರಿಗಾಗಿ ಸವಲತ್ತು, ಜನರಿಗಾಗಿ ದೇಶ ಎಂಬ ಕನಸನ್ನು ನಿಜ ಮಾಡಲು ಫಿಡೆಲ್ ಕ್ಯಾಸ್ಟ್ರೋ ಹಾಗೂ ಆತನ ಸಂಗಾತಿಗಳು ಮೊದಲ ಹೆಜ್ಜೆ ಇಟ್ಟದ್ದೇ ತಡ ಅಮೇರಿಕಾ ಮೂಗುದಾರ ತೊಡಿಸಲು ಸಜ್ಜಾಯಿತು. ೧೯೬೧ – ಕ್ಯೂಬಾಗೆ ಕಷ್ಟಗಳ ಸರಮಾಲೆಯ ಆರಂಭ. ಕ್ಯೂಬಾಗೆ ಬುದ್ಧಿ ಕಲಿಸಲು ತನ್ನ ದೈತ್ಯಶಕ್ತಿ ಪರಿಚಯಿಸಲು ಅಮೇರಿಕಾ ಸಕ್ಕರೆಯ ದಾಳ ಬಳಸಿತು. ಮುಂದಿರುವ ದಾರಿ ಎಂತಹದ್ದು ಎಂಬುದು ಗೊತ್ತಾದ ಕ್ಯಾಸ್ಟ್ರೋ ಜನರಿಗೆ ಎಲ್ಲವನ್ನೂ ತಿಳಿಸುವ ನಿರ್ಧಾರ ಕೈಗೊಂಡರು. ಅದಕ್ಕಾಗಿಯೇ ಅವರು ಕರೆ ನೀಡಿದ್ದು - 'ಒಂದು ದೀಪ, ನೂರು ಪುಸ್ತಕ'.

ಕೈಯಲ್ಲಿ ಒಂದು ಚಿಮಿಣಿದೀಪ, ನೂರಾರು ಪುಸ್ತಕ ಹಿಡಿದ ಯುವಕರು ತಮ್ಮ ಹಳ್ಳಿಗಳತ್ತ ಹೆಜ್ಜೆ ಹಾಕಿದರು. ಅಕ್ಷರದ ಅಸ್ತ್ರವನ್ನು ಜನರ ಕೈಗಿತ್ತರು. ಅಕ್ಷರದ ಹಾದಿಯಲ್ಲಿ ಆಗಲೇ ಸಾಕಷ್ಟು ದೂರ ಶ್ರಮಿಸಿದ ಯುವಕರಿಗೆ ತಾವು ಸಾಗುತ್ತಿರುವುದು ಬೆಳಕಿನ ದಾರಿ ಎಂದು ಗೊತ್ತಾಗಿತ್ತು. ಶಿಕ್ಷಣ, ಆಹಾರ, ಬಟ್ಟೆ ಎಲ್ಲಕ್ಕಿಂತ ಹೆಚ್ಚಾಗಿ ತಾಯ ಸ್ಪರ್ಶವನ್ನು ಸರ್ಕಾರದಿಂದ ಪಡೆದ ಈ ದಂಡು ಕ್ಯೂಬಾದ ಮೂಲೆ ಮೂಲೆಗಳತ್ತ ಸಾಗಿತು. 'ಶಿಕ್ಷಣದ ಈ ಸೇನೆ' ಒಂದೇ ಒಂದು ವರ್ಷದಲ್ಲಿ ಜಗತ್ತು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿತು.

ಕ್ಯೂಬಾದ ಓರಿಯೆಂಟ್ ವಿಶ್ವವಿದ್ಯಾಲಯದ ಪ್ರೊ. ಜುವಾನ್ ಬಿ ಡುಪುಯ್ ಅವರು ಸಾಕ್ಷರತೆಯ ಲೋಕವನ್ನು ಬಿಚ್ಚಿಟ್ಟಿದ್ದು ಹೀಗೆ. ಜಗತ್ತು ತಲೆದೂಗುವಂತೆ ಮಾಡಿದ ಈ ಸಾಧನೆಯ ಹೆಜ್ಜೆಗಳನ್ನು ಕ್ಯೂಬಾದಲ್ಲಿ ಈಗಲೂ ಕಾಪಿಡಲಾಗಿದೆ. ಹವಾನಾದಲ್ಲಿ ಸಾಕ್ಷರತಾ ಪ್ರಚಾರದ ಮ್ಯೂಸಿಯಂ ಇದೆ. ಅಂಧಕಾರ ಹಾಗೂ ಬೆಳಕು ಎರಡನ್ನೂ ಪರಿಚಯಿಸುವ ಈ ಮ್ಯೂಸಿಯಂ ಕ್ರಾಂತಿಗೆ ಮುನ್ನ ಕ್ಯೂಬಾ ಇದ್ದ ರೀತಿ ಹಾಗೂ ಕ್ರಾಂತಿ ತಂದ ಬದಲಾವಣೆ ಎರಡನ್ನೂ ಬಿಂಬಿಸುತ್ತದೆ.

ಕ್ರಾಂತಿಗೆ ಮುನ್ನ ಕ್ಯೂಬಾದಲ್ಲಿ ಇದ್ದದ್ದು ಕೇವಲ ಶೇ. ೨೩.೬ರಷ್ಟು ಸಾಕ್ಷರರು. ಎಷ್ಟೋ ಕಡೆ ಲಕ್ಷಾಂತರ ಮಕ್ಕಳಿಗೆ ಶಾಲೆಗಳೇ ಇರಲಿಲ್ಲ. ಸಾವಿರಾರು ಶಿಕ್ಷಕರಿಗೆ ಉದ್ಯೋಗ ಇರಲಿಲ್ಲ. ಆದರೆ ಫಿಡೆಲ್‌ಕ್ಯಾಸ್ಟ್ರೋ ಸರ್ಕಾರ ನೆಲದಲ್ಲಿ ಫಲ ತೆಗೆಯುವ ಮೊದಲು 'ತಮ್ಮನ್ನು ತಾವು ಉತ್ತುಕೊಳ್ಳುವ' ಈ ಕೆಲಸಕ್ಕೆ ಆದ್ಯತೆ ನೀಡಿತು. ಕ್ಯೂಬಾ ತನ್ನ ಕಾಲ ಮೇಲೆ ತಾನು ನಿಲ್ಲಲು ಯತ್ನಿಸುತ್ತಿದೆ ಎಂದು ಗೊತ್ತಾದ ಅಮೇರಿಕಾ 'ಬೇ ಆಫ್ ಪಿಗ್ಸ್' ಯುದ್ಧಕ್ಕೆ ತಯಾರಾಗುತ್ತಿರುವಾಗಲೇ ಅ ಆ ಇ ಈ ಕಲಿಯುವ ಕೆಲಸವೂ ಆರಂಭವಾಗಿತ್ತು. ಕ್ಯೂಬಾದ ಮೇಲೆ ಅಮೇರಿಕಾದ ಬಾಂಬ್ ದಾಳಿ ನಡೆಯುತ್ತಿದ್ದಾಗಲೂ ಕಾಡು ಕಣಿವೆ ಬೆಟ್ಟ ಗುಡ್ಡಗಳಲ್ಲಿ ಅನಕ್ಷರತೆಯ ವಿರುದ್ಧ ನಡೆದಿದ್ದ ಸಮರಕ್ಕೆ ಯಾವ ಆತಂಕವೂ ಇರಲಿಲ್ಲ.

ಸಾಕ್ಷರತೆಯ ಚಳವಳಿ ಆರಂಭವಾದದ್ದೇ ತಡ ಆ ಸೈನ್ಯದ ಬಲವೂ ಹೆಚ್ಚುತ್ತಾ ಹೋಯಿತು. 'ನಿಮಗೆ ಗೊತ್ತಿದ್ದರೆ ಕಲಿಸಿ; ಗೊತ್ತಿಲ್ಲದಿದ್ದರೆ ಕಲಿಯಿರಿ' ಎಂಬ ಘೋಷಣೆ ಎಲ್ಲೆಡೆ ಹರಡಿತು. ಎರಡು

ಲಕ್ಷಕ್ಕೂ ಹೆಚ್ಚು ಜನರು ಸಾಕ್ಷರತಾ ಆಂದೋಲನದಲ್ಲಿ ಧುಮುಕಿದರು. ಒಂದು ಲಕ್ಷ ವಿದ್ಯಾರ್ಥಿಗಳು ಹಾಗೂ ಯುವಕರನ್ನು ಒಳಗೊಂಡ ಕೊನ್ರಾಡೊ ಬೆನಿಚೆಡ್ ಸೇನೆ, ೧೫ ಸಾವಿರ ಕಾರ್ಮಿಕರನ್ನು ಒಳಗೊಂಡ 'ಮಾತೃಭೂಮಿ ಇಲ್ಲವೇ ಸಾವು' ಸೇನೆ, ೩೫ ಸಾವಿರ ಶಿಕ್ಷಕರು ಹಾಗೂ ೧.೨೦ ಲಕ್ಷ ಜನರ ಆಲ್ಫಾಬೆಟಿಜಿಡೂನ್ಸ್ ಸೇನೆಗಳು ಹಿಡಿದ ಚಿಮಣಿ ದೀಪದಿಂದ ಹೊಮ್ಮಿದ ಬೆಳಕು ಕ್ಯೂಬಾವನ್ನು ಬೆಳಕಿನ ದೇಶವನ್ನಾಗಿಸಿತು.

'ನಮ್ಮಲ್ಲಿ ಇಷ್ಟೊಂದು ಅನಕ್ಷರಸ್ಥರು ಇದ್ದಾರೆ ಎಂಬುದು ನಾಚಿಕೆಗೇಡಿನ ವಿಷಯ. ಈ ವಿಷಯಕ್ಕೆ ಬಂದಾಗ ಕ್ಯೂಬಾದಂತಹ ದೇಶಗಳು ನಮ್ಮನ್ನು ಅವಮಾನದಿಂದ ತಲೆತಗ್ಗಿಸುವಂತೆ ಮಾಡಿವೆ' ಎಂದು ಅಮೇರಿಕಾದ ಉಪಾಧ್ಯಕ್ಷ ಆಲ್ ಗೋರೆ ಕೆನಡಾದ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಅಲವತ್ತುಕೊಂಡಿದ್ದಾರೆ.

ಕ್ಯೂಬಾ 'ಬೇ ಆಫ್ ಪಿಗ್ಸ್'ನಲ್ಲಿ ಎರಗಲು ಬಂದ ಅಮೇರಿಕಾದ ಸೈನ್ಯವನ್ನು ಮಾತ್ರವಲ್ಲ, ಅನಕ್ಷರತೆ ಎಂಬ ಅಂಧಕಾರವನ್ನೂ ಹಿಮ್ಮೆಟ್ಟಿಸಿಬಿಟ್ಟಿತು. ಅತ್ಯಂತ ಶ್ರೀಮಂತ ರಾಷ್ಟ್ರವಾದ ಅಮೇರಿಕಾ ಬಡವರಲ್ಲಿ ಬಡವನಾದ ಕ್ಯೂಬಾ ಸಾಧಿಸಿದ ಗುರಿಯನ್ನು ಕಂಡು ದಂಗಾಗಿ ಹೋಗಿತ್ತು. ಕ್ಯೂಬಾದ ಒಟ್ಟು ಜನಸಂಖ್ಯೆಗಿಂತಲೂ ಹೆಚ್ಚು ಅನಕ್ಷರಸ್ಥರು ಅಮೇರಿಕಾದಲ್ಲಿದ್ದಾರೆ. ಅಮೇರಿಕಾ ಅಧಿಕೃತವಾಗಿ ಪ್ರಕಟಿಸಿರುವ ಅಂಕಿ ಅಂಶಗಳ ಪ್ರಕಾರ ೧೧ ದಶಲಕ್ಷ ಅನಕ್ಷರಸ್ಥರು ಇದ್ದಾರೆ. ಅನಧಿಕೃತ ಮೂಲಗಳ ಪ್ರಕಾರ ಈ ಸಂಖ್ಯೆ ೩೦ ದಶಲಕ್ಷ.

ಈ ಕಾರಣಕ್ಕಾಗಿಯೇ ಯುನೆಸ್ಕೋ ಹಾಗೂ ಯುನಿಸೆಫ್ 'ಕ್ಯೂಬಾದತ್ತ ನೋಡಿ' ಎಂದು ಜಗತ್ತಿಗೆ ಕರೆ ನೀಡಿದವು. 'ಕನಿಷ್ಠ ಒಂಬತ್ತನೆ ತರಗತಿಯವರೆಗೆ ಶಿಕ್ಷಣ ಪಡೆದ ಶೇ. ೯೮.೨ ಸಾಕ್ಷರತೆ ಹೊಂದಿರುವ ಕ್ಯೂಬಾ ಕೇವಲ ಅಮೇರಿಕಾದ ದೇಶಗಳಲ್ಲಿ ಮಾತ್ರವಲ್ಲ ಇಡೀ ಜಗತ್ತಿಗೆ ನಾಯಕನಾಗಿ ನಿಂತಿದೆ' ಎಂದು ಶ್ಲಾಘಿಸಿದವು. '೩೭ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಕ್ಯೂಬಾದಲ್ಲಿದ್ದು ಜಗತ್ತಿನ ಇನ್ನಾವುದೇ ದೇಶದಲ್ಲಿ ಈ ಸಾಧನೆ ಮಾಡಲಾಗಿಲ್ಲ' ಎಂದು ಬೆನ್ನು ತಟ್ಟಿದವು. ಎಲ್ಲಾ ಹಂತದಲ್ಲಿಯೂ ಶಿಕ್ಷಣವನ್ನು ಉಚಿತವಾಗಿ ನೀಡುವ ನಿದರ್ಶನ ಜಗತ್ತಿಗೇ ಆದರ್ಶವಾದದ್ದು ಎಂದೂ ಶ್ಲಾಘಿಸಿದವು.

ಮಂಡೇಲ ಬಂಧೀಖಾನೆಯಿಂದ ಹೊರಬಂದ ನಂತರ ಗೆಳೆತನದ ಪದಕವನ್ನು ಸ್ವೀಕರಿಸಲು ಕ್ಯೂಬಾಗೆ ಕಾಲಿಟ್ಟ ಸಂದರ್ಭದಲ್ಲಿ ಫಿಡೆಲ್ ಕ್ಯಾಸ್ಟ್ರೋ ಹೇಳಿದರು 'ನೋಡಿ ಈ ಗುಲಾಮರು ಎಷ್ಟು ದೂರ ಬಂದಿದ್ದಾರೆ'.

ಸತತವಾಗಿ ೪೦ ವರ್ಷಗಳಿಂದಲೂ ಬಾಲವಾಡಿಯಿಂದ ಹಿಡಿದು ಸ್ನಾತಕೋತ್ತರದವರೆಗೆ ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತಿದೆ. ಕ್ಯೂಬಾದ ಮೇಲೆ ಎರಗಿದ ಆರ್ಥಿಕ ದಿಗ್ಬಂಧನಗಳು ಶಿಕ್ಷಣವನ್ನು ಕಂಗೆಡಿಸಲು ಸಾಧ್ಯವಾಗಿಲ್ಲ. ದಿನ ಬೆಳಗಾದರೆ ಎಂಟು ಗಂಟೆಗೆ ಸರಿಯಾಗಿ ಗಿಜಿಗುಡುತ್ತಾ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆಯನ್ನೂ ಕಡಿಮೆ ಮಾಡಲಾಗಿಲ್ಲ.



ಕ್ಯೂಬಾದ ಬೀದಿ ಬೀದಿಗಳಲ್ಲಿ ಕಾರುಗಳು, ಬೈಕ್‌ಗಳು ರಾಷ್ಟ್ರೀಯ ಸ್ಮಾರಕಗಳಂತೆ ನಿಂತಿವೆ. ಈ ಬಗ್ಗೆ ಯಾರನ್ನಾದರೂ ಪ್ರಶ್ನಿಸಿದರೆ ಸಾಕು ಪೆಟ್ರೋಲ್ ಇಲ್ಲ ಎಂಬ ಉತ್ತರ ಬರುತ್ತದೆ. 'ನಮ್ಮ ಮಕ್ಕಳನ್ನು ಶಾಲೆಗೆ ಹೊತ್ತೊಯ್ಯುವ ಬಸ್‌ಗಳಿಗೆ ಪೆಟ್ರೋಲ್ ಬೇಕು. ಅದಕ್ಕಾಗಿ ನಾವು ನಮ್ಮ ವಾಹನಗಳನ್ನು ಮನೆಯೊಳಗಿರಿಸಿದ್ದೇವೆ' ಎನ್ನುತ್ತಾರೆ.

ಕ್ಯೂಬಾದಲ್ಲಿ ಸಾಕ್ಷರತೆ ಎಂಬುದು ಅಕ್ಷರ ಬರೆಯುವುದಕ್ಕೆ ಮಾತ್ರ ಸೀಮಿತವಲ್ಲ. ೯ನೆಯ ತರಗತಿಯವರೆಗೆ ಶಿಕ್ಷಣ ಇಲ್ಲಿ ಕಡ್ಡಾಯ. ಸಾಕ್ಷರತೆಯ ಉಸಿರು ಬತ್ತಿಹೋಗದಿರಲು ಹಲವಾರು ಯೋಜನೆಗಳನ್ನು ಕ್ಯೂಬಾ ರೂಪಿಸಿದೆ. ಅಕ್ಷರ ಕಲಿತ ಕಾರ್ಮಿಕರು, ರೈತರು ಕ್ರಮೇಣ ಆರನೆಯ ತರಗತಿಯವರೆಗೆ ನಂತರ ೯ರವರೆಗೆ ಏರುವಂತೆ ನೋಡಿಕೊಳ್ಳಲಾಗಿದೆ.ಕ್ಯೂಬಾದಲ್ಲಿ ೪೭ ವಿಶ್ವವಿದ್ಯಾಲಯಗಳಿದ್ದು ೧೨,೨೫೦ ಶಾಲೆಗಳಿವೆ. ಶಿಕ್ಷಣ ಕ್ಯೂಬಾಗೆ ಸೇವೆ. ಹೀಗಾಗಿಯೇ ಜಗತ್ತಿನ ಹಲವು ದೇಶಗಳ ಸುಮಾರು ೨೦ ಸಾವಿರ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡುತ್ತಿದೆ.ಶಿಕ್ಷಣ ಕ್ಯೂಬಾದ ನೆಲದಲ್ಲಿ ತನ್ನ ಬೇರುಗಳನ್ನು ಹೊಂದಿದೆ. ಆ ಶಿಕ್ಷಣ ವ್ಯವಸ್ಥೆ ಕಲಿತದ್ದನ್ನು ಮುಂದೆ ಪ್ರಯೋಗಿಸುವಂತೆ ಮಾಡುವುದೇ ಅಲ್ಲದೆ ದೇಶದ ಸ್ವರೂಪ ಅರ್ಥ ಮಾಡಿಕೊಳ್ಳಲೂ ದಾರಿ ಮಾಡಿಕೊಡುತ್ತದೆ. ಇಲ್ಲಿ ಶಿಕ್ಷಣ ಎಂಬುದು ಪ್ರತ್ಯೇಕ ವ್ಯವಸ್ಥೆಯಲ್ಲ - ಬದುಕು, ಕೆಲಸ ಹಾಗೂ ಉತ್ಪಾದನೆಯ ನಡುವಿನ ಕೊಂಡಿ.

ಸಂವಿಧಾನ ಶಿಕ್ಷಣಕ್ಕೂ ನಿಟ್ಟುಸಿರಿಗೂ ಸಂಬಂಧ ಕಲ್ಪಿಸಿರುವುದರಿಂದಲೇ ಪ್ರತೀ ವಿದ್ಯಾರ್ಥಿಗೆ, ಶಿಕ್ಷಕರಿಗೆ ದೇಶದ ನೋವು ಅರ್ಥವಾಗುತ್ತದೆ. ಅಮೇರಿಕಾ ಉಸಿರು ನಿಲ್ಲಿಸುವ ಕಾಯಿದೆಯನ್ನು ಜಾರಿಗೆ ತಂದಾಗ ಕ್ಯೂಬಾ ತತ್ತರಿಸಿ ಹೋಯಿತು. ದೇಶದಲ್ಲಿ ಕಬ್ಬು ಕತ್ತರಿಸಲು ವಾಹನಗಳಿಗೆ ಇಂಧನ ಇಲ್ಲವಾಯಿತು, ಉಳಲು ಟ್ರಾಕ್ಟರುಗಳಿಲ್ಲವಾದವು. ಹೊಗೆಸೊಪ್ಪು ಆತಂಕಕ್ಕೀಡಾಯಿತು. ಆಗ ವಿದ್ಯಾರ್ಥಿಗಳು ದೇಶದ ಸಲುವಾಗಿ ನಿಂತರು. 'ಶಾಲೆ ಈಗ ಹೊಲದ ಬಳಿಗೆ' ಎಂಬ ಹೊಸ ಕಾರ್ಯಕ್ರಮ ಸಿದ್ಧವಾಯಿತು. ವರ್ಷದಲ್ಲಿ ಒಂದು ತಿಂಗಳು ವಿದ್ಯಾರ್ಥಿಗಳು ಕ್ಯೂಬಾದ ಮೂಲೆ ಮೂಲೆಗೆ ತೆರಳಿ ಕಬ್ಬು ಕತ್ತರಿಸಿದರು, ಹೊಗೆಸೊಪ್ಪು ಸುರುಳಿ ಸುತ್ತಿ ಸಿಗಾರ್ ತಯಾರಿಸಿದರು, ಸಕ್ಕರೆ ತಯಾರಿಸಲು ಆಲೆಮನೆಗಳಲ್ಲಿ ನಿಂತರು, ಅಕ್ಕಿ ಹೊತ್ತರು, ಪೈನ್‌ಆಪಲ್ ಕಟಾವು ಮಾಡಿದರು. ಇದು ಒಂದು ವರ್ಷ ಮಾತ್ರ ನಡೆಯಲಿಲ್ಲ. ಪ್ರತೀ ವರ್ಷ ವಿದ್ಯಾರ್ಥಿಗಳು ಮತ್ತೆ ಮತ್ತೆ ಹೊಲಗಳಿಗೆ ಹರಿದುಬಂದರು. ಸ್ವಾಭಿಮಾನದ ಉಸಿರು ಹೊಲಗಳಿಂದ ಹೊಮ್ಮುವಂತೆ ಮಾಡಿದರು. ತಮ್ಮ ಮಕ್ಕಳು ದಿನಗಟ್ಟಲೆ ಹೊಲದಲ್ಲಿ ಉಳಿದಾಗ ಮನೆಯವರೂ ಬುತ್ತಿ ಹಿಡಿದು ಹೊಲಗಳತ್ತ ಹೊರಟುಬಂದರು. ಕಬ್ಬು ಕಿತ್ತ, ಹೊಗೆಸೊಪ್ಪು ಸುತ್ತಿದ ಮಕ್ಕಳಿಗೆ ಊಟ ಮಾಡಿಸಿದರು. ಮುಗಿದಾಗ ತಾವೂ ಕಟಾವಿಗೆ ನಿಂತರು.

ಅಲ್ಲಿ ಅಕ್ಷರಗಳಲ್ಲಿ ಹಾಡು ಹೊಮ್ಮುತ್ತದೆ

ಅಲ್ಲಿ ಅಕ್ಷರಗಳಲ್ಲಿ ಬೆಳಕು.



## ಅಂಗೈಯಲ್ಲಿ ಆರೋಗ್ಯ

‘ಮಗು ತಾಯಿಯ ಹೊಟ್ಟೆಯಲ್ಲಿರುವಾಗಲೇ ನಮ್ಮ ದೇಶದಲ್ಲಿ ಆರೋಗ್ಯದ ಕಾಳಜಿ ಆರಂಭವಾಗುತ್ತದೆ. ನಂತರ ಸತತ ೭೫ ವರ್ಷ ಆರೋಗ್ಯವಂತ ಜೀವನ ಖಾತರಿ’.

೭೫ ವರ್ಷ - ಕ್ಯೂಬನ್ನರ ಆರೋಗ್ಯ ಕಾಳಜಿಗೆ ಹಿಡಿದ ಕನ್ನಡಿ ಇದು. ಕ್ರಾಂತಿಗೆ ಮುನ್ನ ೫೫ ವರ್ಷ ಬದುಕುತ್ತಿದ್ದ ಜನರನ್ನು ತಾಯಿಯ ಹೊಟ್ಟೆಯಲ್ಲಿರುವಾಗಲಿಂದಲೇ ರಕ್ಷಿಸಿ ದಿನಕ್ಕೆ ಏನಿಲ್ಲೆಂದರೂ ೩೧೩೦ ಕ್ಯಾಲೋರಿ ಆಹಾರದ ಖಾತರಿ ನೀಡಿ, ಹೆಜ್ಜೆ ಹಾಕಿದ ಕಡೆಯೆಲ್ಲಾ ವೈದ್ಯರು ಹಿಂಬಾಲಿಸಿ ಪ್ರತಿಯೊಬ್ಬರ ಆಯಸ್ಸನ್ನು ೨೦ ವರ್ಷ ಹೆಚ್ಚಿಸಿದ್ದಾರೆ.

ಇಂತಹ ಕ್ಯೂಬಾದ ಮೇಲೆ ಅಮೇರಿಕಾ ಟೋರಿಸೆಲ್ಲಿ ಕಾಯಿದೆ, ನಂತರ ಹೆಲ್ಮ್ಸ್ - ಬರ್ಟನ್ ಕಾಯಿದೆಯನ್ನು ಮುಂದೆ ಮಾಡಿ ಕ್ಯೂಬನ್ನರು ಆಹಾರ ಇಲ್ಲದೆ, ಔಷಧಿ ಇಲ್ಲದೆ ನರಳಿ ಸಾಯಬೇಕು ಎಂದ ಇಚ್ಛಿಸಿದೆ. ಅಮೇರಿಕಾ ವಿಧಿಸಿರುವ ಆರ್ಥಿಕ ದಿಗ್ಬಂಧನ ಕ್ಯೂಬಾಗೆ ಯಾವುದೇ ದೇಶ ಔಷಧಿಯನ್ನಾಗಲೀ ವೈದ್ಯಕೀಯ ಉಪಕರಣವನ್ನಾಗಲೀ ಮಾರುವುದನ್ನು ನಿಷೇಧಿಸುತ್ತದೆ.



ದಿಗ್ಬಂಧನ ಎಂಬುದು ಏನು ಎಂದರೆ ತಲೆನೋವಿಗೆ ಬೇಕಾದ ಆಸ್ಪಿರಿನ್ ಸಹಾ ಸಿಗದ ಹಾಗೆ ಮಾಡುವುದು ಎಂದು ಫಿಡೆಲ್‌ಕ್ಯಾಸ್ಟ್ರೋ ಹವಾನಾದಲ್ಲಿ ನಡೆದ ಜಗತ್ತಿನ ಹಲವು ದೇಶಗಳ ಸೌಹಾರ್ದ ಸಭೆಯಲ್ಲಿ ತಿಳಿಸಿದರು.

ಅಮೇರಿಕಾ ಅಲ್ಲಿಗೇ ಸುಮ್ಮನಾಗಲಿಲ್ಲ. ಇರುವ ರೋಗಕ್ಕೆ ಮದ್ದು ನಿಲ್ಲಿಸಿದ ಅಮೇರಿಕಾ ಇನ್ನಷ್ಟು ರೋಗ ಬರುವಂತೆಯೂ ಮಾಡಿತು. ದಿಢೀರ್ ದಾಳಿ ಮಾಡುವ ವಿಮಾನಗಳು ಕ್ಯೂಬಾದ ಮೇಲೆ ರಾಸಾಯನಿಕಗಳ ಮಳೆಗೆರೆಯುತ್ತಿದ್ದವು. ಡೆಂಗ್‌ನಿಂದ ಹಿಡಿದು ಜನ ಕೀಟಗಳ ಹಾಗೆ ಉಸಿರುಗಟ್ಟಿ ಸಾಯುವಂತೆ ಮಾಡುವ, ನರಳುವಂತೆ ಮಾಡುವ ಕ್ರಿಮಿಗಳನ್ನೂ ಹರಡಿದರು.

ಹೇಳಿಕೇಳಿ ಅದು ಕ್ಯೂಬಾ, ಮತ್ತೆ ಮತ್ತೆ ಮೈಕೊಡವಿ ಎದ್ದಿತು. ಜನರ ಆರೋಗ್ಯವನ್ನು ಅಂಗೈನಲ್ಲಿಟ್ಟು ಸಾಕಿತು. ಈಗ ವಿಶ್ವ ಆರೋಗ್ಯ ಸಂಸ್ಥೆ ನಿಬ್ಬೆರಗಾಗಿ ಕೂತಿದೆ. ಕ್ಯೂಬಾ ಹೊಸ ಶತಮಾನದವರೆಗಿನ ಆರೋಗ್ಯದ ಗುರಿಯನ್ನು ಆಗಲೇ ಸಾಧಿಸಿದೆ ಎಂದು ಸರ್ಟಿಫಿಕೇಟು ಕೊಟ್ಟಿದೆ. ಹಾಗೆ ಸರ್ಟಿಫಿಕೇಟು ಕೊಟ್ಟು ಈಗಾಗಲೇ ಎಂಟು ವರ್ಷಗಳಾಗಿವೆ.

ಕ್ಯೂಬಾದಲ್ಲಿ ಆರೋಗ್ಯ ಕೈಗೆಟುಕುವಷ್ಟು ಹತ್ತಿರದಲ್ಲಿದೆ. ಬೆಳಗಾದರೆ ವೈದ್ಯರು ಮನೆಗೆ ಬರುತ್ತಾರೆ. ಆರೋಗ್ಯ ವಿಚಾರಿಸುತ್ತಾರೆ. ಕೆಮ್ಮು, ನೆಗಡಿ, ಶೀತ, ದಢಾರ ಏನನ್ನು ವಿಚಾರಿಸುವುದು. ಆರೋಗ್ಯ ಪ್ರತಿಯೊಬ್ಬರ ಮನೆಯಲ್ಲಿ ಆರಾಮವಾಗಿರುವಾಗ ವೈದ್ಯರು ಕುಶಲ ವಿಚಾರಿಸಿ ದೇಶದ ಬಗ್ಗೆ ಚರ್ಚಿಸಿ ಮುಂದಿನ ಮನೆಗೆ ಹೊರಡುತ್ತಾರೆ. ಕ್ಯೂಬಾದ ಮನೆಯೊಳಗೆ ಕುಳಿತಿದ್ದ ನಮಗೆ ಆದದ್ದೂ ಇದೆ.

‘ಗುರ್ಚೇವ್’ ಅಂದರೆ ಭಾರತೀಯ ನಾಲಿಗೆಯಲ್ಲಿ ಎಸ್.ವೈ. ಗುರುಶಾಂತ ಭಾರತದಲ್ಲಿ ಮಾಡಿಸಿಕೊಂಡಿದ್ದ ಹೃದಯ ಶಸ್ತ್ರಚಿಕಿತ್ಸೆ ಹೇಗೆ ನಡೆಸಿದ್ದಾರೋ ನೋಡೇ ಬಿಡುವ ಎಂದು ಅವನಿದ್ದ ಮನೆಯ ಹಿರಿಯರಿಗೆ ಹೇಳಿದ್ದ. ಬೆಳಿಗ್ಗೆ ಬಂದ ಡಾಕ್ಟರ್ ಅಂಗಿ ಬಿಚ್ಚಿಸಿದರು. ಫೋನಾಯಿಸಿದರು. ಮತ್ತೊಬ್ಬ ಹೊಸ ಡಾಕ್ಟರ್ ಬಂದರು. ಅದೂ ಇದೂ ಮಾತನಾಡುತ್ತಾ ತಾವು ಫಿಡೆಲ್‌ಕ್ಯಾಸ್ಟ್ರೋಗೆ ಆರೋಗ್ಯ ತಪಾಸಣೆ ಮಾಡಿದ್ದನ್ನೂ ಗುರ್ಚೇವ್‌ಗೆ ತಿಳಿಸಿದರು. ಗುರ್ಚೇವ್ ಹೌಹಾರಿದ. ಫಿಡೆಲ್‌ಗೂ, ಸಾಮಾನ್ಯ ಜನಕ್ಕೂ ಭೇದವೇ ಇಲ್ಲ. ನನಗೂ ಅವರಿಗೂ ಅದೇ ವೈದ್ಯೋನಾರಾಯಣೋಹರಿ. ಗುರ್ಚೇವ್‌ಗೆ ಈಗ ಎದೆನೋವಿನ ಬಗ್ಗೆ ಹೇಳಿಕೊಳ್ಳುವುದಕ್ಕಿಂತಲೂ ಇದೇ ಎದೆತಟ್ಟಿ ಹೇಳುವ ಸಂಗತಿ. ಕ್ಯೂಬಾದ ಸಾಧನೆ ಅದೇ. ಇಲ್ಲಿನ ವೈದ್ಯರಿಗೆ ಸಾಮಾನ್ಯ ಜನರಿಗೆ ಇರುವಂತಹ ಕಣ್ಣು, ಕಿವಿ, ಮೂಗೇ ಇದೆ.

ವಿಶ್ವ ಆರೋಗ್ಯ ಸಂಸ್ಥೆ ಬೆರಗಾಗಿರುವ ಮತ್ತೊಂದು ಸಂಗತಿ ಈ ‘ಮನೆ ವೈದ್ಯ’. ಅಂದರೆ ನಮ್ಮಲ್ಲಿಯಂತೆ ಡಾಕ್ಟರ್‌ಶಾಪಿನಲ್ಲಿ ಇರುವ ಕ್ಯೂ ನೆನೆಸಿಕೊಂಡೇ ಭಯವಾಗಿ ಮನೆಯಲ್ಲಿ ಇರುವ ಮಾತ್ರೆಗಳನ್ನೇ ನುಂಗಿ ಸುಧಾರಿಸಿಕೊಳ್ಳುವುದಲ್ಲ. ಕ್ಯೂಬಾದ ಹೆಮ್ಮೆಯ ವಿಷಯವೆಂದರೆ ಇಲ್ಲಿ ವೈದ್ಯರೇ ಜನರ ಬಳಿಗೆ ಹೋಗುತ್ತಾರೆ. ಇದು ಕ್ಯೂಬಾದ ಸುಂದರ ಯೋಜನೆಗಳಲ್ಲೊಂದು. ಕ್ಯೂಬಾದ ಪ್ರತೀ ೧೨೦ ಮನೆಗೆ ಒಬ್ಬ ವೈದ್ಯ ಹಾಗೂ ಒಬ್ಬ ನರ್ಸನ್ನು ನೀಡಲಾಗಿದೆ. ಇವರು ಈ ೧೨೦ ಮನೆಗಳ

ಮಧ್ಯದಲ್ಲಿಯೇ ವಾಸ ಇರುತ್ತಾರೆ. ಪ್ರತೀ ಮನೆಗೆ ತೆರಳಿ ಕುಶಲ ವಿಚಾರಿಸುತ್ತಾರೆ. ಬೇಕಾದ ಮದ್ದು ನೀಡುತ್ತಾರೆ. ಮನೆಯಲ್ಲಿ ಗರ್ಭಿಣಿ ಇದ್ದರೆ ವಿಶೇಷ ಕಾಳಜಿ. ಒಬ್ಬರಲ್ಲ ಹಲವು ವೈದ್ಯರು ಚೆಕಪ್ ನಡೆಸುತ್ತಾರೆ.

ಈ 'ಮನೆವೈದ್ಯ' ಪದ್ಧತಿ ಇನ್ನೂ ಮುಂದೆ ಹೋಗಿದೆ. ಹಲವು ವಿಷಯ ತಜ್ಞರು ಹಾಗೂ ನರ್ಸ್‌ಗಳು ಸೇರಿ ಇನ್ನೊಂದು ಹಂತದ ವ್ಯವಸ್ಥೆ ಇದೆ. ಮನೆಗೆ ಹೋದ ವೈದ್ಯ ತನಗೆ ಪರಿಣತಿ ಇಲ್ಲದ ರೋಗವಾದರೆ ಈ ಗುಂಪಿಗೆ ವರದಿ ಮಾಡುತ್ತಾನೆ. ಸಂಬಂಧಪಟ್ಟವರು ಆರೈಕೆಯನ್ನು ತಮ್ಮ ಕೈಗೆತ್ತಿಕೊಳ್ಳುತ್ತಾರೆ.

'ನಮ್ಮ ದೇಶದಲ್ಲಿ ವೈದ್ಯ ಉಪಚಾರ ಸಾಮಾಜಿಕವಾದದ್ದು' ಎನ್ನುತ್ತಾರೆ ಕ್ಯಾಸ್ಟ್ರೋ. ಅದರ ಅರ್ಥ ಆರೋಗ್ಯಕ್ಕೆ ಸಂಬಂಧಿಸಿದಂತೆ ಇತರೆ ದೇಶಗಳಲ್ಲಿಯಂತೆ ಇಲ್ಲಿ ಸ್ವಾರ್ಥ ಇಲ್ಲ, ಹಣದ ದುರಾಸೆ ಇಲ್ಲ. ಔಷಧಿ ಇರುವುದು ಮನುಷ್ಯರ ಜೀವ ಉಳಿಸಲು ಎಂದೇ.

ಕ್ಯೂಬಾದಲ್ಲಿ ಕ್ರಾಂತಿ ಜರುಗುತ್ತಿದ್ದಂತೆಯೇ ಇದ್ದ ೬ ಸಾವಿರ ವೈದ್ಯರ ಪೈಕಿ ಮೂರು ಸಾವಿರ ಮಂದಿ ಅಮೇರಿಕಾವನ್ನು ಆಯ್ಕೆ ಮಾಡಿಕೊಂಡರು. ಅಷ್ಟೆ, ನಂತರ ಯಾವ ವೈದ್ಯರೂ ಕ್ಯೂಬಾ ಬಿಟ್ಟು ತೆರಳಲಿಲ್ಲ. ಈಗ ೫೪ ಸಾವಿರ ಫಿಸಿಶಿಯನ್‌ಗಳೂ, ೮೮೩೦ ದಂತ ವೈದ್ಯರು ಇದ್ದಾರೆ. ೨೦೩ ಮಂದಿಗೆ ಒಬ್ಬ ಫಿಸಿಶಿಯನ್, ೧೨೪೫ ಮಂದಿಗೆ ಒಬ್ಬ ದಂತತಜ್ಞ, ೬೧,೬೩೦ ನರ್ಸ್‌ಗಳು, ೫೪,೬೦೦ ವೈದ್ಯಕೀಯ ತಂತ್ರಜ್ಞರು ಕ್ಯೂಬಾದಲ್ಲಿದ್ದಾರೆ.

ಕ್ರಾಂತಿಯ ಮುನ್ನ ಹವಾನಾದಲ್ಲಿ ಮಾತ್ರ ಆಸ್ಪತ್ರೆಗಳು ಇದ್ದವು. ಆದರೆ ಕ್ಯೂಬಾದ ಸರ್ಕಾರ ಈಗ ಆರೋಗ್ಯವನ್ನು ಇಡೀ ದೇಶಕ್ಕೆ ಹಂಚಿದೆ.

ಕ್ಯೂಬಾಗೆ ತನ್ನ ಈ ಸಾಧನೆಯನ್ನು ಬಣ್ಣಿಸುವುದು ಎಂದರೆ ತುಂಬಾ ಹೆಮ್ಮೆ. ಪ್ರತಿಯೊಬ್ಬರಿಗೂ ಉಚಿತ ಚಿಕಿತ್ಸೆ, ಪ್ರತಿಯೊಬ್ಬ ನೌಕರನಿಗೂ ಸಂಬಳದ ಸಮೇತ ಉಚಿತ ಚಿಕಿತ್ಸೆ, ಪ್ರತೀ ತಾಯಿಗೂ ಆತಂಕದಿಂದ ಮುಕ್ತಿ, ಮಕ್ಕಳ ಸಾವೇ ಇಲ್ಲ ಎನ್ನುವಷ್ಟು ಸಾಧನೆ, ಮಕ್ಕಳಿಂದ ಹಿಡಿದು ಮುದುಕರವರೆಗೆ ಕಂಡುಬಂದ ಹಲವು ರೋಗಗಳಿಗೆ ದೇಶದಲ್ಲಿಯೇ ಔಷಧಿ ಉತ್ಪಾದನೆ, ದೇಶದಿಂದಲೇ ನಿರ್ಮೂಲನೆ ಮಾಡಲಾದ ಹಲವು ಸಾಂಕ್ರಾಮಿಕ ರೋಗಗಳು ಈ ಎಲ್ಲವೂ ಹಾಗೂ ಇದರೊಂದಿಗೇ ಅಮೇರಿಕಾ ಹರಡುವ ರೋಗಗಳ ಮಧ್ಯೆಯೂ ನಿರ್ಮಿಸಿದ ಆರೋಗ್ಯವಂತ ಸಮಾಜ.

'ವಿದೇಶಗಳಲ್ಲಿ ಲಕ್ಷಾಧೀಶರಾಗಿರುವ ವೈದ್ಯರಿದ್ದಾರೆ. ಇಲ್ಲಿಯೂ ವಿಜ್ಞಾನಿಗಳು ವೈದ್ಯರು ಇದ್ದಾರೆ. ಆದರೆ ಎಷ್ಟೋ ಜನಕ್ಕೆ ಕಾರುಗಳಿಲ್ಲ. ಕಾರುಗಳಿದ್ದವರಿಗೆ ಪೆಟ್ರೋಲ್ ಇಲ್ಲ. ಆದರೂ ಸಹಾ ಇವರು ದೇಶಕ್ಕೆ ಮೋಸ ಮಾಡಲು ಇಚ್ಛಿಸುವುದಿಲ್ಲ. ಇಲ್ಲಿರುವ ಎಷ್ಟೋ ವೈದ್ಯರು ಸಿರಿವಂತಿಕೆಯ ಹಾದಿಯನ್ನು ತುಳಿಯಬಹುದಿತ್ತು. ಹಣ ಹುಡುಕುತ್ತಾ ದೇಶ ಬಿಟ್ಟು ಹೋಗಬಹುದಿತ್ತು. ಆದರೆ ಯಾರೂ ಹಾಗೆ ಮಾಡುವುದನ್ನು ಎಂದೂ ಯೋಚಿಸಲಿಲ್ಲ. ನೋಡಿ ನಾವು ಗುಲಾಮರು ಎಷ್ಟು ದೂರ ಸಾಗಿ ಬಂದಿದ್ದೇವೆ' ಎನ್ನುತ್ತಾರೆ ಕ್ಯಾಸ್ಟ್ರೋ.



'ನಾವು ಜನರ ಜೀವವನ್ನು ಕಾಪಾಡುತ್ತಿರುವಾಗಲೇ ನಮ್ಮ ದೇಶದ ಪ್ರತಿಯೊಂದು ಭಾಗ ಸಾವನ್ನಪ್ಪಬೇಕೆಂದು ಅಮೇರಿಕಾ ಬಯಸುತ್ತಿದೆ. ನಮ್ಮ ದೇಶದ ಎಲ್ಲಾ ೧೧ ದಶಲಕ್ಷ ಜನರನ್ನು ಇಲ್ಲವಾಗಿಸಲು ಇಲ್ಲವೇ ಅವರು ಹಸಿವು ಮತ್ತು ರೋಗಗಳಿಂದ ಮೊಣಕಾಲೂರಿ ನಿಲ್ಲಬೇಕೆಂದು 'ಮಾನವ ಹಕ್ಕುಗಳ ಪ್ರತಿಪಾದಕ' ಅಮೇರಿಕಾ ಬಯಸುತ್ತದೆ' ಎನ್ನುತ್ತಾರೆ.

ಕ್ಯೂಬಾದಂತೆ ಇತರೆ ದೇಶಗಳು ಆರೋಗ್ಯದ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದರೆ ಜಗತ್ತಿನಲ್ಲಿರಲಿ, ಕೇವಲ ಲ್ಯಾಟಿನ್ ಅಮೇರಿಕಾ ಮಾತ್ರದಲ್ಲಿಯೇ ೮೦ ಸಾವಿರ ಮಕ್ಕಳನ್ನು ಸಾವಿನ ಬಾಯಿಯಿಂದ ಕಾಪಾಡಬಹುದಿತ್ತು ಎಂದು ಯೂನಿಸೆಫ್‌ನ ಮಹಾನಿರ್ದೇಶಕರು ಕ್ಯೂಬಾಗೆ ಶಹಬಾಷ್‌ಗಿರಿ ನೀಡಿದ್ದಾರೆ. ಕ್ಯೂಬಾ ತನ್ನ ಆರೋಗ್ಯವನ್ನು ಮಾತ್ರವಲ್ಲ ಜಗತ್ತಿನ ಹಲವು ದೇಶಗಳ ಆರೋಗ್ಯವನ್ನೂ ಕಾಪಾಡುತ್ತಿದೆ. ಇಂದು ವಿಶ್ವ ಆರೋಗ್ಯ ಸಂಸ್ಥೆಯ ವೈದ್ಯರಿಗಿಂತಲೂ ಮೂರು ಪಟ್ಟು ಹೆಚ್ಚು ಕ್ಯೂಬಾದ ವೈದ್ಯರು ಮೂರನೇ ಜಗತ್ತಿನಲ್ಲಿ ಜನರನ್ನು ಸಾವಿನ ದವಡೆಯಿಂದ ರಕ್ಷಿಸುತ್ತಿದ್ದಾರೆ. ೪೩ ದೇಶಗಳಲ್ಲಿ ಕ್ಯೂಬಾದ ವೈದ್ಯರು ಮಾನವೀಯ ಸೇವೆ ಸಲ್ಲಿಸುತ್ತಿದ್ದಾರೆ. ದಕ್ಷಿಣ ಆಫ್ರಿಕಾ ಒಂದರಲ್ಲಿಯೇ ೬೦೦ ವೈದ್ಯರಿದ್ದಾರೆ.

ವೈದ್ಯಕೀಯದ ಹಲವು ರಂಗಗಳಲ್ಲಿ ಕ್ಯೂಬಾ ಪ್ರಥಮ ಸ್ಥಾನದಲ್ಲಿದೆ. ಈ ಹಲವು ಪ್ರಥಮಗಳಿಗೆ ಮತ್ತೆ ಕ್ಯೂಬಾ 'ಆರೋಗ್ಯ ಪ್ರವಾಸೋದ್ಯಮ'ವನ್ನು ಸೇರಿಸಿದೆ. ಇಡೀ ಜಗತ್ತು ಈಗ ಆರೋಗ್ಯಕ್ಕಾಗಿ ಕ್ಯೂಬಾದ ಕಡೆ ನೋಡುತ್ತಿರುವುದರಿಂದ ಕ್ಯೂಬಾ ಆರೋಗ್ಯ ರಂಗಕ್ಕೆ ಬೇಕಾದ ಡಾಲರ್ ಹೊಂದಿಸಿಕೊಳ್ಳಲು, ದಿಗ್ಬಂಧನದ ನಡುವೆಯೂ ಉಸಿರಾಡಲು ಈ ಹೊಸ ಪ್ರವಾಸೋದ್ಯಮವನ್ನು ಆರಂಭಿಸಿದೆ. ಅರ್ಜೆಂಟೀನಾ, ಬ್ರೆಜಿಲ್, ವೆನೆಜುವೆಲಾ, ಸ್ಪೇನ್, ಕೆನಡಾ, ಇಟಲಿ ದೇಶಗಳು ಈಗ ಕ್ಯೂಬಾದತ್ತ ಉತ್ತಮ ಆರೋಗ್ಯ ಅರಸಿ ಹೊರಟಿವೆ.


ಅಮೇರಿಕಾ ರಾಸಾಯನಿಕಗಳ ದಾಳಿ ನಡೆಸಿ ಹಲವು ರೋಗ ಹರಡಿದಾಗ ವಿಜ್ಞಾನಿಗಳು ಪ್ರಯೋಗಾಲಯದ ಮೊರೆ ಹೊಕ್ಕು ಹಲವು ಜೀವ ಉಳಿಸುವ ಔಷಧಿ ಕಂಡುಹಿಡಿದಿದ್ದಾರೆ. ಜೀವ ತಂತ್ರಜ್ಞಾನದ ಮೂಲಕ ಹೊಸ ಕ್ರಾಂತಿಯೊಂದನ್ನು ಕ್ಯೂಬಾ ಆಗುಮಾಡುತ್ತಿದೆ. ಜಗತ್ತು ಸಾಧ್ಯವಿಲ್ಲ ಎಂದು ಕೈಚೆಲ್ಲಿದ ಹಲವು ರೋಗಗಳಿಗೆ ಚಿಕಿತ್ಸೆ ಕ್ಯೂಬಾದಲ್ಲಿದೆ. ಅಷ್ಟೇ ಅಲ್ಲ ದಿಗ್ಬಂಧನದಿಂದಾಗಿ ಕ್ಯೂಬಾದ ಕೃಷಿಗೆ ಬೇಕಾದ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕ ಇಲ್ಲವಾದಾಗ ಜೀವ ತಂತ್ರಜ್ಞಾನಿಗಳು ಇದನ್ನು ಒದಗಿಸಿಕೊಟ್ಟಿದ್ದಾರೆ. ಬಾಳೆಹಣ್ಣಿನ ಗಿಡ ನಾಲ್ಕು ಪಟ್ಟು ಹೆಚ್ಚು ಬಾಳೆಹಣ್ಣು ಬಿಡುವಂತೆ ಮಾಡಿದ್ದಾರೆ. ಕಡಲಲ್ಲಿರುವ ಮೀನುಗಳು ದುಪ್ಪಟ್ಟು ದಪ್ಪಗಾಗುವಂತೆ ಮಾಡಿದ್ದಾರೆ. ಸಕ್ಕರೆ ಇನ್ನಷ್ಟು ಸಿಹಿಯಾಗುವಂತೆ ಮಾಡಿದ್ದಾರೆ.

ಜೀವ ತಂತ್ರಜ್ಞಾನ ಕ್ಯೂಬಾದಲ್ಲಿ ಯಾವ ರೀತಿ ದಾಪುಗಾಲು ಹಾಕಿದೆಯೆಂದರೆ 'ಸಕ್ಕರೆಯ ಬಟ್ಟಲು' ಎನಿಸಿಕೊಂಡಿದ್ದ ಕ್ಯೂಬಾ ಇನ್ನೇನು 'ಜಗತ್ತಿನ ಜೀವ ತಂತ್ರಜ್ಞಾನದ ತೊಟ್ಟಿಲು' ಎನಿಸಿಕೊಳ್ಳುವ ದಿನ ದೂರ ಇಲ್ಲ.

‘ಟಿವಿ ಸೆಟ್‌ಗಳನ್ನು, ಕಾರ್‌ಗಳನ್ನು ಉತ್ಪಾದಿಸುವುದರಲ್ಲಿ ಜಪಾನ್‌ನೊಂದಿಗೆ, ವಿಮಾನಗಳನ್ನು, ಕೈಗಾರಿಕೆಗೆ ಬೇಕಾದ ವಸ್ತುಗಳನ್ನು ಉತ್ಪಾದಿಸುವುದರಲ್ಲಿ ಅಮೇರಿಕಾದೊಂದಿಗೆ ಸೆಣಸಲು ಸಾಧ್ಯವಿಲ್ಲ. ಅಂತೆಯೇ ಸಕ್ಕರೆ, ಜೀವತಂತ್ರಜ್ಞಾನದಲ್ಲಿ ಕ್ಯೂಬಾದೊಡನೆ ಸೆಣಸಿ ಗೆಲ್ಲಲು ಯಾರಿಗೂ ಸಾಧ್ಯವಿಲ್ಲ’ ಎನ್ನುತ್ತಾರೆ ಕ್ಯಾಸ್ಟ್ರೋ.

ಜನ ಹೇಳುತ್ತಾರೆ ಅಮೇರಿಕಾದ ಈ ದಾಳಿಯ ನಡುವೆಯೂ ಕ್ಯೂಬಾದ ಜನತೆ ಹಾಗೂ ಫಿಡೆಲ್‌ರವರ ರಾಜಕೀಯ ಆರೋಗ್ಯ ಚೆನ್ನಾಗಿಯೇ ಇದೆ.





## ಮೂತಿಗೆ ಗುದ್ದಬೇಕು

‘ಹವಾನಾದ ಕ್ರಾಂತಿ ಚೌಕದಿಂದ ನೇರವಾಗಿ ಅಮೇರಿಕಾದ ವೈಟ್‌ಹೌಸ್‌ಗೇ ಜಾವೆಲಿನ್ ಎಸೆಯುವವರು ನಮ್ಮಲ್ಲಿದ್ದಾರೆ’ - ಅಮೇರಿಕಾಗೆ ಕ್ಯೂಬಾ ಕೊಟ್ಟ ಎಚ್ಚರಿಕೆ ಇದು.

ಕ್ಯೂಬಾದ ಎಲ್ಲರೂ ಪ್ರೀತಿಸುವ ಕ್ರಾಂತಿಕಾರಿ ಜೋಸ್‌ಮಾರ್ಟಿ ಅವರ ಹೆಸರನ್ನೇ ಬಳಸಿಕೊಂಡು ಅಮೇರಿಕಾ ‘ರೇಡಿಯೋ ಜೋಸ್ ಮಾರ್ಟಿ’ ಪ್ರಸಾರ ಆರಂಭಿಸಿದಾಗ ಕ್ಯೂಬಾ ಹಾಗೂ ಅಮೇರಿಕಾದಲ್ಲಿ ಈ ಬಗ್ಗೆ ಖಂಡನೆಗಳ ಸುರಿಮಳೆಯಾಯಿತು. ಆಗ ಅಮೇರಿಕಾದ ಆಂತರಿಕ ವಿಷಯಗಳ ಸಹಾಯಕ ಕಾರ್ಯದರ್ಶಿ ‘ಕ್ಯೂಬಾ ನಿರ್ಲಕ್ಷಿಸಿರುವ ವಿಷಯಗಳಲ್ಲಿ ಅಲ್ಲಿನ ಯುವಜನರಿಗೆ ಅರಿವು ಮೂಡಿಸಲು ಈ ರೇಡಿಯೋ ಪ್ರಸಾರ ಆರಂಭಿಸಲಾಗಿದೆ. ಕ್ಯೂಬಾ ಸರ್ಕಾರ ನಿರ್ಲಕ್ಷಿಸಿರುವ ಕ್ರೀಡೆ ಹಾಗೂ ಸಂಗೀತದ ಬಗ್ಗೆ ರೇಡಿಯೋ ಮಾರ್ಟಿ ಪ್ರಸಾರ ಆರಂಭಿಸುತ್ತದೆ’ ಎಂದಾಗ ಕ್ಯೂಬಾ ಕೊಟ್ಟ ಉತ್ತರ ಇದು.

ಕ್ಯೂಬಾದ ಕುತ್ತಿಗೆಗೆ ಅಮೇರಿಕಾ ಕುಣಿಕೆ ಹಾಕಿದಾಗಲೂ ಸಹಾ ಬಾಕ್ಸಿಂಗ್‌ಗೆ ಹೆಸರಾದ ಕ್ಯೂಬಾ ಅಮೇರಿಕಾದ ಮೂತಿಗೆ ಗುದ್ದುವುದನ್ನು ಬಿಡಲಿಲ್ಲ. ಅದು ಒಲಿಂಪಿಕ್ಸ್ ಇರಲಿ, ಪ್ಯಾನ್ ಅಮೇರಿಕಾ ಕೂಟಗಳಿರಲಿ, ಲ್ಯಾಟಿನ್ ಅಮೇರಿಕಾ ಕ್ರೀಡಾಸ್ಪರ್ಧೆಗಳಿರಲಿ, ಐಬಿರೋ - ಅಮೇರಿಕಾ ದೇಶಗಳ ಕ್ರೀಡಾಕೂಟವಿರಲಿ ಅಥವಾ ಅಂಗವಿಕಲರ, ಬುದ್ಧಿಮಾಂದ್ಯರ ಅಂತಾರಾಷ್ಟ್ರೀಯ ಸ್ಪರ್ಧೆಗಳಿರಲಿ ಕ್ಯೂಬಾ ಸದಾ ಮೇಲುಗೈ ಪಡೆಯುತ್ತಲೇ ಬಂದಿದೆ.

ಹವಾನಾದಲ್ಲಿ ೧೯೯೧ರಲ್ಲಿ ನಡೆದ ಪ್ಯಾನ್ ಅಮೇರಿಕಾ ದೇಶಗಳ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಕ್ಯೂಬಾದ ರಾಷ್ಟ್ರಗೀತೆಯನ್ನು ಅಮೇರಿಕಾಗಿಂತ ಹತ್ತು ಬಾರಿ ಹೆಚ್ಚು ನುಡಿಸಲಾಯಿತು. ಕ್ಯೂಬಾ ಈ ಸ್ಪರ್ಧೆಯಲ್ಲಿ ೧೪೦ ಪದಕಗಳನ್ನು ಗೆದ್ದರೆ ಅಮೇರಿಕಾ ೧೩೦ ಪದಕಗಳೊಂದಿಗೆ ಹಿಂದೆ ನಿಲ್ಲಬೇಕಾಯಿತು.

ಆಹಾರ, ಹಣ್ಣು, ಹಾಲು ಇಲ್ಲದ ಸಮಯದಲ್ಲಿಯೂ ಕ್ಯೂಬಾ ಕ್ರೀಡೆಯಲ್ಲಿ ತನ್ನ ಹೆಜ್ಜೆಗಳನ್ನು ಹಿಂದೆ ಸರಿಸಿಲ್ಲ. ೧೯೭೨ರಲ್ಲಿ ಮ್ಯೂನಿಚ್‌ನಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ೧೪ನೆಯ ಸ್ಥಾನ ಪಡೆದ ಕ್ಯೂಬಾ ೧೯೭೬ರಲ್ಲಿ ಮಾಂಟ್ರಿಯಲ್ ಒಲಿಂಪಿಕ್ಸ್‌ನಲ್ಲಿ ಎಂಟನೇ ಸ್ಥಾನಕ್ಕೆ ಏರಿತು. ೧೯೮೦ರಲ್ಲಿ ಮಾಸ್ಕೋದಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆಯಿತು. ನಂತರ ೧೨ ವರ್ಷಗಳ ಕಾಲ ಕ್ಯೂಬಾ ಒಲಿಂಪಿಕ್ಸ್‌ನ ರಾಜಕಾರಣದಿಂದ ಕ್ರೀಡೆಗೆ ಬಹಿಷ್ಕಾರ ಹಾಕಿತು. ಆದರೆ ೧೯೯೨ರಲ್ಲಿ ಬಾರ್ಸಿಲೋನಾದಲ್ಲಿ ಮತ್ತೆ ಕಾಣಿಸಿಕೊಂಡ ಕ್ಯೂಬಾ ೧೭೨ ದೇಶಗಳ ಪೈಕಿ ಐದನೇ ಸ್ಥಾನ ಗಿಟ್ಟಿಸಿತು. ಅಟ್ಲಾಂಟದಲ್ಲಿ ೯ ಚಿನ್ನದ ಪದಕ ಗೆದ್ದು ೮ನೇ ಸ್ಥಾನದಲ್ಲಿತ್ತು. ಇದು ಅಮೇರಿಕಾಗೂ ಗೊತ್ತು.

ಅಮೇರಿಕಾದ ಮೂತಿಗೆ ಗುದ್ದುವುದು ಎಂದರೆ ಕ್ಯೂಬನ್ನರಿಗೆ ಸದಾ ಸಂತಸದ ವಿಷಯ. ಹೀಗಾಗಿಯೇ ಕ್ಯೂಬಾದ ಬಾಕ್ಸರ್‌ಗಳು ರಿಂಗ್‌ನೊಳಗಿಳಿದರೆ ಸಾಕು ಸದಾ ತಮಗೆ ಎದುರಾಳಿಯಾಗುವ ಅಮೇರಿಕಾದವರ ವಿರುದ್ಧ ಇರುವ ಸಿಟ್ಟನ್ನೆಲ್ಲಾ ಹರಿಯಬಿಡುತ್ತಾರೆ. ''ನನಗೆ ಅಮೇರಿಕಾದವರ ಮೂತಿಗೆ ಇಕ್ಕುವುದು ಸದಾ ಸಂತೋಷ ನೀಡುತ್ತದೆ. ಏಕೆಂದರೆ ಕ್ಯೂಬಾದ ಎಲ್ಲ ಕಣ್ಣು ಅಮೇರಿಕಾದವರ ವಿರುದ್ಧ ಸೆಣಸಾಡುತ್ತಿರುವ ನಮ್ಮ ಮೇಲೆಯೇ ಇರುತ್ತದೆ'' ಎನ್ನುತ್ತಾರೆ  ಸದಾ ಚಿನ್ನದ ಪದಕ ಬಾಚುವ ಏರಿಯಲ್ ಫರ್ನಾಂಡಿಸ್.

ಬಾಕ್ಸಿಂಗ್‌ನಲ್ಲಂತೂ ಕ್ಯೂಬಾ ಅಮೇರಿಕಾವನ್ನು ಮೆಟ್ಟಿ ನಿಲ್ಲಲು ಪ್ರಯತ್ನಿಸುತ್ತಲೇ ಇದೆ. ಅಮೇರಿಕಾದ ವಿರುದ್ಧ ಒಲಿಂಪಿಕ್ಸ್ ಪಂದ್ಯವೊಂದರಲ್ಲಿ ೧೨ರ ಪೈಕಿ ೧೧ ಪದಕ ಗೆದ್ದದ್ದು ಕ್ಯೂಬಾದಲ್ಲಿ ಸಂತಸದ ಹೊಳೆಯನ್ನೇ ಹರಿಸಿದೆ. ಆ ಕಳೆದುಕೊಂಡ ಒಂದು ಪದಕವೂ ರೆಫರಿಯ ಪೂರ್ವಾಗ್ರಹದಿಂದಾದದ್ದು ಎನ್ನುತ್ತಾರೆ ಕ್ಯೂಬಾದ ಕುಸ್ತಿಪಟುಗಳು.

ಕ್ಯೂಬಾ ಒಲಿಂಪಿಕ್ಸ್ ಪದಕಗಳನ್ನು ಗೆದ್ದದ್ದರಲ್ಲಿ ಅಮೇರಿಕಾಗಿಂತ ಹಿಂದೆ ಇದ್ದರೂ ಸರಾಸರಿ ಜನಸಂಖ್ಯೆಗೆ ಪಡೆದ ಪದಕದಲ್ಲಿ ಸದಾ ಅಮೇರಿಕಾಗಿಂತ ಮುಂದಿದೆ. ಅಮೇರಿಕಾ ೨೫೦ ದಶಲಕ್ಷ ಜನಸಂಖ್ಯೆ ಹೊಂದಿದ್ದು ಒಂದು ದಶಲಕ್ಷ ಜನಸಂಖ್ಯೆಗೆ ಕೇವಲ ೦.೧೬ ಚಿನ್ನದ ಪದಕಗಳನ್ನು ಪಡೆದಿದ್ದರೆ, ಕ್ಯೂಬಾ ೧೧ ಮಿಲಿಯ ಜನಸಂಖ್ಯೆ ಹೊಂದಿದ್ದು ಒಂದು ದಶಲಕ್ಷ ಜನಸಂಖ್ಯೆಗೆ ೧.೨೭ ಚಿನ್ನದ ಪದಕವನ್ನು ಹೊಂದಿದೆ.

ಕ್ರಾಂತಿಗೆ ಮುನ್ನ ಕ್ಯೂಬಾ ಒಲಿಂಪಿಕ್ಸ್‌ನಲ್ಲಿ ಒಂದೇ ಒಂದು ಪದಕವನ್ನೂ ಪಡೆದಿರಲಿಲ್ಲ ಎಂಬುದು ಕ್ಯೂಬಾ ಸರ್ಕಾರ ನೀಡಿರುವ ಆದ್ಯತೆಗಳನ್ನು ಸಾರಿಹೇಳುತ್ತದೆ. ಕುಸ್ತಿ, ಬೇಸ್‌ಬಾಲ್, ಮಹಿಳೆಯರ ವಾಲಿಬಾಲ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದಿದ್ದು ಹ್ಯಾಂಡ್‌ಬಾಲ್, ಫೀಲ್ಡ್ ಹಾಕಿಯಲ್ಲಿಯೂ ಪ್ರೀತಿ ಹೊಂದಿದೆ.



ಕ್ಯೂಬಾದ ನೆತ್ತಿಯನ್ನು ಸಿಕ್ಕ ವಿಷಯಕ್ಕೆಲ್ಲಾ ಮಟುಕುವ ಅಮೇರಿಕಾ ಈ ವಿಷಯದಲ್ಲೂ ಹಿಂದೆ ಬಿದ್ದಿಲ್ಲ. ಕ್ಯೂಬನ್ ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಸ್ಪರ್ಧೆಗಳಿಗೆ ಹೋದರೆ ಸಾಕು ಹಣದ ಥೈಲಿ ತೋರಿಸಿ ತಮ್ಮ ಕಡೆ ಸೆಳೆಯುವ ಹಿಂಬಾಗಿಲ ಪ್ರಯತ್ನಗಳನ್ನು ನಡೆಸುತ್ತಲೇ ಇರುತ್ತದೆ. ಕ್ಯೂಬಾದ ನೋವಿನ ಸಂಗತಿಗಳಲ್ಲಿ ಇದೂ ಒಂದು.

ಕ್ಯೂಬಾದ ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಕೇವಲ ಅಮೇರಿಕಾದ ಕ್ರೀಡಾಪಟುಗಳ ಮೇಲಲ್ಲ, ಡಾಲರ್‌ನ ಥೈಲಿಗಳ ಮೇಲೂ ಗೆದ್ದು ಬರಬೇಕು. ಹಣದ ಥೈಲಿಯ ಮುಂದೆ ದೇಶದ ಅಭಿಮಾನವೇ ಮುಖ್ಯ ಎಂಬುದನ್ನು ಸಾರಿ ಸಾರಿ ಹೇಳಬೇಕಾದ ಪರಿಸ್ಥಿತಿ ಇದೆ. ಕ್ಯೂಬಾದ ಕ್ರೀಡಾಪಟುಗಳಿಗೆ ಒಲಿಂಪಿಕ್ಸ್‌ನಲ್ಲಿ ಗೆಲ್ಲುವ ಚಿನ್ನದ ಪದಕಕ್ಕಿಂತಲೂ ಮತ್ತೆ ತಾಯ್ನಾಡಿಗೆ ಹೊತ್ತು ತರುವ ಈ ಸ್ವಾಭಿಮಾನವೇ ಬೆಲೆಯುಳ್ಳದ್ದು.ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ಕ್ಯೂಬಾ ೩೧ ಪದಕಗಳನ್ನು ಗೆದ್ದಿತು ಎನ್ನುವುದಕ್ಕಿಂತಲೂ ಅಲ್ಲಿಗೆ ಹೋದ ೨೦೦ ಮಂದಿ ಕ್ರೀಡಾಪಟುಗಳು ಎಲ್ಲರೂ ಹಿಂದಿರುಗಿ ಬಂದರು ಎಂಬುದು ಹೆಮ್ಮೆಯ ಸಂಗತಿ.

ಕ್ಯೂಬಾ ಇಂದು ಬಡತನದ ನಡುವೆಯೂ ಸುಮಾರು ೩೦ ದೇಶಗಳಿಗೆ ಕ್ರೀಡೆಯಲ್ಲಿ ತಾಂತ್ರಿಕ ಸಹಕಾರ ನೀಡುತ್ತಿದೆ. ಕ್ಯೂಬಾದ ಕ್ರೀಡಾಶಾಲೆಗಳಲ್ಲಿ ೧೫ ದೇಶಗಳ ೨೫೦ಕ್ಕೂ ಹೆಚ್ಚು ಕ್ರೀಡಾಪಟುಗಳು ತರಬೇತಿ ಪಡೆಯುತ್ತಿದ್ದಾರೆ. ಕ್ಯೂಬಾದಲ್ಲಿ ನಡೆದ ಅಂತಾರಾಷ್ಟ್ರೀಯ ಸೌಹಾರ್ದ ಸಮ್ಮೇಳನದಲ್ಲಿ ಫಿಡೆಲ್‌ಕ್ಯಾಸ್ಟ್ರೋ ಹೆಮ್ಮೆಯಿಂದ ಹೇಳಿದ್ದೂ ಇದನ್ನೇ. 'ಅಮೇರಿಕಾದ ಆರ್ಥಿಕ ದಿಗ್ಬಂಧನದ ನಡುವೆಯೂ ಕ್ಯೂಬಾ ತಲಾ ಆದಾಯಕ್ಕೆ ಹೋಲಿಸಿದರೆ ಅತ್ಯಂತ ಹೆಚ್ಚು ದೈಹಿಕ ಹಾಗೂ ಕ್ರೀಡಾ ಶಿಕ್ಷಕರನ್ನು ಹೊಂದಿದೆ'.

ಕ್ಯೂಬಾ ತನ್ನ ಸಂಕಷ್ಟದಲ್ಲಿಯೂ ಕ್ರೀಡೆಗೆ ಹಣದ ಕೊರತೆಯಾಗದಂತೆ ನೋಡಿಕೊಂಡಿದೆ. ಕ್ರೀಡೆಗಾಗಿ ೧೦೨.೮ ದಶಲಕ್ಷ ಪೆಸೋಗಳನ್ನು ಮೀಸಲಿರಿಸಿದೆ. ಕ್ಯೂಬಾಕ್ಕೆ ಒದಗಿರುವ ಕಷ್ಟ ಕ್ರೀಡಾಪಟುಗಳಿಗೂ ಗೊತ್ತು. ತಾವು ಗೆದ್ದ ಹಣದ ಬಹುತೇಕ ಭಾಗವನ್ನು ಮತ್ತೆ ಕ್ರೀಡೆಗೇ ನೀಡುತ್ತಾರೆ. ತಮ್ಮ ನಂತರವೂ ಅಮೇರಿಕಾದ ಮೂತಿಗೆ ಗುದ್ದುವವರು ಮುಂದುವರಿಯಲಿ ಎಂದು.

ಅಮೇರಿಕಾದಲ್ಲಿ ನಡೆಯುವ ಹಲವು ಅಂತಾರಾಷ್ಟ್ರೀಯ ಸ್ಪರ್ಧೆಗಳಿಗೆ ಕ್ಯೂಬಾ ಕ್ರೀಡಾಪಟುಗಳಿಗೆ ಕೊನೆಯ ನಿಮಿಷದಲ್ಲಿ ವೀಸಾ ನೀಡುವ, ಎಷ್ಟೋ ವೇಳೆ ಸ್ಪರ್ಧೆಯ ಫಲಿತಾಂಶ ಬಂದ ಮೇಲೆ ವೀಸಾ ನೀಡುವ, ಡಾಲರ್ ಹಿಡಿದು ಬೆಂಬತ್ತಿ ಪೀಡಿಸುವ ಒತ್ತಡದ ತಂತ್ರವನ್ನು ಅಮೇರಿಕಾ ನಡೆಸುತ್ತಲೇ ಬಂದಿದೆ.ಒಲಂಪಿಕ್ಸ್ ಸಿಐಎಗೆ ಪ್ರಮುಖ ಹಬ್ಬ ಎನ್ನುತ್ತಾರೆ ಸಿಐಎನ ಅಧಿಕಾರಿಯಾಗಿದ್ದು ಈಗ ಅದನ್ನು ತೊರೆದಿರುವ ಫಿಲಿಪ್ ಆಗೀ. ಬಾರ್ಸಿಲೋನಾ ಒಲಿಂಪಿಕ್ಸ್ ಸಂದರ್ಭದಲ್ಲಿ ತಾವು ಒಂದೂವರೆ ವರ್ಷ ಮುಂಚಿತವಾಗಿಯೇ ಅಮೇರಿಕಾ ರಾಯಭಾರ ಕಚೇರಿಯ ಸಹಾಯಕ ಎಂಬ ಹೆಸರಿನಲ್ಲಿ ಗೂಢಾಚಾರಿಕೆ ನಡೆಸುತ್ತಿದ್ದುದನ್ನು, ಕ್ರೀಡಾಪಟುಗಳ ಬೆನ್ನತ್ತಿ ಹೋಗುತ್ತಿದ್ದುದನ್ನೂ, ದೇಶ ದೇಶಗಳಿಂದ ಮಾಹಿತಿ ವಿನಿಯಮ ಮಾಡಿಕೊಳ್ಳುತ್ತಿದ್ದುದನ್ನೂ 'ಇನ್‌ಸೈಡ್ ದಿ ಕಂಪನಿ' ಎಂಬ ಸಿ.ಐ.ಎ.ಯನ್ನು

ಬಯಲಿಗಿಡುವ ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ.

ಕ್ಯೂಬಾದ ನಾಯಕರ ಕ್ರೀಡಾ ಆಸಕ್ತಿಯೂ ಸಿಐಎಗೆ ಮುಖ್ಯ ವಿಷಯ. ಕ್ಯೂಬಾದಲ್ಲಿ ಕ್ರಾಂತಿಯಾದ ಎರಡು ವರ್ಷಗಳಲ್ಲಿಯೇ ನ್ಯಾಷನಲ್ ಸ್ಪೋರ್ಟ್, ಫಿಸಿಕಲ್ ಎಜುಕೇಶನ್ ಅಂಡ್ ರಿಕ್ರಿಯೇಷನ್ ಇನ್‌ಸ್ಟಿಟ್ಯೂಟ್ (ಇಂದರ್) ಸ್ಥಾಪಿಸಲಾಯಿತು. ಇಡೀ ಕ್ಯೂಬಾದಲ್ಲಿನ ಕ್ರೀಡಾ ಚಟುವಟಿಕೆಗಳು ಈ ಸಂಸ್ಥೆಯ ಕಣ್ಗಾವಲಿನಲ್ಲಿ ನಡೆಯುತ್ತದೆ. ಈ 'ಇಂದರ್'ನ ನಿರ್ದೇಶಕರಾಗಿದ್ದ ಆಲ್ಬರ್ಟೋ ಫ್ಯೂಗ್ ಡೆ ಲಾ ಬಾರ್ಕಾ ಅವರನ್ನೇ ಸಿಐಎ ತನ್ನ ಬುಟ್ಟಿಗೆ ಹಾಕಿಕೊಂಡಿತು. ಆದರೆ ಇವರು ಕ್ಯೂಬಾ ಪರ ಬೇಹುಗಾರ ಎಂಬುದು ಗೊತ್ತಿರಲಿಲ್ಲ. ಫಿಡೆಲ್ ಕ್ಯಾಸ್ಟ್ರೋ ಅವರ ಕ್ರೀಡಾ ಆಸಕ್ತಿ, ಇಂದರ್‌ಗೆ ಭೇಟಿ ನೀಡುವ ಅವಧಿ ಎಲ್ಲವನ್ನೂ ಸಿಐಎ ವಿಚಾರಿಸಿತ್ತು. ಫಿಡೆಲ್‌ಕ್ಯಾಸ್ಟ್ರೋ ಈಗಲೂ ಮೀನು ಹಿಡಿಯಲು ಹೋಗುತ್ತಾರಾ ಎಂಬುದರ ಬಗ್ಗೆ ವಿಶೇಷ ಆಸಕ್ತಿ ತೋರಿಸಿತ್ತು.


'ಫಿಡೆಲ್‌ಕ್ಯಾಸ್ಟ್ರೋ ಈಗಲೂ ಕ್ರೀಡೆಗಳನ್ನು ನೋಡಲು ಹೋಗುತ್ತಾರಾ, ಸದ್ಯದಲ್ಲಿಯೇ ಅವರು ವೀಕ್ಷಕರಾಗಿ ಭಾಗವಹಿಸಲಿರುವ ಕ್ರೀಡಾಸ್ಪರ್ಧೆ ಯಾವುದು? ಇಂಡಿಯಾನ ಪೊಲೀಸ್‌ನಲ್ಲಿ ನಡೆಯಲಿರುವ ೧೦ನೆಯ ಪ್ಯಾನ್ ಅಮೇರಿಕನ್ ಕ್ರೀಡಾಕೂಟದಲ್ಲಿ ಭಾಗವಹಿಸುವ ಬಗ್ಗೆ ಯೋಚಿಸುತ್ತಿದ್ದಾರಾ ಎಂಬ ಬಗ್ಗೆ ಮಾಹಿತಿ ನೀಡಲು ಸಿಐಎ ನನಗೆ ಆದೇಶಿಸಿತ್ತು' ಎಂದು ಆಲ್ಬರ್ಟೋ ಬಹಿರಂಗಪಡಿಸಿದ್ದಾರೆ.

ಕ್ಯೂಬಾದ ಸಂವಿಧಾನ ಕ್ರೀಡೆಯನ್ನು ಪ್ರತಿಯೊಬ್ಬರ ಹಕ್ಕನ್ನಾಗಿಸಿದೆ. ಬೆಳೆಯುವ ಸಿರಿಯನ್ನು ಮೊಳಕೆಯಲ್ಲಿಯೇ ಗುರುತಿಸುತ್ತದೆ. ನೋಡಿ ಕಲಿ ಮಾಡಿ ತಿಳಿ ಎಂದು ಬೋಧಿಸುತ್ತದೆ. ಹೀಗಾಗಿಯೇ ಕ್ರೀಡೆಗಳಲ್ಲಿ ಎತ್ತರೆತ್ತರಕ್ಕೆ ಏರುತ್ತಲೇ ಇದೆ.

ಕ್ಯೂಬಾದ ಮೇಲೆ ವಿಧಿಸಿರುವ ಆರ್ಥಿಕ ದಿಗ್ಬಂಧನದಿಂದಾಗಿ ಪ್ರತೀ ಪ್ರಜೆಯೂ ಶೇ. ೫೭ರಷ್ಟು ಕ್ಯಾಲೋರಿಗಳನ್ನು ಕಳೆದುಕೊಂಡಿದ್ದಾರೆ. ಆದರೂ ಸಹಾ ಅಮೇರಿಕಾಗೆ ಕ್ಯೂಬನ್ನರು ವಿಶೇಷ ಆಹಾರ ಸೇವಿಸುತ್ತಿದ್ದಾರೆ ಎಂಬ ಗುಮಾನಿ. ಕ್ಯೂಬಾದ ಕ್ರೀಡಾಪಟುಗಳ ಆಹಾರ ಸೂತ್ರವನ್ನು ಪತ್ತೆ ಹಚ್ಚಲೆಂದೇ ಹಲವು ಸಿಐಎ ಅಧಿಕಾರಿಗಳನ್ನು ಬಿಡಲಾಗಿದೆ.

ಆದರೆ ಅಮೇರಿಕಾದ ಮುಂದೆ ಕ್ಯೂಬಾದ ಬಾವುಟ ಬಾಗಬಾರದು ಎಂಬ ಒಂದೇ ಸೂತ್ರ ಕ್ಯೂಬಾವನ್ನು ಮತ್ತೆ ಮತ್ತೆ ಮೇಲೆದ್ದು ನಿಲ್ಲುವಂತೆ ಮಾಡುತ್ತಿದೆ ಎಂಬುದು ಮಾತ್ರ ಅಮೇರಿಕಾಗೆ ಗೊತ್ತಾಗದೇ ಹೋಗಿದೆ.





ಮೌನಕ್ರಾಂತಿ

ಹವಾನಾದ ಸುಂದರ ಕಡಲ ತೀರದ ನಗರ ಪ್ಲಾಯಾದಲ್ಲಿ ನಾನಿದ್ದ ಮನೆ ಡಾಕ್ಟರ್‌ಗಳದ್ದು. ಗಂಡ ಹೆಂಡತಿ ಇಬ್ಬರೂ ವೈದ್ಯರು. ಬೆಳಗ್ಗೆ ಕಣ್ಣುಜ್ಜಿ ನಾನು ಹೊರ ಬರುವ ವೇಳೆಗೆ ಅಡುಗೆ ಮನೆಯಲ್ಲಿ ಡಾ. ಗುಸ್ಟೋ ಮ್ಯಾನ್ಯುಯೆಲ್ ಸೊಂಟಕ್ಕೆ ಏಪ್ರನ್ ಕಟ್ಟಿಕೊಂಡು ಕಚ ಕಚ ಮಾಂಸ ಕತ್ತರಿಸಿ, ಮೊಟ್ಟೆ ಹುರಿದು ಮುಗಿಸಿ ಪಾತ್ರೆ ತೊಳೆಯುತ್ತಾ ನಿಂತಿರುತ್ತಿದ್ದರು.

ಉತ್ಸವದ ಕಲಾಪ ಮುಗಿಸಿ ಸಂಜೆ ನಾನು ಮನೆಗೆ ಬಂದಾಗ ಪುನಃ ಅದೇ ಕೆಲಸ. ಆದರೆ ಈ ಬಾರಿ ಗುಸ್ಟೋ ಜಾಗದಲ್ಲಿ ಡಾ. ಓಲಿವಾ ರೊಮಿರೋ. ಈ ದೃಶ್ಯ ನಾನಿದ್ದ ಮನೆಯ ಎದುರಿಗಿದ್ದ ಶಿಕ್ಷಕ ದಂಪತಿಗಳ ಮನೆಯಲ್ಲಿ, ಪಕ್ಕದಲ್ಲಿದ್ದ ಮತ್ತೊಂದು ವೈದ್ಯ ದಂಪತಿಗಳ ಮನೆಯಲ್ಲಿ, ಹೀಗೆ ಎಲ್ಲ ಮನೆಗಳಲ್ಲಿ ನಡೆಯುತ್ತಿದ್ದ ನಿತ್ಯಯಾತ್ರೆ.

ಬೆಳಿಗ್ಗೆ ಕಚೇರಿಗೆ ಹೋಗುವವರೆಗೆ ಗಂಡ ಅಡುಗೆ ಮನೆಯಿಂದ ಆರಂಭಿಸಿ ಎಲ್ಲಾ ಕೆಲಸಗಳ ಉಸ್ತುವಾರಿ ನೋಡಿಕೊಂಡರೆ ಪುಟ್ಟ ಮಕ್ಕಳನ್ನು ಕರೆದುಕೊಂಡು ಬಾಲವಾಡಿ, ಶಾಲೆಗಳಿಗೆ ಮುಟ್ಟಿಸಿ ಹೋಗುತ್ತಿದ್ದ ಹೆಂಡತಿ ಕಚೇರಿಯಿಂದ ಬಂದ ನಂತರ ಈ ಕೆಲಸಗಳನ್ನು ತಾನು ಕೈಗೆತ್ತಿಕೊಳ್ಳುತ್ತಿದ್ದಳು.

ಕ್ಯೂಬಾದಲ್ಲಿ ಸದ್ದಿಲ್ಲದೆ ಸಾಗಿರುವ ಬದಲಾವಣೆ ಇದು. ಇದನ್ನೇ ಫಿಡೆಲ್ ಕ್ಯಾಸ್ಟ್ರೋ 'ಕ್ರಾಂತಿಯೊಳಗಿನ ಕ್ರಾಂತಿ' ಎಂದು ಬಣ್ಣಿಸಿದ್ದಾರೆ. ಕ್ರಾಂತಿ ನಡೆಸುವುದು ಎಷ್ಟು ಕಷ್ಟವೋ ಹಾಗೆಯೇ ಈ ಪುರುಷ ಕೇಂದ್ರಿತ ಸಮಾಜವನ್ನು ತಿದ್ದಿ ದಾರಿಗೆ ಹಚ್ಚುವುದೂ ಅಷ್ಟೇ ಶ್ರಮದಾಯಕ ಎಂಬುದು ಫಿಡೆಲ್ ಅವರ ಅಭಿಪ್ರಾಯ. ''ಕ್ಯೂಬಾ ಎಲ್ಲ ದೇಶಗಳಂತೆಯೇ ಪುರುಷ ಕೇಂದ್ರಿತ ಆಲೋಚನೆಗಳನ್ನು ಹೊಂದಿತ್ತು. ಇಲ್ಲಿ ಶತಮಾನ ಕಾಲ ಕಾರುಬಾರು ನಡೆಸಿದ ಸ್ಪೇನ್‌ನಿಂದಾಗಿ ಈ ಗುಣಗಳು ಬಳುವಳಿಯಾಗಿ ಬಂದಿವೆ. ಆದರೆ ಇದನ್ನು ಸವಾಲಾಗಿ ಸ್ವೀಕರಿಸಿ ಲಿಂಗಬೇಧವನ್ನು ತೊಡೆದಿದ್ದೇವೆ. ಸಂಪೂರ್ಣವಾಗಿ ಈ ಬೇಧ ಇಲ್ಲವಾಗಿದೆ ಎಂದು ನಾನು ಹೇಳುತ್ತಿಲ್ಲ. ಆದರೆ ಲ್ಯಾಟಿನ್ ಅಮೇರಿಕಾದ ಇತರೆ ದೇಶಗಳಿಗೆ ಹೋಲಿಸಿದರೆ ಕ್ಯೂಬಾ ಸಾಕಷ್ಟು ಬದಲಾಗಿದೆ. ಇತರೆ ಯಾವ ದೇಶಗಳೂ ಸಹ ಲಿಂಗ ತಾರತಮ್ಯವನ್ನು ಕಿತ್ತೊಗೆಯಲು ಮಾಡದಷ್ಟು ಅಪಾರ ಕೆಲಸವನ್ನು ಕ್ಯೂಬಾ ಮಾಡಿದೆ. ನಾವು ಈ ನಿಟ್ಟಿನಲ್ಲಿ ಸಾಕಷ್ಟು ಮುಂದೆ ಹೆಜ್ಜೆ ಇಟ್ಟಿದ್ದೇವೆ. ಇದು ಹೊಸ ಜನಾಂಗದ ಮಧ್ಯೆ ಎದ್ದು ಕಾಣುತ್ತಿದೆ. ನಾವು ಈ ತಾರತಮ್ಯದ ವಿರುದ್ಧ ಬೃಹತ್ ಸೆಣಸಾಟ ನಡೆಸಿದ್ದೇವೆ, ಪ್ರಗತಿ ಸಾಧಿಸಿದ್ದೇವೆ, ಫಲಿತಾಂಶ ಪಡೆದಿದ್ದೇವೆ. ಆದರೆ ನಾವು ಈ ಹೋರಾಟವನ್ನು ನಿಲ್ಲಿಸದೆ ನಡೆಸುತ್ತಲೇ ಇರಬೇಕು''.

ಕ್ಯೂಬಾದೊಳಗೆ ಈ ಮೌನಕ್ರಾಂತಿ ನಡೆಯುತ್ತಿರುವುದು ಹೆಜ್ಜೆ ಹೆಜ್ಜೆಗೆ ಅರಿವಾಗುತ್ತದೆ. ತಲೆಮಾರುಗಳು ಬದಲಾದಂತೆ ದೃಷ್ಟಿಕೋನವೂ ಬದಲಾಗುತ್ತಾ ಬಂದಿರುವುದು ಪ್ರತೀ ಹಂತದಲ್ಲಿ ಗೋಚರಿಸುತ್ತದೆ. ಮಹಿಳೆಯರು ಕ್ಯೂಬಾದ ದೈನಂದಿನ ಜೀವನದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವಂತಹ ಎಲ್ಲಾ ಪ್ರಾಥಮಿಕ ಸೌಕರ್ಯಗಳನ್ನು ಕಲ್ಪಿಸಿಕೊಡಲು ಕ್ಯೂಬಾ ಆದ್ಯತೆ ನೀಡಿದೆ. ಕೆಲಸದ ಹೊರೆಯಡಿ ಕುಸಿದು ಹೋಗದ ಹಾಗೆ ತನ್ನ ವೈಯಕ್ತಿಕ ಚಿಂತನೆಗೆ ನೀರೆರೆದು ಬೆಳೆಸುವ ಹಾಗೆ ಸಾಕಷ್ಟು ಸಮಯದ ಅವಕಾಶವನ್ನು ಕ್ಯೂಬಾ ಕಲ್ಪಿಸಿಕೊಟ್ಟಿದೆ. ಐದು ವರ್ಷದೊಳಗಿನ ಮಕ್ಕಳಿಗೆ ಬಾಲವಾಡಿಗಳು, ಐದು ವರ್ಷದ ನಂತರವಾದರೆ ಶಾಲೆಗಳು, ಮನೆಯಲ್ಲಿ ವೃದ್ದರಿದ್ದರೆ ಅವರನ್ನು ನೋಡಿಕೊಳ್ಳಲು, ಅವರೂ ತಮ್ಮ ಸಮಯವನ್ನು ಹೊರಗೆ ಕಳೆಯುವಂತಾಗಲು ವೃದ್ಧರ ಕೇಂದ್ರಗಳನ್ನು ನಡೆಸುತ್ತಿದೆ. ಎಷ್ಟೋ ಮಕ್ಕಳು ವಸತಿ ಶಾಲೆಗಳಲ್ಲಿದ್ದಾರೆ.

ಹೀಗಾಗಿ ಕ್ಯೂಬಾದ ಮಹಿಳೆ ಸತತ ಕೆಲಸದ, ಸಂಬಳವಿಲ್ಲದ ಅಗಾಧ ಕೆಲಸದ ಗುಲಾಮಳಾಗಿಲ್ಲ. ಬದಲಿಗೆ ಪುರುಷರಿಗೆ ಸರಿಸಮವಾಗಿ ಕ್ಯೂಬಾದ ಬೆಳವಣಿಗೆಗೆ ತನ್ನ ನೋಟಗಳನ್ನು ನೀಡಿದ್ದಾಳೆ. ಕ್ಯೂಬಾದ ಎಲ್ಲಾ ರೀತಿಯ ಬೆಳವಣಿಗೆಗೆ ತನ್ನ ಕಾಣ್ಕೆಯನ್ನು ನೀಡಿದ್ದಾಳೆ. 'ದೇಶದ ತಾಂತ್ರಿಕ ಸಿಬ್ಬಂದಿಯ ಶೇ. ೬೦ ಭಾಗ ಮಹಿಳೆಯರು. ಅವರಿಗೆ ಸಂಬಳದಲ್ಲಿ ಯಾವುದೇ ತಾರತಮ್ಯವಿಲ್ಲ. ಜಗತ್ತಿನ ಇತರೆ ದೇಶಗಳಲ್ಲಿ ಈಗಲೂ ಇರುವಂತಹ ವೇತನ ತಾರತಮ್ಯ ಕ್ಯೂಬಾದಲ್ಲಿ ಇಲ್ಲ. ಮಹಿಳೆಯರು ಇಲ್ಲಿ ಸ್ವತಂತ್ರರಿದ್ದು ಉದ್ಯೋಗದ ಅವಕಾಶಗಳನ್ನು ಹೊಂದಿದ್ದಾರೆ. ರಕ್ಷಣೆ, ಶಿಕ್ಷಣ, ಆರೋಗ್ಯಕ್ಕೆ ಗಮನ ನೀಡಲಾಗಿದೆ' ಎನ್ನುತ್ತಾರೆ ಫಿಡೆಲ್.

ಕ್ಯೂಬಾದಲ್ಲಿ ಕಣ್ಣಿಗೆ ಒಡೆದು ಗೋಚರಿಸುವ ಮತ್ತೊಂದು ಸಂಗತಿ ಎಂದರೆ ಮಹಿಳೆ ಕೇವಲ ವೃತ್ತಿ



ನಿರತಳಲ್ಲ. ಆಕೆ ಅಭಿಪ್ರಾಯ ರೂಪಿಸುವವಳೂ ಹೌದು. ಎಷ್ಟೋ ದೇಶಗಳಲ್ಲಿ ಮಹಿಳೆಯರಿಗೆ ಉದ್ಯೋಗ ನೀಡಿ ಕೈತೊಳೆದುಕೊಂಡಿರುವಾಗ ಇದನ್ನೇ ಸಮಾನತೆ ಎಂದು ಬಿಂಬಿಸುತ್ತಿರುವಾಗ ಕ್ಯೂಬಾ ಪ್ರಜ್ಞಾಪೂರ್ವಕವಾಗಿ ಹಲವು ವಿಭಿನ್ನ ಹೆಜ್ಜೆಗಳನ್ನು ಇರಿಸಿದೆ. ಮಹಿಳೆ ಇಲ್ಲಿ ಮನೆಗೆ ಮತ್ತೊಂದು ಆದಾಯ ತರುವವಳು ಮಾತ್ರವಾಗದೆ ದೇಶವನ್ನು ಕಟ್ಟುವ ಪ್ರತೀ ಹಂತದಲ್ಲಿ ತನ್ನ ಅಭಿಪ್ರಾಯವನ್ನು ಮಂಡಿಸುವವಳಾಗಿದ್ದಾಳೆ. ಕ್ಯೂಬಾದಲ್ಲಿ ಮಹಿಳೆಯರು ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ, ಜನ ಪ್ರತಿನಿಧಿಗಳಾಗಿದ್ದಾರೆ, ಹಲವು ಸಂಸ್ಥೆಗಳಲ್ಲಿ ಪ್ರಧಾನ ಹುದ್ದೆಯಲ್ಲಿದ್ದಾರೆ. ಆರೋಗ್ಯ, ಶಿಕ್ಷಣ, ಪ್ರವಾಸೋದ್ಯಮ, ವಿಜ್ಞಾನ, ತಂತ್ರಜ್ಞಾನ, ಕೃಷಿ ಹೀಗೆ ಎಲ್ಲ ರಂಗದಲ್ಲೂ ಮಹಿಳೆ ತನ್ನ ಛಾಪನ್ನು ಒತ್ತುವ ವಾತಾವರಣ ಸೃಷ್ಟಿಯಾಗಿದೆ.

ಹಲವು ದೇಶಗಳಲ್ಲಿ ಮಹಿಳೆಯರಿಗೆ ರಾಜಕೀಯ ಮೀಸಲಾತಿಗಾಗಿ ಹೋರಾಟ ನಡೆಯುತ್ತಿರುವ ಈ ಸಂದರ್ಭದಲ್ಲಿ ಕ್ಯೂಬಾ ಮಹಿಳೆಯರಿಗೆ ರಾಜಕೀಯ ಪ್ರವೇಶಿಸುವ ಅವಕಾಶವನ್ನು ಕಲ್ಪಿಸಿ ಮಾದರಿಯಾಗಿದೆ. ವಿಶ್ವದ ಮಹಿಳಾ ಸಂಸದೀಯ ಪಟುಗಳ ಸರಾಸರಿ ಸಂಖ್ಯೆ ಶೇ. ೧೦ರಷ್ಟಿದ್ದರೆ ಕ್ಯೂಬಾದಲ್ಲಿ ಈ ಸಂಖ್ಯೆ ಶೇ. ೨೨.೮. ಇತ್ತೀಚೆಗೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಘ (ಐಎಲ್‌ಓ) ನಡೆಸಿದ ಸಮೀಕ್ಷೆಯು ಮಹಿಳೆಯರು ಪುರುಷರಿಗೆ ಸರಿಸಮವಾಗಿ ಆರ್ಥಿಕ ಹಾಗೂ ರಾಜಕೀಯ ಅಧಿಕಾರ ಹಿಡಿಯಲು ಕನಿಷ್ಟ ೫೦೦ ವರ್ಷಗಳು ಬೇಕು ಎಂದು ಅಭಿಪ್ರಾಯಪಟ್ಟಿತು. ಆದರೆ ಕ್ಯೂಬಾ ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸುವಲ್ಲಿ ಸಾಕಷ್ಟು ದೂರವನ್ನು ಈಗಾಗಲೇ ಕ್ರಮಿಸಿಯಾಗಿದೆ.

ಆಡಳಿತ, ಉದ್ಯೋಗ ಅವಕಾಶ ಮಾತ್ರವೇ ಅಲ್ಲದೆ ಮಹಿಳೆಯರು ತಮ್ಮ ದೇಹದ ಮೇಲಿನ ಹಕ್ಕನ್ನೂ ಹೊಂದಿದ್ದಾರೆ. ಮದುವೆ ವಯಸ್ಸಿನ ಆಯ್ಕೆ ಹಾಗೂ ಗಂಡಿನ ಆಯ್ಕೆ ಮಹಿಳೆಯ ಕೈಯಲ್ಲಿದೆ. ಇಷ್ಟೇ ಅಲ್ಲದೆ ಮಕ್ಕಳನ್ನು ಹಡೆಯುವಲ್ಲಿ, ಮಕ್ಕಳ ನಡುವಿನ ಅಂತರದಲ್ಲಿ ಮಹಿಳೆಯ ನಿರ್ಧಾರ ಪ್ರಮುಖ. ಕ್ಯೂಬಾದಲ್ಲಿ ಗರ್ಭಪಾತ ಮಹಿಳೆಯ ಹಕ್ಕು. ಇದಲ್ಲದೆ ಮದುವೆಯಾಗಿ ಪಡೆದ ಮಕ್ಕಳು, ಮದುವೆಯಾಗದೆ ಪಡೆದ ಮಕ್ಕಳ ನಡುವೆ ಯಾವುದೇ ವ್ಯತ್ಯಾಸವನ್ನು ಸರ್ಕಾರ ಮಾಡಿಲ್ಲ. ಶಾಲೆಗೆ ಮಕ್ಕಳನ್ನು ಸೇರಿಸುವಾಗ ಅರ್ಜಿಯಲ್ಲಿ ಯಾವುದೇ ಮುಜುಗರ ಅನುಭವಿಸಬೇಕಾದ ಕೊಕ್ಕೆಗಳಿರುವುದಿಲ್ಲ.

ತನ್ನ ಮೇಲೆ ಸದಾ ಕತ್ತಿ ಝಳಪಿಸುವ ಅಮೇರಿಕಾದಲ್ಲಿನ ಮಹಿಳೆಯ ಸ್ಥಿತಿಯ ಜೊತೆ ಈ ಅಂಕಿಅಂಶ ಇಟ್ಟು ನೋಡಲು ಕ್ಯೂಬಾಗೆ ಸದಾ ಹೆಮ್ಮೆ. ಅಮೇರಿಕಾದಲ್ಲಿ ನ್ಯಾಷನಲ್ ಅಸೋಸಿಯೇಷನ್ ಆಫ್ ವಿಮೆನ್ ಎಕ್ಸಿಕ್ಯುಟಿವ್ಸ್ ಪ್ರಕಟಿಸಿದ ಸಮೀಕ್ಷೆಯ ಪ್ರಕಾರವೇ ಕೆಲವು ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷರಿಗಿಂತ ಶೇ. ೨೫ ಕಡಿಮೆ ಸಂಬಳ ಪಡೆಯುತ್ತಾರೆ. ಅಮೇರಿಕಾದ ಪ್ರಮುಖ ೫೦೦ ಕಂಪನಿಗಳಲ್ಲಿ ಜವಾಬ್ದಾರಿಯುತ ಸ್ಥಾನಗಳಲ್ಲಿ ಮಹಿಳೆಯರ ಸಂಖ್ಯೆ ಕೇವಲ ಶೇ. ೨.೬. ಪುರುಷರಿಗಿಂತ ಹೆಚ್ಚು ಮಹಿಳಾ ಮತದಾರರಿದ್ದರೂ ಹೌಸ್ ಆಫ್ ರೆಪ್ರೆಸೆಂಟೆಟಿವ್ಸ್‌ಲ್ಲಿ ಮಹಿಳೆಯರ ಸಂಖ್ಯೆ ಶೇ. ೬ ಹಾಗೂ ಸೆನೆಟ್‌ನಲ್ಲಿ ಶೇ. ೧೧. ಅಮೇರಿಕಾದ ೫೦ ರಾಜ್ಯಗಳ ಪೈಕಿ ೨೩ ವಿಧಾನಸಭೆಗಳಲ್ಲಿ ಮಹಿಳಾ ಪ್ರತಿನಿಧಿಗಳೇ ಇಲ್ಲ. ದೇಶದ ೫೦ ಗವರ್ನರ್ ಕಚೇರಿಗಳ ಪೈಕಿ ೪೬ರಲ್ಲಿ ಮಹಿಳೆಯರೇ ಇಲ್ಲ.

ಜನರ ನೋಟವನ್ನು ತಿದ್ದುವ ಕೆಲಸ ಸುಲಭದ್ದಲ್ಲ ಎನ್ನುವ ಕಾರಣಕ್ಕಾಗಿಯೇ ಕ್ಯೂಬಾದಲ್ಲಿ ನಡೆದಿರುವುದು ಮತ್ತೊಂದು ಕ್ರಾಂತಿಯೇ. ಮಹಿಳೆಯರಿಗೆ ಸಮಾನ ಅವಕಾಶ ನೀಡುವ ಕೆಲಸವನ್ನು ಕ್ಯೂಬಾ ಎಷ್ಟು ಜವಾಬ್ದಾರಿಯುತವಾಗಿ ನಿರ್ವಹಿಸಿದೆಯೆಂದರೆ ಮಹಿಳೆಯರಿಗೆ ಶಿಕ್ಷಣದಲ್ಲಿ ಸಮಪಾಲು ಸಿಗುವಂತೆ ನೋಡಿಕೊಳ್ಳುತ್ತದೆ. ಶಿಕ್ಷಣದ ನಂತರ ಒಂದೇ ರೀತಿಯ ಉದ್ಯೋಗದಲ್ಲಿ ಮತ್ತು ಈ ರೀತಿಯ ಕೆಲಸಕ್ಕೆ ಮಾತ್ರ ಲಾಯಕ್ ಎಂಬ ಹಣೆಪಟ್ಟಿ ಬಾರದ ರೀತಿಯಲ್ಲಿ ನೋಡಿಕೊಳ್ಳಲು ಆರಂಭದಲ್ಲಿಯೇ ವಹಿಸುವ ಈ ಎಚ್ಚರ ಪ್ರಮುಖ ಪಾತ್ರ ವಹಿಸುತ್ತದೆ. ಈ ಕಾರಣದಿಂದಾಗಿಯೇ ಮಹಿಳೆಯರು ಇಂದು ಎಲ್ಲಾ ರಂಗಗಳಲ್ಲಿ ಹರಡಿಹೋಗಿದ್ದಾರೆ.

ಸಂಶೋಧನಾ ರಂಗದಲ್ಲಿ ಶೇ. ೪೨ರಷ್ಟು, ವಿಜ್ಞಾನ ರಂಗದಲ್ಲಿ ಶೇ. ೪೩ರಷ್ಟು, ಇತರ ಮುಂದುವರಿದ ರಂಗಗಳಲ್ಲಿ ಶೇ. ೫೩ರಷ್ಟು, ಉನ್ನತ ಶಿಕ್ಷಣದಲ್ಲಿ ಶೇ. ೪೫ರಷ್ಟು, ಅಧ್ಯಾಪಕರಾಗಿ ಶೇ. ೫೯ರಷ್ಟು ಮಹಿಳೆಯರು ಇದ್ದಾರೆ. ಮತ್ತು ಈ ಸಂಖ್ಯೆ ಕುಸಿಯದಂತೆ ಎಚ್ಚರಿಕೆಯನ್ನೂ ಸರ್ಕಾರ ಹೊಂದಿದೆ.

ಕ್ರಾಂತಿಯ ತರುವಾಯ ಕ್ಯೂಬಾ ಮಾಡಿದ ಮೊದಲ ಕೆಲಸಗಳಲ್ಲಿ ಪ್ರಮುಖವಾದದ್ದು ಮಹಿಳೆಯರನ್ನು ದೇಶದ ಚಿಂತನೆಯಲ್ಲಿ ತೊಡಗಿಸುವ ಪ್ರಯತ್ನ. ಈ ಕಾರಣಕ್ಕಾಗಿ ೧೯೬೦ರಲ್ಲಿಯೇ ಕ್ಯೂಬನ್ ವಿಮೆನ್ ಫೆಡರೇಷನ್ ಸ್ಥಾಪಿಸಲಾಯಿತು. ಈ ಫೆಡರೇಷನ್ ಮಹಿಳೆಯರ ಸಾಕ್ಷರತೆಗೆ ಒತ್ತು ನೀಡಿತು. ಮೊದಲು ಅಆಇಈ ಕಲಿಯಲು, ನಂತರ ಆರನೆಯ ತರಗತಿಯವರೆಗೆ ಓದು ಮುಂದುವರಿಸಲು, ಆಮೇಲೆ ಕ್ಯೂಬಾದಲ್ಲಿ ಕಡ್ಡಾಯ ಹಂತವಾದ ೯ನೆಯ ತರಗತಿಯವರೆಗೆ ಹೆಜ್ಜೆ ಹಾಕಲು ಈ ಸಂಘಟನೆ ಭುಜ ನೀಡಿತು.

ಈಗ ಕ್ಯೂಬಾದ ಜನಸಂಖ್ಯೆಯಲ್ಲಿ ಶೇ. ೪೯.೭ ಮಹಿಳೆಯರು. ಈ ಪೈಕಿ ಶೇ. ೬೧ ಮಂದಿ ತಂತ್ರಜ್ಞರು, ಶೇ. ೭೨ ಮಂದಿ ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರು, ಶೇ. ೬೮ ಮಂದಿ ಶಿಕ್ಷಕರು ಮತ್ತು ಶಿಕ್ಷಣ ತಜ್ಞರು, ಶೇ. ೪೬ ವಿಜ್ಞಾನಿಗಳು. ಕಾಲೇಜಿನಿಂದ ಪದವೀಧರರಾಗಿ ಹೊರಬೀಳುತ್ತಿರುವವರ ಪೈಕಿ ಮಹಿಳೆಯರ ಸಂಖ್ಯೆ ಪುರುಷರಿಗಿಂತಲೂ ಹೆಚ್ಚು.





## ಆಕಾಶದ ಅಗಲಕ್ಕೂ ನಿಂತ ಆಲವೇ...

ಕಾಸಾಬ್ಲಾಂಕ -

ಹವಾನಾದ ನೆತ್ತಿ ಎಂದೇ ಹೆಸರಾಗಿರುವ ಕಾಸಾಬ್ಲಾಂಕಾ ಪ್ರವಾಸಿಗಳು ಬೋರ್ಗರೆಯುವ ಸ್ಥಳ. ಹವಾನಾದ ಕಡಲತೀರದ ಗುಂಟ ಸಾಗಿ, ಕಡಲಲ್ಲಿ ಎರಗುತ್ತಿದ್ದ ಕಡಲ್ಗಳ್ಳರಿಂದ ರಕ್ಷಿಸಿಕೊಳ್ಳಲು ಸ್ಪೇನ್ ಕಟ್ಟಿದ ಕೋಟೆಯನ್ನು ದಾಟಿ, ಸಮುದ್ರವನ್ನೇ ಕೊರೆದು ಮಾಡಿರುವ ರಸ್ತೆಯನ್ನು ಹೊಕ್ಕು ಹೊರಬಂದರೆ ಈ ಕಾಸಾಬ್ಲಾಂಕಾ ಎದುರಾಗುತ್ತದೆ.

ಕಣ್ಣು ಹಾಯಿಸಿದಷ್ಟಗಲಕ್ಕೂ ಹರಡಿರುವ ಹಸಿರು ಮೈದಾನದಲ್ಲಿ ನಿಂತು ನೋಡಿದರೆ ಕಾಸಾಬ್ಲಾಂಕಾದ ಕಾಲ ಕೆಳಗೆ ಹವಾನಾ ಮೈಚೆಲ್ಲಿ ಮಲಗಿದೆ. ಕಲ್ಲಿದ್ದಲನ್ನು ಸಾಗಿಸುತ್ತಿರುವ ಹಡಗುಗಳು, ಕಲ್ಲಿದ್ದಲ ಕಾರ್ಖಾನೆಗಳಿಂದ ಚಿಮ್ಮುತ್ತಿರುವ ಹೊಗೆ ದಾಟಿ ಹವಾನಾದ ಎತ್ತರೆತ್ತರ ಕಟ್ಟಡಗಳು ಗೋಚರಿಸುತ್ತವೆ. ಈ ನೋಟಕ್ಕೂ ಮಿಗಿಲಾಗಿ ಕಾಸಾಬ್ಲಾಂಕಾ ಹೆಸರಾಗಿರುವುದು 'ಆಕಾಶದ ಅಗಲಕ್ಕೂ ನಿಂತ ಆಲ'ವಾದ ಆತನಿಗಾಗಿ, ಕ್ರಿಸ್ತನಿಗಾಗಿ.

ಹವಾನಾದಿಂದ ಎತ್ತರದಲ್ಲಿರುವ ಕಾಸಾಬ್ಲಾಂಕಾದಲ್ಲಿ ಇನ್ನೂ ಎತ್ತರಕ್ಕೆ ನಿಂತವನು ಈ ಕ್ರಿಸ್ತ. ಕ್ರಿಸ್ತನ ಸುಂದರ ವಿಗ್ರಹ ಇಡೀ ಹವಾನಾವನ್ನು ವೀಕ್ಷಿಸುತ್ತಿರುವಂತೆ ಕಾಣುತ್ತದೆ. ಕ್ರಿಸ್ತನ ಎತ್ತರ ಅಳೆಯಲು ಕಣ್ಣು ಹಾಯಿಸಿದರೆ ನೀಲಿ ಆಗಸದಿಂದ ಈತ ಈಗ ಇಳಿದು ಬರುತ್ತಿರುವಂತೆ ಕಾಣಿಸುತ್ತದೆ.

ಕಮ್ಯುನಿಸ್ಟರ ಗೂಡಲ್ಲಿ ಕ್ರಿಸ್ತನಿಗೇನು ಕೆಲಸ ಎನ್ನುವಂತಿಲ್ಲ. ಕ್ಯೂಬಾದ ಜನಸಂಖ್ಯೆಯ ಬಹುಭಾಗವಾಗಿರುವ ಕ್ರಿಸ್ತನ ಬಂಧುಗಳು ಫಿಡೆಲ್‌ಕ್ಯಾಸ್ಟ್ರೋ ಹಿಂದೆ ಬಲವಾಗಿ ನಿಂತಿದ್ದಾರೆ. ಕ್ಯೂಬಾದ ನಾಸ್ತಿಕರ ಪ್ರಮುಖ ಫಿಡೆಲ್‌ಕ್ಯಾಸ್ಟ್ರೋ ಕ್ರಿಶ್ಚಿಯನ್ನರ ಕಾಲೊನಿಗಳಲ್ಲಿ ಹೆಜ್ಜೆ ಹಾಕಿದರೆ ಸಾಕು, ಗಲ್ಲ ಚಿವುಟಿ ಸಂತಸ ವ್ಯಕ್ತಪಡಿಸುವವರಿದ್ದಾರೆ.

'ನಿನ್ನ ನೆರೆಹೊರೆಯವರನ್ನು ನಿನ್ನಂತೆ ಪ್ರೀತಿಸು' ಎಂದು ಕ್ರಿಸ್ತ ಸಾರಿದ್ದು ಈ ಕಮ್ಯುನಿಸ್ಟರ ನಾಡಲ್ಲಿ ನಿಜವಾಗುತ್ತಿದೆ ಎಂಬ ಅನಿಸಿಕೆ ಕೇವಲ ಕ್ಯೂಬಾದ ಕ್ರಿಶ್ಚಿಯನ್ನರದ್ದಲ್ಲ. ಇಡೀ ಜಗತ್ತಿನ ಕ್ರೈಸ್ತರು ಮತ್ತೆ ಮತ್ತೆ ಕ್ಯೂಬಾದ ಬಗ್ಗೆ ಮಾತನಾಡುತ್ತಾರೆ. ಕ್ರಿಸ್ತ ಏನು ಮಾಡಬೇಕು ಎಂದು ಸಾರಿದ್ದನೋ ಅದನ್ನು ಕ್ಯೂಬಾ ಸರ್ಕಾರ ನಿಜ ಮಾಡಿ ತೋರಿಸುತ್ತಿದೆ ಎನ್ನುತ್ತಾರೆ. ಈ ಕಾರಣಕ್ಕಾಗಿಯೇ ಕ್ರಿಶ್ಚಿಯನ್ ಧಾರ್ಮಿಕ ಸಂಸ್ಥೆಗಳು ಏನಾದರಾಗಲೀ ಕ್ಯೂಬಾ ಸಾಮ್ರಾಜ್ಯಶಾಹಿಯ ವಿರುದ್ಧ ಸೋಲದಂತೆ ನೋಡಿಕೊಳ್ಳುವ ಪಣ ತೊಟ್ಟಿದೆ. ಅಮೇರಿಕಾದ ಎಲ್ಲೆಡೆ ಇರುವ ಚರ್ಚುಗಳು, ಧಾರ್ಮಿಕ ಸಂಸ್ಥೆಗಳು ಕ್ಲಿಂಟನ್‌ನ ಕಿವಿ ಹಿಂಡಲು ಮುಂದಾಗಿವೆ. ಕ್ಯೂಬಾದತ್ತ ಯಾರೂ ಹೋಗಬಾರದು, ಕ್ಯೂಬಾಗೆ ಏನನ್ನೂ ಕಳಿಸಬಾರದು ಎಂದು ಅಮೇರಿಕಾ ಸರ್ಕಾರ ಹಲವು ಕಾಯಿದೆಗಳನ್ನು ತಂದು ಸಾರಿ ಹೇಳುತ್ತಿದ್ದರೂ ಈ ಕ್ರೈಸ್ತ ಸಂಸ್ಥೆಗಳು ಬಹಿರಂಗವಾಗಿ ಅಮೇರಿಕಾದ ಬೀದಿ ಬೀದಿಗಳಲ್ಲಿ ಜಾತಾ ನಡೆಸಿ ಕ್ಯೂಬಾಗೆ ಕಾಣಿಕೆಗಳನ್ನು ಕಳಿಸಿಕೊಡುತ್ತಿವೆ. ಕ್ಲಿಂಟನ್ ಸರ್ಕಾರದ ಕಾನೂನುಗಳಿಗೆ ಕಪಾಳಮೋಕ್ಷ ಮಾಡಿವೆ.

'ಯಾರು ಬಡವರನ್ನು ನಿರ್ಲಕ್ಷಿಸುತ್ತಾರೋ ಅವರು ಕ್ರಿಸ್ತನನ್ನು ನಿರ್ಲಕ್ಷಿಸುತ್ತಾರೆ' ಎಂದು ಫಿಡೆಲ್ ಕ್ಯಾಸ್ಟ್ರೋ ಹೇಳಿದ್ದು ಜಗತ್ತಿನ ಕ್ರಿಸ್ತರಿಗೆ ಅರ್ಥವಾಗಿದೆ. ಹಾಗಾಗಿಯೇ ಬಡವರನ್ನು ಹೊಸಕಿ ಹಾಕಿದ ಸಾಮ್ರಾಜ್ಯಶಾಹಿಯ ಕುಣಿಕೆಯ ನಡುವೆಯೂ ನೊಂದವರ ಪರವಾಗಿ ನಿಂತ ಕ್ಯೂಬಾದ ಬಗ್ಗೆ ಮೆಚ್ಚುಗೆ.

ಕ್ರೈಸ್ತ ಧರ್ಮಕ್ಕೂ ಬಂಡವಾಳಶಾಹಿಗೂ ಇರುವ ಹೋಲಿಕೆಗಳಿಗಿಂತಲೂ ಹತ್ತು ಸಾವಿರ ಪಟ್ಟು ಹೆಚ್ಚು ಹೋಲಿಕೆ ಕ್ರೈಸ್ತ ಧರ್ಮಕ್ಕೂ ಕಮ್ಯುನಿಸಂಗೂ ಇದೆ ಎನ್ನುತ್ತಾರೆ ಕ್ಯಾಸ್ಟ್ರೋ. ಕ್ರಾಂತಿ ಕಳ್ಳತನವನ್ನು, ಸುಲಿಗೆಯನ್ನು, ಸುಳ್ಳು ಹಾಗೂ ಭ್ರಷ್ಟಾಚಾರವನ್ನು ತೊಡೆದು ಹಾಕಿದೆ. ಚರ್ಚ್ ಕದಿಯಬೇಡ ಎಂದು ಬೋಧಿಸುತ್ತದೆ. ಕ್ರಾಂತಿ ಮಕ್ಕಳ ಸಾವಿನ ಪ್ರಮಾಣವನ್ನು, ಭ್ರೂಣ ಸಾವನ್ನೂ ತಡೆದಿರುವುದಲ್ಲದೆ ಬದುಕಿನ ಅವಧಿಯನ್ನು ಹೆಚ್ಚಿಸಿದೆ. ಕ್ರೈಸ್ತ ಧರ್ಮ ನೆರೆಹೊರೆಯವರನ್ನು ನಿನ್ನಂತೆಯೇ ಪ್ರೀತಿಸು ಎನ್ನುತ್ತದೆ. ಕ್ಯೂಬಾ ಮಾಡುತ್ತಿರುವುದು ಅದನ್ನೇ, ಜಗತ್ತಿನ ಜನರನ್ನು ಬೆಸುಗೆ ಹಾಕುತ್ತಿದೆ ಎನ್ನುತ್ತಾರೆ.

ಕ್ಯಾಸ್ಟ್ರೋ ಅವರ ಚಿಂತನೆಯ ಬೇರುಗಳು ಬೈಬಲ್‌ನಲ್ಲಿಯೂ ಇದೆ. ಮಾನವೀಯತೆಯನ್ನು ಬೋಧಿಸುವ ಎಲ್ಲಾ ಚಿಂತನೆಗಳನ್ನೂ ಧರ್ಮ, ದೇಶ, ಬಣ್ಣದ ಗಡಿ ಮೀರಿ ಕ್ಯಾಸ್ಟ್ರೋ ತಮ್ಮದಾಗಿಸಿಕೊಂಡಿದ್ದಾರೆ. ಹವಾನಾದಲ್ಲಿ ಇಡೀ ಜಗತ್ತಿನ ರಾಷ್ಟ್ರಗಳು ಕ್ಯೂಬಾಕ್ಕೆ ಬೆಂಬಲ ವ್ಯಕ್ತಪಡಿಸಲು ನಡೆಸಿದ ಸಭೆಯಲ್ಲಿ ಕ್ಯಾಸ್ಟ್ರೋ ಹೇಳಿದರು 'ಕ್ರಿಸ್ತ ಹಸಿದವರಿಗಾಗಿ ಬ್ರೆಡ್ ಚೂರುಗಳನ್ನೂ, ಕಡಲಿನಲ್ಲಿ ಇರುವ ಮೀನುಗಳನ್ನು



ದ್ವಿಗುಣಗೊಳಿಸಿದಂತೆ ನಾವು ಮೌಲ್ಯಗಳನ್ನೂ, ಉತ್ತಮ ಚಿಂತನೆಯನ್ನೂ ದ್ವಿಗುಣಗೊಳಿಸಬೇಕು'.

ಹಸಿದವರಿಗೆ ಅನ್ನ ನೀಡಿ, ಬಾಯಾರಿದವರಿಗೆ ನೀರುಣಿಸಿ, ಬೆತ್ತಲೆ ನಿಂತವರಿಗೆ ಬಟ್ಟೆ ನೀಡಿ, ಸೂರಿಲ್ಲದವರಿಗೆ ಆಶ್ರಯ ನೀಡಿ, ಖೈದಿಗಳಿಗೆ, ವಿಧವೆಯರಿಗೆ, ರೋಗಿಗಳಿಗೆ ಆರೈಕೆ ನೀಡಿ ಎಂದಿದ್ದ ಕ್ರಿಸ್ತ. ಕ್ಯೂಬಾ ಇದನ್ನು ಮಾಡಿ ತೋರಿಸಿದೆ ಎನ್ನುತ್ತಾರೆ ಕ್ಯೂಬಾದ ಸಂಸತ್ ಪ್ರತಿನಿಧಿ ರೆವರೆಂಡ್ ರೌಲ್ ಸ್ಯೂರೆಜ್.

ಕ್ಯೂಬಾ ಸರ್ಕಾರ ಮಗುವಿಗೆ ಶಿಕ್ಷಣವನ್ನು, ಜನರಿಗೆ ಆರೋಗ್ಯವನ್ನು, ಎಲ್ಲರಿಗೆ ಉದ್ಯೋಗವನ್ನು ನೀಡುವಾಗ ಇವರು ಆಸ್ತಿಕರೋ, ನಾಸ್ತಿಕರೋ ಎಂದು ಲೆಕ್ಕಹಾಕಿಲ್ಲ. ಕ್ಯೂಬಾದ ಸಂವಿಧಾನ ಧಾರ್ಮಿಕ ಭೇದವನ್ನು ವರ್ಣಭೇದ, ಜನಾಂಗೀಯ ಭೇದ ಹಾಗೂ ಲಿಂಗಬೇಧದಷ್ಟೇ ಉಗ್ರವಾದ ಅಪರಾಧವನ್ನಾಗಿಸಿದೆ. ಕ್ಯೂಬಾದ ಸರ್ಕಾರದಲ್ಲಿ ಆಸ್ತಿಕರೂ ಇದ್ದಾರೆ, ಕ್ಯಾಥೋಲಿಕ್ ಚರ್ಚ್‌ನ ರೆವರೆಂಡ್ ರೌಲ್ ಸಹಾ ಇದ್ದಾರೆ. ಕ್ಯೂಬಾದ ಶಾಲೆಗಳಲ್ಲಿ ನೀಗ್ರೋ ಧರ್ಮಾರಾಧಕರೂ ಇದ್ದಾರೆ, ಕ್ರಿಶ್ಚಿಯನ್ ಮಕ್ಕಳೂ ಇವೆ. ಆದರೆ ಸರ್ಕಾರದಲ್ಲಿ ಅವರು ಧರ್ಮಗಳನ್ನು ಪ್ರತಿನಿಧಿಸದೆ ಜನರ ಪ್ರತಿನಿಧಿಗಳಾಗಿದ್ದಾರೆ. ಶಾಲೆಗಳಲ್ಲಿ ಮಕ್ಕಳು ಮಕ್ಕಳಾಗಿ ಇದ್ದಾರೆ.

ಧರ್ಮ ಎಂಬ ಅಸ್ತ್ರವನ್ನು ಬಳಸಿ ಜನರನ್ನು, ದೇಶವನ್ನು, ಆಲೋಚನೆಗಳನ್ನು ಒಡೆಯುವ ಅಮೇರಿಕಾ ಸರ್ಕಾರದ ನೀತಿಗಳು ಕುಸಿದುಬಿದ್ದಿವೆ. ನಾಸ್ತಿಕ ನಾಡು ಎಂದು ಹೆಸರಾದ ಕ್ಯೂಬಾಗೆ ವಿಶ್ವದ ಕ್ರಿಶ್ಚಿಯನ್ನರ ಕಣ್ಮಣಿ ಪೋಪ್ ಜಾನ್‌ಪೌಲ್ ಸಹಾ ಬರುತ್ತಾರೆ. ಚಿಲಿಯಲ್ಲಿ ನಡೆದ ವಿಶ್ವದ ಕ್ಯಾಥೋಲಿಕ್ ಕ್ರಿಶ್ಚಿಯನ್ನರ ಸಭೆ ಕ್ಯೂಬಾವನ್ನು ಬೆಂಬಲಿಸಿ ಧೈರ್ಯವನ್ನೂ ನೀಡುತ್ತದೆ. ಪೋಪ್ ಜಾನ್‌ಪೌಲ್ ಬಂದಾಗ ಕ್ರೈಸ್ತರು ಮಾತ್ರವಲ್ಲ, ಇತರೆ ಧರ್ಮೀಯರು ಮಾತ್ರವಲ್ಲ, ನಾಸ್ತಿಕರೂ ಧಾವಿಸಿ ಹೋಗುತ್ತಾರೆ. ಕ್ಯೂಬಾದ ಕ್ರಾಂತಿಯಲ್ಲಿ ಭಾಗವಹಿಸಿದ ಜೋಸ್ ಲಾವಲ್ಲೆ ಹೇಳಿದರು - 'ನಾನು ಆಸ್ತಿಕನಲ್ಲ, ಆದರೆ ಆಸ್ತಿಕರ ಭಾವನೆಗಳನ್ನು ಗೌರವಿಸುತ್ತೇನೆ. ಪೋಪ್‌ರನ್ನು ನೋಡಲು ನಾನೂ ಹೋಗುತ್ತೇನೆ. ಏಕೆಂದರೆ ಇತರ ಯಾವುದೇ ಮುಖಂಡರಂತೆ ಅವರೂ ಸಹಾ ನಮ್ಮ ದೇಶಕ್ಕೆ ಬರುತ್ತಿದ್ದಾರೆ'. ಕ್ಯೂಬಾದ ನೆಲಕ್ಕೆ ಕಾಲಿಟ್ಟ ಮಂಡೇಲರಂತೆಯೇ ಪೋಪ್ ಸಹಾ ಭಿನ್ನರಲ್ಲ ಎನ್ನುವುದು ಜನರ ಮನದಾಳದಲ್ಲಿದೆ.

ಅಮೇರಿಕಾದ ಧಾರ್ಮಿಕ ಅಸ್ತ್ರ ಎಷ್ಟು ಮೊನಚು ಎಂಬುದು ಕೇವಲ ಕ್ಯೂಬನ್ನರಿಗೆ ಮಾತ್ರವಲ್ಲ ಇಡೀ ಲ್ಯಾಟಿನ್ ಅಮೇರಿಕಾ ಹಾಗೂ ಕೆರೆಬಿಯನ್ ದೇಶಗಳಿಗೆ ಗೊತ್ತು. ಬ್ರೆಜಿಲ್‌ನ ಧಾರ್ಮಿಕ ಮುಖಂಡ ಫ್ರೀ ಬೆಟ್ಟೋ ಅವರು 'ಲ್ಯಾಟಿನ್ ಅಮೇರಿಕಾದ ಕಾರ್ಮಿಕರು ಮತ್ತು ರೈತರು ನಂಬುವ ದೇವರಿಗೂ ರೇಗನ್‌ನ ದೇವರಿಗೂ ಯಾವುದೇ ಹೋಲಿಕೆಯಿಲ್ಲ' ಎಂದು ಸಾರುತ್ತಾರೆ. ಮೂರನೇ ಜಗತ್ತಿನ ದೇಶಗಳ ಬಡಜನತೆಯ ದೇವರೇ ಬೇರೆ ಎಂದು ನಿಟ್ಟುಸಿರಿಡುತ್ತಾರೆ. ಲ್ಯಾಟಿನ್ ಅಮೇರಿಕಾ ಎಂಬುದು ಆಸ್ತಿಕರು ಹಾಗೂ ನಾಸ್ತಿಕರ ನಡುವೆ ಒಡೆದು ಹೋಗಿಲ್ಲ. ಬದಲಿಗೆ ಶೋಷಕರು ಹಾಗೂ ಶೋಷಿತರ ನಡುವೆ ಒಡೆದು ಹೋಗಿದೆ.

ಕ್ಯೂಬಾದಲ್ಲಿ ಅಮೇರಿಕಾದ ದಬ್ಬಾಳಿಕೆಯ ವಿರುದ್ಧ ಹೋರಾಟ ನಡೆಯುತ್ತಿದ್ದಾಗ ಕ್ರೈಸ್ತ ಸಂಸ್ಥೆಗಳು ಬಹುಪಾಲು ಅಮೇರಿಕಾ ಸಾಮ್ರಾಜ್ಯಶಾಹಿಯ ಜೊತೆ ಕೈಜೋಡಿಸಿದ ಇತಿಹಾಸ ಇಲ್ಲಿ ಎಲ್ಲರಿಗೆ ಗೊತ್ತಿದೆ. ಉಳಿದ ದೇಶಗಳಂತೆ ಕ್ಯೂಬಾದಲ್ಲಿ ಕ್ರೈಸ್ತರ ಪ್ರಾತಿನಿಧಿಕ ಚರ್ಚ್‌ಗಳು, ಸಂಸ್ಥೆಗಳು ಜನರ ಕಣ್ಣೀರು ಒರೆಸುವ ಕೆಲಸವನ್ನು ಕೈಬಿಟ್ಟು ಐಷಾರಾಮ ಜೀವನ ನಡೆಸಿದ ಚರಿತ್ರೆ ಸಹಾ ಎಲ್ಲರಿಗೆ ಗೊತ್ತಿದೆ. ಈ ಕಾರಣಕ್ಕಾಗಿಯೇ ಈ ಸಂಸ್ಥೆಗಳು ಎಂದೂ ಕ್ಯೂಬಾದಲ್ಲಿ ಜನರ ಪ್ರತಿನಿಧಿಗಳಾಗಿರಲಿಲ್ಲ. ಬದಲಿಗೆ ಸಿಐಎ ಏಜೆಂಟರುಗಳಾಗಿ ಕೆಲಸ ಮಾಡಿ ಅಮೇರಿಕಾದ ಮೆಚ್ಚುಗೆ ಗಳಿಸಿದ ಸಂಸ್ಥೆಗಳಾಗಿದ್ದವು. ಆದ್ದರಿಂದಲೇ ಕ್ರಾಂತಿಯ ನಂತರ ಫಿಡೆಲ್ ಕ್ಯಾಸ್ಟ್ರೋ ಸ್ಪೇನ್‌ನ ಮೂವರು ಧರ್ಮ ಬೋಧಕರಿಗೆ ದೇಶ ಬಿಟ್ಟು ಹೊರನಡೆಯುವಂತೆ ಸೂಚಿಸಿದರು. 'ನಾನು ಆಗ ಮತ್ತು ಆ ಬಾರಿ ಮಾತ್ರ ಈ ರೀತಿಯ ಕ್ರಮ ಕೈಗೊಂಡೆ. ಆದರೆ ಆಗಲೂ ಸಹಾ ಈ ರೀತಿ ದೇಶದಿಂದ ಹೊರದೂಡಿದ ಧರ್ಮಗುರುಗಳ ಬದಲಿಗೆ ಇತರರು ಒಳಗೆ ಬರಲು ಸಮ್ಮತಿಸಿದ್ದೆ' ಎನ್ನುತ್ತಾರೆ ಕ್ಯಾಸ್ಟ್ರೋ.

ಈಗ ಕ್ಯೂಬಾದಲ್ಲಿ ಶೇ. ೪೦ ಭಾಗ ಆಸ್ತಿಕರಿದ್ದಾರೆ. ಇದರಲ್ಲಿ ಹೆಚ್ಚು ಜನ ಕ್ಯಾಥೋಲಿಕ್ಕರು. ಇದಲ್ಲದೆ ಶೇ. ೧೫ರಷ್ಟು ಆಫ್ರಿಕಾದಿಂದ ಬಂದ ನಿಗ್ರೋಗಳ ಧರ್ಮ ಹಾಗೂ ಕ್ಯೂಬನ್ನರ ಧರ್ಮವನ್ನು ಬೆಸೆದ ಆಫ್ರೋ - ಕ್ಯೂಬನ್ ಧರ್ಮದವರೂ ಇದ್ದಾರೆ. ಶೇ. ೪೫ರಷ್ಟು ಮಂದಿ ನಾಸ್ತಿಕರು.

ಹೀಗಾಗಿಯೇ ಕ್ರಿಶ್ಚಿಯನ್ನರು ಕ್ಯೂಬಾವನ್ನು 'ಜಗತ್ತಿನ ಆಶಾಕಿರಣ' ಎಂದು ಬಣ್ಣಿಸಿದ್ದಾರೆ. ಕ್ಯೂಬಾದ ವಿರುದ್ಧ ಅಮೇರಿಕಾ ಆರ್ಥಿಕ ದಿಗ್ಬಂಧನವನ್ನು ವಿಧಿಸಿದಾಗ ಕ್ಯೂಬಾಗೆ ಯಾವ ರೀತಿಯ ಸಹಾಯ ಮಾಡಬಹುದು ಎಂಬುದನ್ನು ಪರಿಶೀಲಿಸಲು ಎರಡು ಬಾರಿ ಕ್ಯೂಬಾಗೆ ಭೇಟ ನೀಡಿದ ಅಮೇರಿಕಾದ ರೆವರೆಂಡ್ ಲೂಸಿಯಸ್ ವಾಕರ್ ಅವರು 'ಕ್ರಿಶ್ಚಿಯನ್ನರಾಗಿ ನಮಗೆ ಹೊಸ ಸಮಾಜದ ನೋಟವಿದೆ. ಅಂತಹ ಸಮಾಜವನ್ನು ಕಟ್ಟುವ ಕೆಲಸಕ್ಕೆ ಸಹಾಯ ಮಾಡಬೇಕಾದ ಜವಾಬ್ದಾರಿ ನಮ್ಮ ಮುಂದಿದೆ. ಇದು ಕ್ರಾಂತಿಕಾರಕ ಹೊಣೆ ಅಲ್ಲದೆ ನಾವು ನಮ್ಮ ಕನಸುಗಳನ್ನು ಹೇಗೆ ನನಸು ಮಾಡುತ್ತೇವೆ ಎಂಬುದರ ಸಾಕ್ಷಿಯೂ ಹೌದು. ತುಳಿತಕ್ಕೊಳಗಾದವರನ್ನು ಬಿಡುಗಡೆ ಮಾಡಿ ಅವರಿಗೆ ಹೊಸ ಭರವಸೆ ಹಾಗೂ ಬಲವನ್ನು ಕ್ಯೂಬಾ ನೀಡಿದೆ. ಕ್ಯೂಬಾ ಒಂದು ದೊಡ್ಡ ಉದಾಹರಣೆ, ಅದು ಜಗತ್ತಿನ ಆಶಾಕಿರಣ ಆದ್ದರಿಂದ ಅದು ಹಾಗೆ ಉಳಿಯಲು ನಾವು ಸಹಾಯ ಮಾಡಬೇಕು' ಎಂದರು.

ಅಷ್ಟೇ ಅಲ್ಲದೆ 'ಬಂಡವಾಳಶಾಹಿ ಹುಟ್ಟುಹಾಕಿರುವ ಸ್ವಾರ್ಥ, ವ್ಯಕ್ತಿಗತ ಅಧಿಕಾರವನ್ನು ಚಲಾಯಿಸುತ್ತಿರುವ ಅಮೇರಿಕಾ ಕ್ರಿಶ್ಚಿಯನ್ನರ ಪ್ರೀತಿ ಹಂಚುವ, ನೆರೆಹೊರೆಯವರನ್ನು ಪ್ರೀತಿಸುವ ಗುಣಗಳನ್ನೇ ಮರೆತಿದೆ. ಅಮೇರಿಕಾ ಎಂದೂ ಕ್ರೈಸ್ತರ ನಾಡಲ್ಲ' ಎಂದು ಘೋಷಿಸಿದರು.

ಇದು ಹೌದು ಎನ್ನುವಂತೆ ಯುವಜನರ ಉತ್ಸವ ಮುಗಿದ ಬೆನ್ನಲ್ಲಿಯೇ ಪೋಪ್ ಜಾನ್‌ಪೌಲ್ ಕ್ಯೂಬಾಗೆ ಭೇಟಿ ನೀಡಿದರು. ವಿಶ್ವದ ೯೬೦ ದಶಲಕ್ಷ ಕ್ಯಾಥೋಲಿಕ್ಕರು ಅಮೇರಿಕಾದ ಕ್ಯೂಬಾದ ಮೇಲೆ ವಿಧಿಸಿರುವ ಆರ್ಥಿಕ ದಿಗ್ಬಂಧನವನ್ನು ಖಂಡಿಸುತ್ತೇವೆ ಎಂದರು. ಅಮೇರಿಕಾದ ಎದೆ ಝಲ್ಲೆಂದಿತು.



**ಎ.ಪಿ.ಯ ಟೆಲಿಪ್ರಿಂಟರ್ ಮತ್ತೊಮ್ಮೆ ಟಪಟಪ ಸದ್ದು ಮಾಡಿತು**

ಫ್ಲೋರಿಡಾ ಜ. ೨೨ - ಈ ವಾರ ಕ್ಯೂಬಾದ ನೆಲದಲ್ಲಿ ಪೋಪ್ ಜಾನ್‌ಪೌಲ್ - II ಕಾಲಿಡುತ್ತಿದ್ದಂತೆಯೆ ಫಿಡೆಲ್ ಕ್ಯಾಸ್ಟ್ರೋ ಅವರಿಂದ ದೂರವಿರುವ ಅವರ ಸಹೋದರಿ ಸೇರಿದಂತೆ ಇಡೀ ವಿಶ್ವದ ಕಣ್ಣು ಫಿಡೆಲ್‌ಕ್ಯಾಸ್ಟ್ರೋ ಅವರ ಮೇಲಿದೆ.

೩೩ ವರ್ಷಗಳ ಹಿಂದೆ ಕ್ಯೂಬಾವನ್ನು ತೊರೆದ, ಈಗ ಅವರ ಸಹೋದರರಾದ ಫಿಡೆಲ್ ಹಾಗೂ ರೌಲ್‌ಕ್ಯಾಸ್ಟ್ರೋರೊಂದಿಗೆ ಯಾವುದೇ ಸಂಬಂಧ ಇಲ್ಲದ ಜ್ವಾನಿತಾ ಕ್ಯಾಸ್ಟ್ರೋ 'ಎಪಿ'ಯೊಂದಿಗೆ ಮಾತನಾಡುತ್ತಾ 'ಇದೊಂದು ಹೃದಯಸ್ಪರ್ಶಿ ಅನುಭವ' ಎಂದರು.

'ಕ್ಯಾಥೋಲಿಕ್ ಚರ್ಚ್‌ಗೆ ಕ್ಯೂಬಾ ಸರ್ಕಾರ ನೀಡಿರುವ ಮಹತ್ವ ನೋಡಿದರೆ ಪೋಪ್‌ರವರ ಚಾರಿತ್ರಿಕ ಭೇಟಿ ಫಿಡೆಲ್ ಕ್ಯಾಸ್ಟ್ರೋರವರ ಸೋಲು ಎಂದೇ ಭಾವಿಸಬೇಕು'.

'ಅವರು ಎಷ್ಟೊಂದು ಧರ್ಮಗುರುಗಳನ್ನು ಆರಾಧಕರನ್ನು ಹೊರಹಾಕಿದರು. ಈಗ ಅವರೇ ಪೋಪ್‌ರನ್ನು ಸ್ವಾಗತಿಸಬೇಕಾಗಿ ಬಂದಿದೆ'.

'ಈ ಸ್ಥಿತಿಯಲ್ಲಿ ಫಿಡೆಲ್ ಕ್ಯಾಸ್ಟ್ರೋ ಏನು ಮಾಡುತ್ತಾರೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ಪೋಪ್‌ರ ಈ ಭೇಟಿ ಕ್ರಾಂತಿಯ ಸೋಲು ಹಾಗೂ ಜನರ ಗೆಲುವು' ಎಂದರು. - ಎ.ಪಿ.



## ನಿಮ್ಮೊಡನೆ ನಿಮ್ಮಂತೆ

ವೆಲ್‌ಕಂ ಟು ಇಂಡಿಯನ್ ಡೆಲಿಗೇಟ್ಸ್ - ಎಂದು ಪ್ರೀತಿಯಿಂದ ಹಮ್ಮಿಕೊಂಡಿದ್ದ ಸ್ವಾಗತ ಸಮಾರಂಭದಲ್ಲಿ ಆ ಬೀದಿಯ ಎಲ್ಲರೂ ಸೇರಿ ಮಾಡಿದ್ದ ಕ್ಯೂಬನ್ನರ ಪ್ರೀತಿಯ ಆಹಾರವನ್ನು ನಾನು ಮತ್ತು ಗುರ್ಚೇವ್ ಬಾಯಿಗಿಡುತ್ತಿದ್ದಾಗ ನಾವು ನಿಂತಿದ್ದ ಕಟ್ಟಡದ ಗಾಜಿನ ಬಾಗಿಲಲ್ಲಿ ಒಂದಷ್ಟು ಹೆಸರುಗಳೂ, ಒಂದಿಷ್ಟು ಫೋಟೋ, ಇನ್ನೇನೋ ಬರಹ ಕಾಣಿಸಿತು. ಏನಿರಬಹುದು ಎಂದು ಎಷ್ಟು ತಲೆಕೆಡಿಸಿಕೊಂಡರೂ ನಮಗೆ 'ಬ್ರಹ್ಮಲಿಪಿ'ಯಾಗಿದ್ದ ಅದು ಬಿಲ್‌ಕುಲ್ ಅರ್ಥವಾಗಲಿಲ್ಲ. ಇದ್ದಿದ್ದರಲ್ಲಿ ಅರ್ಧ ಇಂಗ್ಲಿಷ್ ಮಾತನಾಡುತ್ತಿದ್ದ ಟೀಚರ್ ಒಬ್ಬರನ್ನೇ ಗಟ್ಟಿಯಾಗಿ ಹಿಡಿದೆವು. ಅವರು 'ಎಲೆಕ್ಸಿಯೋನ್' ಎಂದರು. ಏನಪ್ಪಾ ಎಂದು ಅದಕ್ಕೆ ನಮ್ಮದೇ ಅರ್ಥ ಕೊಟ್ಟುಕೊಳ್ಳುತ್ತಿದ್ದಾಗ ಶೇ. ೯೦ರಷ್ಟು ಹಾವಭಾವ ಶೇ. ೧೦ರಷ್ಟು ಪದಗಳಲ್ಲಿ ಅವರು ಅದನ್ನು ನಮಗೆ ಅರ್ಥೈಸಿದರು. ಚುನಾವಣೆ ಎಂದು.



ಕ್ಯೂಬಾದಲ್ಲಿ ನಾವು ಇಳಿದ ಸಮಯಕ್ಕೆ ಸರಿಯಾಗಿ ಮುನಿಸಿಪಲ್ ಚುನಾವಣೆ ಬಂದಿತ್ತು. ಪುಟಪುಟಗಳಲ್ಲಿ ಎಪಿ, ರಾಯಿಟರ್‌ಗಳ ಸುದ್ದಿಗಳನ್ನು ಓದುವ ಮುಕ್ತ ಮಾಹಿತಿ ಪ್ರವಾಹದ ವಿಶೇಷ ಸೌಕರ್ಯವನ್ನು ಭಾರತದ ಪತ್ರಿಕೆಗಳೂ ಕಲ್ಪಿಸಿಕೊಟ್ಟಿವೆ. ಆದ್ದರಿಂದಲೇ ಕ್ಯೂಬಾದಲ್ಲಿ ಪ್ರಜಾಪ್ರಭುತ್ವ ಇಲ್ಲ, ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್ ಎಂಬುದಂತೂ ಮೊದಲೇ ಇಲ್ಲ ಎಂಬುದನ್ನು ಚೆನ್ನಾಗಿ ತಲೆಯಲ್ಲಿ ತುರುಕಿಕೊಂಡಿತ್ತು. ಆದರೂ ಕ್ಯೂಬಾ ಮೇಲಿನ ಪ್ರೀತಿ ಹಾಗಿರಲಾರದು ಎಂದೇ ಸಾರುತ್ತಿತ್ತು. ಇದರ ಗೊಡವೆಯೇ ಬೇಡ ಎಂದು ತಲೆಕೆಡಿಸಿಕೊಳ್ಳುವುದಕ್ಕೆ ಪೂರ್ಣ ವಿರಾಮ ಹಾಕಿ ಆರಾಮವಾಗಿ ಕ್ಯೂಬಾಗೆ ಬಂದಿದ್ದ ನಮಗೆ ಈ ಗೋಡೆ ಫೋಟೋ ಮತ್ತೆ ಪ್ರಶ್ನೆಗಳನ್ನು ತಂದು ಕಣ್ಣ ಮುಂದೆ ಬಿಟ್ಟಿತು.

'ಅಮೇರಿಕಾದ ಚುನಾವಣೆಯಲ್ಲಿ ಪ್ರತಿಯೊಬ್ಬರೂ ೨.೫ ಕೋಟಿ ಡಾಲರ್ ಖರ್ಚು ಮಾಡುತ್ತಾರೆ. ಆದರೆ ಕ್ಯೂಬಾದಲ್ಲಿ ೨೫ ಡಾಲರ್ ಸಹಾ ಖರ್ಚು ಮಾಡಬೇಕಾದ ಅಗತ್ಯವಿಲ್ಲ' ಎಂದು ಫಿಡೆಲ್ ಕ್ಯಾಸ್ಟ್ರೋ ಹವಾನದಲ್ಲಿ ನಡೆದ ಸೌಹಾರ್ದತಾ ಸಭೆಯಲ್ಲಿ ಹೇಳಿದ್ದರು. ಕೈಯಲ್ಲಿ ೨.೫ಕೋಟಿ ಡಾಲರ್ ಹಿಡಿದು ಸ್ಪರ್ಧೆಗೆ ನಿಲ್ಲಲು ಎಷ್ಟು ಜನಕ್ಕೆ ಸಾಧ್ಯ. ಹಣ ಕೈಯಲ್ಲಿಟ್ಟುಕೊಂಡು ಲಕ್ಷಾಧೀಶರುಗಳು ಮಾತ್ರ ಸ್ಪರ್ಧಿಸಲು ಸಾಧ್ಯವಾಗುವ ಚುನಾವಣೆ ಎಷ್ಟು ಪ್ರಜಾಸತ್ತಾತ್ಮಕ? ಕ್ಯಾಸ್ಟ್ರೋ ಪ್ರಶ್ನಿಸಿದ್ದರು.

ಕ್ಯೂಬಾದಲ್ಲಿ ಪ್ರಜಾಪ್ರಭುತ್ವ ಇಲ್ಲ ಎಂದು ಅಮೇರಿಕಾ ಹೇಳುತ್ತಿರುವುದರ ಅರ್ಥ ಅಮೇರಿಕಾಗೆ ಬೇಕಾದ ಪ್ರಜಾಪ್ರಭುತ್ವ ಇಲ್ಲ ಎಂದು ಮಾತ್ರ. ಕೈಯಲ್ಲಿ ಥೈಲಿ ಹಿಡಿದು ಚುನಾವಣೆಗೆ ನಿಲ್ಲುವ ಕುಳಗಳು ಇಲ್ಲ ಎಂದು ಮಾತ್ರ ಅಮೇರಿಕಾ ಅಂಡ್ ಕಂಪನಿಯ ಪ್ರಚಾರವನ್ನು ಅರ್ಥಮಾಡಿಕೊಳ್ಳಬೇಕು. ಹೀಗಂದದ್ದು ಸ್ಪಾನಿಯೋಲ್ ನಾಲಿಗೆಯಲ್ಲಿ ಇಂಗ್ಲಿಸ್ ಹೊರಳಿಸುತ್ತಿದ್ದ ಓರಿಯಂಟ್ ವಿಶ್ವ ವಿದ್ಯಾಲಯದ ಪ್ರೊಫೆಸರ್.

ಕ್ರಾಂತಿ ಜರುಗಿದ ನಂತರ ಅದನ್ನು ಕಾಪಾಡಿಕೊಳ್ಳುತ್ತಾ, ಇನ್ನೇನು ಉಸಿರಾಡಬೇಕು ಎನ್ನುವಾಗ ಎದುರಾದ ಅಮೇರಿಕಾದ ದಾಳಿಯಲ್ಲಿ ಕ್ಯೂಬಾಗೆ ಚುನಾವಣಾ ಪ್ರಕ್ರಿಯೆ ನಡೆಸುವುದು ಸಾಧ್ಯವೇ ಇರಲಿಲ್ಲ. ಆದರೆ ೧೯೭೬ರಲ್ಲಿ ಕ್ಯೂಬಾ ಹೊಸ ಸಂವಿಧಾನದ ಕರಡನ್ನು ತಯಾರಿಸಿ ಜನರ ಬಳಿಗೆ ಕೊಂಡೊಯ್ದಿತು. ಕಾರ್ಮಿಕರ ಮಧ್ಯೆ, ರೈತರ ಮಧ್ಯೆ, ಕ್ರಾಂತಿ ರಕ್ಷಿಸಲು ಹುಟ್ಟಿಕೊಂಡಿದ್ದ ಸಮಿತಿಗಳಲ್ಲಿ, ಬೀದಿಗಳಲ್ಲಿ ಸಂವಿಧಾನದ ಕರಡನ್ನು ಚರ್ಚಿಸಲಾಯಿತು. ೧೯೭೬ರ ಫೆಬ್ರವರಿ ೨೪ರಂದು ಈ ಕರಡಿನ ಬಗ್ಗೆ ಜನಾಭಿಪ್ರಾಯ ಸಂಗ್ರಹ ಮಾಡಲಾಯಿತು. ಈ ಸಂವಿಧಾನದ ಪರವಾಗಿ ಶೇ. ೯೭.೭ ಕ್ಯೂಬನ್ನರು ಮತ ನೀಡಿದರು. 'ಕ್ಯೂಬಾ ಗಣತಂತ್ರ' ಅಸ್ತಿತ್ವಕ್ಕೆ ಬಂತು. ಅದುವರೆಗೆ ಇದ್ದ ಕ್ರಾಂತಿಕಾರಿ ಪ್ರಭುತ್ವ ಈಗ ಸಮಾಜವಾದಿ ಪ್ರಭುತ್ವವಾಗಿ ಬದಲಾಯಿತು. ಅಂದಿನಿಂದ ಇಂದಿನವರೆಗೆ ಚುನಾವಣೆಗಳು ನಡೆಯುತ್ತಲೇ ಬಂದಿವೆ.

ಕ್ಯೂಬಾದಲ್ಲಿ 'ನ್ಯಾಷನಲ್ ಅಸೆಂಬ್ಲಿ ಆಫ್ ದಿ ಪೀಪಲ್ಸ್ ಪವರ್'ಗೆ ಪ್ರತೀ ಐದು ವರ್ಷಕ್ಕೊಮ್ಮೆ, ಕ್ಯೂಬಾದ ೧೪ ಪ್ರಾಂತ್ಯಗಳಿಗೆ ಹಾಗೂ ಮುನಿಸಿಪಲ್‌ಗೆ ಪ್ರತೀ ಎರಡೂವರೆ ವರ್ಷಕ್ಕೊಮ್ಮೆ ಚುನಾವಣೆ

ಜರುಗುತ್ತದೆ. ಮುನಿಸಿಪಲ್ ನಂತರ ಪ್ರಾಂತೀಯ ಅಸೆಂಬ್ಲಿ, ನಂತರ ಅತ್ಯುಚ್ಚ ಮಟ್ಟದ್ದು ಕ್ಯೂಬಾದ ಸಂಸತ್ತು ಎನಿಸಿರುವ ನ್ಯಾಷನಲ್ ಅಸೆಂಬ್ಲಿ ಆಫ್ ಪೀಪಲ್ಸ್ ಪವರ್. ೧೬ ವರ್ಷ ಮೇಲ್ಪಟ್ಟವರಿಗೆ ಮತದಾನದ ಹಕ್ಕು, ಗುಪ್ತ ಮತದಾನ, ಬಹಿರಂಗ ಎಣಿಕೆ.

ಕ್ಯೂಬಾದಲ್ಲಿ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವವರು ಅಲ್ಲಿಯ ಜನತೆ. ಮುನಿಸಿಪಲ್ ಚುನಾವಣೆಗೆ ಆಯಾ ಚುನಾವಣಾ ಘಟಕದ ಜನರು ಯಾರು ಅಭ್ಯರ್ಥಿ ಆಗಬಹುದು ಎಂಬ ಪ್ರಸ್ತಾಪವನ್ನು ಇಡುತ್ತಾರೆ. ಹೀಗೆ ಆಯ್ಕೆಗೊಂಡ ಅಭ್ಯರ್ಥಿಗಳು ನಂತರ ಪತ್ರಿಕೆಯಲ್ಲಿ ಜಾಹೀರಾತು, ಕಿಡಿ ಕಾರುವ ಜಾಹೀರಾತು, ಮೇಜು ಗುದ್ದಿ ಹೇಳುವ ಸಭೆಗಳು, ಯಾತ್ರೆಗಳನ್ನು ನಡೆಸುವುದಿಲ್ಲ. ಬದಲಿಗೆ ಪ್ರತೀ ವಿಭಾಗದಲ್ಲಿರುವ ಜನರ ಒಡೆತನದ ಕಟ್ಟಡದ ಮುಂದೆ ಅಭ್ಯರ್ಥಿಯ ಫೋಟೋ, ಅವರ ಬಯೋಡೇಟಾ ಅಂಟಿಸುತ್ತಾರೆ. ತಮ್ಮ ನಾಯಕ ಯಾರಾಗಬೇಕು ಎಂಬುದಕ್ಕೆ ಇದೇ ಆಧಾರ. ಜನರೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದರಿಂದ ಅಭ್ಯರ್ಥಿಯ ಗುಣಾವಗುಣಗಳೂ ಬಟಾಬಯಲಾಗಿಯೇ ಇರುತ್ತದೆ. ಹೀಗಾಗಿ ತಮಗೆ ಬೇಕಾದ ಒಬ್ಬನನ್ನು ಜನರು ಮುಕ್ತ ಮತದಾನದಲ್ಲಿ ಆಯ್ಕೆ ಮಾಡಿಕೊಳ್ಳುತ್ತಾರೆ.

ಮುನಿಸಿಪಲ್ ಪ್ರತಿನಿಧಿಗಳು ಪ್ರಾಂತ್ಯದ ಪ್ರತಿನಿಧಿಗಳನ್ನೂ, ಪ್ರಾಂತ್ಯದವರು ಸಂಸತ್ತಿನ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಿದ್ದರು. ಆದರೆ ಈಗ ಕ್ಯೂಬಾ ವಿಧಾನವನ್ನು ಬದಲಿಸಿದೆ. ಈ ಮೂರು ಚುನಾವಣೆಗೆ ನೇರ ಮತದಾನ ಮಾಡಬಹುದು. ಅಭ್ಯರ್ಥಿಗಳ ಆಯ್ಕೆಯಲ್ಲಿ ಮಾತ್ರ ವಿಧಾನ ಬೇರೆ. ನ್ಯಾಷನಲ್ ಅಸೆಂಬ್ಲಿಗೆ ಜನರು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಹಂತದ ಬದಲಿಗೆ ರಾಷ್ಟ್ರೀಯ ಕಾರ್ಮಿಕ ಮಂಡಳಿ, ಸಣ್ಣ ರೈತರ ರಾಷ್ಟ್ರೀಯ ಸಂಘ, ಕ್ರಾಂತಿಯನ್ನು ರಕ್ಷಿಸುವ ಸಮಿತಿಗಳು, ಕ್ಯೂಬಾದ ಮಹಿಳಾ ಒಕ್ಕೂಟ, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಭೆ ಸೇರಿ ಚರ್ಚಿಸಿ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಮಾಡುತ್ತಾರೆ. ಹೀಗೆ ಆಯ್ಕೆ ಮಾಡುವಾಗ ೫೯೦ ಸದಸ್ಯರ ಸಂಸತ್ತಿಗೆ ಅರ್ಧ ಭಾಗ ಎಲ್ಲಾ ಪ್ರಾಂತ್ಯಗಳಿಂದ, ಇನ್ನುಳಿದ ಅರ್ಧ ಭಾಗವನ್ನು ಸಾಹಿತಿ, ಕಲಾವಿದ, ಹೆಸರಾಂತ ವ್ಯಕ್ತಿಗಳು ಹೀಗೆ ವಿವಿಧ ರಂಗಗಳಿಂದ ಆಯ್ಕೆ ಮಾಡಲಾಗುತ್ತದೆ. ನಂತರ ಇದನ್ನು ಮತ್ತೆ ಜನರ ಬಳಿಗೇ ತರಲಾಗುತ್ತದೆ. ಜನರು ಈ ಅಭ್ಯರ್ಥಿ ಪಟ್ಟಿಯನ್ನು ಚರ್ಚಿಸುತ್ತಾರೆ. ಬೇಕಾದಲ್ಲಿ ಬದಲಿಯನ್ನೂ ಸೂಚಿಸುತ್ತಾರೆ. ಇಲ್ಲಿ ಯಾರನ್ನೂ ಕ್ಯೂಬಾದ ಕಮ್ಯುನಿಸ್ಟ್ ಪಕ್ಷವಾಗಲೀ ಅದರ ಅಂಗಸಂಸ್ಥೆಗಳಾಗಲೀ ಆಯ್ಕೆ ಮಾಡುವುದಿಲ್ಲ.

ಕ್ಯೂಬಾದ ಚುನಾವಣೆಯ ಗಮನಾರ್ಹ ಅಂಶವೆಂದರೆ ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ಕ್ಯೂಬಾದ ಮತದಾರ ನಿಷ್ಕ್ರಿಯನಲ್ಲ. ಮತದಾನ ಮಾಡುವಾಗ ಮಾತ್ರ ಆತ ಮುಖ್ಯನಾಗುವ ವ್ಯವಸ್ಥೆ ಇಲ್ಲ. ಬದಲಿಗೆ ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಕ್ರಿಯ ಮತದಾರ. ಪ್ರತಿನಿಧಿಗಳು ಆಯ್ಕೆಯಾದ ನಂತರವೂ ಈ ಮತದಾರ ಮೊದಲಿನಷ್ಟೇ ಮಹತ್ವ ಉಳ್ಳವನು. ಮತದಾರರಿಗೆ ಬೇಕೆನಿಸಿದಾಗ ಸಭೆ ಕರೆಸುವ, ಆಯ್ಕೆಯಾದ ಪ್ರತಿನಿಧಿ ಸರಿಯಾದವನಲ್ಲ ಅಥವಾ ಆಯ್ಕೆಯಾದ



ನಂತರ ದಾರಿತಪ್ಪಿದ್ದಾನೆ ಎನಿಸಿದಲ್ಲಿ ಆತನನ್ನು ಹಿಂದಕ್ಕೆ ಕರೆಸಿಕೊಳ್ಳುವ ಹಕ್ಕು ಮತದಾರನಿಗಿದೆ.

ಆಯ್ಕೆಯಾದ ಪ್ರತಿನಿಧಿಗಳೂ ಅಷ್ಟೆ. ಕಾರು, ಬಂಗಲೆ, ಮತ್ತೆ ಐದು ವರ್ಷಕ್ಕೆ ಹಿಂದಿರುಗಿ ಕೈ ಜೋಡಿಸುವ ಯಾವ ಪದ್ಧತಿಯೂ ಇಲ್ಲ. ಆತನೂ ನಮ್ಮಂತೆ ನಿಮ್ಮಂತೆ ನೆರೆಹೊರೆಯಲ್ಲಿದ್ದು ದಿನದ ತನ್ನ ವೃತ್ತಿ ಮುಗಿಸಿಕೊಂಡು ಬಂದ ಮೇಲೆ ಜನರ ಬೇಕು ಬೇಡ ವಿಚಾರಿಸುವ ವ್ಯಕ್ತಿ. ಮತದಾರರಿಂದ ನೇರವಾಗಿ ಆಯ್ಕೆಯಾದ ೫೯೦ ನ್ಯಾಷನಲ್ ಅಸೆಂಬ್ಲಿ ಆಫ್ ಪೀಪಲ್ಸ್ ಪವರ್ (ಸಂಸತ್ತು) ಪ್ರತಿನಿಧಿಗಳು ನಂತರ ತಮ್ಮೊಳಗಿಂದಲೇ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಕಾರ್ಯದರ್ಶಿಯನ್ನು ಆರಿಸುತ್ತಾರೆ. ಇದೇ ಸದಸ್ಯರು ರಾಜ್ಯ ಮಂಡಳಿಯನ್ನು ಆಯ್ಕೆ ಮಾಡುತ್ತಾರೆ.

ಈ ರಾಜ್ಯ ಮಂಡಳಿಯು ಕಲಾಪಗಳು ಇಲ್ಲದ ಅವಧಿಯಲ್ಲಿ ಸಂಸತ್ತಿನ ತೀರ್ಮಾನಗಳನ್ನು ಜಾರಿ ಮಾಡುವ, ವಿಶೇಷ ಕಾನೂನುಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ. ಈ ಮಂಡಳಿ ಒಬ್ಬ ಅಧ್ಯಕ್ಷ, ಪ್ರಥಮ ಉಪಾಧ್ಯಕ್ಷ, ಐವರು ಇತರ ಉಪಾಧ್ಯಕ್ಷರು, ಒಬ್ಬ ಕಾರ್ಯದರ್ಶಿ ಹಾಗೂ ೨೩ ಸದಸ್ಯರನ್ನು ಹೊಂದಿರುತ್ತದೆ.

ಅಧ್ಯಕ್ಷರು ಸೂಚಿಸಿದ, ಸದಸ್ಯರು ಒಪ್ಪಿದ ಮಂತ್ರಿ ಮಂಡಳವನ್ನು ರಚಿಸಲಾಗುತ್ತದೆ. ಈ ಮಂತ್ರಿ ಮಂಡಳವೇ ದೇಶದ ಆಡಳಿತ ನಡೆಸುವ ಮುಖ್ಯ ಅಂಗ. ಹಾಗಾದರೆ ಅಮೇರಿಕಾ ಕ್ಯೂಬಾದಲ್ಲಿ ಪ್ರಜಾಪ್ರಭುತ್ವ ಇಲ್ಲ ಎಂದು ಪ್ರತೀ ಬಾರಿ ಆರೋಪಿಸುವುದಾದರೂ ಏಕೆ?

ಇದರ ಅರ್ಥ ಅಮೇರಿಕಾದಲ್ಲಿ ನಡೆಯುವ ಹಾಗೆ ಚುನಾವಣೆ ನಡೆಯುತ್ತಿಲ್ಲ ಎಂದು ಅರ್ಥ. ಅಮೇರಿಕಾದಲ್ಲಿ ನಡೆದ ಕಳೆದ ಶಾಸಕಾಂಗ ಚುನಾವಣೆಗಳಲ್ಲಿ ರಿಪಬ್ಲಿಕನ್ ಪಕ್ಷವನ್ನು ಪ್ರತಿನಿಧಿಸಿದ್ದ ತೈಲ ಉದ್ಯಮಿ ಮೈಖೇಲ್ ಹುಫಿಂಗ್ಟನ್ ಹಾಗೂ ಡೆಮಾಕ್ರೆಟ್ ಅಭ್ಯರ್ಥಿ ಡಯಾನೆ ಫೀನ್‌ಸ್ಟೇನ್ ನಡುವಿನ ಸ್ಪರ್ಧೆಗೆ ಖರ್ಚಾಗಿದ್ದು ೩೬ ಕೋಟಿ ಡಾಲರ್‌ಗಳು. ೧೯೯೨ರಲ್ಲಿ ನಡೆದ ಚುನಾವಣೆಯಲ್ಲಿ ೪೫೬ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್ ಹಾಗೂ ೧೦೦ ಸೆನೆಟ್ ಸದಸ್ಯರನ್ನು ಆಯ್ಕೆ ಮಾಡಲು ಆದ ವೆಚ್ಚ ೫೦೪೦ ಕೋಟಿ ಡಾಲರ್‌ಗಳು.

ಕ್ಲಿಂಟನ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದಾಗ ಮತದಾನ ಮಾಡಿದವರ ಸಂಖ್ಯೆ ಶೇ. ೫೪ ಮಾತ್ರ. ಆದರೆ ಕ್ಯೂಬಾದಲ್ಲಿ ಪ್ರತೀ ಬಾರಿ ಶೇ. ೯೫ಕ್ಕೂ ಹೆಚ್ಚು ಮತದಾನವಾಗುತ್ತದೆ. ೧೯೯೩ರಲ್ಲಿ ಮತದಾನ ಮಾಡಿದವರ ಸಂಖ್ಯೆ ಶೇ.೯೯. ೫೬, ೧೯೯೫ರಲ್ಲಿ ೯೬. ೧. ಕ್ರಾಂತಿಯನ್ನು ಒಪ್ಪದವರೂ ಸಹಾ ಮನೆಯಲ್ಲೇನೂ ಉಳಿಯುವುದಿಲ್ಲ. ಮತಗಟ್ಟೆಗೆ ಹೋಗಿ ಖಾಲಿ ಮತ ಹಾಕಿ ಬರುತ್ತಾರೆ. ೧೯೯೩ರ ಚುನಾವಣೆಯಲ್ಲಿ ಖಾಲಿ ಮತದಾನ ಮಾಡಿದವರು ಶೇ. ೩.೦೪. ೧೯೯೫ರ ಚುನಾವಣೆಯಲ್ಲಿ ಶೇ. ೪. ೩ ಅಂದರೆ ಅರ್ಥ ಶೇ. ೭೫ಕ್ಕೂ ಹೆಚ್ಚು ಮಂದಿ ಕ್ಯೂಬಾದ ಸರ್ಕಾರವನ್ನು ಅದರ ವಿಧಿವಿಧಾನವನ್ನು ಒಪ್ಪಿದ್ದಾರೆ ಎಂದು.


ಆದರೆ ಬಹುಪಕ್ಷ ವ್ಯವಸ್ಥೆ ಇಲ್ಲವಲ್ಲಾ? ಅಮೇರಿಕಾ ಕೇಳುವ ಪ್ರಶ್ನೆ ಇದು. ಕ್ಯೂಬಾ ತನ್ನ ಚುನಾವಣಾ

ಪದ್ಧತಿಗೆ ಆಡಳಿತ ನಡೆಸುವ ರೀತಿಗೆ ಅಮೇರಿಕವನ್ನು ಅನುಸರಿಸಿಲ್ಲ ಹಾಗೆಯೇ ತನ್ನ ಆತ್ಮೀಯನಾಗಿದ್ದ ಸೋವಿಯತ್ ದೇಶವನ್ನೂ ಅನುಸರಿಸಲಿಲ್ಲ. ಆಯಾ ದೇಶದ ಅನುಭವಗಳು ಆಯಾ ಸಂವಿಧಾನವನ್ನೂ, ಆಡಳಿತವನ್ನೂ ನಿರ್ಧರಿಸುತ್ತದೆ ಎಂಬುದನ್ನು ಗಟ್ಟಿಯಾಗಿ ನಂಬಿದೆ. ಈ ಕಾರಣಕ್ಕಾಗಿಯೇ ಕ್ಯೂಬಾದ ಅನುಭವದಲ್ಲಿ ಬಹು ಪಕ್ಷಗಳ ಅಗತ್ಯ ಬಿದ್ದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅಮೇರಿಕಾದ ಕೈಗೊಂಬೆ ಸರ್ಕಾರಗಳು ಇದ್ದಾಗ ಬಹುಪಕ್ಷ ಚುನಾವಣೆಗಳೇ ನಡೆದು ಕ್ಯೂಬಾದ ಅಂಗಳಕ್ಕೆ ತಂದುಕೊಟ್ಟ ಬದಲಾವಣೆಗಳು ಎಂತಹದ್ದು ಎಂಬುದನ್ನು ಜನರು ನೋಡಿದ್ದಾರೆ.

ಆದರೂ ನಮ್ಮ ಎಪಿ-ರಾಯಿಟರ್ ಬುದ್ಧಿ ಸುಮ್ಮನಿರಲಿಲ್ಲ. ಹವಾನಾದ ರಸ್ತೆಯಲ್ಲಿ ಊಟ ಮೆಲ್ಲುತ್ತಾ ಆತ ನಿಂತಿದ್ದಾಗ ತೈಲದ ಗಣಿಯಲ್ಲಿ ಕೆಲಸ ಮಾಡುವ ಕಾರ್ಮಿಕನನ್ನು ಕೇಳಿಯೇ ಬಿಟ್ಟೆ - ಬಹುಪಕ್ಷ ಇದ್ದರೆ ಏನಾಗುತ್ತಿತ್ತು ? ಆತ ಹೇಳಿದ -

ಕ್ಯೂಬಾದಲ್ಲಿ ಇನ್ನೊಂದೇ ಒಂದು ಪಕ್ಷ ಇದ್ದರೂ ಅಮೇರಿಕಾದ ಕೆಲಸ ಸುಲಭವಾಗಿ ಬಿಡುತ್ತದೆ. ೩೦ ವರ್ಷಗಳಿಗೂ ಹೆಚ್ಚು ಕಾಲ ಸಾಮ್ರಾಜ್ಯಶಾಹಿಯಿಂದ ದೇಶವನ್ನು ರಕ್ಷಿಸಿಕೊಂಡು ಬಂದಿದ್ದೇವೆ. ಕ್ಯೂಬಾದಲ್ಲಿ ಅಭಿಪ್ರಾಯ ಬೇಧ ಇದೆ ಎಂದರೆ ಸಾಕು ಅಮೇರಿಕಾದ ಕೆಲಸ ಸಲೀಸು. ಆದ್ದರಿಂದ ಸಧ್ಯಕ್ಕೆ ಒಂದು ಪಕ್ಷ ಸಾಕು.





## ಡಾಲರ್ ಕಣ್ಣಿನ ಗಿಡುಗನ ಕೊಂದು...

ಓರಿಯೆಂಟ್ ವಿಶ್ವವಿದ್ಯಾಲಯದ ಪ್ರೊ. ಜುವಾನ್ ಬಿ. ಡುಪುಯ್ ಅವರ ಮುಂದೆ ನಾನು ಭಾರತದಿಂದ ಹೊತ್ತು ತಂದಿದ್ದ ನೂರಾರು ಪ್ರಶ್ನೆಗಳಿದ್ದವು. ಈ ಎಲ್ಲವನ್ನೂ ಮಾತನಾಡಲು ನಮಗಿದ್ದ ಸಮಯವೇ ಕಡಿಮೆ. ಆದರೂ ಸಹಾ ಕುತೂಹಲ ಬಿಡಲಿಲ್ಲ. ಕ್ಯೂಬಾಗೆ ಹಾರಲು ಇನ್ನು ಕೆಲವೇ ದಿನ ಇದೆ ಎನ್ನುವಾಗ ಪತ್ರಿಕೆಗಳಲ್ಲಿ ಬಂದಿದ್ದ ಸುದ್ದಿಯೊಂದು ನನ್ನ ತಲೆಯಲ್ಲಿ ಪ್ರಶ್ನಾರ್ಥಕ ಚಿಹ್ನೆಯಾಗಿ ಸುಳಿದಾಡುತ್ತಲೇ ಇತ್ತು. ಗೆಳೆಯರೂ ಸಹಾ ನಾನು ಕ್ಯೂಬಾಗೆ ಹೋಗುತ್ತಿದ್ದೇನೆ ಎಂದಾಗ ಅದೇ ಸುದ್ದಿ ಯನ್ನು ತೆಗೆದು ಮಾತನಾಡಿದ್ದರು.

ಪ್ರೊಫೆಸರ್‌ಗೆ ಕೇಳಿದೆ - 'ಕ್ಯಾಸ್ಟ್ರೋರ ಮಗಳು ಅಪ್ಪ ಕೆಡುಕ ಎಂದು ಬೈದಿದ್ದಾಳಲ್ಲಾ'. ಪ್ರೊಫೆಸರ್ ಹೇಳಿದರು: ನೋಡಿ ನನ್ನ ಅಳಿಯನ ಹೆಸರೂ ಸಹಾ ಕ್ಯಾಸ್ಟ್ರೋ. ೯೦ ಮೈಲಿ ದಾಟಿದರೆ ಸಾಕು ರಾತ್ರಿ ಕಳೆದು ಬೆಳಗಾಗುವುದರಲ್ಲಿ ಆತ ಕುಬೇರನಾಗಬಹುದು. ಅಮೇರಿಕಾಗೆ ಹಾರಿದರೆ ನನ್ನ ಅಳಿಯನನ್ನು ಫಿಡೆಲ್ ಕ್ಯಾಸ್ಟ್ರೋನ ಮಗನನ್ನಾಗಿ ಮಾಡಿ ಕ್ಯಾಸ್ಟ್ರೋ ವಿರುದ್ಧ ಹೇಳಿಕೆ ಕೊಡಿಸಲೂ ಸಿದ್ಧ. ಕ್ಯೂಬಾದಲ್ಲಿ

ಹಲವು ಕ್ಯಾಸ್ಟ್ರೋಗಳಿದ್ದಾರೆ. ಅವರೆಲ್ಲರೂ ಫಿಡೆಲ್‌ನ ಬಂಧುಗಳಲ್ಲ. ಅಮೇರಿಕಾ ಫಿಡೆಲ್‌ಕ್ಯಾಸ್ಟ್ರೋಗೆ ಸಾಕಷ್ಟು ಮಕ್ಕಳನ್ನು, ಮೊಮ್ಮಕ್ಕಳನ್ನು, ಹೆಂಡತಿಯರನ್ನೂ ಹುಟ್ಟು ಹಾಕಿದೆ. ಫಿಡೆಲ್ ಹೆಸರು ಕೆಡಿಸಲು ಅಮೇರಿಕನ್ ಸಾಮ್ರಾಜ್ಯಶಾಹಿ ಲಕ್ಷಗಟ್ಟಲೆ ಡಾಲರ್‌ಗಳನ್ನು ಖರ್ಚು ಮಾಡುತ್ತಿದೆ ಎಂದರು.

ಕ್ಯೂಬಾ ಮತ್ತು ಫಿಡೆಲ್‌ಕ್ಯಾಸ್ಟ್ರೋ ಸಿಐಎಯ ಮುಗಿಯದ ಗುರಿ. ಬೊಲಿವಿಯಾದಲ್ಲಿ ಚೆಗೆವಾರನನ್ನು ಬಲಿ ತೆಗೆದುಕೊಂಡ ಸಿಐಎ ಫಿಡೆಲ್‌ಕ್ಯಾಸ್ಟ್ರೋ ಅವರ ಮೇಲೆ ಇನ್ನಿಲ್ಲದ ಸಂಚು ಹೂಡಿದೆ.

ಸಾವಿನ ಬಾಯಿಯಿಂದ ಪಾರಾಗಿದ್ದಕ್ಕಾಗಿ ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕ ಏನಾದರೂ ಇಟ್ಟರೆ ಅದು ನನಗೇ ಧಕ್ಕಬೇಕು. ಏಕೆಂದರೆ ನಾನು ೬೪ ಬಾರಿ ಸಿಐಏ ಕೈಯಿಂದ ಪಾರಾಗಿ ಬಂದಿದ್ದೇನೆ ಎಂದು ಫಿಡಲ್‌ಕ್ಯಾಸ್ಟ್ರೋ ಅಂತರಾಷ್ಟ್ರೀಯ ಸೌಹಾರ್ದಾತಾ ಸಮಾವೇಶದಲ್ಲಿ ಬಹಿರಂಗಪಡಿಸಿದ್ದರು. ಫಿಡೆಲ್‌ಕ್ಯಾಸ್ಟ್ರೋ ಅವರ ಮನೆಯ ಮೇಲೆ ಬಾಂಬ್ ದಾಳಿ ನಡೆಸಿ ಸಿಗಾರ್‌ಗೆ ರೋಗಾಣು ಹರಡಿ, ಪೆನ್‌ನಲ್ಲಿ ವಿಷಾನಿಲ ಇಟ್ಟು, ಹೋದ ಕಡೆಯೆಲ್ಲಾ ಬಂದೂಕು ಸಿದ್ಧಮಾಡಿ, ವಿಡಿಯೋ ಕ್ಯಾಮರಾದಲ್ಲಿ ಪಿಸ್ತೂಲ್ ಇಟ್ಟು, ಲಕ್ಷಾಂತರ ಡಾಲರ್ ಸುರಿದರೂ ಫಿಡೆಲ್ ಕ್ಯಾಸ್ಟ್ರೋ ಸಿಐಎ ಬಾಯಿಗೆ ಸಿಕ್ಕಿಲ್ಲ. ಕ್ಯೂಬಾ ಹೇಳುತ್ತದೆ - ಈಗ ಸಿಐಎ ಫಿಡೆಲ್ ಅವರ ಸಹಜ ಸಾವಿಗೆ ಕಾಯುತ್ತಿದೆ.

‘ಸಿಐಎ’ ಅಮೇರಿಕಾ ಸಾಮ್ರಾಜ್ಯಶಾಹಿಯ ಯಶಸ್ವಿ ಅಸ್ತ್ರ. ಪತ್ರಿಕೆಗಳಲ್ಲಿ ಕ್ಯಾಸ್ಟ್ರೋಗೆ ಮಕ್ಕಳನ್ನು ಸೃಷ್ಟಿಸುವ, ಪೋಪ್ ಜಾನ್‌ಪಾಲ್ ಕ್ಯೂಬಾಗೆ ಭೇಟಿಕೊಟ್ಟು ಅಮೇರಿಕಾದ ಗಡ್ಡಕ್ಕೆ ಬೆಂಕಿ ಹತ್ತಿದಾಗ ಫಿಡೆಲ್‌ಗೊಬ್ಬಳು ತಂಗಿಯನ್ನು ಹುಟ್ಟುಹಾಕುವ, ಕ್ಯೂಬನ್ನರನ್ನು ಯಾಮಾರಿಸಲು ಕ್ಯೂಬನ್ನರು ಅತ್ಯಂತ ಗೌರವಿಸುವ ಜೋಸ್ ಮಾರ್ಟಿ ಹೆಸರಿನಲ್ಲಿಯೇ ‘ರೇಡಿಯೋ ಜೋಸ್ ಮಾರ್ಟಿ’ ಹುಟ್ಟುಹಾಕುವ, ಗಂಟೆಗಟ್ಟಲೆ ಅಪಪ್ರಚಾರವನ್ನು ವಾಯುತರಂಗಗಳಲ್ಲಿ ತೇಲಿಬಿಡುವ , ಕ್ಯೂಬಾದ ಒಳಗೇ ಸೇರಿ ಫೋಟೋ ಕ್ಲಿಕ್ಕಿಸುವ, ವಿಜ್ಞಾನಿಗಳನ್ನು ಹಿಡಿದು ಕ್ಯೂಬಾ ಸೂತ್ರಗಳನ್ನು ಕಸಿಯುವ, ಒಲಂಪಿಕ್ಸ್‌ನಲ್ಲಿ ಹಾಜರಾಗಿ ಕ್ಯೂಬಾ ಕ್ರೀಡಾಪಟುಗಳನ್ನು ಅಮೇರಿಕಾ ಕಡೆಗೆ ಸೆಳೆದುಕೊಳ್ಳುವ, ಇಡೀ ಜಗತ್ತು ಕ್ಯೂಬಾದಲ್ಲಿ ಪ್ರಜಾಪ್ರಭುತ್ವ ಇಲ್ಲ ಎಂದು ನಂಬುವಂತೆ ಮಾಡುವ, ಕ್ಯೂಬಾ ವೇಶ್ಯೆಯರ ನಗರ ಎಂದೆಲ್ಲ ಚಿತ್ರಿಸುವ ಯಶಸ್ವಿ ಅಸ್ತ್ರ.

‘ಸಿಐಎ ನಮ್ಮ ಬಗ್ಗೆ ಸುಳ್ಳುಗಳನ್ನು ಪ್ರಸಾರ ಮಾಡುತ್ತಿದೆ. ಜನರನ್ನು ಮೋಸ ಮಾಡಲು, ಗೊಂದಲಕ್ಕೆ ಕೆಡವಲು ಮತ್ತೆ ಮತ್ತೆ ಈ ಸುಳ್ಳುಗಳನ್ನು ಹೇಳುತ್ತಿದೆ. ಈ ಅಪಪ್ರಚಾರ ಎಂಬುದು ಒಂದು ಕಲೆ, ವಿಜ್ಞಾನ’ ಎನ್ನುತ್ತಾರೆ ಕ್ಯಾಸ್ಟ್ರೋ.

ಕ್ಯಾಸ್ಟ್ರೋರವರ ಜನಪ್ರಿಯತೆಯ ಗುಟ್ಟುಗಳಲ್ಲಿ ಒಂದು ಅವರ ಗಡ್ಡ ಎಂದು ತೀರ್ಮಾನಿಸಿದ ಸಿಐಎ ಅದನ್ನು ಎದುರಿಸಲು ಅವರು ಬಳಸುವ ಪಾದರಕ್ಷೆಗಳಲ್ಲಿ ಥಾಲಿಯಂ ಪುಡಿ ಬೆರೆಸುವ, ಕ್ಯಾಸ್ಟ್ರೋ ಅವರ ಭಾಷಣದ ಶೈಲಿ ಜನಪ್ರಿಯ ಎಂದು ತಿಳಿದು ಅವರ ಭಾಷಣವನ್ನು ಧ್ವನಿಮುದ್ರಿಸಿಕೊಳ್ಳುವ ಸ್ಟುಡಿಯೋದಲ್ಲಿ ರಾಸಾಯನಿಕ ದ್ರವ ಸಿಂಪಡಿಸಿ ಗಂಟಲು ಹಾನಿಯಾಗುವಂತೆ ಮಾಡುವ, ವಿಶ್ವಸಂಸ್ಥೆ



ಅಧಿವೇಶನಕ್ಕೆ ಬಂದಾಗ ವಿಷಪೂರಿತ ಸಿಗಾರ್ ನೀಡುವ ಯೋಜನೆಗಳು ತಯಾರಾಗಿ ವಿಫಲವಾದವು. ‘ಏಜೆಂಟ್ ಎಎಂ’ ಎಂದು ಹೆಸರಾದ ಮೇಜರ್ ರೋಲ್ಯಾಂಡೋ ಕುಬೆಲಾಸ್ ಅವರಿಗೆ ವಿಷದ ಮುಳ್ಳುಗಳಿದ್ದ ಫೌಂಟನ್ ಪೆನ್ನು ಕ್ಯಾಸ್ಟ್ರೋ ವಿರುದ್ಧ ಬಳಸಲು ನೀಡಲಾಯಿತು. ಕ್ಯಾಸ್ಟ್ರೋ ೧೯೭೧ರಲ್ಲಿ ಚಿಲಿಗೆ ಭೇಟಿಕೊಟ್ಟಾಗ ಟಿವಿ ಕ್ಯಾಮೆರಾಗಳಲ್ಲಿ ಅಸ್ತ್ರಗಳನ್ನಿಟ್ಟು ಕೊಲೆ ಮಾಡುವ ಹೊಣೆಯನ್ನು ಸಿಐಎಯ ಪ್ರಮುಖ ಅಧಿಕಾರಿ ಡೆವೀಡ್ ಎ ಫಿಲಿಪ್ಸ್ ಅವರಿಗೆ ನೀಡಲಾಯಿತು.

ಸಿಐಎ ಏಜೆಂಟ್ ರೂಡಿ ಹೆರ್‍ರೆರಾ ಡಬಲ್ ಏಜೆಂಟ್ ಜುವಾನ್‌ಲೂಯಿಸ್ ಬಳಿ ‘ಫಿಡೆಲ್ ಅವರನ್ನು ಕೊಲ್ಲುವುದು ಸಿಐಎ ಗೆ ತೀರಾ ಅಗತ್ಯವಾಗಿದೆ. ಅವರು ಈಗ ಕ್ಯೂಬಾದ ನಾಯಕ ಮಾತ್ರವಲ್ಲ ವಿಶ್ವದ ನಾಯಕರುಗಳಲ್ಲೊಬ್ಬರು. ಆಫ್ರಿಕಾ, ಮಧ್ಯ ಅಮೇರಿಕಾ, ಲ್ಯಾಟಿನ್ ಅಮೇರಿಕಾದಲ್ಲಿ ನಡೆಯುತ್ತಿರುವ ವಿಮೋಚನಾ ಚಳವಳಿಗಳು ಕ್ಯೂಬಾದ ಮಾದರಿಯನ್ನು ಅನುಸರಿಸುತ್ತಿವೆ. ಫಿಡೆಲ್ ಅವರನ್ನು ಮಾದರಿಯಾನ್ನಾಗಿ ಸ್ವೀಕರಿಸಿವೆ. ಫಿಡೆಲ್ ಅವರನ್ನು ಮುಗಿಸಿದರೆ ಯುದ್ಧವನ್ನು ಗೆದ್ದಂತೆ’ ಎಂದರು.

ಹವಾನಾದ ಪ್ಯಾಲೆಸಿಯೋ ಡೆ ಲಾ ಕನ್‌ವೆನ್ಶಿಯೊನೆಲ್‌ನಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ನಡೆಯುತ್ತಿದ್ದ ನ್ಯಾಯಾಲಯದಲ್ಲಿ ಕಟಕಟೆಯಲ್ಲಿ ನಿಂತಿದ್ದರು ಸಿಐಎಯ ಮಾಜಿ ಅಧಿಕಾರಿ ಫಿಲಿಪ್ ಆಗೀ.

‘ಫಿಲಿಪ್ ಆಗಿ’ ನನ್ನ ಪಕ್ಕ ಕುಳಿತಿದ್ದ ಗುರ್ಚೇವ್ ಕಿವಿ ತಕ್ಷಣ ನೆಟ್ಟಗಾಯಿತು. ಅವೆನ್ಯೂ ರೋಡ್‌ನ ಹಳೆ ಪುಸ್ತಕದಂಗಡಿಯಲ್ಲಿ ಇವರು ಬರೆದ ಪುಸ್ತಕ ಕೊಂಡುಕೊಂಡಿದ್ದೀನಿ ಕಣೋ. ಸಿಐಎ ಬಗ್ಗೆ ಭಯಂಕರವಾಗಿ ಬರೆದಿದ್ದಾರೆ. ಪುಸ್ತಕದ ಹೆಸರು ಇನ್‌ಸೈಡ್ ದಿ ಕಂಪನಿ. ಸಿಐಎ ಇತಿಹಾಸ ಎಲ್ಲಾ ಜಾಲಾಡಿದ್ದಾರೆ ಅಂದ.

ನಾನೂ ಸಹಾ ಫಿಲಿಪ್ ಆಗೀ ಮಾತಿಗೆ ಕಿವಿಗೊಟ್ಟೆ. ಫಿಲಿಪ್ ಆಗೀ ಸಿಐಎಯ ಕರಾಳ ಮುಖವನ್ನು ವಿವರಿಸುತ್ತಿದ್ದರು. ಸಿಐಎ ಚೆಗೆವಾರನ ಬಗ್ಗೆ ಭಾರೀ ಭಯಪಟ್ಟಿತ್ತು. ೧೯೫೪ರಲ್ಲಿಯೇ ಗ್ವಾಟೆಮಾಲದಲ್ಲಿ ‘ಚೆ’ ಯನ್ನು ಹಿಡಿಯಲು ಯತ್ನಿಸಿತ್ತು.

ಕ್ಯೂಬಾ ವಿರುದ್ಧ ಅಪಪ್ರಚಾರಕ್ಕೆ ಕ್ಯೂಬಾದ ಜೊತೆಗೆ ಸ್ನೇಹದಿಂದಿದ್ದ ದೇಶಗಳ ಸಂಬಂಧ ಮುರಿಯುವುದಕ್ಕೆ ನಾನು ಬಳಕೆಯಾಗಿದ್ದೆ. ೧೯೬೦ರಲ್ಲಿ ಈಕ್ವಡೋರ್ ಕ್ಯೂಬಾದೊಂದಿಗೆ ಸಂಬಂಧ ಕಡಿದುಕೊಳ್ಳಲು ಇಷ್ಟಪಡಲಿಲ್ಲ. ಆಗ ಇಡೀ ದೇಶದಲ್ಲಿ ಅಸ್ಥಿರತೆ ಉಂಟುಮಾಡಲಾಯಿತು. ಅಸ್ಥಿರತೆ ಉಂಟಾದರೆ ಮಿಲಿಟರಿ ಮೂಗು ತೂರಿಸುತ್ತದೆ. ಬೀದಿಯಲ್ಲಿ ಪ್ರದರ್ಶನಗಳು ಆಗಿ ಪ್ರಚಾರಗಳ ಮೂಲಕ ಮಿಲಿಟರಿ ಬೀದಿಗಿಳಿಯುವಂತೆ ಮಾಡಲಾಯಿತು. ಚರ್ಚ್‌ಗಳ ಮೇಲೆ ಬಾಂಬ್ ಹಾಕಲಾಯಿತು. ಅಪಪ್ರಚಾರಕ್ಕೆ ಸದ್ದುಗದ್ದಲ ಅಗತ್ಯ. ಹೆಚ್ಚು ಗದ್ದಲವಾದಷ್ಟೂ ಹೆಚ್ಚು ಸುಲಭ. ನಗರ ನಗರಗಳಲ್ಲಿ ಈ ಕೃತ್ಯ ನಡೆಸಲಾಯಿತು. ಕ್ಯೂಬಾ ಪರ ಗುಂಪುಗಳು ಈ ಬಾಂಬ್ ದಾಳಿಗೆ ಕಾರಣ ಎನ್ನುವಂತೆ ನೋಡಿಕೊಳ್ಳಲಾಯಿತು. ಕ್ಯೂಬಾ ವಿರುದ್ಧ ಜನ ಎದ್ದರು.

ಫಿಲಿಪ್ ಆಗೀ ಬೆಚ್ಚಿಬೀಳುವ ಸಾಕ್ಷ್ಯವನ್ನು ಈ ಅಣಕು ನ್ಯಾಯಾಲಯದಲ್ಲಿ ಮಂಡಿಸುತ್ತಲೇ ಇದ್ದರು. ತಾನು ಸಿಐಎ ಸೇರಿದ್ದು, 'ಕಾರ್ಯಾಚರಣೆ ನಡೆಸಿದ್ದು', ಅಮೇರಿಕಾದ ಹಿತಾಸಕ್ತಿ ಎಂಬುದು ಮುಗ್ಧ ಜನರ ಮಾರಣಹೋಮ ಎಂದು ಕಂಡು ಕೊಂಡಿದ್ದು 'ಅದ್ದರಿಂದಲೆ ಪಾಠ ಕಲಿತಿದ್ದು' ಕೊನೆಗೆ ಚೆ ಪ್ರೀತಿಗೆ ಬಿದ್ದು ಸಿಐಎ ತೊರೆದದ್ದು ಎಲ್ಲವನ್ನೂ ಸಾವಿರಾರು ಜನರ ಮುಂದೆ ಮಂಡಿಸಿದರು.

ಫಿಲಿಪ್ ಆಗೀ ಅವರ ಜೊತೆ ಇನ್ನೂ ವಿಷಯ ತಿಳಿದುಕೊಳ್ಳಲು ಕುತೂಹಲ ಇದ್ದವರಿಗೆ ಮತ್ತೆ ಸಭೆ ಏರ್ಪಾಡಾಯಿತು. ಹತ್ತು ಹಲವು ಸಂಗತಿಗಳನ್ನು ಬಿಡಿಸಿಟ್ಟರು. ಪತ್ರಿಕೆಗಳ ಒಳಗೆ, ರಾಯಭಾರಿ ಕಚೇರಿಗಳಲ್ಲಿ , ಕ್ರೀಡಾ ಮಂಡಳಿಗಳಲ್ಲಿ, ವಿಶ್ವ ಸಂಘಟನೆಗಳಲ್ಲಿ ಚುನಾವಣೆಗಳಲ್ಲಿ, ಹತ್ಯೆಗಳಲ್ಲಿ ಸಿಐಎ ಕರಾಳ ಬಾಹುಗಳು ವಿಸ್ತರಿಸಿರುವುದನ್ನು ಎಳೆ ಎಳೆಯಾಗಿ ಬಿಡಿಸಿಡುತ್ತಾ ಹೋದರು.


ಲಂಡನ್‌ನ ಪತ್ರಿಕೆಯೊಂದರಲ್ಲಿ ಅಮೇರಿಕಾದ ಅಧ್ಯಕ್ಷ ಕ್ಲಿಂಟನ್ ಅವರು ಫಿಡೆಲ್‌ಕ್ಯಾಸ್ಟ್ರೋ ಹಾಗೂ ರೌಲ್ ಕ್ಯಾಸ್ಟ್ರೋ ಅವರನ್ನು ಇಲ್ಲವಾಗಿಸಿ ಬಂಡಾವಾಳ ಶಾಹಿಗೆ ಮರಳಲು ೮೦ ಲಕ್ಷ ಡಾಲರ್ ನೀಡುವುದಾಗಿ ಬರೆದ ಬಹಿರಂಗ ಪತ್ರ ಸುದ್ದಿಯಾಯಿತು. ಕ್ಯೂಬಾದ ಬೀದಿ ಬೀದಿಗಳಲ್ಲಿ ಜನ ಇದನ್ನು ಖಂಡಿಸಿ ಮೆರವಣಿಗೆ ನಡೆಸಿದರು.

'ಡಾಲರ್ ನಮ್ಮ ಮುಖ್ಯ ಶತ್ರು ' ಎಂದರು ಪ್ರೊಫೆಸರ್. ಇದು ಕ್ಯೂಬಾದ ಪ್ರತಿಯೊಬ್ಬರಿಗೂ ಗೊತ್ತಾಗಿದೆ. ಭಾರತದ ಬೀದಿ ಬೀದಿಗಳಲ್ಲಿ ಯುದ್ಧ ಪಿಪಾಸು ಅಮೇರಿಕಾವನ್ನು ಖಂಡಿಸಿ ಶಾಂತಿಪ್ರಿಯ ಸಂಘಟನೆಗಳು 'ಡಾಲರ್ ಕಣ್ಣಿನಾ ಗಿಡುಗನ ಕೊಂದು ಕಾಪಾಡಬೇಕಿದೆ ಜಗವನು ಇಂದು....' ಎಂದು ಹಾಡಿದ್ದು ನೆನಪಾಯಿತು.

ಕ್ಯೂಬಾ ಹಾಗೂ ಫಿಡೆಲ್ ವಿರುದ್ಧ ಸಿಐಎ ನಡೆಸಿದ ಸಂಚು, ಏಜೆಂಟ್‌ಗಳು, ಆಯುಧಗಳು, ಉಪಕರಣಗಳು ಎಲ್ಲವನ್ನೂ 'ಸಿಐಎ ಮ್ಯೂಸಿಯಂ'ನಲ್ಲಿ ಪ್ರದರ್ಶನದಲ್ಲಿಡಲಾಗಿದೆ. ಅದರ ಜೊತೆಗೆ ಆ ಗಿಡುಗವೂ ಇದೆ.

ಅಮೇರಿಕಾದ ಗೊಂಬೆ ಸರ್ಕಾರಗಳು ಕ್ಯೂಬಾದಲ್ಲಿ ಆಡಳಿತ ನಡೆಸುತ್ತಿದ್ದಾಗ ಹವಾನಾದ ಮುಖ್ಯ ಕೇಂದ್ರದಲ್ಲಿ ಅಮೇರಿಕಾದ ಆ ಗಿಡುಗವನ್ನು ನಿಲ್ಲಿಸಿದರು. ಕ್ರಾಂತಿಯಾಗಿದ್ದೇ ತಡ ಜನ ದಂಡೆತ್ತಿ ಹೋಗಿ ಆ ಗಿಡುಗನ ಪ್ರತಿಮೆಯನ್ನು ಚೂರು ಮಾಡಿದರು. ಈಗ ಅದು ಮ್ಯೂಸಿಯಂ ಪೀಸ್.





## ಮಗ್ಗುಲ ಮುಳ್ಳು – ಮಿಯಾಮಿ

ಮಿಯಾಮಿ - ಇಡೀ ಜಗತ್ತಿಗೆ ಗಾಂಜಾ ಚರಸ್‌ಗಳ ನೆಲ, ಜೂಜಿನ ಅಡ್ಡೆ, ವೇಶ್ಯೆಯರ ತಾಣ, ಮಾದಕ ವ್ಯಸನಿಗಳ ಕೂಪ ಎಂದು ಪರಿಚಿತವಾಗಿರುವ ಮಿಯಾಮಿ ಕ್ಯೂಬಾಗೆ ಮಾತ್ರ ತಲ್ಲಣಗಳ ಮಳೆಗರೆವ ಜಾಗ.

ಕ್ಯೂಬಾದಲ್ಲಿ ಕ್ರಾಂತಿಗೆ ಮುನ್ನ ಕ್ಯಾಸ್ಟ್ರೋ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದ್ದಾಗ ಅದನ್ನು ಮಣಿಸಲು ಶಸ್ತ್ರಾಸ್ತ್ರಗಳನ್ನು ಪೂರೈಸಿದ ನೆಲ. ಕ್ಯಾಸ್ಟ್ರೋ ಪುಟ್ಟ ಸೈನ್ಯ ಅಗಾಧ ವಿಶ್ವಾಸದಿಂದ ಅಮೇರಿಕಾದ ಕೈಗೊಂಬೆಗಳನ್ನು ಒದ್ದೋಡಿಸಿತು ಎನ್ನುವಾಗ ದಿಢೀರನೆ ಬಾಂಬ್‌ಗಳನ್ನು ಎಸೆದ ನೆಲ, ಕ್ರಾಂತಿಯ ಮೊದಲ ದಿನಗಳ ಸಂಭ್ರಮವನ್ನು ಅಳಿಸಿಹಾಕಲು ಆಕಾಶದಿಂದ ಹವಾನಾವನ್ನೇ ಸ್ಫೋಟಿಸಲು ಯತ್ನಿಸಿದ ಜಾಗ, ಎಲ್ಲೆಂದರಲ್ಲಿ ಕರಪತ್ರಗಳನ್ನು ಎಸೆದು ಕ್ಯೂಬಾ ಸರ್ಕಾರವನ್ನು ಕಿತ್ತೊಗೆಯುವಂತೆ ಕರೆನೀಡಿದ ನೆಲ, ದಿಢೀರನೆ ವಿಮಾನ ಹತ್ತಿ ಕ್ಯೂಬಾದೊಳಗೆ ನುಗ್ಗಿ ರಾಸಾಯನಿಕಗಳನ್ನು ಸುರಿದು ಜೀವ ಪರಿಸರಕ್ಕೆ ಕೊಳ್ಳಿ ಇಕ್ಕಿದ ನೆಲ. ಕ್ಯೂಬಾ ಪರವಾಗಿ ದನಿ ಎತ್ತಿದವರ ಮೇಲೆ ಮುಗಿಬೀಳುವ, ಕ್ಯೂಬಾಗಾಗಿ ಬೆಂಬಲ ಹುಟ್ಟುಹಾಕುವ ಜಾತಾಗಳ ಮೇಲೆ ದಾಳಿ ನಡೆಸುವ ಉಗ್ರಗಾಮಿಗಳಿಗೆ ಸದಾ ಆಶ್ರಯತಾಣ.

ಅಮೇರಿಕಾದ ಫ್ಲೋರಿಡಾ ರಾಜ್ಯದ ಮಿಯಾಮಿ ನಗರ ಕ್ಯೂಬಾಗೆ ಹೀಗೆ ಸದಾ ಆತಂಕ ಹುಟ್ಟು ಹಾಕುವ ನೆಲ. ಮಿಯಾಮಿ ಕ್ಯೂಬಾದಿಂದ ಕೇವಲ ೯೦ ಮೈಲು ದೂರದಲ್ಲಿರುವುದರಿಂದ ಅಮೇರಿಕಾಗೆ ಇದು ಕ್ಯೂಬಾದ ಮೇಲೆ ಭಯದ ಪರದೆ ಎಳೆಯುವುದಕ್ಕೆ ಆಯಕಟ್ಟಿನ ಜಾಗ.

ಕ್ಯೂಬಾದಲ್ಲಿ ದೋಣಿ ಏರಿದರೆ ಕೆಲಗಂಟೆಗಳಲ್ಲಿ ಅಮೇರಿಕಾದ ಮಡಿಲು ಸೇರಿಕೊಂಡು ಬಿಡಬಹುದು. ಮಿಯಾಮಿಯಲ್ಲಿ ರೇಡಿಯೋ ಹಾಕಿದರೆ ಕ್ಯೂಬಾದಲ್ಲಿ ಅದು ಕೇಳುತ್ತದೆ ಎನ್ನುವಷ್ಟು ಸನಿಹ. ಈ ಕಾರಣಕ್ಕಾಗಿಯೇ ಅಮೇರಿಕಾದಲ್ಲಿ ಇರುವ ಕ್ಯೂಬಾ ವಿರೋಧಿಗಳಿಗೆ ಹಾಗೂ ಕ್ಯೂಬಾದ ಒಳಗೆ ಇರುವ ಕ್ಯೂಬಾ ವಿರೋಧಿಗಳಿಗೂ ಮಿಯಾಮಿ ಆಕರ್ಷಣೆ ಅಪಾರ. ಭೂತದ ಬಾಯಲ್ಲಿ ಭಗವದ್ಗೀತೆ ನಿರೀಕ್ಷಿಸಲು ಹೇಗೆ ಸಾಧ್ಯ.

ಫಿಡೆಲ್‌ಕ್ಯಾಸ್ಟ್ರೋರ ಗೆರಿಲ್ಲಾ ಪಡೆ ಮಾಂಕೆಡಾ ಕೋಟೆಯಿಂದ ಹೆಜ್ಜೆ ಹಾಕುತ್ತಾ ಬಂದಾಗ ಅಮೇರಿಕಾದ ಹಿತ್ತಲ ತೋಟವನ್ನಾಗಿ ಕ್ಯೂಬಾವನ್ನು ಪರಿವರ್ತಿಸುವ ಆಶಯಕ್ಕೆ ಭಂಗ ಬರುತ್ತದೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಗೆರಿಲ್ಲಾ ಪಡೆ ಇಟ್ಟದ್ದು ದೊಡ್ಡ ಹೆಜ್ಜೆ. ಕ್ರಾಂತಿ ನಡೆಯುವವರೆಗೂ ಅಮೇರಿಕಾ ಈ ಹೋರಾಟದ ಸರಿಯಾದ ಅಂದಾಜು ಮಾಡಲಿಲ್ಲ. ಬೆರಳೆಣಿಕೆಯ ನಾಯಕರ ಹುಮ್ಮಸ್ಸಿನ ಯಶಸ್ಸು ಎಂದೇ ಕ್ರಾಂತಿಗೆ ಚೌಕಟ್ಟು ಹಾಕಿತ್ತು. ಆದರೆ ಕ್ಯಾಸ್ಟ್ರೋ ಹಿಂದಿರುಗಿ ನೋಡಲಿಲ್ಲ. ಭೂಮಿ ಹಂಚಲು ಸಕ್ಕರೆ ಕಾರ್ಖಾನೆಗಳ ಕೊಪ್ಪರಿಗೆ ಹಣವನ್ನು ಸೆಳೆಯಲು, ಎಲ್ಲರಿಗೂ ಬದುಕು ನೀಡಲು ಮುಂದಾದರು. ಅಮೇರಿಕಾ ಬೆಚ್ಚಿಬಿತ್ತು . ಕ್ಯೂಬಾದ ಸಂಪತ್ತನ್ನು ಹಾಸಿಗೆ ಮಾಡಿ ಮಲಗಿದ್ದ ಅಮೇರಿಕಾದ ಕಂಪನಿಗಳು, ಹವಾನಾದ ಶ್ರೀಮಂತರು, ಈ ಬಿರುಗಾಳಿಗೆ ಗಾಬರಿಯಾದರು.

'ಮಿಯಾಮಿ' ಕ್ಯೂಬಾದ ವಿರುದ್ಧ ಸಿಟ್ಟು ಸೆಡವುಗಳ ತಂಗುದಾಣವಾಗಿ ಬದಲಾಗಿದ್ದೇ ಆಗ. ಅದುವರೆಗೂ ಕ್ಯೂಬಾದ ಸಕ್ಕರೆ ಕಾರ್ಖಾನೆಗಳಿಂದ ಅಪಾರ ಲಾಭ ಕೊಳ್ಳೆ ಹೊಡೆಯುತ್ತಿದ್ದ ಅಮೇರಿಕನ್ನರು ಈ ಹಣವನ್ನು ಮಿಯಾಮಿಯ ಶೇರು ವ್ಯವಹಾರಗಳಲ್ಲಿ ತೊಡಗಿಸಿದ್ದರು. ಕ್ಯೂಬಾ-ಮಿಯಾಮಿಗೆ ಇದ್ದ ಸಂಬಂಧ ಇಷ್ಟು ಮಾತ್ರ. ಕ್ಯೂಬಾದ ಕೊಪ್ಪರಿಗೆ ಹಣ ಮಿಯಾಮಿಯ ತಿಜೋರಿಗಳಲ್ಲಿದ್ದವು.

ಕ್ಯಾಸ್ಟ್ರೋ ತಂದ ಬದಲಾವಣೆಗಳಿಂದ ಆಸ್ತಿ, ಕಾರ್ಖಾನೆ, ಅಂತಸ್ತು, ಅಧಿಕಾರ ಕಳೆದುಕೊಂಡ ಅಮೇರಿಕನ್ನರು, ಅವರ ಆಶ್ರಯದಲ್ಲಿದ್ದ ಕ್ಯೂಬನ್ನರು ದಿಢೀರನೆ ಓಡಿಹೋಗಿ ಮಿಯಾಮಿಯಲ್ಲಿ ಆಶ್ರಯ ಪಡೆದರು. ಇನ್ನೂ ಕೆಲವರು ಓಡಿ ಹೋಗಲಾಗದೆ ನಿಟ್ಟುಸಿರಿಡುತ್ತಾ ಶಾಪ ಹಾಕುತ್ತಾ ಕ್ಯೂಬಾದಲ್ಲಿಯೇ ಉಳಿದರು. ಮಿಯಾಮಿ ಸಕ್ರಿಯವಾಗಿದ್ದೇ ಆಗ. ದಿಢೀರನೆ ವಿಮಾನಗಳು ಮಿಯಾಮಿಯಿಂದ ಹಾರಿ ಕ್ಯೂಬಾಗೆ ನುಗ್ಗಿ ಅಲ್ಲಿದ್ದ ಸರ್ವಾಧಿಕಾರಿ ಬ್ಯಾಟಿಸ್ಟಾನ ಬೆಂಬಲಿಗರನ್ನು, ಮಿಯಾಮಿ ನೋಡುತ್ತಾ ಕುಳಿತಿದ್ದವರನ್ನೂ ಹೊತ್ತು ಹಾರಿಬಿಡುತ್ತಿತ್ತು. ದೋಣಿ, ಹಡಗುಗಳು ರಾತ್ರೋರಾತ್ರಿ ಕ್ಯೂಬಾದ ದಡದಲ್ಲಿ ಬಂದು ನಿಲ್ಲುತ್ತಿದ್ದವು. ಜನ ಪಲಾಯನ ಮಾಡುತ್ತಿದ್ದರು.

ಅಮೇರಿಕಾ ಈ ಪಲಾಯನಕ್ಕೆ ಅಸ್ತು ಎಂದಿತು. ಓಡಿ ಬಂದವರನ್ನೆಲ್ಲಾ ನಿರಾಶ್ರಿತರು ಎಂದು ಗುರುತಿಸಿ ಗೌರವಿಸಿತ್ತು. ಇನ್ನಷ್ಟು ನಿರಾಶ್ರಿತರಿಗಾಗಿ ಆಹ್ವಾನ ನೀಡಿತ್ತು. ಇದನ್ನೇ ಕ್ಯೂಬಾದ ವಿರುದ್ಧ ಅಪಪ್ರಚಾರಕ್ಕೆ



ಬಳಸಿತು. ಓಡಿ ಬಂದವರನ್ನು ಸ್ವೀಕರಿಸಿದ್ದೇ ಅಲ್ಲದೆ ಓಡಿ ಬರುವವರಿಗಾಗಿ ಗಾಳ ಹಾಕಿತು. ಓಡಿ ಬರುವವರು ಸಾಮಾನ್ಯರಾದರೆ ನಿರಾಶ್ರಿತರು. ಒಳ್ಳೆ ಮಿಕ ಬಲೆಯಲ್ಲಿ ಬಿದ್ದರೆ ಕೈತುಂಬಾ ಹೊನ್ನು ಕೊಟ್ಟು ಗೌರವಿಸಿತು. ಮಾತ್ರವಲ್ಲ ಕ್ಯೂಬಾದ ಕಥೆ ಹೇಳಲು ರೇಡಿಯೋ, ಟಿವಿ, ಎಪಿ ಮುಂದೆ ಕೂರಿಸಿತು. ಕುಟುಂಬದ ಹೆಸರು ಕ್ಯಾಸ್ಟ್ರೋ ಎಂದು ಇದ್ದರಂತೂ ಅಮೇರಿಕಾಗೆ ಸುಗ್ಗಿ. ಸುದ್ದಿಯ ಮಂದಿಗೆ ಸಂಭ್ರಮ. ಅಥ್ಲೀಟುಗಳಿಂದ ಹಿಡಿದು ಅಬ್ಬೇಪಾರಿಗಳವರೆಗೆ ಮಿಯಾಮಿಗೆ ಓಡಿಬಂದವರು ಹಲವರು.

ಮಿಯಾಮಿಯಲ್ಲಿ ಈಗ ಕ್ಯೂಬಾ ವಿರುದ್ಧ ಅಪಪ್ರಚಾರ ಮಾಡಲೆಂದೇ ಟಿವಿ, ರೇಡಿಯೋ ಸ್ಟೇಷನ್‌ಗಳಿವೆ. ಕ್ಯೂಬಾದ ಪ್ರತಿಯೊಬ್ಬರಿಗೆ ಮುಟ್ಟಲೆಂದೇ ಕಡಲಿನಲ್ಲಿ ಹಡಗುಗಳನ್ನು ನಿಲ್ಲಿಸಿ ಸಂದೇಶ ಬಿತ್ತರಿಸುವ ಪಿರೇಟ್ ರೇಡಿಯೋ ಕೇಂದ್ರಗಳಿವೆ.

ಕ್ಯೂಬಾದಲ್ಲಿ ಕಬ್ಬಿನ ಸುಗ್ಗಿ ಇನ್ನೇನು ಆರಂಭವಾಯಿತು ಎನ್ನುವಾಗ ಮಿಯಾಮಿಯಿಂದ ದಿಢೀರ್ ರಾಸಾಯನಿಕ ದಾಳಿ. ಕ್ಯೂಬಾದ ಆರ್ಥಿಕತೆಯನ್ನು ಅಲ್ಲಾಡಿಸಲು ಪ್ರತಿವರ್ಷದ ದಾಳಿ. ಕ್ರಾಂತಿ ಜರುಗಿದ ವರ್ಷವೇ ಮೇಲಿಂದ ಮೇಲೆ ಮಿಯಾಮಿ ದಾಳಿ ಆರಂಭವಾದಾಗ ಫಿಡೆಲ್ ಕ್ಯಾಸ್ಟ್ರೋ 'ಇನ್ನು ತಾಳ್ಮೆಯ ಕಾಲ ಮುಗಿಯಿತು' ಎಂದರು. ಮಿಯಾಮಿಯಿಂದ ಹಾರುವ ವಿಮಾನಗಳ ವಿರುದ್ಧ ಜನರು ಬೃಹತ್ ಮೆರವಣಿಗೆ ತೆಗೆದರು. ಅಲ್ಲಿ ಫಿಡೆಲ್‌ಕ್ಯಾಸ್ಟ್ರೋ ಜನರ ಮುಂದೆ ಈ ದಾಳಿಯನ್ನು ಖಂಡಿಸುತ್ತಿರುವಾಗಲೇ ಪೈನಾರ್ ಡೆಲ್ ರಿಯೋದ ಮೇಲೆ ಮಿಯಾಮಿ ವಿಮಾನಗಳು ಬಾಂಬ್ ಎಸೆದು ಸಕ್ಕರೆ ಕೇಂದ್ರವನ್ನು ಸುಟ್ಟವು. ಕ್ಯಾಸ್ಟ್ರೋ ಕೇಳಿದರು ಅಷ್ಟು ಅಗಾಧ ಆರ್ಥಿಕ ಹಾಗೂ ಮಿಲಿಟರಿ ಸಂಪನ್ಮೂಲಗಳನ್ನು ಉಳ್ಳ, ತಮ್ಮ ದೇಶಕ್ಕೆ ನುಗ್ಗುವ ಕ್ಷಿಪಣಿಗಳನ್ನೂ ಗುರುತಿಸಬಲ್ಲ ವ್ಯವಸ್ಥೆ ಹೊಂದಿರುವ ಅಮೇರಿಕಾದಂತಹ ದೇಶಕ್ಕೆ ತನ್ನ ನೆಲದಿಂದ ಅಸಹಾಯಕ ಕ್ಯೂಬಾದ ಮೇಲೆ ಬಾಂಬ್ ಸುರಿಯಲು ಹಾರುತ್ತಿರುವ ವಿಮಾನಗಳನ್ನು ಗುರುತಿಸಲು ಸಾಧ್ಯವಿಲ್ಲ ಎಂದರೇನು?

ಅವರು ಹೆಚ್ಚು ಹೆಚ್ಚು ನಮ್ಮ ಮೇಲೆ ದಾಳಿ ಮಾಡಿದಂತೆಲ್ಲಾ ನಾವು ಇನ್ನಷ್ಟು ದೃಢವಾಗಿ ನಮ್ಮನ್ನು ರಕ್ಷಿಸಿಕೊಳ್ಳುತ್ತೇವೆ. ಕೊನೆಯ ಹನಿ ರಕ್ತವಿರುವವರೆಗೆ, ನಮ್ಮ ಪ್ರತಿಯೊಂದು ಮನೆಯೂ ಕೋಟೆಯಾಗುತ್ತದೆ. ಪ್ರತೀ ರೈತ ಕಾರ್ಮಿಕನೂ ತರಬೇತಿ ಪಡೆಯುತ್ತಾನೆ. ಈ ನೆಲದಲ್ಲಿ ಸುಟ್ಟು ಹಾಕಲು ಸನ್ನದ್ಧವಾದ ಪಡೆಯೇ ಇದೆ ಎಂಬುದು ವಿಮಾನಗಳ ಪೈಲಟ್‌ಗಳಿಗೆ ಅರಿವಾಗಲಿ ಎಂದರು. ತನ್ನ ರಕ್ಷಣೆಗಾಗಿ ಕ್ಯೂಬಾ ಸನ್ನದ್ಧವಾಯಿತು. 'ರಕ್ಷಣೆಗಾಗಿ ಏರೋಪ್ಲೇನ್‌ಗಳು' ಎಂಬ ಘೋಷಣೆ ಮನೆ ಮನೆ ತಲುಪಿತು.

ಅಂದಿನಿಂದ ಇಂದಿನವರೆಗೂ ಕ್ಯೂಬಾ ಸ್ವತಂತ್ರವಾಗಿ ನಾಲ್ಕು ದಶಕ ಕಳೆದರೂ ಮಿಯಾಮಿ ಬೆಂಬಿಡದ ಭೂತವಾಗಿಯೇ ಇದೆ. ಮಿಯಾಮಿಯಿಂದ ಹಾರುವ ವಿಮಾನಗಳಿಗೆ ಅಮೇರಿಕಾ ನಿರಂತರ ಕುಮ್ಮಕ್ಕು ನೀಡುತ್ತಲೇ ಇದೆ. ಕ್ರಾಂತಿಯ ಮೊದಲು ಮಿಯಾಮಿಯಲ್ಲಿದ್ದ ಕ್ಯಾಸ್ಟ್ರೋ ಪರವಾದ ನೂರಾರು ಬೆಂಬಲಿಗರನ್ನು ಬಂದೀಖಾನೆಗೆ ತಳ್ಳಿದ ಅಮೇರಿಕಾ ಕ್ಯೂಬಾ ಬೊಬ್ಬಿಟ್ಟರೂ ಸಹ ನಂತರದ ೧೪

ತಿಂಗಳಲ್ಲಿ ಬಂಧಿಸಿದ್ದು ಕೇವಲ ೧೨ ಮಂದಿಯನ್ನು, ಮಿಯಾಮಿಯಲ್ಲಿ ಜನರನ್ನು ಗುಡ್ಡೆ ಹಾಕಿ ತರಬೇತಿ ನೀಡಿ ವಿಮಾನ, ದೋಣಿ ಬೇಕಾದ ಎಲ್ಲವನ್ನು ನೀಡಿ ಕ್ಯೂಬಾದತ್ತ ಛೂ ಬಿಡುವುದು ಅಮೇರಿಕಾಗೆ ಇಷ್ಟವಾದ ಕೆಲಸವಾಯಿತು.

ಮಿಯಾಮಿಯಲ್ಲಿ ಈ ಕುಮ್ಮಕ್ಕಿನಿಂದಾಗಿ ಉಗ್ರಗಾಮಿ ಪಡೆಗಳು ತಯಾರಾದವು. ಆಲ್ಫಾ - ೧೬, ಬ್ರದರ್ಸ್ ಟು ದಿ ರೆಸ್ಕ್ಯೂ ಕ್ಯೂಬಾ ವಿರುದ್ಧ ಕಾಲುಕೆರೆದು ನಿಂತಿತು. ಅಮೇರಿಕಾದ ರಕ್ಷಣಾ ವಿಭಾಗದಿಂದಲೇ ಸುಲಭ ಬೆಲೆಯಲ್ಲಿ ವಿಮಾನಗಳನ್ನು ಕೊಡಲಾಯಿತು. ಸಿಐಎ ಪರವಾಗಿ ಕ್ಯೂಬಾದ ವಿರುದ್ಧ ಸತತ ದಾಳಿ ಯೋಜಿಸುತ್ತಿದ್ದ ವ್ಯಕ್ತಿಯೇ ಇದರ ನಾಯಕ. ನಾಗರಿಕ ವಿಮಾನದಂತೆ ಬಣ್ಣ ಬಳಿದುಕೊಂಡು ವಂಚಿಸುತ್ತಿದ್ದ, ಹವಾನಾದತ್ತ ವಿಮಾನ ನುಗ್ಗಿಸುತ್ತಿದ್ದೇವೆ ಎಂದು ಗಂಟಾಘೋಷವಾಗಿ ಸಾರಿ ಹಾರುತ್ತಿದ್ದ ವಿಮಾನಗಳನ್ನು ಕ್ಯೂಬಾ ಹೊಡೆದುರುಳಿಸಿತು.

ಮಿಯಾಮಿಯಲ್ಲಿ ನಡೆದ ಅವಾಂತರಗಳಿಗೆಲ್ಲಾ ಅಮೇರಿಕಾ ಒಪ್ಪಿಗೆ ಮುದ್ರೆ ಒತ್ತಿದ್ದರಿಂದ ಹಾಗೂ ವಿಶ್ವಸಂಸ್ಥೆಯಲ್ಲಿ ದೊಡ್ಡ ಗಂಟಲು ಹೊಂದಿದ್ದರಿಂದ ಕ್ಯೂಬಾವನ್ನು ಅಪರಾಧಿಯನ್ನಾಗಿ ಮಾಡಲಾಯಿತು. ಮಿಯಾಮಿಯಿಂದ ಹಾರಿದ ವಿಮಾನಗಳು ನಡೆಸುತ್ತಿರುವ ಕೃತ್ಯವನ್ನು ವಿಶ್ವಸಂಸ್ಥೆಗೆ ತಿಳಿಸಲು ಕ್ಯೂಬಾದ ವಿದೇಶ ಸಚಿವ ವಿಶ್ವಸಂಸ್ಥೆ ಸಭೆಗೆ ಹೊರಟರೆ ಅವರಿಗೆ ಅಮೇರಿಕಾ ವೀಸಾ ಸಿಕ್ಕುತ್ತಿದ್ದುದೇ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಕ್ಯೂಬಾವನ್ನು ಖಂಡಿಸಿ ನಿರ್ಣಯ ತೆಗೆದು ಕೊಂಡ ನಂತರ.

ಮಿಯಾಮಿ ಕ್ಯೂಬಾದ ಮಗ್ಗುಲಮುಳ್ಳು.





## ಉಳಿದು ಹೋದ ಮಾತು

'ಕ್ಷಮಿಸು ನಿನ್ನ ಎದೆಯ ಭಾವನೆಗಳನ್ನು ಸುಡುತ್ತಿದ್ದೇನೆ' -

ಸೇನೆಯಲ್ಲಿ ಕೆಲಸ ಮಾಡ ಬೇಕು ಎಂಬ ಕನಸು ಕಂಡ ಹುಡುಗಿ ತನ್ನ ಧೈರ್ಯ ತೋರಿ ಸೇನೆಯೊಳಗೆ ಸೇರಿದಳು. ಆ ಹುಡುಗಿಗೆ ಕವನ ಬರೆಯುವ ಹುಚ್ಚು. ಬಂದೂಕು ಪಕ್ಕಕ್ಕಿಟ್ಟಾಗಲೆಲ್ಲಾ ಸಿಕ್ಕ ಸಿಕ್ಕ ಹಾಳೆಯ ಮೇಲೆ ಪೆನ್ಸಿಲ್ ಕಡ್ಡಿಯಿಂದ ತನ್ನೊಳಗೆ ಉಕ್ಕುತ್ತಿದ್ದ ಭಾವನೆಗಳಿಗೆಲ್ಲಾ ಮಾತು ಕೊಡುತ್ತಿದ್ದಳು. ಆಗ ಸೆರೆಸಿಕ್ಕವನು ಎರಗಿ ಬಂದ ನೆರೆಯ ದೇಶದ ಶತ್ರು ಸ್ಫುರದ್ರೂಪಿ ತರುಣ. ಆಕೆ ಹಿಡಿದ ಬಂದೂಕಿನ ಎದುರಿಗೆ ಚಳಿ ತಡೆಯಲಾಗದೆ ಗಡ ಗಡ ನಡುಗುತ್ತಿದ್ದ ತರುಣ ಇನ್ನೇನು ಸತ್ತೇ ಹೋಗುತ್ತಾನೆ ಎನಿಸಿತು. ಬೆಂಕಿ ಹಚ್ಚಲು ಒಂದಿಷ್ಟು ತರಗೆಲೆಗಳೂ ಇಲ್ಲ. ಕಡ್ಡಿಯೂ ಇಲ್ಲ. ಆಗ ನೆನಪಾಯಿತು. ತನ್ನ ಬಳಿ ಇರುವ ಕವನಗಳ ಹಾಳೆಗಳು. ಅದನ್ನು ಹೊರ ತೆಗೆದವಳೇ ಬೆಂಕಿ ಇಟ್ಟಳು. ನಡುಗುತ್ತಿದ್ದ ತರುಣ ಬೆಂಕಿಯ ಮುಂದೆ ನಿಂತು ಹೇಳಿದ

'ಕ್ಷಮಿಸು, ನಿನ್ನ ಎದೆಯ ಭಾವನೆಗಳನ್ನು ಸುಡುತ್ತಿದ್ದೇನೆ' ರಷ್ಯನ್ ಭಾಷೆಯ 'ನಲ್ವತ್ತೊಂದನೆಯವ' ಕಥೆ ಇದು. ಕವಿತೆಗೆ ಮನಸ್ಸು ಕೊಟ್ಟಿದ್ದ ದಿನಗಳಲ್ಲಿ ಓದಿದ ಈ ಕಥೆ ತಲೆಯೊಳಗೆ ನಾಟಿತ್ತು.

ಇದು ಮತ್ತೆ ನೆನಪಾದದ್ದು ಹವಾನದಾ ಪ್ಲಾಯಾದಲ್ಲಿ ನಾವಿದ್ದ ೯ನೇ ಬೀದಿಯ ಅಂಗಡಿಯ ಮುಂದೆ ನಿಂತಾಗ, ಯಾವುದಾದರೂ ಪತ್ರಿಕೆ ಓದಿಯೇ ಬೆಳಗು ಬರಮಾಡಿಕೊಳ್ಳುವ ನನಗೆ ಮನೆಯಲ್ಲಿ ಕೇಳಿದಾಗ ಪತ್ರಿಕೆ ಸಿಕ್ಕಿರಲಿಲ್ಲ. ಪತ್ರಿಕೆ ಹಾಕುವವರಿಲ್ಲವಾ ಕೇಳಿದೆ. ಪತ್ರಿಕೆ ಪ್ರಕಟವಾಗುವುದಿಲ್ಲವಾ ಕೇಳಿದೆ, ನೀವು ತರಿಸುವುದಿಲ್ಲವಾ. ಉತ್ತರ ಪಡೆಯಲು ಇಂಗ್ಲಿಷ್ ಬಿಡಲಿಲ್ಲ. ಇತಂಹ ಸಮಯದೆಲ್ಲೆಲ್ಲಾ ನನಗೆ ತೋರುತ್ತಿದ್ದ ದಾರಿ ಒಂದೇ. ನಾನು ಕೇಳುತ್ತಿರುವುದನ್ನು ಹುಡುಕುತ್ತಾ ಹೊರಡುವುದು. ಹಾಗೆ ಹುಡುಕುತ್ತಾ ಬೀದಿಯ ಕೊನೆಗೆ ಬಂದಾಗ ಸಿಕ್ಕಿದ್ದು ಗೂಡಂಗಡಿ. ಅಲ್ಲಿ ತೂಗುತ್ತಿತ್ತು ಪತ್ರಿಕೆ. ಭಾಷೆ ಸ್ಪಾನಿಯೋಲ್. ಯಾವುದಾದರಾಗಲೀ ಸುಮ್ಮನೇ ಕಣ್ಣಾಡಿಸುವ ಎಂದು ಕೈಗೆತ್ತಿಕೊಂಡಾಗ ಟ್ಯಾಬ್ಲಾಯ್ಡ್ ಆಕಾರದಲ್ಲಿ ಎಂಟು ಪುಟ ಮಾತ್ರ. ಹೆಸರು ನೋಡಿದೆ - ಗ್ರಾನ್ಮಾ.

ಯಾವ ಪುಟಾಣಿ ನೌಕೆಯಲ್ಲಿ ಕ್ಯೂಬಾವನ್ನು ವಿಮೋಚನೆಗೊಳಿಸಲು ೮೨ ಮಂದಿ ಕ್ರಾಂತಿಕಾರರು ಕುಳಿತು ಮೆಕ್ಸಿಕೋದಿಂದ ಬಂದರೋ ಆ ನೌಕೆಯ ಹೆಸರು ಹೊತ್ತ 'ಗ್ರಾನ್ಮಾ' ಪತ್ರಿಕೆ. ಗ್ರಾನ್ಮಾ ರಾಷ್ಟ್ರೀಯ ಪತ್ರಿಕೆ. ಹಲವಾರು ಪುಟಗಳಿಂದ ಜಗತ್ತಿನ ಆಳ ಅಗಲವನ್ನು ಒಂದು ಕಾಲಕ್ಕೆ ಅಳೆಯುತ್ತಿದ್ದ ಗ್ರಾನ್ಮಾ ಈಗ ರೆಕ್ಕೆ ಮುದುಡಿದ ಗುಬ್ಬಚ್ಚಿಯಂತಾಗಿ ಹೋಗಿತ್ತು. ಅಂಗಡಿಯಲ್ಲಿದ್ದದ್ದೂ ಬೆರಳೆಣಿಕೆಯ ಪ್ರತಿ. ಮನೆಗಳಿಗೆ ಕೊಳ್ಳುವವರೂ ಕಡಿಮೆ. ಕಾಲು ಡಾಲರ್ ಕ್ಯೂಬಾಕ್ಕೆ ಸುಲಭದ ಮೊತ್ತವೇನಲ್ಲ. ಗ್ರಾನ್ಮಾ ಸೊರಗಿದ್ದು ಏಕೆ ಎಂದು ಹತ್ತು ಹಲವರಲ್ಲಿ ಕೇಳಿದೆ. ಆರ್ಥಿಕ ದಿಗ್ಬಂಧನ. ನ್ಯೂಸ್‌ಪ್ರಿಂಟ್ ದುಬಾರಿಯಾಗಿದೆ ಎಂದರು. 'ನಲ್ವತ್ತೊಂದನೆಯವ'ನೆನಪಾಯಿತು. ಪುಟ್ಟ ಕ್ಯೂಬಾ ಆರ್ಥಿಕ ದಿಗ್ಬಂಧನದಿಂದಾಗಿ ತನ್ನ ಎದೆಯಾಳದ ಭಾವನೆಗಳನ್ನು ಸುಡಬೇಕಾಗಿ ಬಂದಿತ್ತು.

ಇದು ಪ್ರತೀ ಹೆಜ್ಜೆಗೂ ಅರಿವಿಗೆ ಬಂದಿತು. ಕ್ಯೂಬಾ ಹಾಡು, ಕುಣಿತ, ಕಾವ್ಯವನ್ನು ಹುಚ್ಚರಂತೆ ಪ್ರೀತಿಸುವವರ ದೇಶ. ಪ್ರತಿಯೊಬ್ಬರೂ ಸಾಕ್ಷರರು ಮಾತ್ರವಲ್ಲ ಜ್ಞಾನ ಪಿಪಾಸುಗಳು. ಹಾಗಾಗಿ ಇನ್ನಷ್ಟು ಮತ್ತಷ್ಟು ಓದಲು ಬಂಡಿಗಟ್ಟಲೆ ಪುಸ್ತಕಗಳು ಬೇಕು. ಆದರೆ ಕ್ಯೂಬಾ ನೊಂದು ಹೋಗಿತ್ತು.

'ಕ್ಯೂಬಾ ಸಕ್ಕರೆಯನ್ನು ಅಂತೆಯೇ ಗಿಟಾರ್ ತಂತಿಗಳನ್ನೂ ನೀಡಿತು. ಜೋಗುಳವನ್ನೂ, ಪ್ರೇಮ ಸಂಗೀತವನ್ನು, ಹೋರಾಟದ ಹಾಡುಗಳನ್ನು ನೀಡಿತು. ಕ್ಯೂಬಾ ಔಷಧಿಯನ್ನು ಅಂತೆಯೇ ಪುಟ ಪುಟಗಳಲ್ಲಿ ಕಾವ್ಯ ಪ್ರತಿಮೆಯನ್ನು ನೀಡಿತು' 'ಕ್ಯೂಬಾದ ಕವನ ಸಂಕಲನಗಳಲ್ಲಿ ನಾನು ಪ್ರತಿಮೆಗಳ ದೋಣಿಯಲ್ಲಿ ತೇಲಿ ಹೋದೆ. ಕಥೆಗಳ ನದಿಗಳಲ್ಲಿ ಮುಳುಗಿ ಎದ್ದೆ' ಎಂದು ನಿಕರಾಗುವಾದ ಸ್ಯಾಂಡಿನಿಸ್ಟಾ ನ್ಯಾಷನಲ್ ಲಿಬರೇಶನ್ ಫ್ರಂಟ್‌ನ ಸ್ಥಾಪಕ ಟಾಮಸ್ ಬೋರ್ಜ್ ಬಣ್ಣಿಸಿದ್ದರು.

ಕ್ಯೂಬಾದ ಸಕ್ಕರೆ ಅಂತೆಯೇ ಪುಸ್ತಕ, ಹಾಡು, ಕುಣಿತ ಎಲ್ಲದರ ಮೇಲೆ ದಿಗ್ಬಂದನದ ತೂಗು ಕತ್ತಿ ತೂಗಾಡುತ್ತಿತ್ತು. ಕಾಗದದ ಅಭಾವದಿಂದಾಗಿ ಪುಸ್ತಕಗಳು, ಪತ್ರಿಕೆಗಳು ಮುದ್ರಣಗೊಳ್ಳುವುದೇ ದುಸ್ತರವಾಗಿತ್ತು.

ಕ್ಯೂಬಾ ಪುಸ್ತಕ ಪ್ರಿಯ ದೇಶ. ಹೀಗಾಗಿಯೇ ಕ್ಯೂಬಾ ಸರ್ಕಾರ ಅತ್ಯಂತ ಕಡಿಮೆ ಬೆಲೆಯಲ್ಲಿ ಪುಸ್ತಕಗಳು ಜನರ ಕೈಗೆಟುಕುವಂತೆ ನೋಡಿಕೊಂಡಿತ್ತು. ಒಂದು ಪೇಸೋ ನೀಡಿದರೆ ಒಂದು ಮಹತ್ಕೃತಿ ಕ್ಯೂಬನ್ನರಿಗೆ



ಸಿಗುತ್ತಿತ್ತು. ಸರ್ವಾಂಟಿಸ್‌ನ 'ಡಾನ್ ಕ್ವಿಕ್ಸೋಟ್'ಕ್ಯೂಬನ್ನರ ಅತ್ಯಂತ ಪ್ರೀತಿಯ ಪುಸ್ತಕ. ಇದು ಹಾಗೂ ವಿಶ್ವದ ಮಹತ್ವದ ಕೃತಿಗಳು ಸಬ್ಸಿಡಿ ಪಡೆದು ಸುಲಭ ಬೆಲೆಗೆ ಮಾರಾಟವಾಗುತ್ತಿದ್ದವು. ಪ್ರತೀ ವರ್ಷ ಪುಸ್ತಕದ ಜಾತ್ರೆ ಜರುಗಲೇ ಬೇಕು.

ಕ್ಯೂಬಾದಲ್ಲಿ ರಸ್ತೆ ಬದಿ ಅಂಗಡಿ ಎಂದರೆ ಅದು ಪುಸ್ತಕಗಳದ್ದೇ ಎಂದು ಕಣ್ಣು ಮುಚ್ಚಿ ಹೇಳಬಹುದು. ಪುಸ್ತಕಗಳ ಜೊತೆಗೆ ಮನೆಗೆ ಹೋಗಲು ತಯಾರಾಗಿ ನಿಂತ ಕಲಾಕೃತಿಗಳು. ಹವಾನಾದ ಚರ್ಚ್ ಮುಂದಿರಲಿ, ಬೀಚ್‌ನ ಪಕ್ಕವಿರಲಿ, ಕ್ಯಾಸಿನೋನಗಳ ಬಳಿಯಾಗಲಿ ಪುಸ್ತಕಗಳ ರಾಶಿ ಇದ್ದ ಕಾಲವೊಂದಿತ್ತು.ಅಮೇರಿಕಾ ತಲಾ ಜನಸಂಖ್ಯೆಗೆ ಹೋಲಿಸಿದರೆ ಎಷ್ಟು ಪುಸ್ತಕವನ್ನು ಪ್ರಕಟಿಸುತ್ತಿತ್ತೋ ಅಷ್ಟೇ ಪುಸ್ತಕವನ್ನು ಕ್ಯೂಬಾ ಸಹಾ ಪ್ರಕಟಿಸುತ್ತಿತ್ತು. ಮೂರನೇ ಜಗತ್ತಿನ ದೇಶಗಳಲ್ಲಂತೂ ಕ್ಯೂಬಾ ಸದಾ ಮೊದಲ ಸ್ಥಾನದಲ್ಲಿರುತ್ತಿತ್ತು.ಕ್ಯೂಬಾದ ಮೇಲೆ ವಿಧಿಸಿರುವ ದಿಗ್ಬಂಧನ ಶಿಕ್ಷಣ, ವಿಜ್ಞಾನ ಮಾತ್ರವಲ್ಲ ಸಂಸ್ಕೃತಿ, ಸಂವಹನದ ಮೇಲೆಯೂ ದಾಳಿ ನಡೆಸಿದೆ ಎಂದು ಯುನೆಸ್ಕೋ ಎತ್ತಿ ತೋರಿಸಿತ್ತು.ಯಾವುದೇ ಪುಸ್ತಕದ ೨೦ ಸಾವಿರ ಪ್ರತಿಗಳನ್ನು ಮುದ್ರಿಸುತ್ತಿದ್ದ ಪ್ರಕಾಶಕರು ಈ ಹೊಡೆತದಿಂದಾಗಿ ೨ ಸಾವಿರ ಪ್ರತಿಗಳಿಗೆ ಇಳಿದರು.

ಕ್ಯೂಬಾದ ಸಾಹಿತ್ಯವನ್ನು ಸಹಾ ಅಮೇರಿಕಾ ನಿಷೇಧಿಸಿದೆ. ಅಂತೆಯೇ ಅಮೇರಿಕಾದ ಯಾವುದೇ ಮುದ್ರಿತ ಕೃತಿ ಕ್ಯೂಬಾಗೆ ಬರುವಂತಿಲ್ಲ. ಇದರೊಂದಿಗೇ ಅಮೇರಿಕಾದಲ್ಲಿ ನಡೆಯುವ ಸಾಹಿತ್ಯ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ, ಉತ್ಸವಗಳಲ್ಲಿ ಭಾಗವಹಿಸಲು ಸಹಾ ವೀಸಾ ನಿರಾಕರಿಸಲಾಗುತ್ತಿದೆ. ಆಸ್ಕರ್ ಬಹುಮಾನ ಸಮಾರಂಭದಲ್ಲಿ ಕ್ಯೂಬಾ ಬ್ಯಾಲೆ ಪ್ರದರ್ಶಿಸಲು  ಆಹ್ವಾನ ಬಂದರೂ ಸಹಾ ಕಲಾವಿದರಿಗೆ ವೀಸಾ ನಿರಾಕರಿಸಲಾಯಿತು. ಕ್ಯೂಬಾದ ಜಾನಪದ ಕಲಾವಿದರಿಗೆ ಅಮೇರಿಕಾದಲ್ಲಿ ವ್ಯಾಪಕ ಬೇಡಿಕೆ ಇದ್ದರೂ ಸಹಾ ವೀಸಾ ಅಡ್ಡಗೋಡೆಯಾಗಿದೆ. ಈ ಧೋರಣೆಯ ವಿರುದ್ಧ ಸಂಗೀತ ತಂಡ 'ಮೆಜ್ಲಾ' ನ್ಯಾಯಾಲಯದ ಕಟ್ಟೆ ಹತ್ತಿದೆ.

ಅಮೇರಿಕಾದ ಸಾಹಿತಿಗಳು, ಕಲಾವಿದರು, ಕ್ಯೂಬಾಗೆ ಹೋಗಬಾರದು, ಇರಬಾರದು, ಎಂದು ನಿಷೇಧವನ್ನು ಹೇರಿದ್ದರೂ ಸಹಾ ಜೇನ್ ಫಾಂಡಾರಂತಹ ಹಲವು ಕಲಾವಿದರು ಅಮೇರಿಕಾದ ಕಾನೂನು ಬದಿಗೆ ತಳ್ಳಿ ಕ್ಯೂಬಾಗೆ ಬಂದಿದ್ದಾರೆ. ಹೆಮ್ಮಿಂಗ್ವೇಯವರಂತೂ ಕ್ಯೂಬಾದಲ್ಲಿಯೆ ಮನೆ ಮಾಡಿ ಕ್ಯೂಬನ್ನರಾಗಿ ಹೋಗಿದ್ದಾರೆ. ಮಾತ್ರವಲ್ಲ ಹೆಮ್ಮಿಂಗ್ವೇ ಬಾಯಿಂದ ಕ್ಯೂಬಾ ಸರ್ಕಾರದ ವಿರುದ್ಧ ಮಾತನಾಡಿಸಲು ಹೋದ ಪತ್ರಕರ್ತರು 'ಕ್ಯೂಬಾ ಹಾಗೂ ಅಲ್ಲಿನ ಕ್ರಾಂತಿಯ ಪರವಾಗಿ ನಾನಿದ್ದೇನೆ' ಎಂಬ ಉತ್ತರ ಪಡೆದರು.



## ಸೂರ್ಯನ್ನ ಮರೆಮಾಡಿ ಬೆಳಕನ್ನು ಕದ್ದವರು...

ಅಮೇರಿಕಾ ನೀನು ದೋಷಿ - ಎಂದು ಜಗತ್ತಿನ ಯುವಜನರೆಲ್ಲ ಸೇರಿ ಒಕ್ಕೊರಲಿನಿಂದ ಸಾರಿದ್ದು ಉಹುಂ, ಎಲ್ಲಿಯೂ ಸುದ್ದಿಯಾಗಲಿಲ್ಲ. ೧೩೦ ದೇಶಗಳ ೨ ಸಾವಿರ ಸಂಘಟನೆಗಳು ಅಲ್ಲಿನ ಕೋಟ್ಯಂತರ ಯುವಜನ ವಿದ್ಯಾರ್ಥಿಗಳನ್ನು ಪ್ರತಿನಿಧಿಸಿದ್ದವು. ಬಹುಶಃ ಅರ್ಧ ಗ್ಲೋಬೇ ನೀಡಿದ ಹೇಳಿಕೆ ಇದು. ಆದರೆ ಇದು ಸುದ್ದಿಯಾಗಲೇ ಇಲ್ಲ.

ಅಮೇರಿಕಾದ ಚಮತ್ಕಾರವೇ ಇದು. ಐ ಆ್ಯಮ್ ಓಕೆ - ಯು ಆರ್ ಓಕೆ. ಅಮೇರಿಕಾಗೆ ಬೇಕಾದ್ದು ಪ್ರತೀ ಊರು ಕೇರಿಯಲ್ಲಿ ಸುದ್ದಿಯಾಗುತ್ತದೆ. ಬೇಡವಾದದ್ದಾರೆ ಸುದ್ದಿ ಅಲ್ಲಿಯೇ ಹುಟ್ಟಿ ಮುಚ್ಚಿ ಹೋಗುತ್ತದೆ. ಜಾರ್ಜ್ ಬುಷ್ -ಬಿಲ್ ಕ್ಲಿಂಟನ್ನರ ನಡುವೆ ಅಧ್ಯಕ್ಷ ಸ್ಥಾನಕ್ಕೆ ಇರುವ ಸ್ಪರ್ಧೆಯಲ್ಲಿ ನಾವೆಲ್ಲರೂ ಮತದಾರರೇನೋ ಎಂಬಂತೆ ನಮ್ಮನ್ನು ಸಜ್ಜು ಮಾಡುವ ಅಮೇರಿಕಾ ಅದೇ ಸಮಯದಲ್ಲಿ 'ಉನ್ ಫೆಸ್ಟಿವಲ್'ನ ಸುದ್ದಿಯ ಕತ್ತು ಹಿಸುಕುತ್ತದೆ.

ಈಗ ಆಗಿದ್ದೂ ಅದೇ. ಅಷ್ಟು ದಿನಗಳ ಪತ್ರಿಕೆಗಳನ್ನೆಲ್ಲಾ ಗುಡ್ಡೆ ಹಾಕಿಕೊಂಡು ಕೂತಿದ್ದೆ. ಅಷ್ಟು ದಿನಗಳ ಕಾಲ ಪಡೆದ ಹೊಸ ಅನುಭವವನ್ನು, ಸಂಭ್ರಮವನ್ನು ಪತ್ರಿಕೆಯಲ್ಲಿ ಹುಡುಕುತ್ತಿದ್ದ ನನಗೆ ಕಟ್ಟಿಟ್ಟದ್ದು ನಿರಾಸೆಯ ಬುತ್ತಿ. ೧೩೦ ದೇಶಗಳ ಒಂಬತ್ತು ದಿನದ ಸಮಾವೇಶ ಪತ್ರಿಕೆಗಳ ಕಾಲಂಗಳಿಗೆ ಹೂರಣವಾಗಿಯೇ ಇರಲಿಲ್ಲ. ಅಮೇರಿಕಾ ನೀನು ದೋಷಿ ಎಂದು ಸಾರಿದ್ದ ಉತ್ಸವದ ಬಗ್ಗೆ ದಿವ್ಯ ಮೌನ. ಇನ್ನೂ ಸರಿಯಾಗಿ ಹೇಳಬೇಕೆಂದರೆ ಕ್ಯಾಸ್ಟ್ರೋ ಬಣ್ಣಿಸಿದಂತೆ ಅದು 'ಮೌನ ಪಿತೂರಿ'.

ಈ ಮೌನದ ಬಗ್ಗೆ ನನ್ನ ಪತ್ರಿಕೋದ್ಯಮದ ತರಗತಿಗಳಲ್ಲಿ ಯಾರೂ ಏನೂ ಹೇಳಿಕೊಟ್ಟಿರಲಿಲ್ಲ.



ನ್ಯೂಯಾರ್ಕ್ ಟೈಮ್ಸ್, ವಾಷಿಂಗ್ಟನ್ ಪೋಸ್ಟ್‌ಗೆಂದೇ ನಮ್ಮನ್ನು ಸಜ್ಜು ಮಾಡಿದ್ದ ಅಧ್ಯಾಪಕರಿಗೆ ನಮ್ಮ ಸ್ಟ್ರೈಕ್, ಮಾಸ್ ಬಂಕಿಂಗ್ ಮಧ್ಯೆ ಸಮಯ ಉಳಿದಿರಲಿಲ್ಲವೇನೋ? ಅಂತೂ ಮಾತನಾಡುವ ಮಾಧ್ಯಮಗಳು ಸುಮ್ಮನೆಯೂ ಇರುತ್ತದೆ ಎಂಬುದನ್ನು ಹೇಳಿಕೊಡಲು ಮರೆತುಬಿಟ್ಟಿದ್ದರು. ಅಥವಾ ಅಮೇರಿಕಾದ ಕಪಾಟುಗಳಿಂದ ತಂದಿದ್ದ ಪುಸ್ತಕಗಳು ಅವರಿಗೆ ಅದನ್ನು ಹೇಳಿರಲಿಲ್ಲವೇನೋ. ಅಂತೂ ನೆಲದಲ್ಲಿ ಬೇರಿಲ್ಲದೆ ಆಕಾಶದಲ್ಲಿ ಹಾರಿ ಪತ್ರಿಕೋದ್ಯಮದ ಕೊಠಡಿಯಿಂದ ಹೊರಬಂದಿದ್ದ ನನಗೆ ಈ 'ಮಹಾಮೌನ'ದ ಪಾಠ ಈಗ ನಡೆಯುತ್ತಿತ್ತು.

'ಕ್ಯೂಬಾ, ಕ್ಯಾಸ್ಟ್ರೋ, ಚೆಗೆವಾರ' - ಅಮೇರಿಕಾಗೆ ಗೊತ್ತು ಅವು ಕೇವಲ ಹೆಸರಲ್ಲ, ರಾಜಕೀಯ ಸಂದೇಶ. ಹೋರಾಡು ಕೊನೆಯವರೆಗೆ, ಎಲ್ಲಿಯೂ ನಿಲ್ಲದಿರು, ಹೊಟ್ಟೆ ಬಿಗಿಮಾಡಿ ಹಲ್ಲು ಕಚ್ಚಿ ಕೊನೆಯ ಹನಿ ಇರುವವರೆಗೆ ಹೋರಾಡು ಎಂಬ ಸಂದೇಶ. ಬ್ರಿಟನ್ನಿನ ಜೈಲಿನಲ್ಲಿ ಚೆಗೆವಾರನ ಟಿ ಶರ್ಟ್ ಬೇಕೆಂದರೆ ಜೈಲು ಅಧಿಕಾರಿಗಳು ಅದು ರಾಜಕೀಯ ಸಂದೇಶ ಎಂದು ಬಿಲ್‌ಕುಲ್ ನಿರಾಕರಿಸಿರಲಿಲ್ಲವೇ. ಕೈದಿ ಮತ್ತು ಚೆ ಮಧ್ಯೆ ಹುಬ್ಬುಗಂಟುಗಳು ಕೆಲಸ ಮಾಡಿರಲಿಲ್ಲವೇ?

ಪತ್ರಿಕೆಗಳ ಮೂಲೆ ಮೂಲೆಯನ್ನು ಹುಡುಕುತ್ತಾ ಗಂಟೆಗಟ್ಟಲೆ ಕಳೆದಿದ್ದ ನಾನು ಯುರೇಕಾ ಎಂದು ಕೂಗಿದೆ. ಪತ್ರಿಕೆಯಲ್ಲಿ ಉತ್ಸವದ ಸುದ್ದಿ. ಉತ್ಸಾಹ ಇದ್ದದ್ದು ಒಂದೇ ಕ್ಷಣ. ಮರಳುಗಾಡಿನಲ್ಲಿ ಕಂಡ ಆ ಓಯಸಿಸ್ ತಲೆಬರಹದಲ್ಲಿಯೇ ಸಾರಿ ಹೇಳಿತ್ತು - ಕಮರ್ಷಿಯಲೈಸೇಶನ್ ಆಫ್ ಚೆ. ಚೆಯ ವಾಣಿಜ್ಯೀಕರಣ. ಕ್ಯೂಬಾದಲ್ಲಿ ಹುಚ್ಚು ಹೊಳೆಯಾಗಿ ಹರಿದ 'ಚೆ' ಬಗೆಗಿನ ಪ್ರೀತಿ ಪತ್ರಿಕೆಗೆ ಕಂಡದ್ದು ಹೀಗೆ. ಟಿ -ಶರ್ಟ್,ಟೋಪಿ, ಕರವಸ್ತ್ರ, ಬಾವುಟ, ನಕಾಶೆ, ಪುಸ್ತಕ, ಕೈಚೀಲ, ಹಚ್ಚೆ ಎಲ್ಲೆಲ್ಲೂ 'ಚೆ' ಹೆಮ್ಮೆಯ ಸಂಕೇತವಾಗಿದ್ದರೆ ಕಾಮಾಲೆ ಕಣ್ಣಿಗೆ ಅದು 'ಚೆ'ಯ ಹರಾಜು.

ಕ್ಯೂಬಾ ಎಂಬ ಮಹಾ ಹೋರಾಟ ಜನರಿಗೆ ಸಿಕ್ಕದೇ ಹೋದದ್ದೇ ಈ ಮಾಧ್ಯಮಗಳಿಂದಾಗಿ. ಕ್ಯೂಬಾದ ಜನರು ಇಂದು ಹೊಟ್ಟೆ ಬಟ್ಟೆ ಕಟ್ಟಿ ಬದುಕು ನಡೆಸಿರುವುದರಲ್ಲಿ ಅಮೇರಿಕಾದ ಸರ್ಕಾರದ ಕೈಗೆ ಎಷ್ಟು ಕೆಂಪು ಕಲೆ ಮೆತ್ತಿದೆಯೋ ಅಷ್ಟೇ ಕೆಂಪು ಕಲೆ ಅಲ್ಲಿನ ಮಾಧ್ಯಮಗಳಿಗೂ ಮೆತ್ತಿಕೊಂಡಿದೆ. 'ನನ್ನ ೩೦ ವರ್ಷಗಳ ಪತ್ರಿಕಾ ಬದುಕಿನಲ್ಲಿ ಕ್ಯೂಬಾ ಕ್ರಾಂತಿಯಂತಹ ದೊಡ್ಡ ಸುದ್ದಿಯನ್ನು ಇಷ್ಟು ತಪ್ಪಾಗಿ ಅರ್ಥಮಾಡಿಕೊಂಡ, ಇಷ್ಟು ತಪ್ಪಾಗಿ ವ್ಯಾಖ್ಯಾನಿಸಿದ, ಇಷ್ಟು ತಪ್ಪಾಗಿ ನಿರ್ವಹಿಸಿದ ಮತ್ತೊಂದು ಉದಾಹರಣೆಯನ್ನು ನೋಡಲಿಲ್ಲ' ಎಂದು ಅಮೇರಿಕಾದ ಸಂಪಾದಕರ ಸಂಘದಲ್ಲಿ 'ನ್ಯೂಯಾರ್ಕ್ ಟೈಮ್ಸ್' ಸಂಪಾದಕರಾಗಿದ್ದ ಹರ್ಬರ್ಟ್ ಮ್ಯಾಥ್ಯೂಸ್ ಹೇಳಿದ್ದರು.

ಅಂತೂ ಕ್ಯೂಬಾದ ಹೋರಾಟ, ಕ್ರಾಂತಿ, ಕನಸು, ಆಶಯ ಎಲ್ಲವೂ ಜನರ ಕೈಯಿಂದ ತಪ್ಪಿ ಹೋಗಿದ್ದವು. ಸ್ಪೇನ್‌ನ ವಿರುದ್ಧ ಒಂದು ಶತಮಾನ, ನಂತರ ಅಮೇರಿಕಾದ ತೆರೆಯ ಹಿಂದಿನ ರಾಜಕೀಯದ ವಿರುದ್ಧ ಅರ್ಧ ಶತಮಾನ ಹೋರಾಟ ನಡೆಸಿದ್ದ, ಕ್ಯೂಬಾದ ಕನಸುಗಳು ಏನು ಎಂದು ಅರ್ಥವಾಗುವ ಮೊದಲೇ ಸುದ್ದಿ ಪ್ರಹಾರ ಆರಂಭವಾಗಿ ಬಿಟ್ಟಿತ್ತು. ಭ್ರೂಣ ಹತ್ಯೆ ಸಾಧ್ಯವಾಗದಿದ್ದಾಗ ತೊಟ್ಟಿಲಿನಲ್ಲಿಯೇ ದತ್ತೂರಿ ಬೀಜಗಳನ್ನು ಗಂಟಲಿಗೆ ಇಳಿಬಿಡಲಾಯಿತು.

ಅಮೇರಿಕಾ ಹಾಗೂ ಜಗತ್ತಿನ ನಡುವೆ ಪೇಪರ್ ಗೋಡೆಯಿದೆ ಎನ್ನುತ್ತಾರೆ. ಅಮೇರಿಕಾ ಹಾಗೂ ಕ್ಯೂಬಾದ ನಡುವೆಯಂತೂ ಇದು ಮಹಾನ್ ಗೋಡೆ. ಕ್ಯಾಸ್ಟ್ರೋ ಅವರನ್ನು ಗೌರವದಿಂದ ಕಂಡರೆ ದೇಶದ ಹಿತಾಸಕ್ತಿಯನ್ನು ಕಾಯ್ದಂತಾಗುತ್ತದೆ ಎಂಬುದು ಅಮೇರಿಕಾದ ಪತ್ರಿಕೆಗಳಿಗೆ ಅರ್ಥವಾಗಿಲ್ಲ. ಅಮೇರಿಕಾದ ತೀರ್ಪು ಫಿಡೆಲ್ ಅವರಿಗೆ ವಿರುದ್ಧವಾಗಿಯೇ ಇತ್ತು ಎಂಬುದು 'ಲಂಡನ್ ಅಬ್ಸರ್ವರ್'ನ ಸಿರಿಲ್ ಡನ್ ಅವರ ಅಭಿಮತ.

ಜಗತ್ತಿನ ವಿದ್ಯಮಾನಗಳನ್ನು ತಿಳಿಯಲು ಮುಖ್ಯವಾಹಿನಿಯಾಗಿದ್ದ ಮಾಧ್ಯಮಗಳು ಅಮೇರಿಕಾದಲ್ಲಿ ಕ್ಯೂಬಾ ವಿಷಯದಲ್ಲಂತೂ ಸಾಕಷ್ಟು ದಾರಿ ತಪ್ಪಿಸಿದವು. ಕ್ಯೂಬಾದ ಹೋರಾಟದ ಚೆಂಡು ಈ ಪೇಪರ್ ಗೋಡೆಗೆ ತಾಕಿ ಮತ್ತೆ ಮತ್ತೆ ವಾಪಸ್ ಬಂತು. ಕ್ಯೂಬಾದಲ್ಲಿ ಬೃಹತ್ ಹೋರಾಟ ನಡೆಯುತ್ತಿದೆ. ಐದು ದಶಕಗಳ ಈ ಧೀರ ಹೋರಾಟದಿಂದ ಕ್ರಾಂತಿಯೊಂದು ಜರುಗಲಿದೆ ಎಂಬುದೇ ಅಮೇರಿಕನ್ನರಿಗೆ ಗೊತ್ತಿರಲಿಲ್ಲ. ಕ್ಯೂಬಾ ಕ್ರಾಂತಿಯ ಮೊದಲ ಎರಡು ವರ್ಷಗಳ ಕಾಲ ಅಮೇರಿಕಾ ಮಾಧ್ಯಮಗಳ ಅಧ್ಯಯನ ನಡೆಸಿದ ರಾಬರ್ಟ್ ಸ್ಕೀರ್ ಹಾಗೂ ಮೌರಿಸ್ ಜೀಟ್ಲಿನ್ ಇದನ್ನು ಹೊರಗೆಡಹಿದರು. ಕ್ಯೂಬಾದಲ್ಲಿ ದಿನಕ್ಕೊಂದರಂತೆ ಮೂಡಿದ ಸ್ವಾತಂತ್ರ್ಯದ ಬೆಳ್ಳಿ ಕಿರಣಗಳು ಅಮೇರಿಕಾಗೆ ಗೊತ್ತಾಗಲಿಲ್ಲ. 'ಬ್ಯಾಟಿಸ್ಟಾನ ಆಡಳಿತದಲ್ಲಿ ಎಲ್ಲರೂ ಸುಖವಾಗಿದ್ದಾರೆ ಪ್ರಭು... ' ಎಂಬ ವರ್ತಮಾನ ಮಾತ್ರ ಪತ್ರಿಕೆಗಳ ಮೂಲಕ ಗೊತ್ತಾಯಿತು. ಹೀಗಾಗಿ ಕ್ಯೂಬಾ ಕ್ರಾಂತಿ ಅಮೇರಿಕನ್ನರಿಗೆ ದಿಢೀರ್ ಹುಚ್ಚಾಟ. ಕ್ಷಣಿಕದ ಯಶಸ್ಸು. ಕ್ಯೂಬಾ ಎಂದರೆ ಹವಾನಾ ಎಂದು ತಿಳಿದಿದ್ದ ಪತ್ರಕರ್ತರು ಕ್ಯೂಬಾದ ಮೂಲೆ ಮೂಲೆಗೆ ಹೋಗುವ ಸಾಹಸವನ್ನೇ ಮಾಡಲಿಲ್ಲ. ರೈತರ ಸಂದರ್ಶನ, ಗ್ರಾಮೀಣ ಸಹಕಾರಿಗಳ ಸಂದರ್ಶನ, ಶಾಲೆ, ಆಸ್ಪತ್ರೆಗಳಲ್ಲಿ ಮೂಡುತ್ತಿದ್ದ ಬೆಳಕು ಹವಾನಾದ ಆರಾಮ ಖುರ್ಚಿಯಲ್ಲಿ ಸುದ್ದಿ ಬರೆಯುತ್ತಿದ್ದವರಿಗೆ ಗೊತ್ತಾಗಲೇ ಇಲ್ಲ. ಹೀಗಾಗಿ ಅಮೇರಿಕಾಗೂ.

ಅಮೇರಿಕಾದ ಮಾಧ್ಯಮಗಳಲ್ಲಿ ಕ್ಯೂಬಾ ಬಗ್ಗೆ ಬಂದದ್ದು ಸುದ್ದಿಯಲ್ಲ, ಅಪಪ್ರಚಾರ ಎನ್ನುತ್ತಾರೆ ಅಮೇರಿಕದ ಪತ್ರಿಕೆಗಳಲ್ಲಿ ಕ್ಯೂಬಾ ಸುದ್ಧಿ ವಿಶ್ಲೇಷಿಸಿದ ತಜ್ಞರು.ಕ್ಯೂಬಾ  ಕ್ರಾಂತಿಯ ಸಾಮಾಜಿಕ ಆರ್ಥಿಕ ಸಾಧನೆಗಳನ್ನು ವಿಶ್ಲೇಷಿಸುವ ಒಂದೇ ಒಂದು ಸಕಾರಾತ್ಮಕ ವರದಿ ಅಮೇರಿಕಾ ಪತ್ರಿಕೆಗಳಲ್ಲಿ ಪ್ರಕಟವಾಗಲಿಲ್ಲ. ಈ ತಜ್ಞರ ಪ್ರಕಾರ ಸತತ ೨೨ ತಿಂಗಳ ಪತ್ರಿಕೆಗಳಲ್ಲಿ ಈ ಸಾಧನೆ ಎಂಬುದು ಪ್ರಕಟವಾಗಿದ್ದು ಮೂರೇ ಪ್ಯಾರಾ. ಅದೂ ಸಹಾ ಸಾಧನೆ ಹೇಳುವುದಕ್ಕಿಂತ ಅಮೇರಿಕನ್ನರು ಬೆಚ್ಚಿ ಬೀಳಿಸಲು ಬರೆದಿದ್ದು.

ಸಂವಿಧಾನಕ್ಕೆ ತಂದ ಮೊದಲ ತಿದ್ದುಪಡಿಯ ಮೂಲಕ ಪತ್ರಿಕಾ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟಾಗ 'ನಮ್ಮ ಮುತ್ತಜ್ಜಂದಿರು ಕಲ್ಪಿಸಿಕೊಂಡಿದ್ದಕ್ಕಿಂತ ವೇಗವಾಗಿ, ದಿಕ್ಕು ದಿಕ್ಕಿಗೆ ಸುಳ್ಳುಗಳನ್ನು ಹರಡಲು ಇಂದಿನ ಪತ್ರಿಕೆಗಳಿಗೆ ಸಾಧ್ಯ' ಎಂದು ಪತ್ರಿಕಾ ಸ್ವಾತಂತ್ರ್ಯದ ಬಗೆಗಿನ ಅಮೇರಿಕಾ ಆಯೋಗ ಹೇಳಿತ್ತು. ಕ್ಯೂಬಾದಲ್ಲಿ ಕ್ರಾಂತಿ ಜರುಗಿದ್ದ ದಿನದಿಂದ ಅಮೇರಿಕಾದ ಪತ್ರಿಕೆಗಳು ತಮ್ಮ ಪುಟಗಳಲ್ಲಿ ಈ ಸುಳ್ಳುಗಳನ್ನೇ ಚೀರುತ್ತಾ ಬಂದವು. ಏಕೆಂದರೆ ದೊಡ್ಡ ಗಂಟಲು ದೂರದವರೆಗೆ ಕೇಳಿಸುತ್ತದೆ.



ಕ್ಯೂಬಾದ ಸಾಧನೆ ವರದಿಯೇ ಆಗದೆ, ಕೆಲವು ವಾರಗಳ ನಂತರ ಆ ನಾಯಕರುಗಳಿಗಿದ್ದ ಬೆಂಬಲವನ್ನೂ ಸುದ್ದಿಗಳಿಂದ ಕಿತ್ತು ಹಾಕಿದಾಗ, ಕ್ಯೂಬಾದ ಸರ್ಕಾರವನ್ನೂ ಕಿತ್ತೊಗೆಯಬೇಕು ಎಂದು ಅಮೇರಿಕಾದ ಯಾರಾದರೂ ನಂಬುವುದಾದರೆ ಅದಕ್ಕೆ ಅವರನ್ನೇಕೆ ದೂಷಿಸಬೇಕು ಎನ್ನುತ್ತಾರೆ ಈ ಮಾಧ್ಯಮ ತಜ್ಞರು. ಕ್ಯೂಬಾದಲ್ಲಿ ಪ್ರತಿಕ್ರಾಂತಿಗೆ ಪ್ರೋತ್ಸಾಹ ನೀಡಿದ್ದರಲ್ಲಿ ಅಮೇರಿಕಾದ ಪತ್ರಿಕೆಗಳ ಪಾಲೂ ಇದೆ ಎನ್ನುತ್ತಾರೆ.

ಕುದುರೆ ಕಂಡಾಗ ಕಾಲು ನೋವು ಭಾರತದ ಪತ್ರಿಕೆಗಳಿಗೆ ಮಾತ್ರವಲ್ಲ ಅಮೇರಿಕಾದ ಪತ್ರಿಕೆಗಳಿಗೂ ಬರುತ್ತದೆ. ಅಥವಾ ಅಮೇರಿಕಾದಲ್ಲಿ ನಡೆದ ಪ್ರಯೋಗವನ್ನು ಜಗತ್ತಿನ ಎಲ್ಲಾ ದೇಶಗಳಿಗೂ ಯಶಸ್ವಿಯಾಗಿ ರವಾನಿಸಲಾಗಿದೆ. ಪತ್ರಿಕೆಯ ಅಂಗಳಕ್ಕೆ ಬೇಕಾದಷ್ಟು ಸುದ್ದಿಯನ್ನು ಕನಿಷ್ಠ ಬೆಲೆಗೆ ಕೊಡುವುದಾದರೆ ಯಾರಿಗೆ ಬೇಡ? ಅರೆಕಾಸಿಗೆ ಬೇಕಾದಷ್ಟು ಮಜ್ಜಿಗೆ. ಈ ಅರೆಕಾಸಿನ ಸುದ್ದಿಗಳ ಪರಿಣಾಮ ಏನು ಎಂಬುದು 'ಪತ್ರಿಕಾ ಉದ್ಯಮ'ಕ್ಕೆ ಬೇಕಿಲ್ಲದ ಸಂಗತಿ. ಮೈನೋಯಿಸಿಕೊಳ್ಳದೇ ಲಾಭವಾಗುವುದಾದರೆ ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುವುದು ಬೆಕ್ಕಿಗೆ ಮಾತ್ರ ಗೊತ್ತಿರುವ ಕಲೆಯೇನು?

ಗೆಳತಿ ವಿಮಲಾ ಬೀಜಿಂಗ್‌ಗೆ ಹಾರಿದಾಗಲೇ ನನಗೂ ಈ ಅರೆಕಾಸಿನ ವ್ಯವಹಾರದ ಸಂಪೂರ್ಣ ಬಣ್ಣ ಗೊತ್ತಾಗಿದ್ದು. ಬೀಜಿಂಗ್‌ನಲ್ಲಿ ಜಾಗತಿಕ ಮಹಿಳಾ ಸಮಾವೇಶ. ಜಾಗತೀಕರಣ ಮಹಿಳೆಯರ ಮೇಲೆ ಮಾಡುತ್ತಿರುವ ಪರಿಣಾಮದ ಬಗ್ಗೆ ಚರ್ಚಿಸಲು ಮಹಿಳೆಯರ ಸಮಾವೇಶ. ವಿಮಲಾ ಹೋದ ಸಮಾವೇಶ ಅಲ್ಲವಾ ಏನಾಯಿತು ಎಂದು ಪತ್ರಿಕೆಗಳಲ್ಲಿ ದಿನಾ ಹುಡುಕುತ್ತಿದ್ದೆ. ಒಂದು ದಿನ ಸಮಾವೇಶಕ್ಕೆ ಕ್ಲಿಂಟನ್‌ರ ಪತ್ನಿ ಹಿಲರಿ ಕ್ಲಿಂಟನ್ ಬಂದರು. ಪತ್ರಿಕೆಗಳು ಬಣ್ಣಿಸಿದವು - ಜಾಗತಿಕ ಮಹಿಳಾ ಸಮಾವೇಶದಲ್ಲಿ ಹಿಲರಿ ಕ್ಲಿಂಟನ್ ಗೆ ಭವ್ಯ ಸ್ವಾಗತ. ಆಚೆ ಧೋ ಎಂದು ಮಳೆ ಸುರಿಯುತ್ತಿದ್ದರೂ ಸಹಾ ಹಿಲರಿ ಭಾಷಣಕ್ಕೆ ಕಿಕ್ಕಿರಿದ ಜನ. ಸಾಸಿವೆ ಬಿದ್ದರೂ ಸದ್ದಾಗುವಷ್ಟು ಮೌನ. ದೀರ್ಘ ಕರತಾಡನ.

ಆದರೆ ಒಂದೇ ಒಂದು ಪತ್ರಿಕೆ ಅಪಸ್ವರ ಎತ್ತಿತ್ತು. ಹಿಲರಿ ಕ್ಲಿಂಟನ್ ಸಮಾವೇಶಕ್ಕೆ ಬಂದಾಗ ಜಗತ್ತಿನ ಮಹಿಳೆಯರಿಂದ ಪ್ರತಿಭಟನೆ. ಧೋ ಎಂದು ಮಳೆ ಸುರಿಯುತ್ತಿದ್ದರೂ  ಸಭಾಂಗಣದ ಹೊರಗೆ ಕೈ ಕೈ ಹಿಡಿದು ಮಾನವ ಸರಪಳಿ ರಚಿಸಿದರು. ಕೂಗುತ್ತಿದ್ದರು ನೀನು ಇಲ್ಲಿಗೆ ಬರಲು ಯಾವುದೇ ಹಕ್ಕಿಲ್ಲ, ಹಿಲರಿ ಕ್ಲಿಂಟನ್ ಹಿಂದಕ್ಕೆ ಹೋಗು.

ಯಾವುದನ್ನು ನಂಬಬೇಕು. ಎಲ್ಲಾ ಪತ್ರಿಕೆಗಳೂ ಒಂದು ಸತ್ಯ ಹೇಳುತ್ತಿದ್ದರೆ ಒಂದು ಪತ್ರಿಕೆ ಮಾತ್ರ ಬೇರೊಂದೇ ಕಥೆ ಹೇಳುತ್ತಿದೆ.ವಿಮಲಾ ವಾಪಸಾದಾಗ ಕುತೂಹಲದಿಂದ ಕೇಳಿದೆ. ನಡೆದದ್ದೇನು? ಹಿಲರಿ ಕ್ಲಿಂಟನ್ ಹಿಂದೆ ಹೋಗು ಎಂಬ ವರದಿಯೇ ಗೆದ್ದಿತು. ಏಕೆ ಹೀಗಾಯಿತು. ಎಲ್ಲಾ ಪತ್ರಿಕೆಗಳೂ ಹೇಳುತ್ತಿರುವ ಸತ್ಯವನ್ನು ನಂಬಬೇಕೋ ಒಂದು ಪತ್ರಿಕೆ ಹೇಳಿದ್ದನ್ನೋ, ಹಾಗಾದರೆ ಈ ಎಲ್ಲಾ ಪತ್ರಿಕೆಗಳು ಎಷ್ಟೊಂದು ಜನರಿಗೆ ಸುಳ್ಳು ಹೇಳಿದೆ. ಎಷ್ಟೊಂದು ಜನರ ಮನಸ್ಸಿನಲ್ಲಿ ಹಿಲರಿ ಈಗ ಗೌರವಾನ್ವಿತ ಮಹಿಳೆ.

ಆಗಿದ್ದದ್ದು ಇಷ್ಟು. ಒಂದು ಸಮೀಕ್ಷೆ ಪ್ರಕಾರ ಭಾರತದ ಪತ್ರಿಕೆಗಳು ತನ್ನ ಲಾಭದ ಶೇ. ಮೂರು ಭಾಗವನ್ನೂ ಸುದ್ದಿ ಸಂಗ್ರಹಿಸಲು ವೆಚ್ಚ ಮಾಡುವುದಿಲ್ಲ. ಕಾರಣ ಸುಲಭ ಬೆಲೆಗೆ ಸುದ್ದಿ ಪತ್ರಿಕಾ ಕಚೇರಿಗೆ ಬಂದು ಬೀಳುತ್ತದೆ. ಹೀಗೆ ಬಂದು ಬೀಳುವ ಸುದ್ದಿ ಬಹುತೇಕ ಅಮೇರಿಕಾ ಸುದ್ದಿ ಸಂಸ್ಥೆಯದ್ದು. ಪತ್ರಿಕೆಗಳಿಗೆ ಕೆಲಸ ಸಲೀಸಾಯಿತು, ಓದುಗರಿಗೆ ಅಂತಿಂತಹ ಸುದ್ದಿಯಲ್ಲ 'ಅಮೇರಿಕನ್' ಸುದ್ದಿ ಸಿಕ್ಕಿತು. ಈಗ ಸುದ್ದಿ ಸಹಾ 'ಮೇಡ್ ಇನ್ ಅಮೇರಿಕಾ' ಸುಲಭ ಬೆಲೆಗೆ ಅಮೇರಿಕನ್ ಮಾಲು. ಹಿಲರಿ ಕ್ಲಿಂಟನ್ ಬೀಜಿಂಗ್‌ನಲ್ಲಿ ಮೂತಿಗೆ ಇಕ್ಕಿಸಿಕೊಳ್ಳುವ ಸ್ಥಿತಿ ಉದ್ಭವವಾಗಿತ್ತು ಎನ್ನಲು ಈ ಸುದ್ದಿ ಸಂಸ್ಥೆಗಳಿಗೇನು ತಲೆ ಕೆಟ್ಟಿದೆಯೇ? ಬೆಕ್ಕು ಮಾತ್ರ ಕಣ್ಣು ಮುಚ್ಚಿದರೆ ಆಯಿತು.

ಅಮೇರಿಕಾದ ೧೭೬೦ ಪತ್ರಿಕೆಗಳ ಪೈಕಿ ಶೇ. ೯೫ಕ್ಕೂ ಹೆಚ್ಚು ಪತ್ರಿಕೆಗಳು ಒರಗಿದ್ದದ್ದು ಎಪಿ ಮತ್ತು ಯುಪಿಐ ಸುದ್ದಿ ಸಂಸ್ಥೆಯ ಮೇಲೆ. ಬ್ಯಾಟಿಸ್ಟಾನ ಕಾಣಿಕೆಯ ಗಾಳದಲ್ಲಿ ಸಿಕ್ಕಿಕೊಂಡಿದ್ದ ಎ. ಪಿ. ಮೀನು ಇನ್ನೇನು ಸುದ್ದಿ ಕಳಿಸಲು ಸಾಧ್ಯ. ಹಾಗಾಗಿಯೇ ಕ್ಯೂಬಾ ಅಮೇರಿಕಾ ನಡುವೆ ವಿರಸ ಬೆಳೆಯುತ್ತಾ ಬಂತು. ನಂತರವೂ ಅಷ್ಟೇ ಮಾಲಿಕರಿಗೆ ಬೇಕಾದ ಸುದ್ದಿ ಪ್ರಕಟವಾಗುತ್ತಾ ಹೋಯಿತು. ಕತ್ತರಿ ಹಾಕಿಸಿಕೊಳ್ಳಲೆಂದೇ ಸುದ್ದಿ ಕಳಿಸುವವರು ಯಾರು? 'ಪಾಲಿಸಿ' ಸೃಷ್ಟಿಸಲೂ ಪತ್ರಿಕಾ ಉದ್ದಿಮೆಯ ಮಾಲೀಕರಿಗೆ ಕಾರಣಗಳು ಇದ್ದವು. ಏಕೆಂದರೆ ಕ್ಯೂಬಾದಲ್ಲಿ ಅಮೇರಿಕಾ ನೆಂಟರು ಕಷ್ಟದಲ್ಲಿರುವಾಗ ಇದ್ದದ್ದನ್ನು ಇದ್ದ ಹಾಗೆ ಬರೆಯಲು ಅಮೇರಿಕಾ ಪತ್ರಿಕಾ ಉದ್ದಿಮೆದಾರರು ಮನಸ್ಸು ಮಾಡಬೇಕಲ್ಲಾ? ' ಪತ್ರಿಕಾ ಮಾಲೀಕರಾಗಿದ್ದವರೂ ಸಹಾ ಇತರೆ ಬೃಹತ್ ಉದ್ದಿಮೆಗಳಲ್ಲಿ ಇದ್ದಂತೆ ಬ್ಯಾಂಕ್‌ಗಳ ನಿರ್ದೇಶಕರು, ಅತ್ಯಂತ ಹೆಚ್ಚು ತೆರಿಗೆ ಪಾವತಿ ಮಾಡುವವರು'

ಪತ್ರಿಕೆಗಳಿಗೆ ಅಪಘಾತದಲ್ಲಿ ಒಬ್ಬ ಕೈಮುರಿದುಕೊಂಡರೆ ಸಂತಸವಾಗುತ್ತದೆಯೇ? ಹತ್ತು ಹೆಣ ಬೀಳಬೇಕು. ಕ್ಯೂಬಾದಲ್ಲಿ ಕ್ರಾಂತಿಯ ನಂತರ ಶಾಂತಿ ಎಂದರೆ ಏನು ಬಂದೀತು. ಪ್ರತಿಕ್ರಾಂತಿ, ಬಾಂಬ್ ಸ್ಫೋಟ, ಕ್ಯಾಸ್ಟ್ರೋ ಅನಾಚಾರ ಇವೇ 'ಸುದ್ದಿ'. ಕುಳಿತಲ್ಲಿಂದಲೇ ಇಡೀ ಜಗತ್ತಿನ ಬಹುತೇಕ ಪತ್ರಿಕೆಗಳ, ಟಿವಿಗಳ, ರೇಡಿಯೋಗಳ ರಿಮೋಟ್ ಗುಂಡಿ ಅದುಮಬಲ್ಲ ಶಕ್ತಿ ಇರುವ ಸುದ್ದಿ ಸಂಸ್ಥೆಗಳು ಕ್ಯೂಬಾ -ಅಮೇರಿಕಾವನ್ನು ದೂರಮಾಡಿಯೇ ಬಿಟ್ಟವು.

ಈಗಲೂ ಅಷ್ಟೇ. ಅಮೇರಿಕಾ ಕ್ಯೂಬಾದ ಮೇಲೆ ಸುರಿದಿರುವಷ್ಟು ಹಣ ಇನ್ನಾವ ದೇಶದ ಮೇಲೂ ಸುರಿದಿಲ್ಲ. 'ಪ್ರತೀವಾರ ನಮ್ಮ ದೇಶದ ವಿರುದ್ಧ ೫೦೦ ಘಂಟೆಗಳ ರೇಡಿಯೋ ಪ್ರಸಾರ ಮಾಡಲಾಗುತ್ತದೆ. ಅತೃಪ್ತಿ ಹೆಚ್ಚಿಸಲು, ಪ್ರತಿಕ್ರಾಂತಿಯ ಘೋಷಣೆ ನೀಡಲು, ಹತ್ಯಾಕಾಂಡ ನಡೆಸಲು, ಕ್ರಾಂತಿಯ ವಿರುದ್ಧ ಪಿತೂರಿ ನಡೆಸಲು ಇದನ್ನು ಬಳಸಲಾಗುತ್ತಿದೆ. ಜಗತ್ತಿನ ಚರಿತ್ರೆಯಲ್ಲಿ ಈ ಹಿಂದೆ ಎಂದೂ ಒಂದು ದೇಶದ ವಿರುದ್ಧ ಈ ರೀತಿ ಮಾಧ್ಯಮದ ಮಹಾನ್ ಶಕ್ತಿಯನ್ನು ಬಳಸಿರಲಿಲ್ಲ. ಕ್ಯೂಬಾದ ವಿರುದ್ಧ ಸಾಮ್ರಾಜ್ಯದ ಎಲ್ಲಾ ಸಂಪನ್ಮೂಲವನ್ನೂ ಬಳಸಲಾಗುತ್ತಿದೆ. ಬಿಲಿಯನ್ ಗಟ್ಟಲೆ ಹಣವನ್ನು ಈ ಸಾಮ್ರಾಜ್ಯಶಾಹಿ ಖರ್ಚು ಮಾಡುತ್ತಿದೆ' ಎನ್ನುತ್ತಾರೆ ಕ್ಯಾಸ್ಟ್ರೋ.



ಈಗಲೂ ಸಹಾ 'ಸುದ್ದಿ ಹಿಂಸೆ' ಅಮೇರಿಕಾಗೆ ಅತ್ಯಂತ ಪ್ರೀತಿಯ ವಿಷಯವೇ. ಕ್ಯೂಬಾ ವಿರುದ್ಧ 'ರೇಡಿಯೋ ಫ್ರೀ ಕ್ಯೂಬಾ' ಆರಂಭವಾಯಿತು. ಕ್ಯೂಬಾದ ವಿರುದ್ಧ ರೇಡಿಯೋ, ಟಿವಿ ಸ್ಟೇಷನ್ ಆರಂಭಿಸಲೆಂದೇ ಅಮೇರಿಕಾದ ಪತ್ರಿಕೆಗಳಲ್ಲಿ ಪುಟಗಟ್ಟಲೆ ಜಾಹೀರಾತು ನೀಡಿ ಕ್ಯೂಬಾದ ಅಮೇರಿಕಾ ನೆಂಟರು ಹಣ ಸಂಗ್ರಹಿಸಿದರು. ಕ್ಯೂಬಾದ ಒಬ್ಬ ಅಧ್ಯಕ್ಷನನ್ನು ಮಣಿಸಲು ಅಮೇರಿಕಾದ ಎಂಟು ಅಧ್ಯಕ್ಷರು ಪ್ರಯತ್ನಿಸಿದರು. ಸರ್ಕಾರ ಕಣ್ಣಾಮುಚ್ಚಾಲೆಗೆ ಸಿದ್ಧವಾಯಿತು. ಯಾವ ಜೋಸ್ ಮಾರ್ಟಿಯನ್ನು ಪ್ರತೀ ಕ್ಯೂಬನ್ನರು ಪ್ರೀತಿಸುತ್ತಾರೆ ಅದೇ ಜೋಸ್ ಮಾರ್ಟಿಯ ಹೆಸರಲ್ಲಿ 'ರೇಡಿಯೋ ಜೋಸ್ ಮಾರ್ಟಿ ' 'ಜೋಸ್ ಮಾರ್ಟಿ ಟಿವಿ' ಆರಂಭಿಸಿದರು. ಜೋಸ್ ಮಾರ್ಟಿ ಎಂದರೆ ಕ್ಯೂಬನ್ನರು ದಾರಿ ತಪ್ಪುತ್ತಾರೆ ಎಂಬ ಲೆಕ್ಕಾಚಾರ. ಆದರೆ ಕ್ಯೂಬಾದ ಜನ ಬೀದಿಯಲ್ಲಿ ಮೆರವಣಿಗೆ ತೆಗೆದರು. ಅಮೇರಿಕಾ ಸಾಮ್ರಾಜ್ಯಶಾಹಿಯ ಬಗ್ಗೆ ಎಚ್ಚರಿಸಿದ ಜೋಸ್ ಮಾರ್ಟಿ ಹೆಸರನ್ನು ಯಾವ ಧೈರ್ಯದ ಮೇಲೆ ಇಟ್ಟಿದ್ದೀರಿ ಎಂದು ಪ್ರಶ್ನಿಸಿದರು. ಅಮೇರಿಕಾದ ಕಡತಗಳು ಹೇಳಿದವು - 'ಪ್ರಾಪಗಂಡಾ ವಿಫಲವಾದರೆ ಕ್ಯಾಸ್ಟ್ರೋ ವಿರುದ್ಧ ರಾಷ್ಟ್ರೀಯ ವಿಮೋಚನೆಯ ಯುದ್ಧ ಆರಂಭಿಸಿ'.

ಕ್ಯೂಬಾದ ಟಿವಿಯ ಗುಂಡಿ ಒತ್ತಿದರೆ, ರೇಡಿಯೋ ಗುಂಡಿ ತಿರುಗಿಸಿದರೆ ಅಮೇರಿಕಾ ಸುದ್ದಿ, ಅಮೇರಿಕಾ ಚಿತ್ರಗಳು, ಅಮೇರಿಕಾ ಧಾರವಾಹಿಗಳು. ಓರಿಯೆಂಟ್ ವಿಶ್ವವಿದ್ಯಾಲಯದ ಪ್ರೊ. ಜುವಾನ್ ಡುಪುಯ್ ಅವರನ್ನು ಹೀಗೇಕೆ ಎಂದು ಕೇಳಿದೆ. ಕ್ಯೂಬಾದಲ್ಲಿ ಆಯ್ಕೆಗೆ ಅವಕಾಶವಿದೆ ಎಂದರು. ಬೇಕಾದಾಗಲೆಲ್ಲಾ ಅಮೇರಿಕಾ ಕಾರ್ಯಕ್ರಮವನ್ನೇ ನೋಡಿ ಕ್ಯೂಬನ್ನರು ಅಮೇರಿಕಾಕ್ಕೆ ಮಾರು ಹೋಗುವುದಿಲ್ಲವೆ ಎಂದೆ. ಕ್ಯೂಬನ್ನರು ಅಮೇರಿಕನ್ನರಿಂದ ಮನರಂಜನೆ ಪಡೆಯುತ್ತಾರೆ, ಸುದ್ದಿ ಬೇಕೆಂದಾಗ ಕ್ಯೂಬಾದ ಮಾಧ್ಯಮಗಳಿಗೆ ಮರಳುತ್ತಾರೆ ಎಂದರು.


ಕ್ಯೂಬಾದಲ್ಲಿ ಪ್ರತಿಯೊಂದು ವಿಷಯವೂ ಜನರ ಕಟಕಟೆಗೆ ಬರುತ್ತದೆ. ಕ್ರಾಂತಿ ರಕ್ಷಿಸುವ ದಳ (ಸಿಡಿ ಆರ್)ಗಳಲ್ಲಿಪ್ರತೀ ವಿಷಯ ಚರ್ಚೆಯಾಗುತ್ತದೆ. ಉನ್ ಫೆಸ್ಟಿವಲ್ ಬಗ್ಗೆ ಮೂರು ತಿಂಗಳ ಹಿಂದೆಯೇ ಚರ್ಚೆಯಾಗಿತ್ತು. ಹಾಗಾಗಿ ಸರ್ಕಾರದ ಪ್ರತಿಯೊಂದು ಹೆಜ್ಜೆಯೂ ಪ್ರತಿಯೊಬ್ಬ ಕ್ಯೂಬನ್‌ಗೆ ಗೊತ್ತಿರುತ್ತದೆ. ಹಾಗಿರುವಾಗ ಯಾವ ಸುದ್ದಿ ಕ್ಯೂಬನ್ನರ ದಾರಿ ತಪ್ಪಿಸಲು ಸಾಧ್ಯ ಎಂದು ಮರು ಪ್ರಶ್ನಿಸುತ್ತಾರೆ.

ಆದರೂ ಮಾಧ್ಯಮಗಳಿಗೂ ಕ್ಯೂಬಾವನ್ನು ತಮ್ಮ ಅಂಗಣದಿಂದ ಕಿತ್ತೊಗೆಯುವ ಬಯಕೆ. ಅದಕ್ಕೆ ಫಿಡೆಲ್‌ಕ್ಯಾಸ್ಟ್ರೋ ಹೇಳಿದ್ದು - ತಮ್ಮ ಬೆರಳಿನಿಂದ ಸೂರ್ಯನನ್ನು ಮುಚ್ಚಿಬಿಡುತ್ತೇನೆ ಎಂದು ನಂಬಿರುವವರು ಈ ಜಗತ್ತಿನಲ್ಲಿ ಇನ್ನೂ ಇದ್ದಾರೆ.

## ಹೆಮ್ಮಿಂಗ್ವೇ ಎಂಬ ಕಡಲಹಕ್ಕಿ

ಹವಾನಾಕ್ಕೆ ಅನತಿ ದೂರದಲ್ಲಿರುವ ಹೋಟೆಲೊಂದರಲ್ಲಿ ಸಂಭ್ರಮವೋ ಸಂಭ್ರಮ. ಗ್ರೆಗೋರಿಯೋ ಫ್ಯೂಂಟೆಸ್‌ಗೆ ನೂರು ತುಂಬುವ ಸಂತಸದಲ್ಲಿ ಭಾಗಿಯಾಗಲು ಮೂಲೆ ಮೂಲೆಗಳಿಂದ ಜನ ಆಗಮಿಸಿದ್ದರು. ಉತ್ಸವಕ್ಕೆ ಬಂದ ಪ್ರತಿನಿಧಿಗಳು, ಪತ್ರಕರ್ತರು, ಹೋಟೆಲ್‌ಗೆ ಧುಮ್ಮಿಕ್ಕಿದರು. ಫ್ಯೂಂಟೆಸ್ ದೋಣಿಯಾಕಾರದ ಕೇಕ್ ಕತ್ತರಿಸಿದ್ದೇ ತಡ ಅಲ್ಲಿ ಹರಿದದ್ದು ಹೆಮ್ಮಿಂಗ್ವೇ ನೆನಪು.

ಅರ್ನೆಸ್ಟ್ ಹೆಮ್ಮಿಂಗ್ವೇ ಕ್ಯೂಬಾದ ಎದೆಯ ಮೇಲೆ ಹೆಮ್ಮೆಯಿಂದ ಬೀಗುತ್ತಿರುವ ಪದಕ. ಕ್ಯೂಬಾದ ಮೂಲೆ ಮೂಲೆಯಲ್ಲಿ ಈತನ ನೆನಪು ಹರಡಿ ಹೋಗಿದೆ. ಅಮೇರಿಕಾದ ಈ ಸಾಹಿತಿ ಎದೆತುಂಬಿ ಪ್ರೀತಿಸಿದ್ದು ಕ್ಯೂಬಾವನ್ನು . ಕ್ಯೂಬಾದ ಕಡಲ ತೀರದಲ್ಲಿ ಅಡ್ಡಾಡಿ ಹೋಗಲು ಬಂದ ಹೆಮ್ಮಿಂಗ್ವೇ ಮತ್ತೆ ಅಮೇರಿಕಾಗೇ ಹಾರಲೇ ಇಲ್ಲ. ಕ್ಯೂಬಾವನ್ನೇ ಮನೆ ಮಾಡಿಕೊಂಡರು. ದಶಕಗಳ ಕಾಲ ಮೀನುಗಾರರೊಂದಿಗೆ ಬೆರೆತು ಮೀನುಗಾರ ಹೆಮ್ಮಿಂಗ್ವೇ ಆಗಿ ಹೋದರು. ಕ್ಯೂಬಾದ ನೆನಪುಗಳ ಖಜಾನೆಯ ಮೇಲೆ ಕೈಯಿಟ್ಟರೆ ಸಾಕು ಹೆಮ್ಮಿಂಗ್ವೇ ಹೆಸರು ಮೇಲೆದ್ದು ಬರುತ್ತದೆ. ಕಡಲ ತೀರದ ಮೀನುಗಾರರಿರಲಿ, ಬೀಚ್‌ಗಳಲ್ಲಿ ಮೈಯೊಡ್ಡಿ ಮಲಗುವವರಿರಲಿ, ವಿಹಾರಕ್ಕೆಂದು ದೋಣಿ ಹತ್ತಿ ತೇಲುವವರಿರಲಿ ಎಲ್ಲರೂ 'ಇವ ನಮ್ಮವ, ಇವ ನಮ್ಮವ' ಎನ್ನುತ್ತಾರೆ.





'ಪಾಪಾ' ಎಂದರೆ ಸಾಕು ಕ್ಯೂಬನ್ನರ ಮುಖ ಅರಳುತ್ತದೆ. ಅದು ಅವರು ಹೆಮ್ಮಿಂಗ್ವೇಗೆ ಕೊಟ್ಟ ಪ್ರೀತಿಯ ಹೆಸರು. ಹೀಗೆ ಪಾಪಾ ಹೆಮ್ಮಿಂಗ್ವೇ ನೆನಪುಗಳು ಝುರಿಯಾಗಿ ಹರಿಯುತ್ತಲೇ ಇದ್ದಾರೆ.

ಹೆಮ್ಮೀಂಗ್ವೇ ಬದುಕು ಹಾಗೂ ಬರಹ ಎರಡೂ ಕ್ಯೂಬನ್ನರಿಗೆ ಪ್ರಿಯ. ಸಾಹಿತ್ಯಕ್ಕೆ ಕೈಮುಗಿದು ದಿಢೀರನೆ ಯುದ್ಧ ಭೂಮಿಗೆ ತೆರಳಿದ, ದೇಶಕ್ಕೆ ನನ್ನ ಸೇವೆ ಬೇಕಾಗಿದೆ ಎಂದು ಯುದ್ಧ ಭೂಮಿಯಲ್ಲಿ ಸೇನೆಯ ಟ್ರಕ್ ಚಾಲಕನಾದ, ಗುಂಡೇಟು ತಗುಲಿದರೂ ಸೈನಿಕರನ್ನು ಬದುಕಿಸಿದ ಹೆಮ್ಮಿಂಗ್ವೇ ನಿಜ ಅರ್ಥದಲ್ಲಿ ಜನಪರ.

ಹೆಮ್ಮಿಂಗ್ವೇ ನೆನಪನ್ನು ಕ್ಯೂಬಾ ಜತನದಿಂದ ಕಾಯ್ದುಕೊಂಡು ಬಂದಿದೆ. ಹೆಮ್ಮಿಂಗ್ವೇ ಉಂಡ, ಓಡಾಡಿದ, ಮೀನು ಹಿಡಿದ ಜಾಗ, ಕುಡಿದ ಕೇಕೆ ಹಾಕಿದ ನೆಲ, ಇಣುಕಿ ನೋಡಿದ ಕಿಟಕಿ, ಕುಳಿತ ಸ್ಟೂಲ್ ಎಲ್ಲವೂ ಈಗ ಇಲ್ಲಿ ಹೆಮ್ಮಿಂಗ್ವೇ ನೆನಪನ್ನು ಚಿಮ್ಮಿಸುತ್ತದೆ.

ಹವಾನಾದ ಎದೆಯಲ್ಲಿ ಇರುವ ಫ್ಲೋರಿಡಿಟಾ ಬಾರ್ ಸದಾ ತನ್ನ ಜಾಹೀರಾತಿನಲ್ಲಿ ಹೆಮ್ಮಿಂಗ್ವೇ ಈ ಬಾರ್‌ಗೆ ಬಂದು ರಮ್ ಹಾಗೂ ನಿಂಬೆ ಹುಳಿ ಬೆರೆಸಿ 'ಡೈಕ್ವಿರಿ' ಕುಡಿದ ಚಿತ್ರವನ್ನು ಪ್ರಕಟಿಸುತ್ತದೆ. ೧೯೩೨ ರಿಂದ ೧೯೩೯ರ ವರೆಗೆ ಹೆಮ್ಮಿಂಗ್ವೇ ಉಳಿದುಕೊಂಡಿದ್ದ ಆಯಂಬೋಸ್ ಮುಂಡೋಸ್ ಹೋಟೆಲ್‌ಗೆ ಈಗಲೂ ಜನ ಹೆಮ್ಮಿಂಗ್ವೇ ನೆನಪು ಆಯ್ದುಕೊಳ್ಳಲು ಧಾವಿಸುತ್ತಾರೆ. ಹಳೆಯ ಹವಾನಾದ ಕಿರಿದಾದ ಓಣಿಗಳಲ್ಲಿ ಇರುವ ಲಾ ಬೊಡೆಕ್ವಿಟಾ ಡೆಲ್ ಮೀಡಿಯೋ ಹೋಟೆಲ್‌ನ ಕೋಣೆಗಳ ಗೋಡೆಗಳಲ್ಲಿ ಹೆಮ್ಮಿಂಗ್ವೇ ಛಾಯಾಚಿತ್ರಗಳು ತುಂಬಿವೆ. ಹವಾನಾದ ಪೂರ್ವದಿಕ್ಕಿನಲ್ಲಿರುವ ಕೊಜಿಮಾರ್ ಗ್ರಾಮಕ್ಕೆ ಬಂದರಂತೂ ಎಲ್ಲೆಲ್ಲೂ ಹೆಮ್ಮಿಂಗ್ವೇ. ಹೆಮ್ಮಿಂಗ್ವೇ ಮತ್ತು ಗ್ರೆಗೋರಿಯೋ ಫ್ಯೂಂಟೆಸ್ ಒಂದೇ ಜೀವ ಎನ್ನುವಂತೆ ಬೆರೆತುಹೋದರು. ನೂರು ತುಂಬಿದ ಫ್ಯೂಂಟೆಸ್ ಹೆಮ್ಮಿಂಗ್ವೇಯ ಬಗ್ಗೆ ಇರುವ ನಡೆದಾಡುವ ನೆನಪಿನ ಸಂಚಿಕೆ.

ಫ್ಯೂಂಟಸ್ ಒಮ್ಮೆ ಹಡಗಿನಲ್ಲಿ ಬರುವಾಗ ಸಮುದ್ರದಲ್ಲಿ ಎದ್ದ ಅಬ್ಬರದ ಅಲೆಗಳ ಮಧ್ಯೆ ಪುಟ್ಟ ದೋಣಿಯಲ್ಲಿ ಗುದ್ದಾಡುತ್ತಿದ್ದವನೊಬ್ಬನನ್ನು ಕಂಡರು. ಹಾಗೂ ಹೀಗೂ ಮಾಡಿ ಅವರ ಜೀವ ಉಳಿಸಿದ್ದಾಯಿತು. ಹಾಗೆ ಉಳಿದಾತ ಹೆಮ್ಮಿಂಗ್ವೇ. ಜೀವ ಉಳಿಸಿದ ಫ್ಯೂಂಟೆಸ್‌ನನ್ನು ದೋಣಿಯ ಚಾಲಕನಾಗಿ ಬಾ ಎಂದು ಹೆಮ್ಮಿಂಗ್ವೇ ಬೆಂಬತ್ತಿದರು. ಫ್ಯೂಂಟೆಸ್ ಒಪ್ಪಿದ್ದೇ ತಡ ಕ್ಯೂಬಾವನ್ನು ಸುತ್ತುವರಿದಿರುವ ಕೆರೆಬ್ಬಿಯನ್ ಸಮುದ್ರದ ಎಲ್ಲೆಡೆ ಇವರು ಮೇಲಿಂದ ಮೇಲೆ ಕಂಡರು. ಹೆಮ್ಮಿಂಗ್ವೇಯ 'ಪೈಲಾರ್' ದೋಣಿಗೆ ಸುಸ್ತೇ ಇರಲಿಲ್ಲ. ದೋಣಿಯಲ್ಲಿ ಹೋಗುವಾಗ ಫ್ಯೂಂಟಸ್ ಸಮುದ್ರದ ಅಲೆಗಳ ಮಧ್ಯೆ ಗುದ್ದಾಡುವ ಮೀನುಗಾರರ ಕಥೆ ಹೇಳುತ್ತಾ ಹೋದರು. ತಮ್ಮ ಜೀವನವನ್ನು ಬಣ್ಣಿಸಿದರು. ಹೆಮ್ಮಿಂಗ್ವೇ ಸಹ ಹತ್ತು ಹಲವರೊಂದಿಗೆ ಬೆರೆತು, ಸಾಕಷ್ಟು ಅರಿತರು. ಹೆಮ್ಮಿಂಗ್ವೇ ನೆನಪಿನ ಚೀಲದಿಂದ ಒಂದೊಂದೇ ಕಾದಂಬರಿಗಳು ಈ ಬದುಕನ್ನು ಆಧರಿಸಿ ಹೊರ ಜಿಗಿದವು. 'ಐಲ್ಯಾಂಡ್ ಇನ್ ದಿ ಸ್ಟ್ರೀಮ್' 'ಎ ಫೇರ್‌ವೆಲ್ ಟು ಆರ್ಮ್ಸ್' 'ದಿ ಓಲ್ಡ್ ಮ್ಯಾನ್ ಆಂಡ್ ದಿ ಸೀ' ಅಷ್ಟು ಸಾಕಾಗಿತ್ತು. ನೊಬೆಲ್ ಸಾಹಿತ್ಯ ಪ್ರಶಸ್ತಿ ಕೊಜಿಮಾರಿನ ಕಡಲ ತೀರಕ್ಕೆ ಬಂತು.

ಹೆಮ್ಮಿಂಗ್ವೇ 'ನಾನು ಕೊಜಿಮಾರೋನ ಪ್ರಜೆ' ಎಂದು ಹೆಮ್ಮೆಯಿಂದ ಬಣ್ಣಿಸಿಕೊಳ್ಳುತ್ತಿದ್ದರು. ಕಡಲು ಇಲ್ಲಾ ಕೊಜಿಮಾರೋನ ಬಾರ್ ಹೆಮ್ಮಿಂಗ್ವೇಯ ಪ್ರೀತಿಯ ತಾಣ. ಸಮುದ್ರದ ಕಡೆಗೆ ಮುಖಮಾಡಿ ನಿಂತ ಲಾ ಥೆರ್ರಾಜ್ ಬಾರ್‌ನ ಕಿಟಕಿಯಲ್ಲಿ ನಿಂತು ಮನೆಗೆ ಹೋಗುತ್ತಿದ್ದ ಮೀನುಗಾರರನ್ನು ಹೆಮ್ಮಿಂಗ್ವೇ 'ರಂ' ಕುಡಿಯಲು ಕೈ ಬೀಸಿ ಕರೆಯುತ್ತಿದ್ದರು. ಈಗ ಈ ಕಿಟಿಕಿ ಪ್ರವಾಸಿಗರ ಪ್ರಮುಖ ತಾಣ. ಈ ಕಿಟಿಕಿಯಿಂದ ಕೈ ಬೀಸಿ ಫೋಟೋ ತೆಗೆಸಿಕೊಳ್ಳದ ಪ್ರವಾಸಿಗನೇ ಇಲ್ಲ.

ಕೊಜಿಮಾರೋನ ಪ್ರತೀ ಮೀನುಗಾರರ ಮನೆಯ ಗೋಡೆಯಲ್ಲಿ ಈ 'ಪಾಪಾ' ಇನ್ನೂ ನಗುತ್ತಿದ್ದಾನೆ. ಹೆಮ್ಮಿಂಗ್ವೇ ನೆನಪು ಎಷ್ಟು ಸಿಹಿಯಾದದ್ದೆಂದರೆ ಕೊಜಿಮಾರೋನ ಕಡಲ ಕಿನಾರೆಯಲ್ಲಿ ಮೀನುಗಾರರೆಲ್ಲಾ ಸೇರಿ ಸಮುದ್ರದತ್ತ ಮುಖಮಾಡಿ ನಿಂತ ಹೆಮ್ಮಿಂಗ್ವೇ ಪ್ರತಿಮೆಯನ್ನು ನಿಲ್ಲಿಸಿದ್ದಾರೆ.

ಫ್ಯೂಂಟೆಸ್ ಅಂತೂ ತಮ್ಮ ನೆನಪಿನ ಗಣಿಯಿಂದ ನೆನಪು ಹೆಕ್ಕುತ್ತಲೇ ಇರುತ್ತಾರೆ. ಎರಡನೇ ಮಹಾಯುದ್ಧ ನಡೆಯುವಾಗ ಈ ಇಬ್ಬರೂ ನಾಜಿಗಳ ಸಬ್‌ಮೇರಿನ್‌ಗಳನ್ನು ಪತ್ತೆ ಹಚ್ಚಿದ್ದನ್ನು ಹೆಮ್ಮೆಯಿಂದ ಬಣ್ಣಿಸುತ್ತಾರೆ. ಈ ನೆನಪೇ 'ಐಲ್ಯಾಂಡ್ಸ್ ಇನ್ ದಿ ಸ್ಟ್ರೀಮ್' ಕಾದಂಬರಿಗೆ ಪ್ರೇರಣೆಯಾಯಿತು. ಹೆಮ್ಮಿಂಗ್ವೇ ಸದಾ ಫ್ಯೂಂಟೆಸ್‌ರೊಂದಿಗೆ 'ನಿನಗಾಗಿ ಮತ್ತು ನನಗಾಗಿ ಒಂದು ಕಾದಂಬರಿ ಬರೆಯುತ್ತೇನೆ' ಎನ್ನುತ್ತಿದ್ದರು. ಈ ಕಾರಣಕ್ಕಾಗಿಯೇ 'ಎ ಫೇರ್‌ವೆಲ್ ಟು ಆರ್ಮ್ಸ್' ಹೊರಬಂತು. ಹೆಮ್ಮಿಂಗ್ವೇ ಅವರಿಗೆ ನೊಬೆಲ್ ಮುಕುಟ ತಂದುಕೊಟ್ಟ 'ದಿ ಓಲ್ಡ್ ಮ್ಯಾನ್ ಅಂಡ್ ದಿ ಸೀ'ಯ ಓಲ್ಡ್‌ಮ್ಯಾನ್ ಈ ಫ್ಯೂಂಟೆಸ್ ಅವರೇ ಎಂದು ಜಗತ್ತಿನಾದ್ಯಂತ ಚರ್ಚೆಯಾಗಿದೆ. ಆದರೆ ಫ್ಯೂಂಟೆಸ್ ಹೇಳುವುದೇ ಬೇರೆ.

ಹೆಮ್ಮಿಂಗ್ವೇ ಮತ್ತು ಫ್ಯೂಂಟೆಸ್ ಇಬ್ಬರೂ ಒಮ್ಮೆ ದೋಣಿಯಲ್ಲಿ ಹೋಗುವಾಗ ಕ್ಯೂಬಾದ ಹಡಗು ಕಟ್ಟೆಯ ಆಚೆ ದೋಣಿಯೊಂದರಲ್ಲಿ ಒಬ್ಬ ಮುದುಕ ಹಾಗೂ ಬಾಲಕನನ್ನು ಕಂಡರು. ಮುದುಕ ಆಗ ತಾನೇ ಹಿಡಿದ ಮರ್ಲಿನ್ ಮೀನನ್ನು ಶಾರ್ಕ್‌ನ ಬಾಯಿಂದ ತಪ್ಪಿಸಲು ಹೆಣಗಾಡುತ್ತಿದ್ದ. ಇದನ್ನು ನೋಡಿದ ಹೆಮ್ಮಿಂಗ್ವೇ ದೋಣಿ ಅಲ್ಲಿಗೆ ಹೋಯಿತು. ಮುದುಕನನ್ನು ರಕ್ಷಿಸಲು ಹೋದ ಹೆಮ್ಮಿಂಗ್ವೇಯನ್ನು ಆತ ನಿಂದಿಸಿದ. ಹೆಮ್ಮಿಂಗ್ವೇ ಹೇಳಿದರು. 'ಆತ ನಾವು ಮೀನು ಕದಿಯಲು ಬಂದಿದ್ದೇವೆ ಎಂದು ಭಾವಿಸಿರಬೇಕು ಬೇಡ ನಡಿ' ಇದು 'ಓಲ್ಡ್‌ಮ್ಯಾನ್'ಗೆ ಎಳೆಯಾಯಿತು. ಹೆಮ್ಮಿಂಗ್ವೇಯೇ ಒಮ್ಮೆ ಕೊಜಿಮಾರ್‌ನ ನಾವಿಕರ ನೆನಪುಗಳನ್ನು ಆಧರಿಸಿ ಈ ಪುಸ್ತಕ ಬರೆದಿದ್ದೇನೆ ಎಂದಿದ್ದರು ಎಂದು ನೆನಪಿಸಿಕೊಳ್ಳುತ್ತಾರೆ.

ಫ್ಯೂಂಟೆಸ್‌ರ ಕಣ್ಣು ಮಂಜಾಗುವುದು ಹೆಮ್ಮಿಂಗ್ವೇ ಅವರ ಮನೆಯಿಂದ ಬಂದ ಒಂದು ಪತ್ರ ' ಎಲ್ ಪೈನಾರ್' ದೋಣಿಯನ್ನು ನಿಮಗೆ ಕೊಡಬೇಕೆಂದು ಹೆಮ್ಮಿಂಗ್ವೇ ವಿಲ್‌ನಲ್ಲಿ ಬರೆದಿದ್ದಾರೆ ಎಂಬ ಸುದ್ದಿ ತಂದಾಗ. ಹೆಮ್ಮಿಂಗ್ವೇ ೧೯೬೧ರಲ್ಲಿ ಆತ್ಮಹತ್ಯೆ ಮಾಡಿಕೊಂಡರು.

ಹೆಮ್ಮಿಂಗ್ವೇ ಈಗಲೂ ಕ್ಯೂಬಾದಲ್ಲಿ ಜೀವಂತ ನೆನಪು. ಹೆಮ್ಮಿಂಗ್ವೇ ಬದುಕಿದ್ದ ಕೊಜಿಮಾರ್‌ನ



ಮನೆ ಈಗ ಹೆಮ್ಮಿಂಗ್ವೇ ಮ್ಯೂಸಿಯಂ ಆಗಿ ಬದಲಾಗಿದೆ. ಫ್ಯೂಂಟೆಸ್‌ಗೆ ನೀಡಿದ 'ಎಲ್ ಪೈನಾರ್' ದೋಣಿ ಈ ಸಂಗ್ರಹಾಲಯದಲ್ಲಿ ಜನರ ಮುಂದೆ ಕಥೆಗಳನ್ನು ಹರಡುತ್ತಿದೆ. ಹೆಮ್ಮಿಂಗ್ವೇ ನೆನಪಿಗಾಗಿ ಅಂತರಾಷ್ಟ್ರೀಯ ಮರ್ಲಿನ್ ಮೀನು ಹಿಡಿಯುವ ಸ್ಪರ್ಧೆಯನ್ನು ನಡೆಸುತ್ತಾ ಬಂದಿದೆ. ಮೀನುಗಾರರು ನಡೆಸುವ ಉತ್ಸವಗಳು ಹೆಮ್ಮಿಂಗ್ವೇ ಹೆಸರನ್ನು ಹೊತ್ತಿವೆ. ಹತ್ತು ಹಲವು ಉತ್ಸವಗಳಲ್ಲಿ ಹೆಮ್ಮಿಂಗ್ವೇ ಟ್ಯಾಬ್ಲೋಗಳು ಕಾಣಿಸಿಕೊಳ್ಳುತ್ತವೆ. ಹೆಮ್ಮಿಂಗ್ವೇ ಪ್ರೀತಿಸಿದ ಅದೇ 'ರಂ' ಅದೇ ಊಟ ಈಗ ಪ್ರವಾಸಿಗರ ಪ್ರಿಯವಾದ ಆಹಾರವಾಗಿದೆ.

೧೯೫೯ರಲ್ಲಿ ಕ್ರಾಂತಿಯಾದ ವರ್ಷವೇ ಹೆಮ್ಮಿಂಗ್ವೇ ಹೆಸರಿನಲ್ಲಿ ಜರುಗುವ ಮರ್ಲಿನ್ ಮೀನು ಹಿಡಿಯುವ ಸ್ಪರ್ಧೆಯಲ್ಲಿ ಫಿಡೆಲ್ ಕ್ಯಾಸ್ಟ್ರೋ ೨೧೫ ಕೆ. ಜಿ. ತೂಕದ ಮೀನು ಹಿಡಿದು ಟ್ರೋಫಿ ಬುಟ್ಟಿಗೆ ಹಾಕಿಕೊಂಡಿದ್ದರು. ಹೆಮ್ಮಿಂಗ್ವೇ ಫಿಡೆಲ್‌ಕ್ಯಾಸ್ಟ್ರೋಗೆ ಟ್ರೋಫಿ ನೀಡುತ್ತಿರುವ ಚಿತ್ರಗಳಂತೂ ಎಲ್ಲೆಡೆ ಹರಡಿ ಹೋಗಿವೆ.



## ‘ಚೆ’ ಎಂಬ ಹುಚ್ಚು

ಟೋಪಿಯಲ್ಲಿ, ಟಿ-ಶರ್ಟ್‌ನಲ್ಲಿ, ಕೈ ಮೇಲಿನ ಹಚ್ಚೆಯಲ್ಲಿ, ಹಿಡಿದ ಬ್ಯಾನರ್‌ನಲ್ಲಿ, ಹಂಚಿದ ಕರಪತ್ರದಲ್ಲಿ ತಲೆಗೆ ಸುತ್ತಿದ ಕರ್ಚೀಫ್ ನಲ್ಲಿ, ಬ್ಯಾಗ್‌ನಲ್ಲಿ, ಭೂಪಟಗಳಲ್ಲಿ, ಎಲ್ಲೆಲ್ಲೂ ಚೆಗೆವಾರ, ಚೆಗೆವಾರ.

‘ಚೆ’ ಎಂಬ ಹುಚ್ಚು ಇಡೀ ಜಗತ್ತಿಗೆ ಹರಡಿರುವುದರ ಸೂಚಕವೆಂಬಂತೆ ಎಲ್ಲೆಲ್ಲೂ ‘ಚೆ’ ಜಗತ್ತಿನ ಮೂಲೆ ಮೂಲೆಯಿಂದ ಬಂದ ಎಲ್ಲರನ್ನು ಬೆಸೆಯುವ ಒಂದು ಭಾಷೆ - ಚೆ, ಚೆಗೆವಾರ ಎಂಬ ಹೆಸರು ಕೇಳಿದರೆ ಸಾಕು ಹೋ ಎನ್ನುತ್ತಿದ್ದ ಜನ, ತೋರಿಸುವ ಚಲನಚಿತ್ರಗಳಲ್ಲಿ ಚೆ ಮುಖ ಕಂಡರೆ ಸಾಕು ಕುಣಿದು ಕುಪ್ಪಳಿಸುವ ಜನ, ಚೆಗೆವಾರ ಎಂದು ಹಾಡಿದರೆ ಸಾಕು ಸಮುದ್ರದಂತೆ ಭೋರ್ಗರೆವ ಜನ, ಚೆಗೆವಾರನ ಜೊತೆ ಇದ್ದವರು, ಉಂಡವರು, ಮಕ್ಕಳು ಬಂದರೆ ಸಾಕು ದೀರ್ಘ ಕರತಾಡನ, ಇನ್ನಷ್ಟು ಮತ್ತಷ್ಟು ಹೇಳಿ ಎಂದು ಅವರನ್ನು ಗೋಗರೆಯುವ ಜನ. ಎಲ್ಲೆಲ್ಲೂ ಚೆಗೆವಾರ, ಚೆಗೆವಾರ.



ಚೆಗೆವಾರನ ಚಿತ್ರ ಇರುವ ನಾಣ್ಯ ಸಿಕ್ಕರೆ ಖರ್ಚು ಮಾಡದೆ ಜೋಬು ಸೇರಿಸುತ್ತಿದ್ದವರು, ಆತನ ಸಹಿ ಇರುವ ವಸ್ತು ಏನು ಕಂಡರೂ ಜೋಪಾನವಾಗಿಟ್ಟುಕೊಳ್ಳುತ್ತಿದ್ದವರು, ಚೆಗೆವಾರ ಹೊಲದಲ್ಲಿ ಕಬ್ಬು ಕತ್ತರಿಸುತ್ತಿರುವ ರೇಖಾಚಿತ್ರ ಇದ್ದ ಕ್ಯೂಬನ್ ಪೆಸೋ ನೋಟುಗಳಿಗೆ ಮುಗಿಬಿದ್ದವರು, ಭಾಷೆ ಅರ್ಥವಾಗದಿದ್ದಾಗ ಚೆಗೆವಾರನ ಬ್ರೋಶರ್ ಆಯ್ದುಕೊಳ್ಳುತ್ತಿದ್ದವರು, ಚೆಗೆವಾರನ ಫೋಟೋ ಸಂಪುಟದ ಪುಸ್ತಕ ಬಂದರೆ ದಿಢೀರನೆ ಮುಗಿಬೀಳುತ್ತಿದ್ದವರು, ಚೆಗೆವಾರನ ಫೋಟೋ ಕಾರ್ಡ್‌ಗಳಿಗಾಗಿ ಹವಾನಾದ ಬೀದಿ ಬೀದಿ ಸುತ್ತುತ್ತಿದ್ದವರು, ಚೆಗೆವಾರನ ವಿಡಿಯೋ ಕ್ಯಾಸೆಟ್‌ಗಾಗಿ ಜೋಬಲ್ಲಿದ್ದ ಕೆಲವೇ ಡಾಲರ್‌ಗಳನ್ನು ಎರಡನೇ ಬಾರಿ ಯೋಚಿಸದೆ ತೆಗೆದು ಕೈಗಿಡುತ್ತಿದ್ದವರು, ಈ ಎಲ್ಲರೂ ಚೆಗೆವಾರ ಎಂದರೆ ವಿಶ್ವಭಾಷೆ ಎಂಬುದನ್ನು ಮತ್ತೆ ಮತ್ತೆ ಧೃಡಪಡಿಸುತ್ತಿದ್ದರು.

ಈ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಒಂದು ಸೂರ್ಯ, ಒಂದು ಚಂದ್ರ - ಹಾಗೆಯೇ ಒಬ್ಬ ಚೆಗೆವಾರ.

ಬ್ರಿಟನ್ನಿನ ಬಂಧೀಖಾನೆಯಲ್ಲಿದ್ದ ಐರಿಶ್ ರಾಜಕೀಯ ಖೈದಿ ನನಗೆ ಒಂದು ಚೆಗೆವಾರನ ಟಿ - ಶರ್ಟ್ ಕೊಡಿ ಎಂದು ಪತ್ರ ಬರೆದ. ಚೆಗೆವಾರನ ಪ್ರೀತಿಯನ್ನು ಬ್ರಿಟನ್ನಿನ ತುಂಬಾ ಹರಡಲು ಇದ್ದ ಯುವಕರ ದಂಡು ಟಿ-ಶರ್ಟ್ ಹಿಡಿದು ಜೈಲಿಗೆ ಹೋದಾಗ ಅಲ್ಲಿನ ಅಧಿಕಾರಿಗಳು ಅದನ್ನು ಖೈದಿಗೆ ಕೊಡಲು ನಿರಾಕರಿಸಿದರು. ಕಾರಣ ಕೇಳಿದಾಗ ಅದರಲ್ಲಿ ರಾಜಕೀಯ ಸಂದೇಶವಿದೆ ಎಂದರು. ಚೆಗೆವಾರ ಸತ್ತು ೩೦ ವರ್ಷ ಕಳೆದರೂ ಸಹಾ ಜಗತ್ತಿನ ಸಾಮ್ರಾಜ್ಯಶಾಹಿಗಳ ಎದೆಯಲ್ಲಿನ ನಡುಕ ನಿಂತಿಲ್ಲ ಎಂಬುದು ಸಾಬೀತಾಯಿತು. ಚೆಗೆವಾರನ ಚಿತ್ರ ಬ್ರಿಟನ್ನಿನ ಖೈದಿಯಂತೆ ಜಗತ್ತಿನ ಮೂಲೆ ಮೂಲೆಗಳಲ್ಲಿ ಹರಡಿ ಹೋಗಿರುವ ಜನರಿಗೆ ಕೇವಲ ಚಿತ್ರ ಮಾತ್ರವಲ್ಲ, ಒಂದು ಸಂದೇಶ.

ನೆಲ್ಸನ್ ಮಂಡೇಲಾ ಕ್ಯೂಬಾ ನೀಡಿದ ಗೆಳೆತನದ ಪದಕವನ್ನು ಪಡೆಯಲು ಕ್ಯೂಬಾಗೆ ಬಂದಾಗ ಹೇಳಿದರು. ಈ ಜಗತ್ತಿನ ಯಾವ ಬಂಧೀಖಾನೆಗಳಿಗೂ, ಸೆನ್ಸಾರ್‌ಶಿಪ್‌ಗಳಿಗೂ ಚೆಗೆವಾರನನ್ನು ನಮ್ಮಿಂದ ಅಡಗಿಸಿಡಲು ಸಾಧ್ಯವಿಲ್ಲ.

ಇದು ಹೌದು ಎಂಬುದು ಮತ್ತೆ ಮತ್ತೆ ಸಾಬೀತಾಗಿದೆ. ‘ಚೆ’ ಜಗತ್ತಿನ ಎದೆಯ ಮೇಲೆ ತೂಗುತ್ತಿರುವ ಪ್ರೀತಿಯ ಪದಕ.

ಎದೆಯಲ್ಲಿ ಕಾವ್ಯ ಕೈಯಲ್ಲಿ ಖಡ್ಗ ಹಿಡಿದ ಈ ಚೆಗೆವಾರ ಜನರ ಎದೆ ಹೊಲಗಳಲ್ಲಿ ಸೇರಿ ಹೋಗಿದ್ದಾದರೂ ಹೇಗೆ ? ಪ್ರೀತಿಯ ಗೆಳತಿಗೆ ತಾನು ಸೈಕಲ್ ತುಳಿಯುತ್ತಿರುವ ಚಿತ್ರದ ಮೇಲೆ ‘ಫ್ರಂ ದಿ ಕಿಂಗ್ ಆಫ್ ಪೆಡಲ್ಸ್’ ಎಂದು ಸಹಿ ಮಾಡಿ ಕಳಿಸುತ್ತಿದ್ದ, ವೈದ್ಯರು ಅಸ್ತಮಾ ಇದೆ ಸಿಗಾರ್ ದಿನಕ್ಕೆ ಒಂದು ಮಾತ್ರ ಸೇದಿ ಎಂದಾಗ ಸಿಗಾರ್ ಫ್ಯಾಕ್ಟರಿಯಲ್ಲಿ ಗೋಗರೆದು ಮೂರು ಸಿಗಾರ್ ಒಟ್ಟಿಗೇ ಸೇರಿಸಿ ಒಂದು ಸಿಗಾರ್ ಮಾಡಿಸಿ ‘ನೀವು ಹೇಳಿದಂತೆ ಮಾಡುತ್ತಿದ್ದೇನೆ ಡಾಕ್ಟರ್’ ಎನ್ನುತ್ತಿದ್ದ. ಗೆಳೆಯನೊಬ್ಬನನ್ನು ಕ್ರಾಂತಿ ಮಾಡೋಣ ಬಾ ಎಂದು ಕಾಲೇಜಿನಿಂದ ಓಡಿಸಿಕೊಂಡು ಸಿಕ್ಕ ಟ್ರಕ್‌ನ ಹಿಂದೆ ಕದ್ದು ಊರು ಬಿಟ್ಟು ಓಡಿಹೋದ, ಅಸ್ತಮಾ ಇದೆ ಹುಷಾರ್ ಇನ್‌ಹೇಲರ್ ಸದಾ

ಜೊತೆಯಲ್ಲಿಟ್ಟುಕೊಂಡಿರಿ ಎಂದು ಹೆಂಡತಿ ಹೇಳಿದಾಗ ಆಯಿತು ಎಂದು ಕವನಸಂಕಲನ ಜಾಗ್ರತೆಯಾಗಿಟ್ಟುಕೊಂಡ, ವೈದ್ಯಕೀಯ ವಿದ್ಯಾರ್ಥಿಯಾಗಿ ಇನ್ನೇನು ಸೇನೆಯಲ್ಲಿ ಡಾಕ್ಟರ್ ಆಗಬೇಕಾಗಿದೆ ಎಂದು ಗೊತ್ತಾದಾಗ ತಣ್ಣೀರಿನಲ್ಲಿ ಸತತವಾಗಿ ಸ್ನಾನ ಮಾಡಿ ಆಸ್ಪತ್ರೆ ಸೇರಿ ತಪ್ಪಿಸಿಕೊಂಡ, ಪೊಲೀಸರ ಕೈಗೆ ಸಿಕ್ಕು ಹಾಕಿಕೊಂಡಾಗ ಪೊಲೀಸರದ್ದೆ ತಂಡ ಮಾಡಿ ಕಾಲ್ಚೆಂಡಾಟ ಕಲಿಸಿ ಶಹಬಾಷ್ ಎನಿಸಿಕೊಂಡು ಪಾರಾಗಿ ಓಡಿದ, ಪ್ಯಾನ್ ಅಮೇರಿಕಾ ಒಲಂಪಿಕ್ಸ್ ನೋಡಬೇಕೆಂದು ಆಸೆಯಾಗಿ ಅದಕ್ಕಾಗಿ ಪೆನ್ನು ಹಿಡಿದು ಪತ್ರಕರ್ತನಾದ, ಸಿಯೆರಾ ಮಾಸ್ಟೆರಾ ಗುಡ್ಡಗಳಲ್ಲಿ ಗಾಯಗೊಂಡ ಗೆರಿಲ್ಲಾ ಯೋಧರ ಮೂಳೆ ಕೂಡಿಸಿ ಪಟ್ಟಿ ಹಾಕುವ, ಸಾವಿರಾರು ಕಿ. ಮೀ. ಸೈಕಲ್ ತುಳಿದು ಗಟ್ಟಿ ಮುಟ್ಟಾದ ಸವಾರಿಗೆ ಇದೇ ಸೈಕಲ್ ಬಳಸಿ ಎಂದು ಜಾಹೀರಾತಿನಲ್ಲಿ ಕಾಣಿಸಿಕೊಳ್ಳುವ, ನಿನ್ನ ಫೋಟೋವನ್ನೇ ಮರೆತು ಬಂದೆ ಬೇಗ ಕಳಿಸಿಕೊಡು ಎಂದು ವಿಳಾಸ ಇಲ್ಲದ ಗುಡ್ಡಗಳಿಂದ ಪತ್ರ ಹಾಕುವ, 'ಎಂದೆಂದೂ ಕವಿಯಾಗದ ಬಂಡಾಯಗಾರ' ಎಂದು ನೋವಿನಿಂದ ತನ್ನನ್ನು ಬಣ್ಣಿಸಿಕೊಂಡ ಚೆಗೆವಾರ ಜಗತ್ತಿನ ಎಲ್ಲಾ ಪಡ್ಡೆತನಗಳ ಸುಂದರ ಕೊಲಾಜ್.

ಕಾವ್ಯ ಸದಾ ಚೆಗೆವಾರನ ಸಂಗಾತಿ. ಫಿಡೆಲ್‌ಕ್ಯಾಸ್ಟ್ರೋ ಜೊತೆ ಸಿಯೆರಾ ಮಾಸ್ಟರಾದ ಗುಡ್ಡಗಳಲ್ಲಿ ಗೆರಿಲ್ಲಾ ಹೋರಾಟ ನಡೆಸುತ್ತಿದ್ದಾಗ ಈತನ ಸಂಗಾತಿಯಾಗಿದ್ದದ್ದು ಒಂದು ಕೋವಿ, ಒಂದು ಕವನ ಸಂಕಲನ. ಮರ ಏರಿ ಸೈನಿಕರು ಬರುತ್ತಾರಾ ನೋಡು ಎಂದರೆ ಮರದ ಮೇಲೆ ಕೂತು ಬೈನಾಕ್ಯುಲರ್‌ನಲ್ಲಿ ಇಣುಕಿ ನೋಡುವುದನ್ನು ಬಿಟ್ಟು ನೆರೂದಾನ ಕವನ ಸಂಕಲನದಲ್ಲಿ ಮುಳುಗಿ ಹೋಗುತ್ತಿದ್ದ. ಮತ್ತೆ ಕ್ರಾಂತಿ ನಡೆಸಲು ಕ್ಯೂಬಾದಿಂದ ಬೊಲಿವಿಯಾಗೆ ಹೋಗುವಾಗ ಗೆಳೆಯನ ಬಳಿ ಇದ್ದ ನೆರೂದಾನ ಸಂಕಲನದಿಂದ 'ವಿದಾಯ' ಕವನವನ್ನು ಬರೆದಿಟ್ಟುಕೊಂಡವ.

ಸಿಯೆರಾ ಮಾಸ್ಟರಾದ ಬೆಟ್ಟಗಳಲ್ಲಿ ಸೆಣಸಾಡುತ್ತಿದ್ದಾಗ ಗಾಯಗೊಂಡು ಆಸ್ಪತ್ರೆ ಸೇರಬೇಕಾಗಿ ಬಂದ ಗೆಳೆಯನಿಗೆ ಹೇಳಿದ - ಯಾರಿಗೂ ಗೊತ್ತಾಗದಂತೆ ಹೊಸದಾಗಿ ಬಂದಿರುವ ಕವನ ಸಂಕಲನಗಳನ್ನೆಲ್ಲಾ ತಂದು ಬಿಡು. ಗ್ವಾಟೆಮಾಲದಲ್ಲಿ ಊಟಕ್ಕೆ ಕಾಸಿಲ್ಲವಾದಾಗ ಪುಸ್ತಕದ ಅಂಗಡಿಯೊಂದರಲ್ಲಿ ಚೆ ಕೆಲಸಕ್ಕೆ ಸೇರಿಕೊಂಡ. ಪುಸ್ತಕ ಹೊತ್ತು ಬೀದಿ ಬೀದಿ ತಿರುಗಿ ಮಾರಾಟ ಮಾಡಿ ಬರಬೇಕಿತ್ತು. ನಾಲ್ಕು ದಿನ ನೋಡಿದ ಅಂಗಡಿಯವರು 'ಪುಸ್ತಕ ಮಾರಿದ್ದಕ್ಕಿಂತ ಓದಿದ್ದೇ ಹೆಚ್ಚು' ಎಂದು ಕೆಲಸ ಬಿಡಿಸಿದರು. ಬೋದಿಲೇರ್, ವೆರ್ಲೇನ್, ಗಾರ್ಸಿಯಾ ಲೋರ್ಕ, ಆ್ಯಂಟೋನಿಯೋ ಮಕಾಡೋ ಎಲ್ಲರ ಕವನಗಳು ಚೆ ಬಾಳ ಸಂಗತಿಗಳಾಗಿದ್ದವು.

'ಚೆ' ಯನ್ನು ಹುಚ್ಚರಂತೆ ಪ್ರೀತಿಸಿದ ಜನ ಪ್ರೀತಿ ಎಂಬ ಪದವನ್ನೆ 'ಚೆ' ಗೆ ಬಿರುದಾಗಿ ನೀಡಿದರು. ಅದುವರೆಗೂ ಅರ್ನೆಸ್ಟೋ ಗುವಾರ ಆಗಿದ್ದ ಈತ ಚೆ ಗುವಾರ ಆದ. ಚೆ ಎಂದರೆ ಪ್ರೀತಿ ಎಂದು ಅರ್ಥ. ಪ್ರೀತಿ ಎಂಬ ಹೆಸರು ಹೊತ್ತವನ ಪ್ರೀತಿಗೆ ಬಿದ್ದವರು ಅದೆಷ್ಟೋ ಜನ. ಯಾವುದೇ ದೇಶದಲ್ಲಿ ಹೋರಾಟಗಳು ನಡೆದರೆ ಅಲ್ಲಿ ಚೆ ಚಿತ್ರ. ಇಂಗ್ಲೆಂಡ್‌ನಲ್ಲಿ ಚೆಗೆವಾರನ ಪ್ರೀತಿ ಹರಡಲು 'ರಾಕ್ ಆರೌಂಡ್ ದಿ ಬ್ಲಾಕೇಡ್' ರಾಕ್ ಗುಂಪುಗಳು, ಬಂಧೀಖಾನೆಯಲ್ಲಿಯೂ ಚೆ ಟಿ -ಶರ್ಟ್



ತೊಡಬೇಕೆಂಬ ಹುಮ್ಮಸ್ಸಿನವರು, ಚೆ ಮಗಳು ಬಂದಾಗ ಹೂವಿನ ಮಳೆಗರೆಯುವವರು, ತಮ್ಮ ಮಕ್ಕಳಿಗೆ 'ಚೆಗೆವಾರ' ಎಂದು ಹೆಸರಿಟ್ಟವರು, ಎಲ್ಲೋ ದೂರದ ಊರಲ್ಲಿ ಚೆಗೆವಾರನ ನಾಟಕ ಮಾಡಿದವರು, 'ನಾಟಕದಲ್ಲಿ ನಾನು ಚೆ ಪಾತ್ರ ಮಾಡಿದ್ದೆ ನಿನ್ನನ್ನು ಮಗಳೇ ಎಂದು ಕರೆಯಲೇ ' ಎಂದು ಚೆಗೆವಾರ ಮಗಳನ್ನು ಕೇಳುವವರು, ಚೆಗೆವಾರನ ಪ್ರತೀ ಚಿತ್ರವನ್ನೂ ಕತ್ತರಿಸಿ ಇಟ್ಟುಕೊಳ್ಳುವವರು,ಚೆಗೆವಾರನ ಚಿತ್ರಗಳನ್ನು ಅಲ್ಲಿ ಇಲ್ಲಿ ದುಡ್ಡು ಕೂಡಿಸಿ ಗ್ರೀಟಿಂಗ್ ಕಾರ್ಡ್ ಮಾಡಿಸುವವರು, ಚೆಗೆವಾರ ಸತ್ತ ೩೦ನೆಯ ವರ್ಷವನ್ನು ಮನೆಯ ಕಾರ್ಯವೆಂಬಂತೆ ಓಡಾಡಿ ಮಾಡುವವರು, ಚೆ ಬಗ್ಗೆ ಪುಸ್ತಕ ಬರೆದವರು, ಚಿತ್ರ ತಯಾರಿಸಿದವರು, ನಾನು ಚೆಗೆವಾರನ ಪ್ರೀತಿಗೆ ಬಿದ್ದೆ ಎಂದು ಹೇಳಿ ಸಿಐಎಯನ್ನೇ ತೊರೆದು ಬಂದವರು, ಎಲ್ಲರೂ, ಅವರೆಲ್ಲರೂ ಚೆಗೆವಾರನ ಪ್ರೀತಿಗೆ ಬಿದ್ದವರು.

ಕ್ಯೂಬಾದಲ್ಲಿ ಕ್ರಾಂತಿ ನಡೆಸಿ ಕೈಗಾರಿಕಾ ಸಚಿವನಾದರೂ ಸಹಾ ಚೆಗೆವಾರ ಶ್ರಮಜೀವಿಗಳ ಬಂಧು. ಭಾನುವಾರ ಬಂತೆಂದರೆ ಸಾಕು ಮೂರು ದಾಟಿರದ ಮಗಳನ್ನೂ, ಅವಳ ಪ್ರೀತಿಯ ನಾಯಿಯನ್ನೂ ಗಾಡಿಯಲ್ಲಿ ಕೂಡಿಸಿಕೊಂಡು ಕಬ್ಬಿನ ಗದ್ದೆಗಳಿಗೆ ಹೋಗಿ ಕಬ್ಬು ಕತ್ತರಿಸುತ್ತಿದ್ದ ಒಡನಾಡಿ. ಎಲ್ಲರೂ ಕಬ್ಬು ಕತ್ತರಿಸುತ್ತಿದ್ದಾಗ ಕಬ್ಬು ಸಾಗಿಸುವ ಟ್ರಾಕ್ಟರ್‌ನ ಚಾಲಕ ನೆರಳಲ್ಲಿ ಕುಳಿತಾಗ ಇಲ್ಲಿರುವ ಪ್ರತಿಯೊಬ್ಬರೂ ಚಾಲಕನಾಗಲೂ ಅರ್ಹತೆ ಇರುವವರೇ ಆದರೆ ಅವರು ಈಗ ಕಬ್ಬಿನ ಗದ್ದೆಗಳಲ್ಲಿದ್ದಾರೆ. ಕೈಗೆ ಕುಡುಗೋಲು ಎತ್ತಿಕೋ ಟ್ರಾಕ್ಟರ್ ಹೊರಡಲು ಇನ್ನೂ ಬಹಳ ಸಮಯವಿದೆ ಎಂದಾತ. ವಿದೇಶದಲ್ಲಿ ವ್ಯಾಪಾರ ಮಾತುಕತೆಗೆ ಹೋದಾಗ ಮಾತುಕತೆಯ ನಡುವೆ ಬಾಯಾಡಿಸಲು ಚಾಕಲೇಟ್ ತಂದಿಟ್ಟರು. ಕೈಗಾರಿಕಾ ಸಚಿವಾಲಯದ ಮಹಾನಿರ್ದೇಶಕ ಏಂಜೆಲ್ ಆರ್ಕೋಸ್ ಬರ್ಗ್‌ನೆಸ್ ಮನೆಯಲ್ಲಿನ ಪುಟ್ಟ ಮಗುವನ್ನು ನೆನಸಿಕೊಂಡು ಜೋಬಿಗೆ ಚಾಕಲೇಟ್ ಸೇರಿಸಿದರು. ಹತ್ತಿರ ಬಂದ ಚೆಗೆವಾರ ಹೇಳಿದರು: 'ದಿಗ್ಬಂಧನದ ಕಠಿಣ ಕ್ರಮಗಳು ಮನೆಯ ಹೊರಗೂ ಅಂತೆಯೇ ಮನೆಯ ಒಳಗೂ'. ಚಾಕಲೇಟ್ ಮತ್ತೆ ತಟ್ಟೆ ಸೇರಿತು.

'ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ಸಿಡಿದೆದ್ದು ನಿಂತರೆ ನೀನು ನನ್ನ ಸಂಗಾತಿ' ಎಂದರು ಚೆ. ದೌರ್ಜನ್ಯಗಳ ಮಧ್ಯೆ ಬೆಳೆದು ಬಂದವರು, ದೌರ್ಜನ್ಯವನ್ನು ಕಂಡವರು, ದೌರ್ಜನ್ಯವನ್ನು ಉಂಡವರು ಚೆಗೆವಾರ ಸಂಗಾತಿಗಳಾಗಿ ಹೋದರು. ದೇಶಗಳು ಗುಲಾಮಗಿರಿಗೆ ಒಳಗಾದದ್ದನ್ನು ನೋಡಿ ಸಿಡಿದವರು ಚೆಗೆವಾರನ ಸಂಗಾತಿಗಳಾಗಿ ಹೋದರು. ಗುಲಾಮಗಿರಿಯ ವಿರುದ್ಧ ಹೋರಾಡಿದ ದೇಶಗಳು ಚೆಗೆವಾರನ ಸಂಗಾತಿಗಳಾದವು, ಜಗತ್ತಿನ ಮೂಲೆ ಮೂಲೆಗಳಲ್ಲಿ ಒಂದಲ್ಲಾ ಒಂದು ನೋವನ್ನು ಉಂಡ ಎಲ್ಲರೂ ಚೆಗೆವಾರನ ಸಂಗಾತಿಗಳಾಗಿ ಹೋದರು.

'ಹಾರುವ ಹಕ್ಕಿಗೆ ಎಲ್ಲಿ ನೆಲೆ' ಎಂದರು. ಚೆಗೆವಾರ ಒಂದು ವಲಸೆ ಹಕ್ಕಿ. ಯಾವುದೋ ದೇಶದಿಂದ ರೆಕ್ಕೆ ಬಡಿಯುತ್ತಾ ಇನ್ನಾವುದೋ ದೇಶಕ್ಕೆ ಹಾರಿ, ಅಲ್ಲಿನ ಹಕ್ಕಿಗಳ ಜೊತೆ ಹಾರಾಡಿ, ಗೂಡು ಕಟ್ಟಿ ಮರಿ ಮಾಡಿ, ಏಳುವುದನ್ನು ಬೀಳುವುದನ್ನೂ ಹಾರುವುದನ್ನೂ ಕಲಿಸಿ ಮತ್ತೆ ಇನ್ನೆಲ್ಲಿಗೋ ದಂಡುಕಟ್ಟಿಕೊಂಡು ಹಾರಿ ಹೋಗುವ ಹಕ್ಕಿ.

‘ಹೊಸ ಯುದ್ಧ ಭೂಮಿಯಲ್ಲಿ ನನ್ನ ಎದೆಹೊಲದಲ್ಲಿ ನೀವು ಇರಿಸಿದ ನಂಬಿಕೆಯನ್ನು ಹೊತ್ತು ಹೋರಾಡುತ್ತೇನೆ’ ಎಂದು ಫಿಡೆಲ್‌ಗೆ ಪತ್ರ ಬರೆದ ಚೆ ನೀವು ನನಗೆ ಕಲಿಸಿದ ಎಲ್ಲಕ್ಕೂ, ಹಾಕಿಕೊಟ್ಟ ಹಾದಿಗೂ ಋಣಿಯಾಗಿದ್ದೇನೆ ಎಂದರು. ಗೆಳೆಯ ಆಲ್ಬರ್ಟೋ ಗ್ರೆನೆಡಾಸ್‌ಗೆ ಪತ್ರ ಬರೆದರು. ನಾನು ಕಬ್ಬು ಕತ್ತರಿಸಲು ಹೋಗುತ್ತಿದ್ದೇನೆ. ನನ್ನ ಸಂಚಾರಿಗೃಹ ಮತ್ತೆ ನನ್ನ ಎರಡು ಕಾಲುಗಳನ್ನು ಅವಲಂಬಿಸಿದೆ. ಹಕ್ಕಿ ಬೊಲಿವಿಯಾದತ್ತ ಹಾರಿತು.

ನೀನು ಎಲ್ಲೆಲ್ಲಿಯೂ ಇದ್ದೀಯ ‘ಚೆ’
ಇಂಡಿಯನ್ನರ ಕನಸುಗಳಲ್ಲಿ ತಾಮ್ರದಲ್ಲಿ
ನೀಗ್ರೋಗಳಲ್ಲಿ ಉಪ್ಪು ಬಸಿಯುವವರಲ್ಲಿ
ಎಣ್ಣೆ ತೆಗೆಯುವವರಲ್ಲಿ
ಸಕ್ಕರೆಯಲ್ಲಿ ಉಪ್ಪಲ್ಲಿ ಕಾಫಿಯಲ್ಲಿ

ಕವಿತೆ ಬರೆಯಲಾಗದವನತ್ತ ಕವಿತೆಗಳೇ ಹರಿದು ಬಂದವು.

ಹವಾನಾದ ಕಾರ್ಮಿಕರ ಕಾಲೋನಿಯಲ್ಲಿ ರಾತ್ರಿಯಾಗಿತ್ತು. ಜನರ ದಂಡೇ ಸೇರಿತ್ತು ದಿನವೆಲ್ಲಾ ದುಡಿದು ಬಂದವರದ್ದು, ಆಗಸದಲ್ಲಿ ಚಂದ್ರ, ಗೆಳೆಯ ಸಿದ್ಧನಗೌಡ ಪಾಟೀಲ್ ಎತ್ತರದ ಕಂಠದಲ್ಲಿ ಹಾಡುತ್ತಿದ್ದರು.

ಭೂಮಿ ಮೇಲೆ ಸೂರ್ಯ ಚಂದ್ರ
ಇರುವವರೆಗೂ ನಿನ್ನ ಹೆಸರು
ಅಜರಾಮರ, ಚೆಗೆವಾರ, ಚೆಗೆವಾರ





## ಹಸ್ತ ಲಾ ವಿಕ್ಟೋರಿಯಾ ಸಿಯಂಪ್ರೆ

ಹಸ್ತ ಲಾ ವಿಕ್ಟೋರಿಯಾ ಸಿಯಂಪ್ರೆ -

ಕ್ಯೂಬನ್ನರಲ್ಲಿ ಕ್ಯೂಬನ್ನನಾಗಿ ಹೋಗಲು ಈ ನಾಲ್ಕು ಪದಗಳು ಸಾಕು. ಕ್ಯೂಬಾದ ಎದೆ ಬಡಿತಗಳಲ್ಲಿ ಇದೂ ಒಂದು. ಕ್ಯೂಬಾದ ಗೋಡೆಗಳ ಮೇಲೆ, ಮನೆಯೊಳಗೆ, ಎಲ್ಲೆಡೆ ಇದೇ ನಾಲ್ಕು ಶಬ್ದ. ಒಬ್ಬ ಕ್ರಾಂತಿಕಾರಿ ಇನ್ನೊಬ್ಬ ಕ್ರಾಂತಿಕಾರಿಯನ್ನು, ದೇಶವನ್ನು ಅಗಲುವಾಗ ಬರೆದ ಪತ್ರದ ಕೊನೆಯ ಸಾಲು ಇದು. ಆದರೆ ಈ ಸಾಲು ಈಗ ಕ್ಯೂಬಾದ ಅತ್ಯಂತ ಬೆಲೆಯುಳ್ಳ ಸಾಲಾಗಿದೆ. ಕ್ಯೂಬಾದಲ್ಲಿ ಫಿಡೆಲ್‌ರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಕ್ರಾಂತಿ ನಡೆಸಿದ ಚೆಗೆವಾರ ದಿಢೀರನೆ ಕ್ಯೂಬಾವನ್ನು ಅಗಲಿ ಬೊಲಿವಿಯಾಗೆ ತೆರಳುವ ಮುನ್ನ ಬರೆದ ಪತ್ರ ಇದು. ಜಯ ಸಿಕ್ಕುವವರೆಗೆ, ಎಂದೆಂದಿಗೂ ನಿಮ್ಮವನೇ - ಈ ಸಾಲನ್ನು ಈಗ ಕ್ಯೂಬಾ ತನ್ನ ನಾಲಿಗೆಯ ತುದಿಯಲ್ಲಿರಿಸಿಕೊಂಡಿದೆ.

ಕ್ರಾಂತಿಗಾಗಿ ನಡೆದ ದೀರ್ಘ ಹೋರಾಟ, ಕ್ರಾಂತಿಯ ಮರುಕ್ಷಣದಿಂದಲೇ ಆರಂಭವಾದ ಅಮೇರಿಕಾದ ಮುನಿಸು, ದಿಗ್ಬಂಧನ, ‘ಬೇ ಆಫ್ ಪಿಗ್ಸ್’ ನಲ್ಲಿ ಜರುಗಿದ ಯುದ್ಧ. ಸದಾ ನೆತ್ತಿಯ ಮೇಲೆ ಹಾರುವ ಸಿಐಎ ವಿಮಾನಗಳು, ಸೋವಿಯತ್ ದೇಶದ ಕುಸಿತ ... ಕ್ಯೂಬನ್ನರು ಸದಾ ಹೋರಾಟಗಾರರು. ಆ ಕಾರಣಕ್ಕಾಗಿಯೇ ಜಯ ಸಿಕ್ಕುವವರೆಗೆ ಎಂಬ ಮಾತು ಕ್ಯೂಬನ್ನರಿಗೆ ಅತ್ಯಂತ ಪ್ರಿಯ. ಚೆ ಅಂದೊಮ್ಮೆ ಫಿಡೆಲ್‌ಗೆ ಬರೆದ ಪತ್ರ ಇನ್ನೂ ಹೋರಾಟ ನಡೆಸುತ್ತಿರುವ ಕ್ಯೂಬಾದ ಜನತೆಗೆ ಮತ್ತೆ ಮತ್ತೆ ಸ್ಫೂರ್ತಿ ತುಂಬುವ ಚೇತನವಾಗಿದೆ.

‘ನೀವು ನನ್ನಲ್ಲಿಟ್ಟ ಅಗಾಧ ನಂಬಿಕೆಯನ್ನು ಹೊಸ ಯುದ್ಧಭೂಮಿಗಳಿಗೆ ಕೊಂಡೊಯ್ಯುತ್ತೇನೆ’ ಎಂದ ‘ಚೆ’ ಫಿಡೆಲ್‌ರಿಂದ ದೂರ ಹೋದರು…

ಈ ಜಗತ್ತಿನ ಬೇರೆ ಭಾಗಗಳಲ್ಲಿ ನನ್ನ ಅಲ್ಪಸೇವೆಗಳ ಅಗತ್ಯವಿದೆ.

ಅದು ನನ್ನಿಂದ ಸಾಧ್ಯ. ನಿಮಗೆ ಆ ಅವಕಾಶವಿಲ್ಲ. ಏಕೆಂದರೆ ನಿಮ್ಮ ಬೆನ್ನ ಮೇಲೆ ಈಗ ಕ್ಯೂಬಾದ ಜವಾಬ್ದಾರಿ ಇದೆ. ಆ ಕಾರಣಕ್ಕಾಗಿಯೆ ಈಗ ಅಗಲುವ ಸಮಯ. ನನ್ನನ್ನು ಮಗನಂತೆ ನೋಡಿಕೊಂಡ ಕ್ಯೂಬಾದ ಜನತೆಯನ್ನು ಅಗಲುತ್ತಿದ್ದೇನೆ. ಇದು ನನಗೆ ನೋವು ತರುತ್ತಿದೆ….

ಹಸ್ತ ಲಾ ವಿಕ್ಟೋರಿಯಾ ಸಿಯಂಪ್ರೆ

- **‘ಚೆ’**

ಕ್ಯೂಬನ್ನರ ಒಳಗೆ ನಾನು ಸೇರಿಕೊಳ್ಳುತ್ತಾ ಹೋದದ್ದೇ ಹೀಗೆ. ಉತ್ಸವದ ಮೆರವಣಿಗೆಯಲ್ಲಿ ಸುರಿದ ಹಾಡುಗಳು, ಎಲ್ಲೆಲ್ಲೂ ಮೊಳಗಿದ ಘೋಷಣೆಯ ಅರ್ಥ ಏನು ಎಂದು ಆಗ ಗೊತ್ತಾಗಿರಲಿಲ್ಲ. ಆದರೆ ನಡುರಾತ್ರಿ ಮನೆಗೆ ಬಂದ ನಾನು ರೂಮಿನೊಳಗೆ ತಲೆಗೆ ಹೊಕ್ಕಿದ್ದ ಪದಗಳನ್ನೇ ಗುಣ ಗುಣಿಸುತ್ತಿದ್ದಾಗ ಬಾಗಿಲು ತಟ್ಟಿದ ಶಬ್ದವಾಯಿತು. ತೆರೆದಾಗ ಗುಸ್ಟೋ, ಓಲಿವಾ ಇಬ್ಬರೂ ನಿಂತಿದ್ದರು. ಕಣ್ಣಲ್ಲಿ ಮಿಂಚು. ಕೈ ಕುಲುಕಿ ಹೇಳಿದರು. ‘ಹಸ್ತ ಲಾ ವಿಕ್ಟೋರಿಯಾ ಸಿಯಂಪ್ರೆ’ ನಾನು ಗುಣ ಗುಣಿಸುತ್ತಿದ್ದ ಪದಗಳಿಗೆ ಅರ್ಥ ವಿವರಿಸಲು ಯತ್ನಿಸಿದರು. ‘ಇಂಗ್ಲಿಸ್’ ಕೈಕೊಟ್ಟಿತು. ತಮ್ಮ ಬಳಿ ಇದ್ದ ಪುಸ್ತಕಗಳ ಪುಟ ತಿರುವಿ ತೋರಿಸಿದರು. ಏನು ಗೊತ್ತಾಗಲಿಲ್ಲ. ಆದರೆ ‘ಚೆ’ ಚಿತ್ರ ಕಂಡಿತು.

‘ಗ್ವಂತನಮೇರ ಗ್ವಜಿರ ಗ್ವಂತನಮೇರ’ ಗುಣುಗಿದಾಗ, ‘ಚೆಗೆವಾರ ಚೆಗೆವಾರ’ ಎಂದು ರಾಗ ಎತ್ತಿದಾಗ ಅವರು ಮತ್ತೆ ಮತ್ತೆ ನನ್ನ ಕಡೆ ನೋಡಿದರು.

ಉತ್ಸವದ ಸಂಕಿರಣಗಳಲ್ಲಿ, ಭಾಷಣಗಳಲ್ಲಿ, ಮೆಚ್ಚುಗೆಯನ್ನು ವ್ಯಕ್ತಪಡಿಸುವಾಗ ಹೀಗೆ ಮತ್ತೆ ಮೇಲಿಂದ ಮೇಲೆ ಕೇಳಿ ಬಂದ ಮತ್ತೊಂದು ಘೋಷಣೆ ‘ಪೇಟ್ರಿಯಾ ಓ ಮ್ಯೂರ್ಟೆ’ ‘ಸೋಷಿಯಲಿಸ್ಮೋ ಓ ಮ್ಯೂರ್ಟೆ’ ಈ ಎರಡೂ ಕ್ಯೂಬಾದ ಸೂರ್ಯ ಚಂದ್ರರು. ಕ್ರಾಂತಿಯ ನಂತರ ಕ್ಯೂಬಾ ಮೈ ಕೊಡವಿ ಎದ್ದು ನಿಲ್ಲಲು ಸಜ್ಜಾಗುತ್ತಿದ್ದಾಗ ಅಮೇರಿಕಾ ಸಂಕೋಲೆಯನ್ನು ತೊಡಿಸಲು ಆರಂಭಿಸಿತು. ಸಕ್ಕರೆ ಬೇಡ ಏನೂ ಬೇಡ ಎಂಬ ರಾಗ ತೆಗೆಯಿತು. ಕ್ಯೂಬಾ ಜಗ್ಗದಿದ್ದಾಗ ಬಾಂಬ್ ಎಸೆತ ಆರಂಭವಾಯಿತು. ಕ್ಯೂಬಾ ಕಂಗೆಡದೆ ಅಮೇರಿಕಾವನ್ನು ಬಗ್ಗು ಬಡಿಯಲು ಶಸ್ತ್ರಾಸ್ತ್ರಗಳನ್ನು ಕೊಡುವ ದೇಶಗಳನ್ನು ಹುಡುಕಿ ಹೊರಟಿತು. ಫ್ರೆಂಚ್ ನೌಕೆಯೊಂದರಲ್ಲಿ ಬಂದ ಶಸ್ತ್ರಾಸ್ತ್ರಗಳನ್ನು ಹವಾನಾದ ಬಂದರಿನಲ್ಲಿ ಇಳಿಸುತ್ತಿದ್ದಾಗ ದಿಢೀರ್ ಬಾಂಬ್ ಸ್ಫೋಟವಾಯಿತು. ನೂರಕ್ಕೂ ಹೆಚ್ಚು ಜನ ಛಿದ್ರವಾದರು.

ಇಡೀ ಕ್ಯೂಬಾ ಮಮ್ಮುಲ ಮರುಗಿತು. ಫಿಡೆಲ್ ಕ್ಯಾಸ್ಟ್ರೋ ನೇತೃತ್ವದಲ್ಲಿ ಜನಸಾಗರ ಸತ್ತವರಿಗಾಗಿ ಶೋಕ ಮೆರವಣಿಗೆ ನಡೆಸಿತು. ನೋವಿನಿಂದ ಭಾರವಾಗಿದ್ದ ಹೃದಯವನ್ನು ಹೊತ್ತ ಫಿಡೆಲ್‌ಕ್ಯಾಸ್ಟ್ರೋ ಅಮೇರಿಕಾದ ಸಿಐಎ ಪೆಂಟಗನ್ ಈ ದಾಳಿ ನಡೆಸಿದೆ ಎಂದು ಜನರಿಗೆ ತಿಳಿಸಿ ಹೇಳಿದರಲ್ಲದೆ ‘ತಾಯ್ನಾಡು



ಇಲ್ಲವೇ ಸಾವು’ ‘ಪೇಟ್ರಿಯಾ ಓ ಮ್ಯೂರ್ಟೆ’ ಎಂದು ಘೋಷಿಸಿದರು. ಅದೇ ಮುಂದೆ ಪ್ರಸಿದ್ಧ ಘೋಷಣೆಯಾಯಿತು. ಕ್ಯೂಬಾ ಬದಲಾವಣೆಯ ಹರಿಕಾರನಾಯಿತು. ಒಂದೊಂದೇ ಹೆಜ್ಜೆ ಸಾವಿರಾರು ಜನರಿಗೆ ಹೊಸ ಬೆಳಕು ನೀಡಿತು. ಕೃಷಿ ಭೂಮಿ ಉಳುವವರಿಗೆ, ನೊಂದವರಿಗೆ ಸಿಕ್ಕಿತು. ಮನೆ ಇಲ್ಲದವರು ಮನೆಯೊಳಗೆ ಸೇರಿದರು, ಕೈಗಾರಿಕೆಗಳು ಕಾರ್ಮಿಕರನ್ನು ಕೂಗಿ ಕರೆದವು ಹವಾನಾದ ಕ್ರಾಂತಿ ಚೌಕದಲ್ಲಿ ಫಿಡೆಲ್ ಘೋಷಿಸಿದರು. ‘ಸೋಷಿಯಲಿಸ್ಮೋ ಓ ಮ್ಯೂರ್ಟೆ ’ ‘ಸಮಾಜವಾದ ಇಲ್ಲವೇ ಸಾವು’

ಇದರೊಂದಿಗೆ ಮತ್ತೊಂದು ದನಿ ಇದೆ. ಕ್ಯೂಬನ್ನರು ಪ್ರತೀ ಬಾರಿ ಸಂಕಷ್ಟಗಳ ಪ್ರವಾಹ ಬಂದಾಗಲೆಲ್ಲಾ ಹಿಡಿದ ಹುಲ್ಲುಕಡ್ಡಿ ಅದು. ಈ ಹುಲ್ಲುಕಡ್ಡಿಯೇ ಕ್ಯೂಬಾದ ಪ್ರತಿಯೊಬ್ಬರನ್ನು ತನ್ನ ಮೇಲೆ ಕೂರಿಸಿಕೊಂಡು ಹೊಸ ದಾರಿ ಹುಡುಕುತ್ತಾ ನಡೆದಿದೆ. ಅದೇ ‘ವೆನ್ಸಿರಿಮೋಸ್ ’ -

ವಿ ಶಲ್ ಓವರ್‌ಕಂ - ಗೆದ್ದೇ ಗೆಲ್ಲುವೆವು.

ಗೆದ್ದೇ ಗೆಲ್ಲುವೆವು ಎಂಬ ಭಾವ ಕೂಗಿ ಹೇಳಬೇಕಾಗಿದ್ದಿಲ್ಲ. ಕ್ಯೂಬನ್ನರ ಪ್ರತೀ ಮುಖದಲ್ಲೂ ಈ ಘೋಷಣೆ ಪಳಪಳ ಹೊಳೆಯುತ್ತಿದೆ. ಪ್ರತಿಯೊಬ್ಬರೂ ಅಚಲ ವಿಶ್ವಾಸಿಗಳು. ಅವರಿಗೆ ಚೆನ್ನಾಗಿ ಗೊತ್ತು. ನಾವು ಗೆದ್ದೇ ಗೆಲ್ಲುವೆವು. ಇದು ಕ್ಯೂಬನ್ನರಿಗೆ ಕೇವಲ ಹುಸಿ ಭರವಸೆಯಲ್ಲ. ಏಕೆಂದರೆ ಪ್ರತೀ ಬಾರಿಯೂ ಅವರು ಗೆದ್ದು ಬಂದಿದ್ದಾರೆ. ನಿನ್ನೆ, ಇಂದು ಗೆದ್ದು ಬಂದಿದ್ದಾರೆ ಅಂತೆಯೇ ನಾಳೆ ಗೆದ್ದೇ ಗೆಲ್ಲುವೆವು ಎಂಬ ಆಶಯ ಹುದುಗಿಸಿಟ್ಟುಕೊಂಡಿದ್ದಾರೆ.

ಫಿಡೆಲ್ ಕ್ಯಾಸ್ಟ್ರೋ ೧೯೬೦ರಲ್ಲಿ ಸಮ್ಮೇಳನವೊಂದರಲ್ಲಿ ಮಾತನಾಡುತ್ತಾ ಹೇಳಿದರು ಯಾವ ಬೆಲೆ ತೆರಬೇಕಾಗಿ ಬಂದರೂ ಸರಿಯೇ ನಮ್ಮ ಜನತೆ ಗೆದ್ದೇ ಗೆಲ್ಲುತ್ತಾರೆ. ಏಕೆಂದರೆ ಈ ದೇಶದ ಜನತೆಗೆ ಧೈರ್ಯವಿದೆ, ದೇಶ ಪ್ರೇಮವಿದೆ, ಇಂತಹ ಪ್ರತಿಜ್ಞೆ ಕೈಗೊಳ್ಳುವ ಏಕತೆ ಇದೆ. ಏಕೆಂದರೆ ಪ್ರತಿಯೊಬ್ಬರೂ ತಾಯ್ನಾಡು ಇಲ್ಲವೇ ಸಾವು ಎಂದು ಘೋಷಿಸಿದ್ದಾರೆ. ನಮ್ಮೆಲ್ಲರಿಗೂ ಇರುವ ಘೋಷಣೆ ತಾಯ್ನಾಡು ಇಲ್ಲವೇ ಸಾವು. ಆದರೆ ಮುಂದೆ ಗೆದ್ದು ಬರಲಿರುವ ಜನತೆಗೆ ಘೋಷಣೆ ‘ವೆನ್ಸಿರಿಮೋಸ್’ ವಿ ಶಲ್ ಓವರ್‌ಕಂ.

ಕ್ಯೂಬಾದಲ್ಲಿ ನಡೆದಾಡಿದ ಎಲ್ಲರಿಗೂ ಅರಿವಾಗುತ್ತದೆ– ಅವರು ಗೆದ್ದೇ ಗೆಲ್ಲುವರು.



## ಪ್ರೀತಿ ಇಲ್ಲದ ಮೇಲೆ...

ಅಂದು ನನ್ನ ಬಳಿ ಇದ್ದದ್ದು ಕಣ್ಣೀರು.

ಕ್ಯೂಬಾದಿಂದ ಹೊರಡುವ ದಿನ, ಗಂಟೆ, ನಿಮಿಷಗಳು ಹತ್ತಿರವಾಗುತ್ತಿದ್ದಂತೆ ನಾನಿದ್ದ ಮನೆಯಲ್ಲಿ ಚಡಪಡಿಕೆ. ದಿನಗಟ್ಟಲೆ ಕುಳಿತು ಒಟ್ಟಿಗೇ ಊಟಮಾಡಿ ಬೀದಿಗಳಲ್ಲಿ ಓಡಾಡಿ ಗೊತ್ತಿಲ್ಲದ ಭಾಷೆಯಲ್ಲಿ ಹರಟೆ ಹೊಡೆದು ಪ್ರೀತಿಯನ್ನು ಹಂಚಿಕೊಂಡಿದ್ದ ನಮ್ಮ ಮಧ್ಯೆ ಶೇಕ್ಸ್‌ಪಿಯರ್ ಬಣ್ಣಿಸಿದ ಆ ಕಾಣದ ಎಳೆಗಳು ಬೆಸೆದು ಹೋಗಿದ್ದವು. ಹೃದಯ ಮೀಟುವ ತಂತಿಗಳಾಗಿದ್ದವು.

ಭಾರತಕ್ಕೆ ಇನ್ನೇನು ಹಾರಿಹೋಗುವ ನನಗೆ ನೆನಪಿಗಾಗಿ ಏನಾದರೂ ಕೊಡಬೇಕು ಎಂಬ ಚಡಪಡಿಕೆ ಅವರದ್ದು. ಬೆಂಕಿ ಪೊಟ್ಟಣ ಇಲ್ಲದ, ಒಳ್ಳೆಯ ಬನ್ ಇಲ್ಲದ, ಹಾಲಿಲ್ಲದ ಅವರು ಏನಾದರೂ ಕೊಡಬೇಕು ಎಂದು ಗಡಿಬಿಡಿಯಲ್ಲಿ ಓಡಾಡುತ್ತಲೇ ಇದ್ದರು. ಇನ್ನೇನು ಮನೆ ಬಿಟ್ಟು ಹೊರಗೆ ಕಾಲಿಡಬೇಕು ಎನ್ನುವ ಸಮಯಕ್ಕೆ ಓಡಿ ಬಂದ ಅವರು ನನ್ನ ಕೈಗಿಟ್ಟದ್ದು ಸ್ಪಾನಿಷ್ ಭಾಷೆಯಲ್ಲಿದ್ದ ಚೆಗೆವಾರನ ಬೊಲಿವಿಯಾ ಡೈರಿ ಮತ್ತು ತಮ್ಮ ದೇಶದ ಬಾವುಟ.

ಆಗ ನನ್ನ ಬಳಿ ಇದ್ದದ್ದು ಕಣ್ಣೀರು ಮಾತ್ರ.

ಚೆಗೆವಾರನ ಸ್ಪಾನಿಷ್ ಭಾಷೆಯ ಬೊಲಿವಿಯಾ ಡೈರಿಯನ್ನು ಅರ್ಥಮಾಡಿಕೊಳ್ಳಲು ಭಾಷೆ ಅಡ್ಡಿಯಾಗಲಿಲ್ಲ. ಸಿಡಿದೆದ್ದರೆ ನೀನು ನನ್ನ ಸಂಗಾತಿ ಎಂದ 'ಚೆ' ಎದೆಯಾಳದ ಮಾತುಗಳು ಇನ್ನೊಂದು ಎದೆಗೆ ತಾಕಲು ಮಧ್ಯೆ ಇರುವ ಗೋಡೆಯಾದರೂ ಯಾವುದು? ದೇಶ ಗೊತ್ತಿಲ್ಲದೆ, ಭಾಷೆ ಗೊತ್ತಿಲ್ಲದೆ ಜಗತ್ತಿನ ಮೂಲೆ ಮೂಲೆಗೆ ಹರಡಿಹೋಗಿರುವ ಚೆಗೆವಾರ ತನ್ನ ಮಾತನ್ನು ಮೊಗೆದು ಕೊಟ್ಟಿರುವಾಗ ಹರಿಯುವ ನೀರಿಗೆ ಯಾವ ಹೊಳೆ, ಹಾರುವ ಹಕ್ಕಿಗೆ ಎಲ್ಲಿ ನೆಲೆ...

ಅವರು ತಮ್ಮ ದೇಶದ ಬಾವುಟವನ್ನು ಸೃಷ್ಟಿಸಿದರು ಹರಿದ ಚಿಂದಿ ಬಟ್ಟೆಯ ಮೂಲಕ.... ಎಂದಿದ್ದ ಪ್ಯಾಬ್ಲೋ ನೆರೂದ. ಕ್ಯೂಬಾದ ಬಾವುಟ ನನ್ನ ಕೈಯಲ್ಲಿತ್ತು. ಹರಿದ ಚಿಂದಿ ಬಟ್ಟೆಗಳನ್ನು ಸೇರಿಸಿ



ಹೊಲಿಗೆ ಹಾಕಿದ ತಮ್ಮೆಲ್ಲಾ ಪ್ರೀತಿಯನ್ನು ಧಾರೆ ಎರೆದ, ಆತ್ಮವಿಶ್ವಾಸ, ಮಾನವೀಯತೆಯ ಹೊಲಿಗೆ ಹಾಕಿದ, ಬಾವುಟ ನನ್ನ ಕೈಯಲ್ಲಿತ್ತು.

ಪ್ರೀತಿ ಇಲ್ಲದ ಮೇಲೆ
ಹೂವು ಅರಳೀತು ಹೇಗೆ? ಮೋಡ ಕಟ್ಟೀತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ?

ಪ್ರೀತಿ ಇಲ್ಲದ ಮೇಲೆ
ಮಾತಿಗೆ ಮಾತು ಕೂಡೀತು ಹೇಗೆ?
ನಮ್ಮ ನಿಮ್ಮ ಮನಸ್ಸು
ಮರುಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ?

ಕವಿತೆ ತಲೆಯೊಳಗೆ ಹಾದು ಹೋಯಿತು. ಅನಿಸಿತು -

ಪ್ರೀತಿ ಇಲ್ಲದ ಮೇಲೆ
ಕ್ಯೂಬಾದ ಕಷ್ಟ ಅರ್ಥವಾಗುವುದು ಹೇಗೆ?

ಕ್ರಾಂತಿ ನಮ್ಮನ್ನು ಮನುಷ್ಯರನ್ನಾಗಿ ಮಾಡುತ್ತದೆ ಎಂದಿದ್ದ ಚೆಗೆವಾರ. ಸೋಲುಗಳನ್ನು ಏಣಿ ಮಾಡಿಕೊಂಡು ಮೇಲೇರಿದ ಕ್ಯೂಬಾ ನೋವುಗಳನ್ನು ಹೊದ್ದು ನಗುವನ್ನು ಚಿಮ್ಮಿಸಿತ್ತು.

ಎಕ್ಕುಂಡಿ ಹೇಳಿದ್ದು ಮತ್ತೆ ನೆನಪಾಯಿತು - ಹಲವರು ಯೋಧರಾಗಿ ರಣರಂಗಕ್ಕೆ ಹೋಗುತ್ತಾರೆ. ಅದು ಸಾಧ್ಯವಾಗದೇ ಉಳಿದವರು ಅವರಿಗೆ ಕತ್ತಿ, ಗುರಾಣಿ ಶಸ್ತ್ರಗಳನ್ನು ತಯಾರಿಸಿಕೊಡಬೇಕು. ಕ್ಯೂಬಾ ಇಂದು ಅಮೇರಿಕಾದ ದೈತ್ಯಶಕ್ತಿಯ ವಿರುದ್ಧ ಸೆಣಸುತ್ತಿದೆ. ಅದಕ್ಕೆ ಬೇಕಾಗಿರುವುದು ಕತ್ತಿ, ಗುರಾಣಿ. ಅಮೇರಿಕಾದ ಸಾಮ್ರಾಜ್ಯಶಾಹಿ ಜಗತ್ತಿನ ತುಂಬಾ ಕತ್ತಲು ಹರಡುತ್ತಿರುವಾಗ ಕ್ಯೂಬಾ ಕತ್ತಿ, ಗುರಾಣಿ ಹಿಡಿದು ನಿಂತಿದೆ. ಸೂರ್ಯ ಮುಳುಗುತ್ತಿದ್ದಾನೆ, ಅಯ್ಯೋ ಕತ್ತಲಾಯಿತಲ್ಲ ಎಂದು ಲೋಕವೆಲ್ಲ ಅಳುತ್ತಿದೆ. ಆಗ ಪುಟ್ಟ ಹಣತೆಯೊಂದು ಆಶ್ವಾಸನೆ ಕೊಡುತ್ತದೆ 'ಹೆದರಬೇಡಿ ನಾನಿದ್ದೇನೆ'.ಕ್ಯೂಬಾ ಇಂತಹ ಪುಟ್ಟ ಹಣತೆ. ಇಡೀ ಗಾಡಾಂಧಕಾರವನ್ನೆಲ್ಲಾ ಒಂದು ಪುಟ್ಟ ಹಣತೆ ನುಂಗಿ ನೊಣೆಯುವ ಹಾಗೆ ಕ್ಯೂಬಾ ಜಗತ್ತಿಗೆ ಸಾರಿ ಹೇಳುತ್ತಿದೆ: ಹೆದರಬೇಡಿ ನಾನಿದ್ದೇನೆ.

ಪುಟ್ಟ ಹಣತೆಯ ದೇಶದಿಂದ ಭಾರತಕ್ಕೆ ಹಿಂದಿರುಗುವಾಗ ಇಂಗ್ಲೆಂಡ್‌ನಲ್ಲಿಳಿದೆ. ಗ್ರೀನ್‌ವಿಚ್‌ನ ಮೂಲಕ ಇಡೀ ಜಗತ್ತಿಗೆ ಸೂರ್ಯ ಚಂದ್ರರನ್ನು ಕೊಡುತ್ತೇನೆ ಎಂದು ಭಾವಿಸಿರುವ ಇಂಗ್ಲೆಂಡ್‌ನಲ್ಲಿ ಎಲ್ಲೆಲ್ಲೂ ಫಲಕಗಳು - ಹೊಸ ಶತಮಾನ ಇಲ್ಲಿಂದ ಆರಂಭವಾಗುತ್ತದೆ.

ಮನಸ್ಸು ಹೇಳಿತು

**'ಅಲ್ಲ ಕ್ಯೂಬಾದಲ್ಲಿ'**



# ಭಿನ್ನ ದೃಷ್ಟಿಕೋನದ ಪ್ರವಾಸ ಕಥನ

**ಕೇಶವ ಶರ್ಮ ಕೆ.**

ನಮ್ಮಲ್ಲಿ ಪ್ರವಾಸ ಕಥನಗಳಿಗೆ ಒಂದು ಪರಂಪರೆಯಿದೆ. ಹಾಗೆಯೇ ಪ್ರವಾಸ ಕಥನಗಳು ಬಿತ್ತರಿಸುವ ವಿವರಗಳು ಕೂಡಾ ಕಥನವನ್ನು ಬೇರೊಂದು ಮಾದರಿಯಲ್ಲಿ ನಿರ್ದಿಷ್ಟ ಮಾದರಿಯ ವೈಚಾರಿಕ ಆಕೃತಿಯನ್ನು ಪಡೆದುಕೊಂಡಿವೆ. ಪ್ರವಾಸವೆಂದರೆ ಅಷ್ಟೆ. ಊರು ಬಿಟ್ಟು ಮತ್ತೊಂದು ಊರಿಗೆ ಹೋಗುವುದು ಮತ್ತು ಅಲ್ಲಿಗೆ ಹೋಗಿ ಬಂದ ಮೇಲೆ ಅದರ ವಿವರವನ್ನು ಓದುಗರ ಮುಂದಿಡುವುದು ಮತ್ತು ಪ್ರವಾಸ ಕಥನವೆಂದರೆ ಅದರಲ್ಲಿ ಪ್ರವಾಸ ಮಾಡಿದವರು ಯಾವುದನ್ನು ನೋಡಿದ್ದಾರೆ ಅದನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುವ ಕ್ರಮ. ಪ್ರವಾಸವೆಂದರೆ ಅದರ ಹಿನ್ನೆಲೆಯಲ್ಲಿ ಸಹಜವಾಗಿಯೇ ವಿರಾಮ ಮತ್ತು ಮೋಜಿನ ಸೂಚನೆಗಳಿವೆ.

ಅದರಲ್ಲಿಯೂ ನಮ್ಮಲ್ಲಿ ವಿದೇಶ ಪ್ರವಾಸವೆಂದರೆ ನಮ್ಮ ಕಣ್ಣ ಮುಂದೆ ಬರುವುದು. ಯಾವುದನ್ನು ನಾವೀಗ ದೊಡ್ಡ ಮತ್ತು ಶ್ರೀಮಂತ ರಾಷ್ಟ್ರಗಳೆಂದು ಕರೆಯುತ್ತೇವೆಯೋ ಅವುಗಳ ಕುರಿತ ವಿವರಣೆಯೇ ನಿಜವಾದ ವಿದೇಶಿ ಪ್ರವಾಸ ಕಥನಗಳೆಂಬ ಭಾವನೆ ಅಂತಸ್ಥವಾಗಿದೆ. ಸಾಮಾನ್ಯರ ದೃಷ್ಟಿಯಲ್ಲಿ 'ಅಮೆರಿಕಾ', 'ಇಂಗ್ಲೆಂಡ್', 'ಜಪಾನ್' ರಾಷ್ಟ್ರಗಳಿಗೆ ನಾವು ಪ್ರವಾಸ ಮಾಡಿದರೆ ಅದು ಶ್ರೇಷ್ಠವೆಂಬ ಕಲ್ಪನೆಯಿದೆ. ಇಲ್ಲಿ ಕೆಲವರು ಈ ರೀತಿಯ ರಾಷ್ಟ್ರಗಳಿಗೆ ಹೋಗಿ ಬಂದ ಮೇಲೆ 'ನಾನು ಇಂಗ್ಲೆಂಡಿನಲ್ಲಿದ್ದಾಗ', 'ನಾನು ಅಮೆರಿಕೆಯಲ್ಲಿದ್ದಾಗ' ಎಂಬಂಥ ಅಣಿಮುತ್ತುಗಳನ್ನು ಉದುರಿಸುತ್ತಾರೆ.

ಪರೋಕ್ಷವಾಗಿ ನಾವು ಮುಂದುವರಿದ ರಾಷ್ಟ್ರಗಳನ್ನು ನೋಡಿ ಬಂದ ಮೇಲೆ ಭಾರತವು ಯಾವ ಲೆಕ್ಕವೆಂಬಂಥ ತರ್ಕಗಳೇ ತುಂಬಿರುತ್ತವೆ. ನಮ್ಮಲ್ಲಿ ಚೀನಾದ ಬಗ್ಗೆ ಪ್ರವಾಸ ಕಥನ ಬಂದಿದೆಯೇ? ಯಾಕೆ ಇನ್ನೂ ಅನೇಕ ಪರದೇಶಗಳ ಬಗ್ಗೆ ನಮಗೆ ಆಸಕ್ತಿಯಿಲ್ಲ? ಈ ಪ್ರಶ್ನೆಯನ್ನು ಸ್ವಲ್ಪ ಮುಂದುವರಿಸಿದರೆ ನಾವು ಎದುರಿಸಬೇಕಾದುದು ತಾತ್ವಿಕ ಸತ್ಯಗಳನ್ನೇ. ಪ್ರವಾಸವೆಂದರೆ ಮೋಜು ಎಂಬ ಕಲ್ಪನೆಗೆ ಅನೇಕ ದೇಶಗಳು ಒಳಗೊಳ್ಳುವುದಿಲ್ಲ ಮತ್ತು ನಮ್ಮಲ್ಲಿ ಇನ್ನೂ ಅನೇಕರಿಗೆ ಬೀಳುತ್ತಿರುವುದು ಅಮೆರಿಕಾದ ಕನಸು. ಈ ರೀತಿಯ ಕನಸುಗಳನ್ನು ಬಿತ್ತದೆ ಬೇರೊಂದು ರೀತಿಯ ಕನಸನ್ನು ಬಿತ್ತಿದ ದೇಶವೆಂದರೆ ಕ್ಯೂಬಾ.

ಕ್ಯೂಬಾ ಅನೇಕ ಕಾರಣಗಳಿಂದ ಕುತೂಹಲಕರವಾದ ದೇಶ ಮತ್ತು ಅನೇಕರಿಗೆ ಕ್ಯೂಬಾ ಸದ್ಯದ ಸ್ಥಿತಿಯಲ್ಲಿ ಒಂದು ಮಾದರಿ. ಜಾಗತೀಕರಣ, ಮತ್ತೊಂದು ಮಗದೊಂದು ನಮ್ಮ ಮನೆಯೊಳಗೆ ಕಾಲಿಡುತ್ತಿರುವ ಸಂದರ್ಭದಲ್ಲಿ ಅಮೆರಿಕಾಕ್ಕೆ ಸೆಟೆದು ನಿಂತದ್ದು ಕ್ಯೂಬಾ, ಕ್ಯಾಸ್ಟ್ರೋರ ಕನಸು ಆಶಾದಾಯಕ. ಅಮೆರಿಕಾ ಎಂಬ ದೇಶವನ್ನು ಮಣಿಸಲು ಸಾಧ್ಯವಾದುದು ಕ್ಯಾಸ್ಟ್ರೋಗೆ. ಜಿ.ಎನ್. ಮೋಹನ್ ಅವರು ಪ್ರವಾಸ ಕಥನ ಬರೆದುದು ಕ್ಯೂಬಾದ ಬಗೆಗೆ. ಮಾಮೂಲಿಯಾಗಿ ರೂಪುಗೊಳ್ಳುವ ಪ್ರವಾಸ ಕಥನಕ್ಕಿಂತ ಇದು ಭಿನ್ನವಾದ ಮಾದರಿಯಾಗಿದೆ. ಬಹುತೇಕ ಪ್ರವಾಸ ಕಥನಗಳು ಆಯಾ ದೇಶದ ವಿವರವನ್ನು ಮಂಡಿಸುವಾಗ ಹೊಗಳುವಿಕೆಯ ರೂಪಗಳಿದ್ದು ಪ್ರವಾಸ ಕಥನಗಳು ಕೆಲವೇ ವಿವರಗಳನ್ನು ಮಂಡಿಸಿ ಮುಕ್ತಾಯಗೊಳ್ಳುತ್ತವೆ. 'ನನ್ನೊಳಗಿನ ಹಾಡು ಕ್ಯೂಬಾ' ನಿಜವಾಗಿಯೂ ಹಾಡಿನಂತೆಯೇ ಇದೆ. ಎರಡು ಪುಟವನ್ನು ಓದಿದರೆ ಸಾಕು ಜಿ.ಎನ್. ಮೋಹನ್ ಅವರ ನಿರೂಪಣೆಯಲ್ಲಿರುವ ಕಾವ್ಯಾತ್ಮಕ ಶಕ್ತಿಯು ನಮ್ಮನ್ನು ಸೆಳೆಯುತ್ತಿದೆ. 'ಕ್ಯೂಬಾ ಅಂದಿನಿಂದ ನನ್ನೊಂದಿಗಿದೆ. ಕನಸಾಗಿ, ಹಾಡಾಗಿ, ಬಂಡೇಳುವ ಹುಮ್ಮಸ್ಸಾಗಿ, ಕವಿತೆಯ ಸಾಲುಗಳಾಗಿ, ನನಗೆ ಫಿಡೆಲ್, ಚೆ, ಮಂಡೇಲ ಎಲ್ಲರೂ ಸೋನೆ ಹನಿಗಳಾಗಿ ಕಂಡಿದ್ದಾರೆ. ಈ ನೆಲಕ್ಕೆ ಹಸಿರು ಮುಕ್ಕಳಿಸುವ ತಾಕತ್ತು ಕೊಟ್ಟಿದ್ದರೆ ಅದು ಇಂತಹ ಅನೇಕಾನೇಕ ಸೋನೆ ಹನಿಗಳು ಎಂಬ ನಂಬಿಕೆ. ಸೋನೆ ಹನಿಗಳು ಉದುರಿ ಎದೆಗೂಡು ಸೇರಿಕೊಂಡು ಬೆಚ್ಚನೆಯ ಹಾಡಲ್ಲಿ ಹಾಡಾಯಿತು. ನನ್ನ ಸಂಕಲನದ ಸಾಲು ಅದು'– ಈ ಮಾದರಿಯ ನಿರೂಪಣೆಯು ನಮ್ಮ ಗಮನ ಸೆಳೆಯುತ್ತದೆ.

ಎರಡನೆಯದಾಗಿ ಈ ಪ್ರವಾಸ ಕಥನವು ಕೇವಲ ವರ್ಣನೆಗಳನ್ನೇ ತುಂಬಿಕೊಂಡು ಅದರಲ್ಲಿಯೇ ತನ್ಮಯವಾಗಿಲ್ಲ. ಕ್ಯೂಬಾದ ಚರಿತ್ರೆ, ಅದರ ಹಿಂದು, ಮುಂದನ್ನು ಸರಿಯಾದ ರೀತಿಯಲ್ಲಿ ನಮ್ಮೆದುರು ತಂದು ನಿಲ್ಲಿಸುತ್ತದೆ. 'ಮಣಿ' ಎನ್ನುವ ಅಮೆರಿಕಾ 'ಮಣಿಯಲಾರೆ' ಎನ್ನುವ ಕ್ಯೂಬಾ ಇಂದು ಜಗತ್ತಿನ ಈ ತುದಿಯ ಕಥೆಯಾಗಿ ಉಳಿದಿಲ್ಲ. ತನ್ನ ಕಾಲ ಮೇಲೆ ತಾನು ನಿಲ್ಲುವ ಬಯಕೆಗಳು ಮೂಡಿದ ಕಡೆಯೆಲ್ಲಾ ಈ ಕ್ಯೂಬಾ ಅಮೆರಿಕಾ ಸೃಷ್ಟಿಯಾಗಿದೆ. ದೇಶಗಳ ನಡುವೆ, ದೇಶಗಳ ಒಳಗೆ, ಮನೆಯೊಳಗೆ ಹಾಗೆ ಮನಸ್ಸಿನ ಒಳಗೂ ಈ ಹೊತ್ತಿಗೆ ಅಮೆರಿಕಾ ಕೇವಲ ಕ್ಯೂಬಾ ಒಂದಕ್ಕೆ ಇದನ್ನು ಹೇಳಿಲ್ಲ. ಅನೇಕ ದೇಶಗಳಿಗೆ ಅದು ಈ ರೀತಿಯ ಒತ್ತಡಗಳನ್ನು ತಂದಿದೆ. ಅದರ ಮಾತಿಗೆ ಮರುಳಾದ ನಮ್ಮವರು ಅದಕ್ಕೆ ಬೇಕಾದಂತೆ ಕುಣಿಯುತ್ತಿದ್ದಾರೆ. ಅದು ಒಡ್ಡುತ್ತಿರುವ ಆಮಿಷಗಳು ಒಂದೆರಡಲ್ಲ. ಅದರಿಂದಲೇ ಮೊನ್ನೆ ಮೊನ್ನೆಯ ತನಕ ಕಂಪ್ಯೂಟರ್ ವಿದ್ಯಾಭ್ಯಾಸದಿಂದ ಹಿಡಿದು ಜೋತಿಷ್ಯ ಶಾಸ್ತ್ರವೂ ಕೂಡಾ ಅಮೆರಿಕಾದ ಮಾರುಕಟ್ಟೆಗೆ ಹೇಗೆ ಬೇಕೋ ಆ ರೀತಿಯಲ್ಲಿ ರೂಪಿಸಲು ಪ್ರಯತ್ನಿಸಲಾಯಿತು. ಈ ಪ್ರವಾಸ ಕಥನ ನಾವು ಈ ರೀತಿಯ ಅನೇಕ ಸಂಗತಿಗಳನ್ನು ನೆನಪಿಡಬೇಕು. ಯಾಕೆಂದರೆ, ಕ್ಯೂಬಾ ಎದುರಿಸಿ ನಿಂತಿದ್ದು ಈ ರೀತಿಯ ಸಂಗತಿಗಳನ್ನು. ಅಮೆರಿಕಾ ಕ್ಯೂಬಾವನ್ನು ಮಣಿಸಲು ಆಡದ ಆಟಗಳಿಲ್ಲ. ಅದರ ಫಿಡಲ್ ಮತ್ತು ಕ್ಯೂಬಾದ ಜನರು ಅದನ್ನು ಲಕ್ಷ್ಯಕ್ಕೆ ತಂದುಕೊಳ್ಳಲೇ ಇಲ್ಲ.

'ಕಾಫಿ ವಿತ್ ಮಿಲ್ಕ್ ಪ್ಲೀಸ್'ನಲ್ಲಿ ಕಾಫಿಯೊಡನೆ ಹಾಲು ಬೆರೆಸುವ ಕ್ರಮವು ಬ್ರಿಟೀಷರೊಂದಿಗೆ ಹೇಗೆ ಭಾರತದ ಅಡುಗೆ ಮನೆಯೊಳಗೆ ಕಾಲಿಟ್ಟಿದೆ ಎಂದು ಮೋಹನ್ ವಿವರಿಸಿದ್ದಾರೆ.

**1959** ಜನವರಿ ಒಂದು – ಕ್ಯೂಬಾ ಸ್ವತಂತ್ರಗೊಂಡಿತು. ಆದರೆ ಅದು ಎದುರಿಸಿದ ಸಂಕಟಗಳು ಅದಕ್ಕೆ ಹೇರಲಾಗಿದ್ದ ಆರ್ಥಿಕ ದಿಗ್ಬಂಧನ ಮುಂತಾದವುಗಳನ್ನು ಮೋಹನ್ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ. ಮಾತೆತ್ತಿದರೆ ಅಮೆರಿಕ ಎಂದು ಹೇಳುವ ವಿದ್ವಾಂಸರು, ರಾಜಕಾರಣಿಗಳು ಈ ಪುಸ್ತಕವನ್ನು ಓದುವುದು ಒಳ್ಳೆಯದು. ಒಂದು ಒಳ್ಳೆಯ ಬೆಳವಣಿಗೆಯೆಂದರೆ ರಾಜಕೀಯವಾಗಿ ಉಳಿಯಬೇಕಾದ ನಿಲುವು ಹೇಗಿರಬೇಕು ಎಂಬುದನ್ನು ಈ ಪ್ರವಾಸ ಕಥನವು ನಮ್ಮ ಮುಂದಿಡುತ್ತದೆ. ಈ ಪ್ರವಾಸ ಕಥನದ ಕೊನೆಯಲ್ಲಿ ಮೋಹನ್ ಹೇಳುವ ಮಾತಿಗೆ ನಾವೂ ಧ್ವನಿಗೂಡಿಸಬಹುದು.

'ಸೂರ್ಯ ಮುಳುಗುತ್ತಿದ್ದಾನೆ. ಅಯ್ಯೋ ಕತ್ತಲಾಯಿತಲ್ಲ ಎಂದು ಲೋಕವೆಲ್ಲ ಅಳುತ್ತಿದೆ. ಆಗ ಪುಟ್ಟ ಹಣತೆಯೊಂದು ಆಶ್ವಾಸನೆ ಕೊಡುತ್ತಿದೆ 'ಹೆದರಬೇಡಿ ನಾನಿದ್ದೇನೆ'. ಕ್ಯೂಬಾ ಇಂತಹ ಪುಟ್ಟ ಹಣತೆ.

ಇಡೀ ಪ್ರವಾಸ ಕಥನ ಓದಿ ಮುಗಿಸಿದಾಗ ಕ್ಯೂಬಾದ ಆತ್ಮವಿಶ್ವಾಸ, ಎದ್ದು ನಿಲ್ಲುವ ಕನಸುಗಾರಿಕೆ ನಮ್ಮ ದೇಶದಲ್ಲಿಯೂ ಇರಬಾರದೇ ಎಂದೆನಿಸುತ್ತಿದೆ. ಮೋಹನ್ ಇದನ್ನು ಬರೆದು ಉಪಕರಿಸಿದ್ದಾರೆ. ಕ್ಯೂಬಾದ ಬಗ್ಗೆ ಹೇಳಲು ಒಂದು ಪುಸ್ತಕ ಸಿಕ್ಕಿದಂತಾಯಿತು.



## ಹೊಸ ಚಿಂತನೆಯ ಬೆಳಕು

**ಡಾ. ವಿನಯಾ ವಕ್ಕುಂದ**

ಯಾವುದೇ ಶ್ರೇಷ್ಠ ಕೃತಿ ತನ್ನ ಹೊರಮೈ ವಿನ್ಯಾಸವನ್ನು ಒಳವಿನ್ಯಾಸದ ಮೂಲಕ ಉಲ್ಲಂಘಿಸುತ್ತ, ಅದೊಂದು ಕಥೆಯೋ ಕಾವ್ಯವೋ ನಾಟಕವೋ ಆಗಿ ಉಳಿಯದೆ ಅಂತಿಮವಾಗಿ ಅದೊಂದು ಕೃತಿಯಾಗಿ ಸೃಜನಶೀಲ ಜೀವಂತಿಕೆಯನ್ನು ಪಡೆಯುತ್ತದೆ. ಜಿ.ಎನ್. ಮೋಹನ್ ಅವರ 'ನನ್ನೊಳಗಿನ ಹಾಡು ಕ್ಯೂಬಾ' ಪ್ರವಾಸ ಕಥನವೆಂಬ ಹಣೆಪಟ್ಟಿ ಹೊಂದಿದ್ದರೂ ಒಮ್ಮೆ ಕಾವ್ಯವಾಗಿ, ಮತ್ತೊಮ್ಮೆ ಕಥೆಯಾಗಿ, ಇನ್ನೊಮ್ಮೆ ಆತ್ಮಕಥನವಾಗಿ, ಅಂತಿಮವಾಗಿ ಒಂದು ಸೃಜನಾತ್ಮಕ ಕೃತಿಯಾಗಿ ಓದುಗರನ್ನು ತಲುಪುತ್ತದೆ.

ಕನ್ನಡದ ಆರಂಭದ ಪ್ರವಾಸ ಕಥನಗಳು ಮತ್ತೊಂದು ದೇಶವನ್ನು ಕಂಡಾಗಿನ ಸಂಭ್ರಮವನ್ನು ರೋಚಕವಾಗಿ ವರ್ಣಿಸುವಲ್ಲಿ ಮುಳುಗಿದ್ದವು. ಇದು ಭಿನ್ನ ಸಾಹಿತ್ಯ ಪ್ರಕಾರವೊಂದರ ಸ್ಪರ್ಶದ ಬೆರಗು ಮತ್ತು ಆ ಕಾಲಘಟ್ಟದ ರೊಮ್ಯಾಂಟಿಕ್ ಮೌಲ್ಯಗಳ ಪ್ರತಿಧ್ವನಿಯೂ ಆಗಿದ್ದುದರಿಂದ ಓದುಗರನ್ನು ಆಕರ್ಷಿಸಿತು. ಎರಡನೆಯ ಹಂತದಲ್ಲಿ ಎರಡು ಅರ್ಥ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಸಾಂಸ್ಕೃತಿಕ ಸಂದರ್ಭಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವ ವೈಚಾರಿಕತೆಯನ್ನು ಮೈಗೂಡಿಸಿಕೊಂಡು ಪ್ರವಾಸ ಕಥನದ ಹರಹನ್ನು ಹೆಚ್ಚಿಸಿದವು. ಭಾರತದ ವಿವಿಧ ರಾಜ್ಯಗಳನ್ನು ಕುರಿತಾಗಿ ಬಂದ ಪ್ರವಾಸ ಕಥನಗಳು



ಈ ಮೇಲಿನ ಎರಡೂ ಮಾದರಿಗಳನ್ನು ಮೈಗೂಡಿಸಿಕೊಂಡವು. ಈ ದೃಷ್ಟಿಯಿಂದ ನೋಡಿದಾಗ ಜಿ.ಎನ್. ಮೋಹನ್ ಅವರ 'ನನ್ನೊಳಗಿನ ಹಾಡು ಕ್ಯೂಬಾ', ಕಂಡದ್ದನ್ನು ಕಾವ್ಯವಾಗಿಸುವ ಲೇಖಕನ ಸೂಕ್ಷ್ಮ ಸಂವೇದನಾಶೀಲತೆ ಮತ್ತು ಸೃಜನಶೀಲ ತಾಕತ್ತು, ಸಮಾಜವಾದಿ ದೃಷ್ಟಿಕೋನ ಹಾಗೂ ಬದ್ಧತೆ, ವಿಶಿಷ್ಟವಾದ ಒಳನೋಟಗಳ ಕಾರಣಗಳಿಂದ ಕನ್ನಡ ಪ್ರವಾಸ ಕಥನದ ವಿಸ್ತರಣೆಯಾಗುತ್ತದೆ.

ಕ್ಯೂಬಾ ಗುಲಾಮಗಿರಿಯ ಯಾತನೆಯನ್ನನುಭವಿಸಿ ಸಮಾಜವಾದಿ ಪರಿಕಲ್ಪನೆಯಲ್ಲಿ ಅರಳಿ ನಿಂತ ಪುಟಾಣಿ ದೇಶ. ಸಾಮ್ರಾಜ್ಯಶಾಹಿ ತುಳಿತಕ್ಕೆ ಎದೆಯೊಡ್ಡಿ ಬದುಕುತ್ತಿರುವ ಕ್ಯೂಬಾದ ಬದುಕೇ ಒಂದು ಮಹಾಕಾವ್ಯ. ಆತ್ಮಗೌರವದ ವ್ಯಾಖ್ಯಾನ, ಸಾಮುದಾಯಿಕ ಚಿಂತನೆಯ ರೂಪಕ. ಇಂಥ ಕ್ಯೂಬಾಕ್ಕೆ 'ಉನ್ ಫೆಸ್ಟಿವಲ್'ನ ಪ್ರತಿನಿಧಿಯಾಗಿ ಹೋಗಿಬಂದ ಲೇಖಕರು ಈ ಕೃತಿಯಲ್ಲಿ ಕ್ಯೂಬಾದ ಸಮಾಜವಾದಿ ಹೋರಾಟ, ಸಾಮ್ರಾಜ್ಯಶಾಹಿಗಳ ಕಬಂಧಬಾಹು ಹಾಗೂ ಆತ್ಮಸಮ್ಮಾನವನ್ನು ಮಾರಿಕೊಂಡಿರುವ ಭಾರತೀಯ ಗುಲಾಮೀಪ್ರಜ್ಞೆಯನ್ನು ಪರಸ್ಪರ ಮುಖಾಮುಖಿಯಾಗಿಸುವತ್ತ ಮಾರ್ಕ್ಸ್ ಚಿಂತನೆಗಳ ಪ್ರಾಯೋಗಿಕ ನೆಲೆಯಾದ ಕ್ಯೂಬಾದ ಸಾಧನೆ ಗುರ್ತಿಸುತ್ತಾರೆ.

ಹೊಟ್ಟೆಯಲ್ಲಿ ಅಳುವಿಟ್ಟುಕೊಂಡು ನಾದದ ಅಲೆಯ ಮೇಲೆ ನಿಂತ ದೇಶ ಕ್ಯೂಬಾ. ಮೇ ಒಂದರಂದು ಒಂದು ರೂಪಾಯಿಯ ಸಣ್ಣ ಕೂಪನ್ ಆಗಿ ಕಿಸೆ ಸೇರಿದ ದೇಶ ಎದೆಯ ಮಿಡಿತವಾಗಿ ಬೆರೆತುಹೋದುದನ್ನು ಹೇಳುತ್ತಾರೆ. ಆರಂಭದಲ್ಲಿಯೇ ಕ್ಯೂಬಾದೊಂದಿಗಿನ 'ದೂರ'ವನ್ನು ಭಾವನಾತ್ಮಕವಾಗಿ ನಿರಾಕರಿಸುತ್ತ, ಓದುಗರ ಪ್ರಜ್ಞೆಯಲ್ಲಿರಬಹುದಾದ 'ಅಪರಿಚಿತತನ'ವನ್ನು ನಿವಾರಿಸುತ್ತಾರೆ. 'ಜಗತ್ತಿನ ಕನಸುಗಾರರ ನಡುವೆ ಗೆರೆಗಳಿಲ್ಲ' 'ಇವರೆಲ್ಲ ಎದೆಯಲ್ಲಿ ಕಾವ್ಯ ಕೈಯಲ್ಲಿ ಖಡ್ಗ ಹಿಡಿದ ಪಂಪನ ಬಂಧುಗಳು' - ಇಂಥ ಮಾತುಗಳು ಮಾನವೀಯತೆಯ ಸರಪಳಿಗಳಾಗಿ ಎದೆಯೆದೆಯನ್ನು ಬೆಸೆಯುತ್ತವೆ.

ಕ್ಯೂಬಾ ಓದುಗರೆದುರು ತೆರೆದುಕೊಳ್ಳುವುದು 'ಉನ್ ಫೆಸ್ಟಿವಲ್'ನ ಅನುಭವಗಳೊಂದಿಗೆ. ಎ.ಪಿ.ಯಂಥ ಸುದ್ದಿಸಂಸ್ಥೆಗಳ ಸೆನ್ಸಾರ್‌ನಿಂದಾಗಿ ಭೂಪಟದ ಒಂದು ಚಿಕ್ಕ ನಕಾಶೆಯಾಗಿ ಮಾತ್ರ ಜಗತ್ತಿಗೆ ಗೊತ್ತಿರುವ ಕ್ಯೂಬಾ ಆತ್ಮಾಭಿಮಾನದ ಮತ್ತೊಂದು ಹೆಸರಾಗಿ ದಾಖಲಾಗುತ್ತದೆ. ಕಳೆದ ೫೦ ವರ್ಷಗಳಿಂದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ 'ಸೌಹಾರ್ದತಾ ಉತ್ಸವ' ಕ್ಯೂಬಾದಲ್ಲಿ ನಡೆಯುತ್ತಿದೆ. ಅಮೆರಿಕಾ ಹಲ್ಲು ಮಸೆಯುತ್ತದೆ. ಜಗತ್ತಿನ ಮೂಲೆ, ಮೂಲೆಗಳಿಂದ, ಅಮೆರಿಕಾದಿಂದಲೂ, ಜನನದಿ ಕ್ಯೂಬಾದತ್ತ ಹರಿಯುತ್ತದೆ. ಅಮೆರಿಕಾ ಕಾನೂನು ಮಾಡುತ್ತದೆ. ವಿಮಾನಗಳನ್ನು ಹೊಡೆದುರುಳಿಸುತ್ತದೆ. ರಾಸಾಯನಿಕ ದಾಳಿಯನ್ನ ನಡೆಸುತ್ತದೆ. 'ಉನ್ ಫೆಸ್ಟಿವಲ್'ಗೆ ಬಂದ ಜಗತ್ತಿನ ನಾನಾ ಭಾಗಗಳ ಪ್ರತಿನಿಧಿಗಳು ಬಂಡವಾಳಶಾಹಿತ್ವದ ಬರ್ಬರತೆಯನ್ನು ಬಯಲಿಗೆಳೆಯತೊಡಗುತ್ತಾರೆ. ಕಟಕಟೆ ಹತ್ತಿ ನ್ಯಾಯ ಕೇಳುವವರ ಅಳಲಿಗೆ ಕ್ಯೂಬಾ ನೆಲವಾಗುತ್ತದೆ. ಜಾಗತೀಕರಣದ ರುಚಿಯನ್ನು ಅದೇ ತಾನೇ ಉಣ್ಣತೊಡಗಿದ್ದ ನೂರಾರು ದೇಶಗಳ ಮೂಕರಾಗಕ್ಕೆ ಆತ್ಮಾಭಿಮಾನಕ್ಕಾಗಿ ಅನ್ನ - ಬಟ್ಟೆ ಕಳಕೊಂಡ ಕ್ಯೂಬನ್ನರು ಮಾತಾಗುತ್ತಾರೆ. ಮಕ್ಕಳನ್ನು

ಹುಡುಕುತ್ತಿರುವ ಬರಿಹೊಟ್ಟೆಯ ತಾಯಂದಿರು ಭಾಷ್ಯ ಬರೆಯುತ್ತಾರೆ - ಇಲ್ಲಿಯ ವಿವರಗಳು, ಬಲಾಢ್ಯ ರಾಷ್ಟ್ರಗಳು ಜಗತ್ತಿನ ಮೂಲೆ ಮೂಲೆಗಳ ಅಸಹಾಯಕ ದೇಶಗಳನ್ನು 'ಆರ್ಥಿಕ ಭಯೋತ್ಪಾದನೆ'ಗೆ ಒಡ್ಡುತ್ತಿರುವ ಸ್ಥಿತಿಯನ್ನು ಪರಿಚಯಿಸುತ್ತವೆ.

ಗುಲಾಮಗಿರಿಯನ್ನು ಹಾಸಿ - ಹೊದ್ದು ಮಲಗಿರುವ ಭಾರತೀಯ ಪ್ರಜ್ಞೆಯನ್ನು ಕ್ಯೂಬಾ ಕಲಕುತ್ತದೆ. ಚರಿತ್ರೆಯಲ್ಲಿ ಭಾರತದಂತೆಯೇ ರಾಜಕೀಯ - ಸಾಂಸ್ಕೃತಿಕ ದಬ್ಬಾಳಿಕೆಗೆ ಒಳಗಾದ ದೇಶ ಕ್ಯೂಬಾ. ಇಂದು ಜಗತ್ತಿಗೆ ಸ್ವಾಭಿಮಾನದ ಪಾಠ ಹೇಳುವಷ್ಟು ಬದಲಾಗಿದೆ. ಹಾಗಾಗಿ ಕ್ಯೂಬಾದ ಚರಿತ್ರೆಯನ್ನು ಲೇಖಕರು ತುಂಬ ಮುತುವರ್ಜಿಯಿಂದ ದಾಖಲಿಸುತ್ತಾರೆ. ಮೊದಲು ಸ್ಪೇನ್, ಆಮೇಲೆ ಅಮೆರಿಕಾದ ಹಿಡಿತಕ್ಕೊಳಪಟ್ಟ 'ಜಗತ್ತಿನ ಸಕ್ಕರೆ ಬಟ್ಟಲ' ತುಂಬ ಕಹಿ ಸತ್ಯಗಳು. ಯುದ್ಧ ಕ್ಯೂಬನ್ನರ ಅನಿವಾರ್ಯತೆಯೇ ಆಗಿಬಿಟ್ಟಿತು. ೧೮೬೮ರಲ್ಲಿ ಸ್ಪೇನ್ ವಿರುದ್ಧ ನಡೆದ ಯುದ್ಧದಲ್ಲಿ ೪ ಲಕ್ಷ ಕ್ಯೂಬನ್ನರು ಸತ್ತಿದ್ದರು. ಜೋಸ್ ಮಾರ್ಟಿ ಕ್ರಾಂತಿಯ ನೇತೃತ್ವ ವಹಿಸಿ ಸ್ವಾತಂತ್ರ್ಯ ಸಿಗುತ್ತಿದೆ ಎಂಬ ಸಂದರ್ಭದಲ್ಲಿ ನಡೆದ ಅಂತರ್‌ರಾಷ್ಟ್ರೀಯ ರಾಜಕೀಯದಲ್ಲಿ ಕ್ಯೂಬಾದ ಅಧಿಕಾರ ಅಮೆರಿಕಾದ ಕೈಗೆ ರವಾನೆಯಾಯ್ತು. ತಮ್ಮ ನೆಲದಲ್ಲಿ ತಾವೇ ಅನಾಥರಾಗುವ ಸ್ಥಿತಿ ಕ್ಯೂಬನ್ನರದ್ದಾಯಿತು. ಅಮೆರಿಕ ವ್ಯಾಪಾರ, ಪ್ರಜಾಪ್ರಭುತ್ವ, ಶಾಂತಿ ಕಾರ್ಯಾಚರಣೆಯ ಹೆಸರಿನಲ್ಲಿ ಕ್ಯೂಬಾವನ್ನು ತನ್ನ ವಸಾಹತಾಗಿಸಿಕೊಂಡು ಮೆರೆಯಿತು. ಒಂದು ಎಕರೆಗೆ ಒಂದು ಡಾಲರ್ ಬೆಲೆಯಲ್ಲಿ ಕ್ಯೂಬಾದ ಫಲವತ್ತಾದ, ಆಯಕಟ್ಟಿನ ಭೂಭಾಗ ಅಮೆರಿಕಾದ ಬಂಡವಾಳಶಾಹಿಗಳ ಕೈಸೇರಿತು. ಕ್ರಾಂತಿಯ ಅನಿವಾರ್ಯತೆ ತೀವ್ರವಾಗತೊಡಗಿತ್ತು. ಕ್ಯೂಬಾದ ಮಣ್ಣ ತುಂಬ ಹೆಣ, ನೆಲದ ತುಂಬ ಗೋರಿಗಳಿದ್ದವು. - ಈ ಚರಿತ್ರೆ ಕೇವಲ ಕ್ಯೂಬಾದ್ದಲ್ಲ, ಬಂಡವಾಳಶಾಹಿಗೆ ಅಡಿಯಾದ ಬಹುತೇಕ ರಾಷ್ಟ್ರಗಳದ್ದು. ಹಾಗಾಗಿ ಕ್ಯೂಬಾದ ಇತಿಹಾಸ ಬರಿ ಇತಿಹಾಸವಲ್ಲ. ಅದೊಂದು ವರ್ತಮಾನ. ಜಗತ್ತಿನ ಬಹುತೇಗ ಭಾಗಗಳಲ್ಲಿ ಈ ಚರಿತ್ರೆ ಪುನರಾವರ್ತನೆ ಆಗುತ್ತಲೇ ಇದೆ.


ಗುಲಾಮಗಿರಿಯ ಹೇಸಿಗೆ ತಿಂದ ಕ್ಯೂಬಾ ಸ್ವಾತಂತ್ರ್ಯ ಪ್ರೀತಿಯ ಹೂಗಳನ್ನು ಹೆತ್ತಿತ್ತು. ಅವರೇ ಚೆ ಗೆವಾರ ಮತ್ತು ಫಿಡೆಲ್ ಕ್ಯಾಸ್ಟ್ರೋ. ಇಬ್ಬರೂ 'ಗ್ರಾನ್ಮಾ' ನೌಕೆಯೇರಿ, ಗೆರಿಲ್ಲಾ ಯುದ್ಧ ನಡೆಸಿದರು. ಇಂದು ಅಮೆರಿಕಾದ ರಾಜಕೀಯ ಹಿಡಿತ ದಾಟಿದ ಕ್ಯೂಬಾ, ಆರ್ಥಿಕ ದಿಗ್ಬಂಧನದ ದಬ್ಬಾಳಿಕೆಯನ್ನು ಎದುರಿಸುತ್ತಿದೆ. ಅಮೆರಿಕಾದ ನವವಸಾಹತುಶಾಹಿ ಧೋರಣೆಗಳ ಒಳಗಾದ ಭಾರತೀಯ ಪ್ರಜ್ಞೆಯ ಸ್ಥಗಿತತೆಯಲ್ಲಿಂದ ಕ್ಯೂಬಾದ ಸ್ವಾತಂತ್ರ್ಯ ಹೋರಾಟದ ಎರಡನೆಯ ಘಟ್ಟ ಆರಂಭಗೊಂಡಿದೆ. ಕ್ಯೂಬಾದ ಮಾನ - ಸಮ್ಮಾನದ ಹೋರಾಟ ಭಾರತದ ಹೇಡಿತನವನ್ನು ಸಾಕ್ಷೀಕರಿಸುವುದು ಈ ಕೃತಿಯ ಪ್ರಸ್ತುತತೆಯಾಗಿದೆ.

ಕಳೆದ ೫೦ ವರ್ಷಗಳಿಂದ ಮಾರ್ಕ್ಸ್ ಚಿಂತನೆಯ ಬದ್ಧತೆಯನ್ನು ಬದುಕಾಗಿಸಿಕೊಂಡಿರುವ ಕ್ಯೂಬಾ, ವಚನಕಾರರ 'ಮಹಾಮನೆ'ಯ ಕಲ್ಪನೆಯನ್ನು ಪ್ರಾಯೋಗಿಕವಾಗಿಸುವ ನಿರಂತರ ಶ್ರಮದಲ್ಲಿದೆ. ಸೋವಿಯತ್ ಒಕ್ಕೂಟದ ಪತನಾನಂತರ ಕ್ಯೂಬಾ ತೀವ್ರ ಸಂಕಷ್ಟಗಳನ್ನೆದುರಿಸಿದೆ. ಬ್ರೆಡ್ ಹಂಚಿ ತಿನ್ನುವ, ಹಾಲಿಲ್ಲದ ಕಾಫಿ ಕುಡಿವ, ತಿಂಗಳಿಗೊಂದು ಸೋಪು ಉಪಯೋಗಿಸುವ, ದೇಶದ ಮಕ್ಕಳ ಶಾಲಾ ಬಸ್ಸುಗಳ ಪೆಟ್ರೋಲಿಗಾಗಿ ಕಾಲ್ನಡಿಗೆಯನ್ನೋ, ಸೈಕಲನ್ನೋ ಬಳಸುವ, ಒಂದು ಅಸ್ಪಿರಿನ್ ಮಾತ್ರೆಯೂ ಹೊರಗಿನಿಂದ ಬರಲಾರದ ಸಂದರ್ಭದಲ್ಲಿ ಪರ್ಯಾಯ ವೈದ್ಯಕೀಯ ವ್ಯವಸ್ಥೆಯನ್ನು ರೂಪಿಸಿಕೊಂಡ, ತೇಪೆ ಹಚ್ಚಿದ ಅಂಗಿಯನ್ನು ಬಾವುಟದಷ್ಟು ಗೌರವದಿಂದ ಧರಿಸುವ ಆತ್ಮಾಭಿಮಾನಿಗಳ ದೇಶ ಕ್ಯೂಬಾ. ಶಿಕ್ಷಣ, ಕ್ರೀಡೆ, ಕಲೆ, ವೈದ್ಯಕೀಯ ರಂಗಗಳಲ್ಲಿ ಕ್ಯೂಬಾ ಸಾಧಿಸಿದ ಸಾಧನೆ ಅಪ್ರತಿಮವಾದದ್ದು, ಅಪರೂಪವಾದದ್ದು. 'ಮಾನವಮುಖಿ ಅಭಿವೃದ್ಧಿಯ ಚಿಂತನಾ ಕ್ರಮಗಳ' ಕ್ಯೂಬಾ ಜಗತ್ತಿಗೆ ಅಚ್ಚರಿಯನ್ನುಂಟುಮಾಡಿದೆ. ಈ ಕೃತಿ ಒಳಗೊಂಡ ಹಲವಾರು ನಿದರ್ಶನಗಳು ಕ್ಯೂಬಾದ ಆಲೋಚನಾ ವಿಧಾನವನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವನ್ನು ಹೇಳುತ್ತದೆ.

ಕವಿ ಹೆಮ್ಮಿಂಗ್ವೇ, ಹೋರಾಟಗಾರ ಚೆ ಗೆವಾರ, ನಾಯಕ ಫಿಡಲ್ ಕ್ಯಾಸ್ಟ್ರೋ - ಕ್ಯೂಬಾದ ಶಕ್ತಿಯ ಸಂಕೇತವಾದ ಈ ಮೂರು ಹೆಸರುಗಳು ಸ್ವಾಭಿಮಾನದ ಮೂರು ಸ್ಮೃತಿಗಳಂತೆ ಅಚ್ಚಳಿಯದೆ ಉಳಿಯುತ್ತವೆ. ಕಾವ್ಯವನ್ನೂ ಕತ್ತಿಯನ್ನೂ ಎದೆಗೊತ್ತಿಕೊಂಡಿದ್ದ 'ಪಾಪಾ' ಹೆಮ್ಮಿಂಗ್ವೇ ಕ್ಯೂಬಾದ ಮೂಲೆ ಮೂಲೆಯಲ್ಲಿ ಮಿಡಿವ ನೆನಪು. ಯುವ ಚೈತನ್ಯಕ್ಕೆ, ಕ್ರಾಂತಿಯ ಹೆಬ್ಬಯಕೆಗೆ, ಸುಖದ ಬದುಕಿಗೆ ಕನಸನ್ನು ಕಸುವನ್ನು ತುಂಬಿದ 'ಚೆ' ಜಗತ್ತಿನ ಜನಪರ ಚಿಂತಕರಿಗೆ ಹುಚ್ಚೆಬ್ಬಿಸುವ ಹೆಸರು, 'ಬೆರಳಿಂದ ಸೂರ್ಯನನ್ನು ಮುಚ್ಚಿಬಿಡುತ್ತೇವೆ ಎನ್ನಲಾಗದು' ಎಂದು ಸಾಮ್ರಾಜ್ಯಶಾಹಿ ಪ್ರಭುತ್ವಕ್ಕೆ ಸವಾಲಾಗಿ ಕ್ಯೂಬಾದ ನೈತಿಕ ಸ್ತಂಭವಾಗಿರುವ ಫಿಡಲ್ ಕ್ಯಾಸ್ಟ್ರೋ ಪ್ರತಿಯೊಬ್ಬರ ನಾಡಿ ಮಿಡಿತದಂಥ ನಾಯಕ.

ಜಗತ್ತು ಸಾಮ್ರಾಜ್ಯಶಾಹಿಯ ಕತ್ತಲಲ್ಲಿ ತಡವರಿಸುತ್ತಿದ್ದಾಗ ಆತ್ಮವಿಶ್ವಾಸದಿಂದ ಬೆಳಗುತ್ತಿರುವ ಪುಟ್ಟ ಹಣತೆ ಕ್ಯೂಬಾ - ಎನ್ನುತ್ತಾರೆ ಲೇಖಕ ಜಿ.ಎನ್. ಮೋಹನ್. ಓದುಗನ ಕಣ್ಣು ಮಂಜಾಗಿ ಪುಟ ಮುಚ್ಚುವಾಗ ಎದೆಯಲ್ಲಿ ಹೊಸ ಚಿಂತನೆಯ ಬೆಳಕು ಬಿತ್ತುವುದು ಈ ಕೃತಿಯ ಸಾರ್ಥಕತೆ.

## ಬಂದೇ ಬರತಾವ...




ಬೃಹಸ್ಪತಿ ಎಂಬ ಅಜ್ಜ ಚೆನ್ನೈನ ಪಾವೈ ಪ್ರಕಾಶನದ ಬೆನ್ನು ಹತ್ತಿದಾಗಲೇ ನನಗೆ ಗೊತ್ತಾದದ್ದು - ನನ್ನ ಕ್ಯೂಬಾ ತಮಿಳು ಕ್ಯಾನ್‌ವಾಸ್ ಕಂಡುಕೊಂಡಿದೆ ಎಂದು. ಸ್ಪಾನಿಷ್‌ನಲ್ಲಿದ್ದ ಚೆಗೆವಾರನ ಬೊಲಿವಿಯಾ ಡೈರಿಯನ್ನು ಓದಿದ ರೀತಿಯಲ್ಲಿಯೇ ತಮಿಳಿಗೆ ಅನುವಾದಗೊಂಡ ನನ್ನ ಕ್ಯೂಬಾವನ್ನು ಓದಿದ್ದೇನೆ. ಇದು ಈಗ ಮಾರುಕಟ್ಟೆಯಲ್ಲಿದೆ.

ಜಿಂದಾಲ್‌ನಲ್ಲಿ ಸಮಸ್ಯೆ ರಿಪೇರಿ ಮಾಡುತ್ತಲೇ ಚಿತ್ರ ಬಿಡಿಸುವ ಸೃಜನ್ ತನ್ನ ಕೈಕುಲುಕಿದ್ದು ಕವಿ ಚಿದಾನಂದ ಸಾಲಿ ಮೂಲಕ. ಕನ್ನಡ - ತೆಲುಗು ಎರಡಕ್ಕೂ ಕೊಂಡಿ ಸೃಜನ್. ಚಿತ್ರ ಬರೆವ ಕೈ ಕ್ಯೂಬಾವನ್ನು ತೆಲುಗಿಗೆ ಅನುವಾದಿಸಿದೆ. ಅಷ್ಟೇ ಅಲ್ಲ ಕನ್ನಡ ಕ್ಯೂಬಾದ ಹೊಸ ಆವೃತ್ತಿಗೂ ಮುಖಪುಟ ಚಿತ್ತಾರ ಬಿಡಿಸಿದೆ. ಸದ್ಯದಲ್ಲೇ ತೆಲುಗು ಆವೃತ್ತಿ ಪ್ರಿಂಟಾಗಲಿದೆ.

ಕಾಶೀನಾಥ ಅಂಬಲಗೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಹಿಂದಿ ವಿಭಾಗದ ಮುಖ್ಯಸ್ಥರು. ಕವಿ, ಪ್ರಕಾಶಕ. ಕ್ಯೂಬಾವನ್ನು ಹಿಂದಿಯ ತೆಕ್ಕೆಗೆ ತಂದಿದ್ದಾರೆ. ದೆಹಲಿಯಲ್ಲಿ ಪ್ರಕಾಶಕರನ್ನು ಹುಡುಕುತ್ತಿದ್ದಾರೆ.

ಇಷ್ಟೆಲ್ಲದರ ಮಧ್ಯೆ ಕ್ಯೂಬಾ ಬೆಂಗಾಲಿ ಹಾಗೂ ಮಲಯಾಳಂಗೆ ಅನುವಾದವಾಗಬೇಕು ಎನ್ನುವುದು ನನ್ನ ಬಯಕೆ. ಕ್ಯೂಬಾಗೆ ಸದಾ ಸಾಥ್ ನೀಡಿರುವ ಈ ನೆಲದಲ್ಲಿ ನನ್ನ ಹಾಡೂ ಹರಿದಾಡಲಿ ಎಂಬ ಪುಟ್ಟ ಆಸೆ.

ಬರುವುದೇನುಂಟೊಮ್ಮೆ
ಬರುವ ಕಾಲಕೆ ಬಹುದು
ಬಯಕೆ ಬರುವುದರ
ಕಣ್ಸನ್ನೆ ಕಾಣೋ...

## ಕ್ಯೂಬಾ

ಪುಟ್ಟ ಹುಡುಗಿ
ಮುಖದಲ್ಲಿ ಮುದುಡಿಕೊಂಡ
ಅದೇ ನೋವು ನಗೆ
ತುರುಬಿಗೆ ಟ್ಯೂಲಿಪ್ ಪಕಳೆ
ಎದೆಯಲ್ಲಿ ಸದಾ ಹಾಡ ಸಾಲು
ಬಂದೂಕು ತುದಿಗೆ ನಗೆಮಲ್ಲಿಗೆ ಎಸಳು
ಊರ ತುಂಬಾ ಯುಗಾದಿ ಹಸಿರು ತೋರಣ

ಎದೆಯಾಳದೊಳಗೆ
ಅಪ್ಪ ಬಚ್ಚಿಟ್ಟುಕೊಂಡ ಯಾತನೆ
ಮೇಲೆ ಬೆಚ್ಚನೆಯ ಮಡಿಲ ಕಾವು
ಕಾಣುವುದು ನೆಲದ ಹಸಿರ ಎಳೆ
ಒಳಗೆ ಮಾತ್ರ ತಲ್ಲಣದ ಮಳೆ

ಕೆಂಪು ಟೋಪಿಯ ಹರಕಲು ಗಡ್ಡದ
ಸೈಕಲ್ ತುಳಿಯುವ ಪಡ್ಡೆ ಪಚೆಪ
ರಾಗಿ ತೆನೆಗಳ ಹೊತ್ತು ಬೀಗಿದ
ಹೊಲದ ಮಧ್ಯೆ ಗಾಲಿ ಓಡಿಸಿದಷ್ಟೇ ಸಲೀಸಾಗಿ
ಕ್ರಾಂತಿ ಚಕ್ರ ಸುತ್ತಿಸಿದ್ದು
ಕೆಂಪು ತುಟಿ ಬಿರಿದು ಹೂನಗೆ ಎಸೆದವರಿಗೆ
ಕಣ್ಣು ಮಿಟುಕಿಸಿ ಕೆಣಕಿದ್ದು

ಅದೇ ಹಾಡು ಜೋಕಾಲಿ ಜೀಕುತ್ತಾ
ಇದೀಗ ಅದೇ ಟೋಪಿಯ ಹರಕಲು ಗಡ್ಡದ
ಈತ ಎದೆಯೊಳಗೆ ಬೀಜ ಬಿತ್ತುತ್ತಾನೆ
ತೆನೆ ತೆಗೆಯುತ್ತಾನೆ. ಬಸಿರೊಳಗೆ ಮುದ್ದು
ನಗೆ ಬೆಳೆಯುತ್ತಾನೆ
ಕ್ಯೂಬಾದ ಕಣ್ಣೊಳಗೆ ಇನಿಯರ
ಕಣ್ಣ ಹೊಳಪ ತೀಡುತ್ತಾನೆ.

**ಜಿ.ಎನ್. ಮೋಹನ್**